ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು
ಸೋಮವಾರ 25, ಮೇ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU

ಇಂದಿನ ಹವಾಮಾನ

ದಕ್ಷಿಣ ಕನ್ನಡ	ಉಡುಪಿ
33° 26°	33° 27°

ಪುಟ 5



ಅಪಾಯ ಆಹ್ವಾನಿಸುತ್ತಿದೆ ಮಂಜೇಶ್ವರ ಸಮುದ್ರ ತೀರದ ಒಣಗಿದ ಮರ!

ಪುಟ 6



ಇಲ್ಲಿ ಕೊನೆಗೂ ಮಾಯವಾಗುತ್ತಿವೆ ತ್ಯಾಜ್ಯ ಬ್ಲ್ಯಾಕ್ ಸ್ಪಾಟ್!

ನೆಲ್ಲಿಕುಂಜೆಯ ಕಡಲತೀರದಲ್ಲಿ ಎಲ್ಲರ ಕಣ್ಮನ ಸೆಳೆಯಿತು 'ಕಾಸರಗೋಡು ಬೀಚ್ ರನ್'



ಕಾಸರಗೋಡು ಜಿಲ್ಲೆಯ 42ನೇ ವಾರ್ಷಿಕೋತ್ಸವದ ಅಂಗವಾಗಿ ನೆಲ್ಲಿಕುಂಜೆ ಬೀಚ್‌ನ ಸೌಂದರ್ಯ, ಪ್ರವಾಸೋದ್ಯಮ ಸಾಮರ್ಥ್ಯ ಜಗತ್ತಿಗೇ ತೋರಿಸುವ ಉದ್ದೇಶದಿಂದ ಜಿಲ್ಲಾಡಳಿತ, ಜಿಲ್ಲಾ ಪ್ರವಾಸೋದ್ಯಮ ಪ್ರಚಾರ ಮಂಡಳಿ ಮತ್ತು ಕಾಸರಗೋಡು ನಗರಸಭೆ ಭಾನುವಾರ ಜಂಟಿಯಾಗಿ ಕಾಸರಗೋಡು ಬೀಚ್ ರನ್ -2026 ಕಾರ್ಯಕ್ರಮ ಹಮ್ಮಿಕೊಂಡಿತು. ಉತ್ಸಾಹಿಗಳು ಪಾಲ್ಗೊಂಡರು. (ವರದಿ ಪುಟ 5)

ಕಾಸರಗೋಡು ಜಿಲ್ಲೆಯಲ್ಲಿ ಎಬೋಲ ಕಟ್ಟೆಚ್ಚರ
ಗಲ್ಲಿ ಗಲ್ಲಿಗಳಲ್ಲಿ ನಿಗಾ
ಆಫ್ರಿಕಾ ಪ್ರಯಾಣಿಕರಿಗೆ ಥರ್ಮಲ್ ಸ್ಕ್ರೀನಿಂಗ್

ಕಾಸರಗೋಡು: ವಿಶ್ವವನ್ನೇ ಬೆಚ್ಚಿಬೀಳಿಸುತ್ತಿರುವ ಎಬೋಲ ವೈರಸ್ ಜಿಲ್ಲೆಗೂ ಬಿಸಿ ಮುಟ್ಟಿಸಿದ್ದು, ಎಲ್ಲೆಡೆ ಕಟ್ಟುನಿಟ್ಟಿನ ಎಚ್ಚರಿಕೆಯ ಕ್ರಮ ಕೈಗೊಳ್ಳಲಾಗುತ್ತಿದ್ದು ಆರೋಗ್ಯ ಇಲಾಖೆ ಈ ಬಗ್ಗೆ ಎಲ್ಲೆಡೆಯೂ ವ್ಯಾಪಕ ನಿಗಾ ಇರಿಸಿದೆ.

ಆಸ್ಪತ್ರೆಗಳಲ್ಲಿ ತೀವ್ರ ನಿಗಾ ಘಟಕ

ಶಂಕಿತ ಪ್ರಕರಣ ಪತ್ತೆಯಾದಲ್ಲಿ ತುರ್ತು ಕ್ರಮಕ್ಕೆ ಸಿದ್ಧತೆ ನಡೆದಿದೆ. »ಪುಟ 6



ಹೆಚ್ಚಿನ ಕಾಳಜಿ ವಹಿಸಲು ಆರೋಗ್ಯ ಇಲಾಖೆ ಸೂಚನೆ

- ಕಾಸರಗೋಡು ಜಿಲ್ಲೆಯ ಸಹಿತ ಕೇರಳದಲ್ಲಿ ಕಟ್ಟೆಚ್ಚರ
- ವೈರಸ್ ಬಗ್ಗೆ ಜಾಗೃತಿ ಕಾರ್ಯ
- ವಿದೇಶದಿಂದ ಆಗಮಿಸಿದ ಮಂದಿಯ ಮೇಲೆ ನಿಗಾ
- ರಾಜ್ಯದ ಆಸ್ಪತ್ರೆಗಳಲ್ಲಿ ತೀವ್ರ ನಿಗಾ ಘಟಕ ಆರಂಭ

ಅಲ್ಲಲ್ಲಿ ಥರ್ಮಲ್ ಸ್ಕ್ರೀನಿಂಗ್ ಕಡ್ಡಾಯ

ಕೋಂಗೊ, ಉಗಾಂಡ, ಸೌತ್ ಸುಡಾನ್‌ಗಳಿಂದ ಜಿಲ್ಲೆಗೆ ಬರುವವರ ಮೇಲೆ ಹದ್ದಿನ ಕಣ್ಣಿರಿಸಲಾಗಿದ್ದು ಥರ್ಮಲ್ ಸ್ಕ್ರೀನಿಂಗ್ ಕಡ್ಡಾಯವಾಗಿದೆ.

ಕಡಲತೀರಗಳಿಗೆ ತೆರಳದಂತೆ ಸೂಚನೆ
ಕರಾವಳಿ ಜಿಲ್ಲೆಗೆ ಗಾಳಿ ಮಳೆಯ ಮುನ್ನೆಚ್ಚರಿಕೆ
ಗರಿಷ್ಟ ಮಳೆಯಲ್ಲಿ ಉಡುಪಿ ನಂ.1

ಮಂಗಳೂರು: ಮುಂದಿನ 24 ತಾಸುಗಳ ಅವಧಿಯಲ್ಲಿ ಕರಾವಳಿ ಜಿಲ್ಲೆಗಳ ವಿವಿಧ ಕಡೆಗಳಲ್ಲಿ ಬಿರುಗಾಳಿಯ ಸಹಿತ ಮಳೆ ಸುರಿಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ನಾಗರಿಕರಿಗೆ ಮುನ್ನೆಚ್ಚರಿಕೆ ನೀಡಿದೆ.

60 ಕಿಮೀ ವೇಗದಲ್ಲಿ ಗಾಳಿ

ಈ ಸಂದರ್ಭ ಗಂಟೆಗೆ 60 ಕಿಮೀ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆ ಇದೆ. ಕಡಲ ತೀರದತ್ತ ತೆರಳದಂತೆ ಸೂಚಿಸಲಾಗಿದೆ. »ಪುಟ 6



ಮುಂದುವರಿದ ಮಳೆ ಕಣ್ಣಾಮುಚ್ಚಾಲೆ

ಕಳೆದ ಕೆಲವು ದಿನಗಳಿಂದ ಮಳೆಯ ಮುನ್ಸೂಚನೆ ಸಿಗುತ್ತಿದೆಯಾದರೂ ಮಳೆ ಮಾತ್ರ ಕಣ್ಣಾಮುಚ್ಚಾಲೆ ಆಡುತ್ತಿದೆ. ದಟ್ಟ ಮೋಡ ಕವಿದರೂ ನಿರೀಕ್ಷಿತ ಪ್ರಮಾಣದಲ್ಲಿ ಮಳೆ ಬೀಳುತ್ತಿಲ್ಲ.

ಸುತ್ತಮುತ್ತ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೋಡಕ್ಕೆ ಸೀಮಿತವಾದ ಬಾನು: ಮಳೆ 'ಪರೀಕ್ಷೆ'

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾನುವಾರವೂ ಮೋಡ ಮುಸುಕಿದ ವಾತಾವರಣ ಕಂಡುಬಂದಿದ್ದು, ಕೆಲವೆಡೆ ತುಂತುರು ಮಳೆಯಾಗಿದೆ. ಉಳಿದಂತೆ ತಾಪಮಾನದಲ್ಲಿ ತುಸು ಇಳಿಕೆಯಾಗಿದ್ದು, ಜನ ನಿಟ್ಟುಸಿರು ಬಿಡುವಂತಾಗಿದೆ.

ಮುಂಜಾನೆ ಮಳೆ ಸ್ವಾಗತ

ಶನಿವಾರ ರಾತ್ರಿ ಹಾಗೂ ಭಾನುವಾರ ಮುಂಜಾನೆ ಹೊತ್ತಿನಲ್ಲಿ ಜಿಲ್ಲೆಯ ಕೆಲವೆಡೆ ಒಂದಿಷ್ಟು ಮಳೆಯಾಗಿದೆ. ಮಳೆಯ ಜೊತೆ ಗುಡುಗಿನ ಆರ್ಭಟ ಕೂಡಾ ಜೋರಾಗಿತ್ತು. ಬಂಟ್ವಾಳ, ಕಡಬ ಮೊದಲಾದ ಭಾಗಗಳಲ್ಲಿ ಮಳೆಯ ತೀವ್ರತೆ ತುಸು ಜೋರಾಗಿತ್ತು. ಕಳೆದ ಕೆಲವು ದಿನಗಳಿಂದ ಸುರಿದ ಮಳೆಯಿಂದಾಗಿ ನದಿಗಳಲ್ಲಿ ನೀರಿನ ಹರಿವು ತುಸು ಹೆಚ್ಚಳವಾಗಿದೆ.

ಸುತ್ತಮುತ್ತ

ಬಿ.ಸಿ.ರೋಡಿನಲ್ಲಿ ಪ್ರತಿಭಟನೆ ಇಂದು

ಬಂಟ್ವಾಳ: ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಹಾಗೂ ಪದೇ ಪದೇ ಪೆಟ್ರೋಲ್, ಡೀಸಲ್ ಬೆಲೆಯನ್ನು ಸತತವಾಗಿ ಹೆಚ್ಚಿಸಿ ಜನಸಾಮಾನ್ಯರಿಗೆ ಕಿರುಕುಳ ಉಂಟು ಮಾಡುತ್ತಿರುವ ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರಕಾರದ ವಿರುದ್ಧ ಮಾಜಿ ಸಚಿವ ಬಿ. ರಮಾನಾಥ ರೈ ನೇತೃತ್ವದಲ್ಲಿ ಮೇ 25ರಂದು ಬೆ.10.30ಕ್ಕೆ ಬಿ.ಸಿ.ರೋಡಿನ ಶ್ರೀ ರಕ್ತೇಶ್ವರೀ ದೇವಸ್ಥಾನದ ಸಮೀಪ ಬೃಹತ್ ಪ್ರತಿಭಟನೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ. ಕಾಂಗ್ರೆಸ್ ಪಕ್ಷದ ಎಲ್ಲಾ ಮುಖಂಡರುಗಳು, ಮುಂಚೂಣಿ ಘಟಕದ ಅಧ್ಯಕ್ಷರ, ಬ್ಲಾಕ್ ಕಾಂಗ್ರೆಸ್‌ನ ಪದಾಧಿಕಾರಿಗಳು, ಸದಸ್ಯರು, ಮಹಿಳಾ ಕಾಂಗ್ರೆಸ್ ಪದಾಧಿಕಾರಿಗಳು ಮತ್ತು ಸದಸ್ಯರು ಯುವ ಕಾಗ್ರೆಸ್, ಎನ್ ಎಸ್ ಯುಐ ಪದಾಧಿಕಾರಿಗಳು ಮತ್ತು ಸದಸ್ಯರು ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಆಯ್ಕೆ

ಮೂಡುಬಿದಿರೆ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಮೂಡುಬಿದಿರೆ ತಾಲೂಕು ಘಟಕದ ಮೊಟ್ಟಮೊದಲ ಮಹಿಳಾ ಅಧ್ಯಕ್ಷರಾಗಿ ಶ್ರೀಮತಿ ಮಹೇಶ್ವರಿ ಅವರು ಆಯ್ಕೆಯಾಗಿದ್ದಾರೆ. ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಮೂಡುಬಿದಿರೆ ತಾಲೂಕಿನ ಇತಿಹಾಸದಲ್ಲಿ ಮೊದಲ ಬಾರಿಗೆ ಮಹಿಳಾ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಮಹೇಶ್ವರಿ ಅವರು ಕಳೆದ 20 ವರ್ಷಗಳಿಂದ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಪ್ರಸ್ತುತ ಸರಕಾರಿ



ಉನ್ನತೀಕರಿಸಿದ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಮೂಡುಬಿದಿರೆ ಮೈನ್ ಇಲ್ಲಿ ಸಹ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಇವರು2015 – 2020 ರ ಅವಧಿಯಲ್ಲಿ ಬೆಳತಂಗಡಿ ತಾಲೂಕು ಘಟಕದ ಸಂಘಟನೆಯಲ್ಲಿ ಜಿಲ್ಲಾ ಪ್ರತಿನಿಧಿಯಾಗಿ ಕರ್ತವ್ಯ ನಿರ್ವಹಿಸಿದ್ದರು. ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘದ ಮೂಡುಬಿದಿರೆ ತಾಲೂಕು ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಮಾಂಟ್ರಾಡಿ ಉನ್ನತಿಕರಿಸಿದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಶ್ರೀಮತಿ ಅರ್ಚನಾ ಜೈನ್ ಅವರು ಕಾರ್ಯದರ್ಶಿಯಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಮೂಡುಬಿದಿರೆ ತಾಲೂಕು ಘಟಕದ ಚುನಾವಣಾ ಅಧಿಕಾರಿ ಪ್ರಫುಲ್ಲ ಶೆಟ್ಟಿ ಅವರು ಚುನಾವಣಾ ಪ್ರಕ್ರಿಯೆ ನಡೆಸಿಕೊಟ್ಟರು.

ದುರ್ಗಾಪೂಜೆ, ಶೈಕ್ಷಣಿಕ ಸಾಧಕರಿಗೆ ಸನ್ಮಾನ

ಕೊಣಾಜೆ: ಶ್ರೀ ಮಹಾಕಾಳಿ ಸೇವಾ ಮಂಡಳಿ ಕುಂಟಾಲಗುಳಿ ಇದರ ವತಿಯಿಂದ ಶ್ರೀ ಮಹಾಕಾಳಿ ವನ ಸಾನಿಧ್ಯದ ಪ್ರತಿಷ್ಠಾ ದಿನದ ಪ್ರಯುಕ್ತ ಸಾಮೂಹಿಕ ದುರ್ಗಾ ಪೂಜೆಯು ಶನಿವಾರ ನಡೆಯಿತು. ಶೈಕ್ಷಣಿಕ ಸಾಧನೆ ಮಾಡಿದ ವಿದ್ಯಾರ್ಥಿಗಳಾದ ಸಾತ್ವಿಕ್ ಭಟ್ ಎಸ್., ಚಿರಾಗ್ ಕಾನ, ನಿಧಿ ಎಂ ಹಾಗೂ ಸಿಂಚನ್ ಡಿ.ಆರ್, ಅಭಿನವ್ ಅವರನ್ನು ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಮಹಾಕಾಳಿ ಸೇವಾ ಮಂಡಳಿಯ ಶಿವಪ್ರಕಾಶ್ ಭಟ್ ಅವರು ಸ್ಥಳೀಯ ಇಬ್ಬರು ವಿದ್ಯಾರ್ಥಿಗಳಿಗೆ ಹಾಗೂ ಸ್ಥಳೀಯ ಸಮಾಜಸೇವಾ ಸಂಘವೊಂದಕ್ಕೆ ಆರ್ಥಿಕ ಪ್ರೋತ್ಸಾಹಧನ ವಿತರಿಸಿದರು. ಶ್ರೀ ಮಹಾಕಾಳಿ ಸೇವಾ ಮಂಡಳಿಯ ಅಧ್ಯಕ್ಷ ಜಗದೀಶ್ ಸ್ವಾಗತಿಸಿದರು. ಶಿವಪ್ರಕಾಶ್ ಭಟ್ ವಂದಿಸಿದರು. ಸತೀಶ್ ಕೊಣಾಜೆ ಕಾರ್ಯಕ್ರಮ ನಿರೂಪಿಸಿದರು.

ಪೊಲೀಸ್ ಕಾನ್‌ಸ್ಟೇಬಲ್ ಮೇಲೆ ಹಲ್ಲೆ

ಮಂಗಳೂರು: ಕರ್ತವ್ಯ ನಿರತ ಪೊಲೀಸ್ ಕಾನ್‌ಸ್ಟೇಬಲ್ ಮೇಲೆ ಬೈಕ್‌ನಲ್ಲಿ ಬಂದ ಅಪರಿಚಿತ ವ್ಯಕ್ತಿಗಳಿಬ್ಬರು ಹಲ್ಲೆನಡೆಸಿ ಪರಾರಿಯಾದ ಘಟನೆ ಶನಿವಾರ ತಡರಾತ್ರಿ 2 ಗಂಟೆಯ ವೇಳೆಗೆ ಉರ್ವ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಕೋಡಿಕಲ್ ಬಳಿ ಈ ಘಟನೆ ಸಂಭವಿಸಿದೆ. ರಾತ್ರಿ ಪಾಳಿಯ ಕರ್ತವ್ಯದಲ್ಲಿದ್ದ ಪೊಲೀಸ್ ಕಾನ್‌ಸ್ಟೇಬಲ್‌ನ ತಲೆಯ ಮೇಲೆ ಹಲ್ಲೆನಡೆಸಲಾಗಿದ್ದು, ಪೊಲೀಸ್ ಸಿಬ್ಬಂದಿ ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ. ಬೈಕ್‌ನಲ್ಲಿ ಅತಿ ವೇಗದಲ್ಲಿ ಬರುತ್ತಿದ್ದವರನ್ನು ನಿಲ್ಲಿಸಲು ಪೊಲೀಸ್ ಸಿಬ್ಬಂದಿ ಮುಂದಾಗಿದ್ದರು. ಆದರೆ ಬೈಕ್ ಹಿಂಬದಿಯಲ್ಲಿ ಕುಳಿತಿದ್ದ ಸಹ ಸವಾರ ಪೊಲೀಸ್ ಸಿಬ್ಬಂದಿಯ ತಲೆಯ ಮೇಲೆ ವಸ್ತುವೊಂದರಿಂದ ಬಡಿದು ಪರಾರಿಯಾಗಿದ್ದಾರೆ.

ಕುಕ್ಕಾಜೆಯಲ್ಲಿ ಮಹಾದೇವ ಸಹಕಾರಿ ಸಂಘದ 'ಮಹಾದೇವ ಸೌಧ' ಉದ್ಘಾಟನೆ | ಸೀತಾರಾಮ ರೈ ಬಣ್ಣನೆ

ಸಹಕಾರ ಕ್ಷೇತ್ರದಲ್ಲಿ ಮಹಾದೇವ ಸೊಸೈಟಿ ಸಾಧನೆ ಅದ್ವಿತೀಯ

ಬಂಟ್ವಾಳ: ಮಹಾದೇವ ವಿವಿಧೋದ್ದೇಶ ಸಹಕಾರಿ ಸಂಘ ಕುಕ್ಕಾಜೆ ಮಂಚಿ ಇದರ ಕೇಂದ್ರ ಕಚೇರಿ 'ಮಹಾದೇವ ಸೌಧ'ದ ನೂತನ ಕಟ್ಟಡದ ಉದ್ಘಾಟನೆಯು ಕುಕ್ಕಾಜೆಯಲ್ಲಿ ರವಿವಾರ ನೆರವೇರಿತು.

ಮಂಗಳೂರು ಕೃಷಿಕರ ಸಹಕಾರಿ ಸಂಘದ ಅಧ್ಯಕ್ಷ ಕೆ. ಸೀತಾರಾಮ ರೈ ಸವಣೂರು ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ರಾಜ್ಯದಲ್ಲಿಯೇ ಅವಿಭಜಿತ ದ.ಕ. ಜಿಲ್ಲೆಯು ಸಹಕಾರಿ ಕ್ಷೇತ್ರದಲ್ಲಿ ಅದ್ವಿತೀಯವಾದ ಸಾಧನೆ ದಾಖಲಿಸಿದೆ. ಅವಿಭಜಿತ ಜಿಲ್ಲೆಯಲ್ಲಿ ಡಿಸಿಸಿ ಬ್ಯಾಂಕ್, ಕ್ಯಾಂಪ್ಕೋ ಹಾಗೂ ಕೆಎಂಎಫ್ ನಂತಹ ಸಹಕಾರಿ ಸಂಸ್ಥೆ ಮಹಾನ್ ಶಕ್ತಿಯಾಗಿ ಬೆಳಗುತ್ತಿದೆ ಎಂದರು.



ಗ್ರಾಮಮಟ್ಟದಲ್ಲಿ ಸಹಕಾರದ ಬೆಳವಣಿಗೆ

ಕೇಂದ್ರ ಸರಕಾರವೂ ಸಹಕಾರಿ ಕ್ಷೇತ್ರಕ್ಕೆ ವಿಶೇಷವಾದ ಒತ್ತು ನೀಡುತ್ತಿದ್ದು ಅಮಿತ್ ಶಾ ಅವರು ಸಹಕಾರಿ ಕ್ಷೇತ್ರಕ್ಕೆ ಮಂತ್ರಿಯಾಗಿ ಹೊಸ ಬೆಳವಣಿಗೆಗೆ ಸಹಕಾರ ನೀಡುತ್ತಿದ್ದಾರೆ. ಗ್ರಾಮ ಮಟ್ಟದಲ್ಲಿ ಸಹಕಾರಿ ಕ್ಷೇತ್ರ ಬೆಳೆಯುವ ಕಾರ್ಯ ಈ ಮೂಲಕ ನಡೆಯುತ್ತಿದೆ ಎಂದು ಹೇಳಿದರು.

ರೈತಾಪಿ ವರ್ಗಾಕ್ಕೆ ಚೈತನ್ಯ

ಕ್ಯಾಂಪ್ಕೋ ಅಧ್ಯಕ್ಷ ಎಸ್.ಆರ್. ಸತೀಶ್ಚಂದ್ರ ಮಾತನಾಡಿ ಸಹಕಾರಿ ಕ್ಷೇತ್ರ ಕರಾವಳಿಯಲ್ಲಿ ಅದ್ವಿತೀಯವಾಗಿ ಬೆಳಗಿದೆ. ಈ ಮೂಲಕ ರೈತಾಪಿ ವರ್ಗಕ್ಕೆ ಚೈತನ್ಯ ದೊರೆತಿದೆ ಎಂದರು.

ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಶಶಿಕುಮಾರ್ ರೈ ಬಾಲ್ಯೊಟ್ಟು, ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿರ್ದೇಶಕ ಟಿ.ಜಿ.ರಾಜಾರಾಮ ಭಟ್ ಮುಖ್ಯ ಅತಿಥಿಗಳಾಗಿದ್ದರು. ಮಂಚಿ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಕೇಶವ ರಾವ್, ಮಂಚಿ ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷ ನಿಶ್ಚಲ್ ಜಿ. ಶೆಟ್ಟಿ, ಇಂದಿರಾ ದರ್ಶಿನಿ ಸಹಕಾರಿ ಸಂಘದ ಅಧ್ಯಕ್ಷ ಉಮ್ಮರ್ ಬಿ.ಮಂಚಿ, ಬಂಟ್ವಾಳ ತಾಳೆ ಕೆಲಸಗಾರರ ವಿವಿಧೋದ್ದೇಶ ಸಹಕಾರಿ ಸಂಘದ ಇರಾ ಅಧ್ಯಕ್ಷ ಚಂದ್ರಹಾಸ ಆರ್.ಕರ್ಕೇರ, ಉದ್ಯಮಿ ಜೆಫ್ರಿ ಲೂವಿಸ್, ಇರಾ ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘದ ಅಧ್ಯಕ್ಷೆ ಮಾಲತಿ ಶೆಟ್ಟಿ ಗೌರವ ಉಪಸ್ಥಿತರಿದ್ದರು.

ಮಹಾದೇವ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷ ಮೋಹನ್ ನಾಯಕ್ ಅಧ್ಯಕ್ಷತೆ ವಹಿಸಿದ್ದರು. ನಿರ್ದೇಶಕ ದಾಮೋದರ ಬಿ.ಎಂ.ಮಾರ್ನಬೈಲ್ ಸ್ವಾಗತಿಸಿದರು. ಉಪಾಧ್ಯಕ್ಷ ಪುಷ್ಪರಾಜ ಅಡ್ಯಂತಾಯ ಕಲ್ಲಾರು ವಂದಿಸಿದರು. ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಪುಷ್ಪರಾಜ ಕುಕ್ಕಾಜೆ ನಿರೂಪಿಸಿದರು. ಪ್ರದೀಪ್ ಕುಮಾರ್ ಗಟ್ಟಿ ಬಳಗ ಪ್ರಾರ್ಥನೆ ನೆರವೇರಿಸಿದರು.

ನಿರ್ದೇಶಕರಾದ ಡಾ.ಎಂ. ಗೋಪಾಲ ಆಚಾರ್ ಮಂಚಿ, ಚಂದ್ರಶೇಖರ ನಾಯಕ್ ಮೋಂತಿಮಾರ್, ರಾಮ ನಾಯ್ಕ ನೂಜಿ, ನಾರಾಯಣ ಆರ್. ಸೂತ್ರಬೈಲ್, ಜಯಪ್ರಕಾಶ್ ರೈ ಮೇರಾವು, ಮೋಹಿನಿ ಕುರಿಯಾಡಿ, ಪ್ರತಿಭಾ ಕೆ.ಎಸ್. ಕೇಪುಳಗುಳಿ, ಹರೀಶ ಎಂ. ಮಂಕುಡೆ, ಜಯಕಿಶೋರ್ ಎಂ. ಮಂಚಿ, ಹೇಮಲತಾ ಪತ್ತುಮುಡಿ ಉಪಸ್ಥಿತರಿದ್ದರು.

ಇನ್ನಷ್ಟು ಶಾಖೆ ಆರಂಭಿಸುವ ಯೋಜನೆ

ಮಹಾದೇವ ವಿವಿಧೋದ್ದೇಶ ಸಹಕಾರಿ ಸಂಘವು ಕುಕ್ಕಾಜೆಯಲ್ಲಿ ಪ್ರಧಾನ ಕಚೇರಿ ಹೊಂದಿದ್ದು, ಮೆಲ್ಕಾರ್, ಮುಡಿಪುವಿನಲ್ಲಿ ಶಾಖೆ ಹೊಂದಿದೆ. ಇನ್ನಷ್ಟು ಶಾಖೆಗಳನ್ನು ಆರಂಭಿಸುವ ಯೋಚನೆ ಇದೆ. ಈಗ ನೂತನ ಕಟ್ಟಡ ಉದ್ಘಾಟನಾ ಸಮಾರಂಭದ ಅಂಗವಾಗಿ ಮೇ 25ರವರೆಗೆ ವಿಶೇಷ ಠೇವಣಿ ಯೋಜನೆ ಪರಿಚಯಿಸಲಾಗಿದೆ. ಹಾಗೂ ಸೇಫ್ ಲಾಕರ್ ಸೌಕರ್ಯವೂ ಇಲ್ಲಿದೆ. ವಿವಿಧ ಸಾಲ ಸೌಲಭ್ಯವೂ ದೊರೆಯಲಿದೆ ಎಂದು ಮುಖ್ಯಕಾರ್ಯನಿರ್ವಹಣಾಧಿಕಾರಿ ಪುಷ್ಪರಾಜ ಕುಕ್ಕಾಜೆ ತಿಳಿಸಿದರು.

ಪುತ್ತೂರು ನಗರ ಪೊಲೀಸ್ ಠಾಣೆ ಶಾಂತಿ ಸಭೆ | ಪ್ರಮೋದ್ ಕುಮಾರ್ ಎಚ್ಚರಿಕೆ

ಕಾನೂನು ಕೈಗೆತ್ತಿಕೊಂಡರೆ ನಿರ್ದಾಕ್ಷಿಣ್ಯ ಕ್ರಮ

ಪುತ್ತೂರು: ಹಬ್ಬಗಳ ಶಾಂತಿಯುತ ಆಚರಣೆ ನಿಟ್ಟಿನಲ್ಲಿ ಆಯಾ ಇಲಾಖೆಗಳಿಗೆ ಜವಾಬ್ದಾರಿಗಳಿದ್ದು, ಪೊಲೀಸ್ ಇಲಾಖೆ ಹೆಚ್ಚುವರಿ ಕ್ರಮಗಳ ಮೂಲಕ ನಿಗಾ ವಹಿಸುತ್ತದೆ. ಕಾನೂನು ಕೈಗೆತ್ತಿಕೊಳ್ಳುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಕೈಗೊಳ್ಳುತ್ತದೆ ಎಂದು ಪುತ್ತೂರು ಡಿವೈಎಸ್ಪಿ ಪ್ರಮೋದ್ ಕುಮಾರ್ ಹೇಳಿದರು.



ಅವರು ಪುತ್ತೂರು ನಗರ ಪೊಲೀಸ್ ಠಾಣೆಯಲ್ಲಿ ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ನಡೆದ ಶಾಂತಿ ಸಭೆಯಲ್ಲಿ ಮಾತನಾಡಿದರು.

ಮುನ್ನೆಚರಿಕೆಯ ದೃಷ್ಟಿಯಿಂದ ಹಳೆಯ ಪ್ರಕಣದಲ್ಲಿ ಭಾಗಿಯಾದವರು ಮತ್ತೆ ಪುನರಾವರ್ತಿಸಬಾರದೆಂಬ ಕಾರಣಕ್ಕೆ ಬಾಂಡ್ ಪಡೆಯಲಾಗುತ್ತದೆ. ಕಾನೂನು ಪ್ರಕಾರ ನಡೆದುಕೊಳ್ಳುವವರು ಬಾಂಡ್‌ಗಳಿಗೆ ಭಯಪಡುವ ಅಗತ್ಯವಿಲ್ಲ, ಬಾಂಡ್ ಪಡೆಯುವುದನ್ನು ಕಿರುಕುಳ ಎಂದು ಯಾರೂ ಪರಿಗಣಿಸಬಾರದು. ಬಾಂಡ್ ಪ್ರಕ್ರಿಯೆಯನ್ನು ಸ್ಥಳೀಯ ಮಟ್ಟಕ್ಕೆ ತರುವ ಬೇಡಿಕೆಯನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗುತ್ತದೆ ಎಂದರು.

ನಿರ್ದಿಷ್ಟ ಅವಧಿಯಲ್ಲಿ ಅಹಿತಕರ ಘಟನೆ ನಡೆದಲ್ಲಿ ಮಾತ್ರ ಬಾಂಡ್ ಮೊತ್ತವನ್ನು ಮುಟ್ಟುಗೋಲು ಹಾಕುತ್ತದೆ. ಕಾನೂನು ಸುವ್ಯವಸ್ಥೆ ಸರಿಯಾಗಿರಬೇಕೆಂಬ ನಿಟ್ಟಿನಲ್ಲಿ ಇಲಾಖೆ ಅಗತ್ಯಕ್ರಮಗಳನ್ನು ಕೈಗೊಂಡಿದೆ. ಹೊರ ರಾಜ್ಯದಿಂದ ಬರುವ ಹೋಗುವ ವಾಹನಗಳ ಮೇಲೆ ನಿಗಾ ಇಡುವ ನಿಟ್ಟಿನಲ್ಲಿ ವಿವಿಧ ಕಡೆ ಚೆಕ್ ಪೋಸ್ಟ್ ಹಾಕಲಾಗಿದೆ ಎಂದರು.

ನಗರ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಜಾನ್ಸನ್ ಡಿಸೋಜ ಮಾತನಾಡಿ, ಹಬ್ಬಗಳ ಆಚರಣೆಗಳ ಸಂದರ್ಭದಲ್ಲಿ ಎಲ್ಲರೂ ಸಹಕಾರ ನೀಡಿದರೆ ಯಾವುದೇ ತೊಂದರೆಯಾಗುವುದಿಲ್ಲ, ವಾಹನಗಳು ಹೆಚ್ಚಾಗಿ ಸಂಚಾರ ದಟ್ಟಣೆಯ ಸಮಸ್ಯೆಗಳ ಕುರಿತು ಸಂಬಂಧಪಟ್ಟವರಿಗೆ ಸೂಚನೆ ನೀಡಲಾಗುತ್ತದೆ. ಬೈಪಾಸ್ ಇರುವ ಕಾರಣ ಪೇಟೆಯ ಒಳಗಿನ ಒತ್ತಡ ಕಡಿಮೆಯಾಗಿದೆ ಎಂದರು.

ಗೋ ಸಾಗಾಟದಲ್ಲಿ ಹಿಂದೆ ಭಾಗಿಯಾದ ಹಲವು ಮಂದಿಗೆ ಪೊಲೀಸ್ ಇಲಾಖೆ ನೋಟಿಸ್ ನೀಡಿದೆ. ಮತ್ತೆ ಅಕ್ಷಕರ ಕಚೇರಿಗೆ ತೆರಳಿ ಬಾಂಡ್ ನೀಡಬೇಕೆಂಬುದು ಸರಿಯಲ್ಲ, ನ್ಯಾಯಾಲಯದಲ್ಲಿ ಪ್ರಕರಣ ಇರುವಾಗ ಅವರಿಗೆ ಕಿರುಕುಳ ನೀಡುವುದು ಸರಿಯಲ್ಲ, ಕೆಲವು ಮಂದಿಗೆ ನ್ಯಾಯಾಲಯದಲ್ಲಿ ಅಂತಿಮ ಆದೇಶವಾದರೂ, ಅವರಿಂದಲೂ ಬಾಂಡ್ ಪಡೆಯಲಾಗುತ್ತಿದೆ ಎಂದು ಒಂದಷ್ಟು ಮಂದಿ ಅಳಲು ತೋಡಿಕೊಂಡರು.

ಮಸೀದಿಗಳ ಮುಂದೆ ಪೊಲೀಸ್ ಸಿಬಂದಿ ನೇಮಕ ಮಾಡಿದರೆ ಉತ್ತಮ ಎಂಬ ಅಭಿಪ್ರಾಯ ಕೇಳಿಬಂತು.

ಸಬ್ ಇನ್‌ಸ್ಪೆಕ್ಟರ್ ಸುರೇಶ್, ಸುಹಾಸ್, ಸೇಸಮ್ಮ, ಸಂಘಟನೆಗಳ ಪ್ರಮುಖರಾದ ರಝಾಕ್, ದಿನೇಶ್, ಇಬ್ರಾಹಿಂ, ಬಶೀರ್, ರೋಶನ್, ಮೌರೀಸ್ ಮಸ್ಕರೇನಸ್, ಲಕ್ಷ್ಮೀಪ್ರಸಾದ್, ಹರೀಶ್, ಇಸಾಕ್ ಮುಕ್ವೆ ಮೊದಲಾದವರು ಉಪಸ್ಥಿತರಿದ್ದರು.

ಕೆನರಾ ಕಾಲೇಜಿನ ಪದವಿ ಪ್ರದಾನ ಸಮಾರಂಭ | ಪ್ರೊ. ಮಿತ್ರಾ ಎಸ್. ರಾವ್ ಸಲಹೆ

ಆತ್ಮವಿಶ್ವಾಸ, ಮೌಲ್ಯಗಳೊಂದಿಗೆ ಬದುಕು ರೂಪಿಸಿ

ಮಂಗಳೂರು: ಪದವಿ ಪಡೆಯುವುದು ಅಂತ್ಯವಲ್ಲ, ಅದು ಹೊಸ ಜವಾಬ್ದಾರಿಗಳ ಬದುಕಿನ ಆರಂಭ. ಯುವಜನತೆ ಆತ್ಮವಿಶ್ವಾಸ, ಸೃಜನಶೀಲತೆ ಹಾಗೂ ಮಾನವೀಯ ಮೌಲ್ಯಗಳೊಂದಿಗೆ ಬದುಕನ್ನು ಎದುರಿಸಬೇಕು ಎಂದು ಶ್ರೀನಿವಾಸ್ ವಿವಿ ಟ್ರಸ್ಟಿ ಸದಸ್ಯೆ ಹಾಗೂ ಬೋರ್ಡ್ ಆಫ್ ಗವರ್ನರ್ಸ್ ಸದಸ್ಯೆ ಪ್ರೊ. ಎ. ಮಿತ್ರಾ ಎಸ್. ರಾವ್ ಹೇಳಿದರು.



ನಗರದ ಟಿ.ವಿ. ರಮಣ್ ಪೈ ಕನ್ವೆನ್ಷನ್ ಸೆಂಟರ್‌ನಲ್ಲಿ ಭಾನುವಾರ ನಡೆದ ಕೆನರಾ ಕಾಲೇಜು ಸ್ವಾಯತ್ತ ಸಂಸ್ಥೆಯ ಪದವಿ ಪ್ರದಾನ 'ಗ್ರ್ಯಾಜುಯೇಶನ್ ಡೇ 2026' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಚಿಂತನ ಶಕ್ತಿ ದುರ್ಬಲವಾಗದಿರಲಿ

ಹೊಸ ಕನಸುಗಳು, ಹೊಸ ಆಲೋಚನೆಗಳು ಮತ್ತು ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರಬಲ್ಲ ಚಿಂತನೆಗಳು ಯುವಜನತೆಯ ಶಕ್ತಿಯಾಗಬೇಕು. ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಮಾನವನ ನಿಜವಾದ ಚಿಂತನಾಶಕ್ತಿಯನ್ನು ದುರ್ಬಲಗೊಳಿಸುವ ರೀತಿಯಲ್ಲಿ ಬಳಸಬಾರದು. ನಕಾರಾತ್ಮಕ ಸಿದ್ಧಾಂತಗಳು ಹಾಗೂ ದಾರಿ ತಪ್ಪಿಸುವ ಚಳುವಳಿಗಳ ಪ್ರಭಾವಕ್ಕೆ ಒಳಗಾಗದೆ ಜೀವನ ಅನ್ವೇಷಣೆಯ ಉತ್ತಮ ಹಾದಿಯಲ್ಲಿ ಮುನ್ನಡೆಯಬೇಕು ಎಂದು ಅವರು ಹೇಳಿದರು.

ಸಚ್ಚಾರಿತ್ರ್ಯ ಬೆಳೆಯಲಿ

ಅಧ್ಯಕ್ಷತೆ ವಹಿಸಿದ್ದ ಕೆನರಾ ಆಡಳಿತ ಮಂಡಳಿ ಅಧ್ಯಕ್ಷ ಡಿ. ವಾಸುದೇವ ಕಾಮತ್ ಮಾತನಾಡಿ, ಪ್ರತಿಭೆಯ ಜೊತೆಗೆ ಶಿಸ್ತು, ಸಚ್ಚಾರಿತ್ರ್ಯ ಮತ್ತು ಮಾನವೀಯ ಮೌಲ್ಯಗಳು ಬೆಳೆಯಬೇಕು. ಹೊಸ ಕನಸುಗಳು ಮತ್ತು ಹೊಸ ಪ್ರಯತ್ನಗಳು ವ್ಯಕ್ತಿಯನ್ನು ಯಶಸ್ಸಿನತ್ತ ಕೊಂಡೊಯ್ಯುತ್ತವೆ ಎಂದು ಹೇಳಿದರು.

ಪ್ರದಾವಿ ಪ್ರದಾನ

ಪದವಿ ಪ್ರದಾನ ಪಡೆದ ವಿದ್ಯಾರ್ಥಿಗಳಿಗೆ ಕಾಲೇಜಿನ ಪ್ರಾಂಶುಪಾಲರು ಪ್ರಮಾಣ ವಚನ ಬೋಧಿಸಿದರು.

ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಕೆನರಾ ಹೈಸ್ಕೂಲ್ ಅಸೋಸಿಯೇಷನ್ ಖಜಾಂಚಿ ಸಿ.ಎ. ಎಂ. ವಾಮನ್ ಕಾಮತ್, ಕಾಲೇಜಿನ ಸಂಚಾಲಕ ಸಿ.ಎ. ಜಗನ್ನಾಥ್ ಕಾಮತ್, ಮ್ಯಾನೇಜರ್ ಶಿವಾನಂದ ಶೆಣೈ, ಕೆನರಾ ವಿಕಾಸ ಕಾಲೇಜಿನ ಸಂಯೋಜಕ ಬಸ್ತಿ ಪುರುಷೋತ್ತಮ ಶೆಣೈ, ಆಡಳಿತ ಮಂಡಳಿಯ ಸದಸ್ಯ ಯೋಗೀಶ್ ಕಾಮತ್, ಕೆನರಾ ಸಂಧ್ಯಾ ಕಾಲೇಜಿನ ಪ್ರಾಂಶುಪಾಲರಾದ ಅನಿಲ ಕಾಮತ್, ಆಡಳಿತಾಧಿಕಾರಿ ಡಾ. ದೀಪ್ತಿ ನಾಯಕ್, ವಿವಿಧ ವಿಭಾಗಗಳ ಮುಖ್ಯಸ್ಥರು, ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಪ್ರೇಮಲತಾ ವಿ. ಸ್ವಾಗತಿಸಿದರು. ಆಂತರಿಕ ಗುಣಮಟ್ಟ ಹಾಗೂ ಖಾತರಿಕೋಶದ ಸಂಯೋಜಕರಾದ ಅನುಸೂಯ ಭಾಗವತ್ ಅತಿಥಿಗಳನ್ನು ಪರಿಚಯಿಸಿದರು. ಡಾ. ಮೇಘ ವಂದಿಸಿದರು. ಇಂಗ್ಲಿಷ್ ವಿಭಾಗದ ಮುಖ್ಯಸ್ಥೆ ಹೃತಿಕಾ ದಾಸ್ ಕಾರ್ಯಕ್ರಮ ನಿರೂಪಿಸಿದರು.

ದ.ಕ. ಗ್ಯಾರೇಜ್ ಮಾಲಕರ ಸಂಘದ ಬಂಟ್ವಾಳ ವಲಯದ ರಜತ ಸಂಭ್ರಮ



ಬಂಟ್ವಾಳ: ದಕ್ಷಿಣ ಕನ್ನಡ ಜಿಲ್ಲಾ ಗ್ಯಾರೇಜ್ ಮಾಲಕರ ಸಂಘ ಇದರ ಬಂಟ್ವಾಳ ವಲಯದ ರಜತ ಸಂಭ್ರಮ, ವಾರ್ಷಿಕ ಮಹಾಸಭೆ ಮತ್ತು ಪದಗ್ರಹಣ ಸಮಾರಂಭ ಬಿ.ಸಿ.ರೋಡಿನ ಸ್ಪರ್ಶಾಕಲಾಮಂದಿರದಲ್ಲಿ ಭಾನುವಾರ ನಡೆಯಿತು.

ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಸುಧೀರ್ ಪೂಜಾರಿ ವಹಿಸಿದ್ದರು, ಉದ್ಯಮಿ ಶಶಿಧರ ಪೈ ಮಾರೂರು, ಕಾರ್ಮಿಕ ನಿರೀಕ್ಷಕಿ ಲವೀನಾ ಡಿಸೋಜಾ, ಉದ್ಯಮಿಗಳಾದ ರಾಜೇಶ್ ಮೆಂಡನ್, ಯೋಗೀಶ್, ಸಂಘದ ಜಿಲ್ಲಾಧ್ಯಕ್ಷ ದಿನಕರ ಕುಲಾಲ್, ದ.ಕ. ಗ್ಯಾರೇಜು ಮಾಲಕರ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಜನಾರ್ದನ ಅತ್ತಾವರ, ಜಿಲ್ಲಾ ಸಂಘದ ನಿರ್ದೇಶಕ ಜೆ. ಪುಂಡಲೀಕ ಸುವರ್ಣ, ಬಿ.ಸಿ.ರೋಡಿನ ಹಿರಿಯ ನ್ಯಾಯವಾದಿ, ನೋಟರಿ ಅಶ್ವಿನ್ ಕುಮಾರ್ ರೈ, ಬಂಟ್ವಾಳ ಸಂಚಾರಿ ಠಾಣೆಯ ಎಸ್‌ಐ ಆದರ್ಶ್ ಎಂ.ಎಸ್., ಜಿಲ್ಲಾ ಸಂಘದ ಜೊತೆ ಕಾರ್ಯದರ್ಶಿ ಅಬ್ದುಲ್ ಮೊಯಿದ್ದಿನ್ ಉಪಸ್ಥಿತರಿದ್ದರು. ಸಂಘದ ನೂತನ ನಿಯೋಜಿತ ಅಧ್ಯಕ್ಷ ಗಣೇಶ್ ಸುವರ್ಣ ತುಂಬೆ ಮತ್ತು ಪದಾಧಿಕಾರಿಗಳು ಈ ಸಂದರ್ಭದಲ್ಲಿ ಅಧಿಕಾರ ಸ್ವೀಕರಿಸಿದರು. ಹಿರಿಯ ಮೆಕ್ಯಾನಿಕ್ ಸದಸ್ಯರನ್ನು ಹಾಗೂ ಸಾಧಕರನ್ನು ಮತ್ತು ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿಯಲ್ಲಿ ಶೇ. 85ಕ್ಕಿಂತ ಅಧಿಕ ಅಂಕ ಗಳಿಸಿದ ಸಂಘದ ಸದಸ್ಯರು, ಗ್ಯಾರೇಜ್ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಗೌರವ ಸಲಹೆಗಾರ ಸುಧಾಕರ ಸಾಲ್ಯಾನ್ ಪ್ರಾಸ್ತವಿಕವಾಗಿ ಮಾತನಾಡಿದರು, ಕಾರ್ಯದರ್ಶಿ ರಾಜೇಶ್ ಕುಲಾಲ್ ವರದಿ ವಾಚಿಸಿದರು, ಕೋಶಾಧಿಕಾರಿ ಭಾಸ್ಕರ್ ಕುಲಾಲ್ ಲೆಕ್ಕ ಪತ್ರ ಮಂಡಿಸಿದರು. ಸಿದ್ದಿಕ್ ಮೆಲ್ಕಾರ್ ಸ್ವಾಗತಿಸಿ, ಉಮೇಶ್ ಶೆಟ್ಟಿ ವಂದಿಸಿದರು. ರಂಗಕಲಾವಿದ ಎಚ್.ಕೆ. ನೈನಾಡು ಕಾರ್ಯಕ್ರಮ ನಿರೂಪಿಸಿದರು.

ಸಂಸ್ಕೃತಿಯ ಹೃದಯವಾಗಿ ಭಾಷೆ ಉಳಿವು ಅಗತ್ಯ: ಒಡಿಯೂರು ಶ್ರೀ



ವಿಟ್ಲ: ಕೆಲಸ ಕಾರ್ಯದಲ್ಲಿ ಪ್ರೀತಿ, ಪ್ರಯತ್ನ ಇದ್ದಾಗ ಯಶಸ್ವಿಯಾಗುತ್ತದೆ. ಭಾಷೆ ಸಂಸ್ಕೃತಿಯ ಹೃದಯವಾಗಿದ್ದು, ಭಾಷೆಯ ಉಳಿವು ಅಗತ್ಯವಾಗಿದೆ. ತುಳುವಿಗೆ ಪ್ರತಿಯೊಬ್ಬರ ಕೊಡುಗೆ ಅಗತ್ಯವಾಗಿದೆ ಎಂದು ಒಡಿಯೂರು ಶ್ರೀಗುರುದೇವದತ್ತ ಸಂಸ್ಥಾನದ ಶ್ರೀಗುರುದೇವಾನಂದ ಸ್ವಾಮೀಜಿ ಹೇಳಿದರು.

ಒಡಿಯೂರು ಶ್ರೀ ಗುರುದೇವ ಜ್ಞಾನ ಮಂದಿರದಲ್ಲಿ ತುಲುವೆರೆ ಕಲ ಟ್ರಸ್ಟ್ ವತಿಯಿಂದ ನಡೆದ ತುಲುವೆರೆ ಕಲದ ವಾರ್ಷಿಕ ಮತ್ತು ಕೃತಿ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಆಶೀರ್ವಚನ ನೀಡಿದರು. ವಿಶ್ವನಾಥ ಕುಲಾಲ್, ಪ್ರಶಾಂತ್ ಆಚಾರ್ಯ, ಹಂಸರಾಗ ಶೆಟ್ಟಿ ಅವರನ್ನು ಗೌರವಿಸಲಾಯಿತು. ಮಕ್ಕಳ ಕವನ ವಿಭಾಗದಲ್ಲಿ ವಿಜೇತ ದಿವ್ಯಾ ರೈ ಪೆರುಲಾಜೆ, ಪೆರ್ಮುಖ ಸುಬ್ರಹ್ಮಣ್ಯ ಭಟ್, ಶಾರದಾ ತುಳುನಾಡ್, ಕಥೆ ವಿಭಾಗದಲ್ಲಿ ವಿಜೇತ ಬನಶ್ರೀ ಅವಿನಾಶ್, ಪ. ರಾಮಕೃಷ್ಣ ಶಾಸ್ತ್ರಿ ಸವಿತಾ ಎಸ್. ಭಟ್ ಅವರಿಗೆ ಬಹುಮಾನ ವಿತರಣೆ ಮಾಡಲಾಯಿತು. ಬಾನ ಚಂದ್ರಮೆ, ಪೇರ್ ಪಂದ್ರ್, ಗುತ್ತುಗೊಂಜಿ ಕಲತ ಸುತ್ತು, ಪದ ಪಾಡ್ದನ ಕೃತಿ ಬಿಡುಗಡೆ ನಡೆಯಿತು. ಹಿರಿಯ ಸಾಹಿತಿ ನಾರಾಯಣ ರೈ ಕುಕ್ಕುವಳ್ಳಿ, ಟ್ರಸ್ಟ್ ಗೌರವಾಧ್ಯಕ್ಷ ಮುದ್ದು ಮೂಡುಬೆಳ್ಳೆ, ಸಾಹಿತಿ ರಘು ಇಡ್ಕಿದು, ಗುರುದೇವ ವಿದ್ಯಾಪೀಠದ ಸಂಚಾಲಕ ಗಣಪತಿ ಭಟ್ ಸೇರಾಜೆ, ಮೂಲ್ಕಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಿಥುನ್ ಉಡುಪ ಕೊಡೆತ್ತೂರು, ಸಾಹಿತಿ ರೂಪಕಲಾ ಆಳ್ವ ಉಪಸ್ಥಿರಿದ್ದರು. ಪದ್ಮನಾಭ ಪೂಜಾರಿ ಪ್ರಾರ್ಥಿಸಿದರು. ತುಲುವೆರೆ ಕಲ ಟ್ರಸ್ಟ್ ಅಧ್ಯಕ್ಷೆ ಗೀತಾ ಲಕ್ಷ್ಮೀಶ್ ಸ್ವಾಗತಿಸಿದರು. ಜಯರಾಮ ಪಡ್ರೆ ವಂದಿಸಿದರು. ರೇಣುಕಾ ಕಣಿಯೂರು ನಿರೂಪಿಸಿದರು.

ಜಪ್ಪು ವಾರ್ಡ್‌ನಲ್ಲಿ 20 ಲಕ್ಷ ರೂ. ಅನುದಾನದ ಕಾಮಗಾರಿಗೆ ಚಾಲನೆ



ಮಂಗಳೂರು: ಮಹಾನಗರ ಪಾಲಿಕೆಯ 59ನೇ ಜಪ್ಪು ವಾರ್ಡಿನ ಸೂಟರ್‌ಪೇಟೆ 4ನೇ ಅಡ್ಡರಸ್ತೆ ಮತ್ತು ಕನಕರಬೆಟ್ಟು ಬಳಿ ತಡೆಗೋಡೆ ಕುಸಿದ ಭಾಗಕ್ಕೆ 20 ಲಕ್ಷ ರೂ. ಅನುದಾನದಲ್ಲಿ ಪುನರ್ ನಿರ್ಮಾಣ ಕಾಮಗಾರಿ ನಡೆಯಲಿದ್ದು, ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ಭೂಮಿ ಪೂಜೆ ನಡೆಯಿತು.

ನಂತರ ಮಾತನಾಡಿದ ಶಾಸಕರು, ಕಳೆದ ಮಳೆಗಾಲದಲ್ಲಿ ಈ ಭಾಗದ ಕೆಲವು ರಾಜಕಾಲುವೆಗಳಿಗೆ ಹಾನಿಯಾಗಿದ್ದರೆ, ಉಳಿದ ರಾಜ ಕಾಲುವೆಗಳು ಕೆಳ ಹಂತದಲ್ಲಿರುವುದು ಸಮಸ್ಯೆಯಾಗಿದೆ. ಕಳೆದ ಮೂರು ವರ್ಷಗಳಲ್ಲಿ ಪ್ರಾಕೃತಿಕ ವಿಕೋಪದಿಂದ ಸುಮಾರು 300ರಿಂದ 400 ಕೋಟಿಗೂ ಹೆಚ್ಚು ಹಾನಿಯಾಗಿದ್ದರೂ, ಅಗತ್ಯ ಪ್ರಮಾಣದ ಪರಿಹಾರ ರಾಜ್ಯ ಸರ್ಕಾರದಿಂದ ಬಂದಿಲ್ಲದಿರುವುದು ಬೇಸರದ ಸಂಗತಿ. ಇತ್ತೀಚೆಗೆ ರಾಜ್ಯ ಸರ್ಕಾರದಿಂದ ಹಲವು ಜಿಲ್ಲೆಗಳಿಗೆ ಮಳೆ ಪರಿಹಾರ ನಿಧಿ ಬಿಡುಗಡೆಯಾಗಿದ್ದು, ಅದರಲ್ಲಿ ನಮ್ಮ ಪಾಲಿಕೆ ವ್ಯಾಪ್ತಿಗೆ ಮಂಗಳೂರು ನಗರ ದಕ್ಷಿಣ ಕ್ಷೇತ್ರದ ಶಾಸಕರ ಹೆಸರಿನಲ್ಲಿ 10 ಕೋಟಿ ರೂ. ನೀಡಲಾಗಿದೆ. ಅದರಲ್ಲಿ ಈ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದರು.

ಈ ಸಂದರ್ಭದಲ್ಲಿ ಸ್ಥಳೀಯ ನಿಕಟಪೂರ್ವ ಪಾಲಿಕೆ ಸದಸ್ಯ ಭರತ್ ಕುಮಾರ್, ಅಜಿತ್ ಡಿಸಿಲ್ವ, ಶಬರೀಶ್, ಪ್ರವೀಣ್ ನಿಡ್ಡೆಲ್, ಹರೀಶ್, ಸೇರಿದಂತೆ ಜಪ್ಪು ವಾರ್ಡಿನ ಬಿಜೆಪಿ ಕಾರ್ಯಕರ್ತರು, ಸೂಟರ್ ಪೇಟೆ ಪರಿಸರದ ನಿವಾಸಿಗಳು ಉಪಸ್ಥಿತರಿದ್ದರು.

ಮಂಗಳೂರು ಪ್ರೆಸ್‌ಕ್ಲಬ್ ದಿನಾಚರಣೆ ಉದ್ಘಾಟನೆ, ದೀಪಕ್ ಜಿ.ಗೆ ಮಂಗಳೂರು ಪ್ರೆಸ್‌ಕ್ಲಬ್ ಪ್ರಶಸ್ತಿ ಪ್ರದಾನ | ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ಶ್ಲಾಘನೆ

ಪತ್ರಕರ್ತರಿಂದ ಸಮಾಜದ ಸ್ವಾಸ್ಥ್ಯ ಕಾಪಾಡುವ ಮಹತ್ವದ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದಾರೆ

ಮಂಗಳೂರು: ಸಮಾಜದ ಸ್ವಾಸ್ಥ್ಯ ಕಾಪಾಡುವ ಮಹತ್ವದ ಜವಾಬ್ದಾರಿಯನ್ನು ಪತ್ರಕರ್ತರು ನಿಭಾಯಿಸುತ್ತಿದ್ದಾರೆ, ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸುವ ಪತ್ರಕರ್ತರನ್ನು ರಕ್ಷಣೆ ಮಾಡುವುದು ಸರ್ಕಾರದ ಕರ್ತವ್ಯ ಎಂದು ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ಹೇಳಿದರು.

ನಗರದ ರೆಡ್ ಕ್ರಾಸ್ ಶತಮಾನೋತ್ಸವ ಕಟ್ಟಡದ ಪ್ರೇರಣಾ ಸಭಾಂಗಣದಲ್ಲಿ ಭಾನುವಾರ ನಡೆದ ಮಂಗಳೂರು ಪ್ರೆಸ್ ಕ್ಲಬ್ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು. ಪೊಲೀಸರಷ್ಟೇ ವೇಗವಾಗಿ ಘಟನಾ ಸ್ಥಳಗಳಿಗೆ ತೆರಳಿ ಸಮಾಜಕ್ಕೆ ತಪ್ಪು ಸಂದೇಶ ಹೋಗದಂತೆ ವಿವೇಚನೆಯಿಂದ ವರದಿ ಮಾಡುವ ಪತ್ರಕರ್ತರ ಬದ್ಧತೆ ಶ್ಲಾಘನೀಯ ಎಂದರು.

ಸಮಾಜ ಸೇವಕ, ರಾಜಕೇಸರಿ ಟ್ರಸ್ಟ್‌ನ ಸಂಸ್ಥಾಪಕ





ದೀಪಕ್ ಜಿ. ಬೆಳ್ತಂಗಡಿ ಅವರಿಗೆ 2016ನೇ ಸಾಲಿನ ಮಂಗಳೂರು ಪ್ರೆಸ್ ಕ್ಲಬ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಪ್ರದಾನ ಮಾಡಿದ ಮಂಗಳೂರು ನಗರ ಉಪ ಪೊಲೀಸ್ ಆಯುಕ್ತ ಎಚ್. ಎನ್. ಮಿಥುನ್ ಮಾತನಾಡಿ, ಮಂಗಳೂರಿನ ಪತ್ರಕರ್ತರು ಸಂಯಮ ಮತ್ತು ಸಾಮಾಜಿಕ ಕಳಕಳಿಯಿಂದ ಕೆಲಸ ಮಾಡುತ್ತಿದ್ದಾರೆ. ನಿಸ್ವಾರ್ಥ ಸೇವಕರನ್ನು ಗುರುತಿಸುವ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ನೀಡಿದ್ದಾರೆ ಎಂದರು.

ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ. ಹರೀಶ್ ರೈ ಅಧ್ಯಕ್ಷತೆ ವಹಿಸಿದ್ದರು. ರೆಡ್‌ಕ್ರಾಸ್ ಸೊಸೈಟಿ ದ.ಕ. ಜಿಲ್ಲಾ ಘಟಕದ ಚೇರ್ಮನ್ ಸಿಎ ಶಾಂತಾರಾಮ ಶೆಟ್ಟಿ ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೆರವೇರಿಸಿದರು. ವಾರ್ತಾ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಬಿ.ಎ.ಖಾದರ್ ಶಾ ಅವರು ಪ್ರೆಸ್ ಗೌರವ ಸನ್ಮಾನಕ್ಕೆ ಆಯ್ಕೆಯಾದವರನ್ನು ಗೌರವಿಸಿದರು. ದ.ಕ.ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್.ಬಿ.ಎನ್., ಪ್ರಧಾನ ಕಾರ್ಯದರ್ಶಿ ರಾಜೇಶ್.ಕೆ.ಪೂಜಾರಿ, ಪತ್ರಿಕಾ ಭವನ ಟ್ರಸ್ಟ್ ಅಧ್ಯಕ್ಷ ಅನ್ನು ಮಂಗಳೂರು, ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀನಿವಾಸ ನಾಯಕ್ ಇಂದಾಜೆ ಉಪಸ್ಥಿತರಿದ್ದರು.

ಮಹಮ್ಮದ್ ಆರಿಫ್ ಪಡುಬಿದ್ರಿ, ಆತ್ಮಭೂಷಣ್ ಭಟ್, ವಿಲ್ಫ್ರೆಡ್ ಡಿಸೋಜ, ದಯಾ ಕುಕ್ಕಾಜೆ, ವಿಜಯ ಕೋಟ್ಯಾನ್ ಪಡು ಸನ್ಮಾನಿತರನ್ನು ಪರಿಚಯಿಸಿದರು. ಪ್ರೆಸ್ ಕ್ಲಬ್ ಪ್ರಧಾನ ಕಾರ್ಯದರ್ಶಿ ಇಬ್ರಾಹಿಂ ಅಡ್ಕಸ್ಥಳ ವಂದಿಸಿದರು. . ಲೋಕೇಶ್ ರೈ ಕಾರ್ಯಕ್ರಮ ನಿರೂಪಿಸಿದರು.

ಪ್ರೆಸ್‌ಕ್ಲಬ್ ಗೌರವ ಸನ್ಮಾನ

ಪ್ರೆಸ್‌ಕ್ಲಬ್ ಗೌರವ ಸನ್ಮಾನಕ್ಕೆ ಆಯ್ಕೆಯಾದ ಬಾಲಸುಬ್ರಹ್ಮಣ್ಯ ಕಾಯಾರ, ರಾಮಣ್ಣ ವೈ., ಹರ್ಷ, ರೇಮಂಡ್ ಡಿಕೂನಾ ಮತ್ತು ಆರ್.ಎಂ. ರಾಜೇಂದ್ರನ್ ಅವರನ್ನು ಗೌರವಿಸಲಾಯಿತು. ಮಾಧ್ಯಮ ಅಕಾಡೆಮಿ ವಿಶೇಷ ಪ್ರಶಸ್ತಿ ಪುರಸ್ಕೃತ ಆನಂದ ಶೆಟ್ಟಿ, ಕೆಯುಡಬ್ಲ್ಯುಜೆ ಪ್ರಶಸ್ತಿ ಪುರಸ್ಕೃತ ರಾಮಕೃಷ್ಣ ಆರ್., ರಾಜೇಶ್.ಶೆಟ್ಟಿ ದೋಟ, ಅಬ್ದುಲ್ ರಹಿಮಾನ್ ಟಿ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸತೀಶ್ ಇರಾ, ರಾಜೇಶ್ ಶೆಟ್ಟಿ ದಡ್ಡಂಗಡಿ, ಎ.ಕೆ. ಕುಕ್ಕಿಲ, ಸುಳ್ಯ ತಾಲೂಕು ಕಸಾಪ ಪ್ರಶಸ್ತಿ ಪುರಸ್ಕೃತ ಹರೀಶ್ ಮೋಟುಕಾನ ಅವರನ್ನು ಸನ್ಮಾನಿಸಲಾಯಿತು.

ಸುತ್ತಮುತ್ತ

ಮೆಟ್ರಿಕ್ ಪೂರ್ವ ಮತ್ತು ನಂತರ ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮಡಿಕೇರಿ: ಮಡಿಕೇರಿ ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ-1, 2ಎ,2ಬಿ,3ಎ,3ಬಿ, ಪ.ಜಾ/ಪ.ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಂದ 2026-27ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿ ಪ್ರವರ್ಗ-1, ಪ.ಜಾ/ಪ.ವರ್ಗ ರೂ.2.50 ಲಕ್ಷ, ಪ್ರವರ್ಗ-2ಎ,2ಬಿ,3ಎ,3ಬಿ, ಇತರೆ ಹಿಂದುಳಿದ ವರ್ಗ, ಇತರೆ ರೂ.1 ಲಕ್ಷ, ಅರ್ಜಿಯನ್ನು https://shp.karnataka.gov.in/bcwd ನಲ್ಲಿ ಸಲ್ಲಿಸಬೇಕು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಜೂನ್ 8 ಕೊನೆಯ ದಿನವಾಗಿದೆ. ತಾಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ https://bcwd.karnataka.gov.in/ನ್ನು ನೋಡಬಹುದು. ತಾಂತ್ರಿಕ ತತೊಂದರೆಗಳಾದಲ್ಲಿ bcwdhelpline@gmail.com ಇ-ಮೇಲ್ ಮುಖಾಂತರ ದಾಖಲೆಗಳೊಂದಿಗೆ ಕೋರಿಕೆಯನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಮೊ.ಸಂ.9632225847 ನ್ನು ಹಾಗೂ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ದೇವರಾಜ ಅರಸು ಭವನ, ಮ್ಯಾನ್ಸ್ ಕಾಂಪೌಂಡು ಹತ್ತಿರ, ಮಡಿಕೇರಿ ಈ ಕಚೇರಿಯನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

ಜಿಲ್ಲಾ ಮಟ್ಟದ ಶಾಲಾ ಪ್ರವೇಶೋತ್ಸವ

ಕಾಸರಗೋಡು: ಜಿಲ್ಲಾ ಮಟ್ಟದ ಶಾಲಾ ಪ್ರವೇಶೋತ್ಸವವನ್ನು ಜೂನ್ 1ರಂದು ಬೆಳಗ್ಗೆ 9 ಗಂಟೆಗೆ ಚಾಯೋತ್ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಹಮ್ಮಿಕೊಳ್ಳಲು ಜಿಲ್ಲಾ ಪಂಚಾಯತ್ ಆಡಳಿತವು ನಿರ್ಧರಿಸಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಯಲ್ಲೇ ಅತೀ ಹೆಚ್ಚು ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾದ ಹೆಗ್ಗಳಿಕೆಯನ್ನೂ ಈ ಶಾಲೆಯು ಹೊಂದಿದೆ.

ಮೇ 31ರಂದು ಜಿಲ್ಲಾ ಕುಲಾಲ ಸಂಘದ ವಾರ್ಷಿಕೋತ್ಸವ

ಮಂಜೇಶ್ವರ: ಕಾಸರಗೋಡು ಜಿಲ್ಲಾ ಕುಲಾಲ ಸಂಘದ ಆಶ್ರಯದಲ್ಲಿ ಮೇ 31ರಂದು ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ, ಗಣಪತಿ ಹೋಮ, 42ನೇ ವಾರ್ಷಿಕೋತ್ಸವ, ಮಹಾಸಭೆ, ಪುಸ್ತಕ ವಿತರಣೆ, ಪ್ರತಿಭಾ ಪುರಸ್ಕಾರ, ಸಾಧಕರಿಗೆ ಮತ್ತು ಜನಪ್ರತಿನಿಧಿಗಳಿಗೆ ಗೌರವಾರ್ಪಣೆ, ಸಾಂಸ್ಕೃತಿಕ ಕಾರ್ಯಕ್ರಮ ಇತ್ಯಾದಿ ಕುಂಜತ್ತೂರು ಜಿಲ್ಲಾ ಕುಲಾಲ ಸಮುದಾಯ ಭವನದಲ್ಲಿ ಜರಗಲಿದೆ.

ಕಾರ್ಯಕ್ರಮದಲ್ಲಿ ಚಂದಪ್ಪ ಮೂಲ್ಯ ಅಧ್ಯಕ್ಷತೆ ವಹಿಸುವರು. ಉದ್ಯಮಿ ಸುನೀಲ್ ಸಾಲಿಯಾನ್ ದಂಪತಿ ದೀಪಬೆಳಗಿಸುವರು. ಡಾ.ಎಂ.ಪಿ.ವರ್ಷಾ ಸಹಿತ ಹಲವಾರು ಮಂದಿ ಗಣ್ಯರು ಭಾಗವಹಿಸುವರು ಎಂದು ಜಿಲ್ಲಾ ಕುಲಾಲ ಸಂಘದ ಅಧ್ಯಕ್ಷ, ವಕೀಲ ರವೀಂದ್ರ ಮುನ್ನಿಪ್ಪಾಡಿ ತಿಳಿಸಿದ್ದಾರೆ.

ಟಿಪ್ಪರ್-ಲಾರಿಗಳ ನಡುವೆ ಸರಣಿ ಅಪಘಾತ

ಮುಲ್ಕಿ: ರಾಷ್ಟ್ರೀಯ ಹೆದ್ದಾರಿ 66ರ ಕೋಲ್ನಾಡ್ ಜಂಕ್ಷನ್ ಬಳಿ ಎರಡು ಟಿಪ್ಪರ್ ಹಾಗೂ ಲಾರಿಗಳ ನಡುವೆ ಸರಣಿ ಅಪಘಾತ ನಡೆದಿದ್ದು ಟಿಪ್ಪರ್ ಚಾಲಕ ಅಲ್ಪ ಸ್ವಲ್ಪ ಗಾಯಗಳೊಂದಿಗೆ ಪಾರಾಗಿದ್ದಾನೆ. ಗಾಯಾಳು ಟಿಪ್ಪರ್ ಚಾಲಕನನ್ನು ಚಂದ್ರ ಎಂದು ಗುರುತಿಸಲಾಗಿದೆ. ಟಿಪ್ಪರ್ ಚಾಲಕ ಮಣ್ಣು ಹೇರಿಕೊಂಡು ಹಳೆಯಂಗಡಿ ಕಡೆಯಿಂದ ಬರುತ್ತಿದ್ದು ಕೋಲ್ನಾಡ್ ಜಂಕ್ಷನ್ ಬಳಿ ಯು ಟರ್ನ್ ಮಾಡುತ್ತಿದ್ದಾಗ ಉಡುಪಿ ಕಡೆಯಿಂದ ಕೇರಳ ಕಡೆಗೆ ಪೈಪ್‌ಗಳನ್ನು ಹೇರಿಕೊಂಡು ಹೋಗುತ್ತಿದ್ದ ಲಾರಿಗೆ ಹಾಗೂ ಕೋಲ್ನಾಡ್ ಕೈಗಾರಿಕಾ ಪ್ರದೇಶದಿಂದ ಹೆದ್ದಾರಿ ಕಡೆಗೆ ಬರುತ್ತಿದ್ದ ಇನ್ನೊಂದು ಟಿಪ್ಪರ್‌ಗೆ ಡಿಕ್ಕಿ ಹೊಡೆದಿದೆ. ಅಪಘಾತದ ತೀವ್ರತೆಗೆ ಟಿಪ್ಪರ್‌ನ ಟಯರ್ ಸ್ಫೋಟಗೊಂಡಿದೆ ಹಾಗೂ ಲಾರಿಯ ಎದುರು ಭಾಗ ಜಖಂಗೊಂಡಿದೆ. ಅಪಘಾತದಿಂದ ಕೆಲ ಹೊತ್ತು ಹೆದ್ದಾರಿ ಸಂಚಾರ ಅಸ್ತವ್ಯಸ್ತ ಉಂಟಾಯಿತು. ಕೂಡಲೇ ಮಂಗಳೂರು ಉತ್ತರ ಟ್ರಾಫಿಕ್ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಮೂರು ವಾಹನಗಳನ್ನು ಸ್ಥಳದಿಂದ ತೆರವುಗೊಳಿಸಿದ್ದಾರೆ.

ಉಪ್ಪಿನಂಗಡಿ ಗ್ರಾಮ ಪಂಚಾಯತ್‌ನ ನಿರ್ಲಕ್ಷ್ಯಕ್ಕೆ ಸಾರ್ವಜನಿಕರಿಂದ ಆಕ್ರೋಶ

ಶುಲ್ಕ ಪಾವತಿಸಿದರೂ ಹಸಿ ತ್ಯಾಜ್ಯ ಸ್ಥಗಿತ: ಎಲ್ಲೆಡೆ ದುರ್ನಾತ!

ಉಪ್ಪಿನಂಗಡಿ: ಇಲ್ಲಿನ ಗ್ರಾ.ಪಂ.ನೆಲೆಯಲ್ಲಿ ನಡೆಯುತ್ತಿದ್ದ ತ್ಯಾಜ್ಯ ವಿಲೇವಾರಿ ವ್ಯವಸ್ಥೆಯಲ್ಲಿ ಹಸಿ ತ್ಯಾಜ್ಯ ಸಂಗ್ರಹಿಸುವ ಕಾರ್ಯ ಸ್ಥಗಿತಗೊಂಡು ಎಲ್ಲೆಡೆ ದುರ್ನಾತಕ್ಕೆ ಕಾರಣವಾಗಿದ್ದು, ಇದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಪಂ.ನಿಂದ ನಿರ್ವಹಿಸಲ್ಪಡುವ ತ್ಯಾಜ್ಯ ವಿಲೇವಾರಿ ವ್ಯವಸ್ಥೆಗೆ ನಾಗರಿಕರು ಮಾಸಿಕ ನಿಗದಿತ ಶುಲ್ಕ ಪಾವತಿಸುತ್ತಾ ಬಂದರೂ, ತ್ಯಾಜ್ಯ ಸಂಗ್ರಹಣ ವ್ಯವಸ್ಥೆ ಮಾತ್ರ ಅಸ್ತವ್ಯಸ್ಥಗೊಂಡಿದೆ.



ಹಸಿ ಕಸ ಒಣ ಕಸ ವಿಂಗಡಿಸಿ ಕೊಡಿ

ಯಾವ ಪುರುಷಾರ್ಥಕ್ಕೆ ತ್ಯಾಜ್ಯವನ್ನು ಹಸಿ ಕಸ - ಒಣ ಕಸ ಎಂದು ವಿಂಗಡಿಸಿ ಬೇರೆ ಬೇರೆ ಬಕೆಟ್ ನಲ್ಲಿ ತುಂಬಿಸಿಡಬೇಕೆಂದು ಮಾತ್ರ ನಾಗರಿಕರಿಗೆ ಸೂಚಿಸಲಾಗಿದ್ದು, ಅದರಂತೆ ಪ್ರತಿ ಮನೆಯಲ್ಲಿ, ಹೊಟೇಲು ಅಂಗಡಿ ಮುಂಗಟ್ಟುಗಳಲ್ಲಿ ಹಸಿ ಕಸ ಬೇರೆ ಒಣ ಕಸ ಬೇರೆಯಾಗಿ ವಿಂಗಡಿಸಿ ಇಡಲಾಗುತ್ತಿತ್ತು. ಅದನ್ನು ತ್ಯಾಜ್ಯ ವಿಲೇವಾರಿ ಕಾರ್ಯಕರ್ತರು ಪ್ರತ್ಯೇಕವಾಗಿ ಸಂಗ್ರಹಿಸಿ ಕೊಂಡೊಯ್ಯುತ್ತಿದ್ದರು. ಆದರೆ ಕಳೆದ ಒಂದು ವಾರದಿಂದ ತ್ಯಾಜ್ಯ ವಿಲೇವಾರಿ ಕಾರ್ಯಕರ್ತರು ಒಣ ಕಸ ಮಾತ್ರ ಕೊಂಡೊಯ್ಯುತ್ತಿದ್ದು, ಹಸಿ ಕಸಕ್ಕೆ ಬೇರೊಂದು ವಾಹನ ಬರಲಿದೆ ಎಂದು ತಿಳಿಸಿ ಮುಂದುವರೆಯುತ್ತಿದ್ದರು. ಆದರೆ ಹಸಿ ಕಸ ಕೊಂಡೊಯ್ಯಲು ಬೇರಾರೂ ಬಾರದೇ ಅದು ಪರಿಸರದಲ್ಲಿ ಉಳಿದು ದುರ್ನಾತ ಪ್ರಸಹರಿಸಲು ಕಾರಣವಾಗಿದೆ.

ಪಂಚಾಯತ್‌ನಲ್ಲಿ ಜನಪ್ರತಿನಿಧಿಗಳ ಆಡಳಿತವಿಲ್ಲ, ಅಧಿಕಾರಿಗಳು ಸಿಗುತ್ತಿಲ್ಲ

ಪ್ರಸಕ್ತ ಪಂಚಾಯತ್ ಚುನಾಯಿತ ಆಡಳಿತ ವ್ಯವಸ್ಥೆಯ ಅವಧಿ ಮುಗಿದ ಬಳಿಕ ಪಂಚಾಯತ್‌ನಲ್ಲಿ ಆಡಳಿತಾಧಿಕಾರಿಗಳ ಆಡಳಿತವಿದ್ದು, ತ್ಯಾಜ್ಯದ ಗಂಭೀರ ಸಮಸ್ಯೆ ಬಗ್ಗೆ ಜನರ ನೋವನ್ನು ಆಲಿಸಲು ಸ್ಥಳೀಯ ಜನಪ್ರತಿನಿಧಿಗಳಿಲ್ಲದ ಕೊರಗು ನಾಗರಿಕರನ್ನು ಕಾಡುತ್ತಿದೆ. ಅಧಿಕಾರಿಗಳು ಕಚೇರಿಯಲ್ಲಿ ಸಿಗುತ್ತಿಲ್ಲ, ಸಿಬ್ಬಂದಿಗಳು ಮೌನವಹಿಸುತ್ತಿದ್ದು, ಒಟ್ಟಾರೆ ಸಮಸ್ಯೆ ಬಗ್ಗೆ ಎಲ್ಲೆಡೆ ಉತ್ತರವೇ ದೊರಕದಂತಾಗಿದೆ ಎಂಬ ದೂರು ನಾಗರಿಕರಿಂದ ಕೇಳಿ ಬರುತ್ತಿದೆ.

ಸಂಜೀವಿನಿ ತಂಡಕ್ಕೆ ನೀಡಲು ಆದೇಶ

ತ್ಯಾಜ್ಯ ವಿಲೇವಾರಿಯ ಹೊಣೆಯನ್ನು ಸ್ಥಳೀಯ ಸಂಜೀವಿನಿ ಮಹಿಳಾ ತಂಡಕ್ಕೆ ಒಪ್ಪಿಸಲು ಸರಕಾರದ ನಿರ್ದೇಶನವಿದ್ದು, ಅದರನ್ವಯ ಈ ಹಿಂದಿನ ಟೆಂಡರ್ ಪ್ರಕ್ರಿಯೆ ಕೈಬಿಟ್ಟು ಸಂಜೀವಿನಿ ತಂಡಕ್ಕೆ ಒಪ್ಪಿಸಲಾಗಿದೆ. ಆದರೆ ಈ ಕಾರ್ಯವನ್ನು ನಿರ್ವಹಿಸಲು ಸಂಜೀವಿನಿ ತಂಡ ಹಿಂದೇಟು ಹಾಕಿದ್ದು, ಪರ್ಯಾಯ ವ್ಯವಸ್ಥೆಗೆ ಸಮಯಾವಕಾಶ ಬೇಕಾಗಿದೆ. ಪ್ರಸಕ್ತ ಹಸಿ ಕಸ ಸಂಗ್ರಹಿಸದೇ ಇರುವುದರಿಂದ ಗಂಭೀರ ಸಮಸ್ಯೆಗಳು ಉದ್ಭವಿಸಿದೆ ಎನ್ನುವುದು ನಮ್ಮ ಅರಿವಿಗೆ ಬಂದಿದೆ. ಆದರೆ ಪರ್ಯಾಯ ಕ್ರಮಕೈಗೊಳ್ಳುವ ತನಕ ಸಮಸ್ಯೆ ಉಳಿಯಬಹುದು. ಟೆಂಡರ್ ಕರೆಯುವ ಮತ್ತು ಹೊಸದಾಗಿ ಜಾಗ ಗುರುತಿಸುವ ಕಾರ್ಯ ಚಾಲನೆಯಲ್ಲಿದೆ ಎಂದು ಉಪ್ಪಿನಂಗಡಿ ಗ್ರಾ.ಪಂ.ನ ಪಿಡಿಒ ವಿಲ್ಫ್ರೆಡ್ ಲಾರೆನ್ಸ್ ರಾಡ್ರೀಗಸ್ ಪ್ರತಿಕ್ರಿಯಿಸಿದ್ದಾರೆ.

> **ತ್ಯಾಜ್ಯ ಸಂಗ್ರಹಕ್ಕೆ ನಿರಾಕರಣೆ ಸರಿಯೇ ?**
>
> ಪ್ರತಿ ತಿಂಗಳು ನಿಯಮಿತವಾಗಿ ತ್ಯಾಜ್ಯ ವಿಲೇವಾರಿ ಹೆಸರಿನಲ್ಲಿ ಸಂಜೀವಿನಿ ತಂಡದ ಸದಸ್ಯರು ತನ್ನಿಂದ 400 ರೂ. ಸಂಗ್ರಹಿಸುತ್ತಾರೆ. ಆದರೆ ಹಸಿ ತ್ಯಾಜ್ಯ ಸಂಗ್ರಹಿಸದೆ ಇಲ್ಲೇ ಉಳಿಸಿದ್ದರಿಂದ ದುರ್ನಾತ ಸಹಿತ ಆರೋಗ್ಯ ಸಂಬಂಧಿ ಸಮಸ್ಯೆಗಳು ಕಾಡಲಾರಂಭಿಸಿವೆ. ಶುಲ್ಕ ಸಂಗ್ರಹಿಸುವ ತಂಡ ತ್ಯಾಜ್ಯ ಸಂಗ್ರಹಿಸಲು ನಿರಾಕರಿಸುತ್ತಿರುವುದು ವಿಲಕ್ಷಣಕಾರಿ ನಡೆಯಾಗಿದೆ. ವ್ಯವಸ್ಥೆ ಸರಿಪಡಿಸಲು ಅಧಿಕಾರಿಗಳು ವಿಳಂಬಿಸಿದ್ದೇ ಆದರೆ ಜನಾಕ್ರೋಶ ಸ್ಫೋಟಗೊಳ್ಳುವ ಸಾಧ್ಯತೆ ಇದೆ.
>
> ● ಫಯಾಜ್, ಉದ್ಯಮಿ

> **ಹಸಿ ಕಸ ಪಂಚಾಯತ್ ಮುಂದೆ ಹಾಕುವುದೇ ನಮ್ಮ ಆಯ್ಕೆ**
>
> ವಾರದಿಂದ ಹಸಿ ಕಸ ಮನೆಯಂಗಳದಲ್ಲಿಯೇ ಇದೆ. ದುರ್ನಾತ ಈಗಾಗಲೇ ಪ್ರಸಹರಿಸುತ್ತಿದೆ. ಮನೆ ಬಾಗಿಲಿಗೆ ಕಸದ ವಾಹನ ಬಂದರೂ ಅವರು ಒಣ ಕಸ ಮಾತ್ರ ಕೊಂಡೊಯ್ಯುತ್ತಿದ್ದಾರೆ. ಹಸಿ ಕಸ ಕೊಳೆತು ಹುಳುಗಳಾಗುತ್ತಿದೆ. ಇನ್ನು ಹಸಿ ಕಸ ಕೊಂಡೊಯ್ಯದೇ ಇದ್ದರೆ ಕಸ ಪಂ. ಕಚೇರಿಯ ಮುಂಭಾಗದಲ್ಲಿಯೇ ಹಾಕಿ ಬರುತ್ತೇನೆ . ತ್ಯಾಜ್ಯ ಸಂಬಂಧಿತ ಶುಲ್ಕ ಸಂಗ್ರಹಿಸಿ ದಿನಗಟ್ಟಲೆ ತ್ಯಾಜ್ಯ ಸಂಗ್ರಹಿಸದೇ ಇದ್ದರೆ ನಮ್ಮ ಸಂಕಷ್ಟಕ್ಕೆ ಪರಿಹಾರ ಕೊಡುವವರು ಯಾರೆಂದು ಹೆಸರೇಳಲು ಇಚ್ಛಿಸದ ಗೃಹಿಣಿಯೋರ್ವರು ಮಾಧ್ಯಮ ಪ್ರಕಟಣೆ ಯಲ್ಲಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದಲ್ಲಿ ದೃಢಕಲಶ: ವಾರ್ಷಿಕ ಆಶ್ಲೇಷಾ ಬಲಿ ಸೇವೆ





ಮುಲ್ಕಿ: ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದಲ್ಲಿ ಭಾನುವಾರ ಶ್ರೀ ದೇವರಿಗೆ ದೃಢ ಸಂಪ್ರೋಕ್ಷಣೆ ಹಾಗೂ ಶ್ರೀ ನಾಗದೇವರಿಗೆ ವಾರ್ಷಿಕ ಆಶ್ಲೇಷಾಬಲಿ ಸೇವೆಯು ಶ್ರೀಪತಿ ಭಟ್ ಹೊಯ್ಗೆ ಗುಡ್ಡೆ ಹಾಗೂ ವೇದಮೂರ್ತಿ ವೆಂಕಟೇಶ ತಂತ್ರಿ ಎಡಪದವು ಪೌರೋಹಿತ್ಯದಲ್ಲಿ ನಡೆಯಿತು.

ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಶನಿವಾರ ಸಂಜೆ ವಾಸ್ತು ಹೋಮ, ವಾಸ್ತುಪೂಜೆ, ರಾಕ್ಷೋಘ್ನ ಪ್ರಾಕಾರ ಬಲಿ ನಡೆಯಿತು. ಭಾನುವಾರ ಬೆಳಿಗ್ಗೆ ವಿಶೇಷ ಪ್ರಾರ್ಥನೆ, ಶ್ರೀ ಭಗವತಿಯ ಸನ್ನಿಧಿಯಲ್ಲಿ ಶಾಂತಿ ಹೋಮ, ಪ್ರಾಯಶ್ಚಿತ್ತ ಹೋಮ, ಪಂಚವಿಂಶತಿ ಕಲಶ, ಪ್ರಧಾನ ಹೋಮ, ಶ್ರೀ ದೇವರಿಗೆ ಕಲಶಾಭಿಷೇಕ, ಪ್ರಸನ್ನ ಪೂಜೆ, ಮಹಾಮಂತ್ರಾಕ್ಷತೆ, ನಾಗ ಸನ್ನಿಧಿಯಲ್ಲಿ ನವಕ ಕಲಶ, ಪ್ರಧಾನ ಹೋಮ, ಪಂಚಾಮೃತ ಅಭಿಷೇಕ, ಆಶ್ಲೇಷಾ ಬಲಿ, ಪ್ರಸನ್ನಪೂಜೆ ಮಧ್ಯಾಹ್ನ ಮಹಾ ಅನ್ನಸಂತರ್ಪಣೆ ನಡೆಯಿತು.

ಈ ಸಂದರ್ಭ ದೇವಸ್ಥಾನದ ಪ್ರಧಾನ ಅರ್ಚಕ ಹಾಗೂ ಅನುವಂಶಿಕ ಮೊಕ್ತೇಸರ ಅಪ್ಪು ಯಾನೆ ಶ್ರೀನಿವಾಸ ಪೂಜಾರಿ, ಬ್ರಹ್ಮಕಲಶ ಸಮಿತಿಯ ಗೌರವಾಧ್ಯಕ್ಷ ರೋಹಿದಾಸ ಬಂಗೇರ, ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ದೇವಸ್ಥಾನದ ಆಡಳಿತ ಮೊಕ್ತೇಸರ ಚಂದ್ರಶೇಖರ ಬೆಲ್ಚಡ, ಸಮಿತಿಯ ಕಾರ್ಯಾಧ್ಯಕ್ಷ ವಾಮನ್ ಇಡ್ಯಾ, ಮುಂಬೈ ಸಮಿತಿ ಅಧ್ಯಕ್ಷ ವೇದಪ್ರಕಾಶ್ ಎಂ. ಶ್ರೀಯಾನ್, ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಪ್ರಭಾಕರ್ ಪೂಜಾರಿ, ಆಡಳಿತ ಸಮಿತಿ ಉಪಾಧ್ಯಕ್ಷ ವಿಶ್ವನಾಥ ಬೆಲ್ಚಡ, ಪ್ರಧಾನ ಕಾರ್ಯದರ್ಶಿ ರಮೇಶ್ ಬಂಗೇರ ಕರಿತೋಟ, ಕೋಶಾಧಿಕಾರಿ ಸುರೇಶ್ ಕೆ. ಬಂಗೇರ, ಜೊತೆ ಕಾರ್ಯದರ್ಶಿ, ರಾಜೇಂದ್ರ ಪ್ರಸಾದ್ ಎಕ್ಕಾರು, ಶಿವಣ್ಣ ಮಾಸ್ಟರ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಸೇಡಿಯಾಪು ಪರಿಸರದಲ್ಲಿ ಮರ ತೆರವು: ಶೀಘ್ರದಲ್ಲಿ ಅಭಿವೃದ್ಧಿ ಕಾರ್ಯ ಆರಂಭ



ಪುತ್ತೂರು: ಸೇಡಿಯಾಪು ಪರಿಸರದಲ್ಲಿ ಸರಕಾರಿ ಮೆಡಿಕಲ್ ಕಾಲೇಜು ಹಾಗೂ ಆಸ್ಪತ್ರೆ ಕಾಮಗಾರಿ ಶಿಲಾನ್ಯಾಸ ಶೀಘ್ರ ನಡೆಯಲಿದ್ದು, ಸಿದ್ಧತೆಯ ಭಾಗವಾಗಿ ಮರಗಳ ತೆರವು ಹಾಗೂ ರಸ್ತೆ ಸರಿಪಡಿಸುವ ಕೆಲಸವನ್ನು ಭಾನುವಾರ ಆರಂಭಿಸಲಾಗಿದೆ.

ಜನರ ಕನಸು ನನಸಾಗುವತ್ತ

ಕೆಲಸ ವೀಕ್ಷಣೆ ಮಾಡಿ ಮಾತನಾಡಿದ ಶಾಸಕ ಅಶೋಕ್ ರೈ, ಬಹು ಜನರ ಹಲವು ವರ್ಷಗಳ ಕನಸು ನನಸಾಗುವ ಸಮಯ ಬಂದಿದೆ. ಆಸ್ಪತ್ರೆ ಕಾಮಗಾರಿಗೆ ಸಂಬಂಧಿಸಿ 180 ಕೋಟಿಯ ಟೆಂಡರ್ ಆಗಿ ಕಾಂಟ್ರಾಕ್ಟ್ ಮುಕ್ತಾಯಗೊಂಡಿದೆ. ಮುಂದಿನ 15-20 ದಿನಗಳಲ್ಲಿ ಮುಖ್ಯಮಂತ್ರಿಗಳ ಸಮಯ ನಿಗದಿಪಡಿಸಿಕೊಂಡು ಕ್ಯೊಲ ಪಶು ಸಂವರ್ಧನಾ ಕೇಂದ್ರದ ಪಶು ವೈದ್ಯಕೀಯ ಆಸ್ಪತ್ರೆ ಉದ್ಘಾಟನೆ, ಮೆಡಿಕಲ್ ಕಾಲೇಜು ಪೂರಕ ಸರಕಾರಿ ಆಸ್ಪತ್ರೆ ನಿರ್ಮಾಣಕ್ಕೆ ಶಿಲಾನ್ಯಾಸ ನಡೆಯಲಿದೆ. ಕೆಲವರಲ್ಲಿದ್ದ ಗೊಂದಲ, ಆಸೂಯೆಗಳಿಗೆ ಶೀಘ್ರ ಉತ್ತರ ಸಿಗಲಿದೆ ಎಂದರು. ಪ್ರಮುಖರಾದ ವಿಶ್ವಪ್ರಸಾದ್ ಸೇಡಿಯಾಪು, ಮುರಳೀಧರ ರೈ ಮಠಂತ ಬೆಟ್ಟು, ಜಯಪ್ರಕಾಶ್ ಬದಿನಾರು ಮತ್ತಿತರರಿದ್ದರು.

> **2 ವರ್ಷದೊಳಗೆ ಕಾಮಗಾರಿ ಪೂರ್ಣ**
>
> ಮೆಡಿಕಲ್ ಕಾಲೇಜು ಹಾಗೂ ಹಾಸ್ಟೆಲ್‌ಗಳಿಗೆ ಬೇಕಾದ ಅನುದಾನ ಪ್ರಕ್ರಿಯೆಗಳು ನಡೆಯುತ್ತಿವೆ. 2 ವರ್ಷದೊಳಗೆ ಎಲ್ಲಾ ಕಾಮಗಾರಿ ಮುಗಿಯಲಿದೆ. ಹೆಚ್ಚುವರಿ 20 ಎಕ್ರೆ ಅರಣ್ಯ ಇಲಾಖೆ ಜಾಗವನ್ನೂ ಪಡೆಯುತ್ತೇವೆ. 60 ಫೀಟ್‌ನ ರಸ್ತೆ ಮಾಡುತ್ತೇವೆ. 3 ಎಕ್ರೆಯ ಕೆರೆಯನ್ನೂ ಅಭಿವೃದ್ಧಿ ಮಾಡುತ್ತೇವೆ.
>
> ● ಅಶೋಕ್ ರೈ, ಶಾಸಕರು

ರಾಜಕಾಲುವೆ ಕುಸಿದ ಭಾಗಕ್ಕೆ ತಡೆಗೋಡೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ



ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯ 51ನೇ ಅಳಪೆ ಉತ್ತರ ವಾರ್ಡಿನ ಕನ್ನಗುಡ್ಡೆ ಸಂತೋಷ್ ಮನೆಯ ರಾಜಕಾಲುವೆ ಕುಸಿದ ಭಾಗಕ್ಕೆ ತಡೆಗೋಡೆ ನಿರ್ಮಾಣ ಕಾಮಗಾರಿಗೆ ಸುಮಾರು ಹತ್ತು ಲಕ್ಷ ರೂ. ವೆಚ್ಚದಲ್ಲಿ ನಡೆಯಲಿದ್ದು, ಶಾಸಕ ವೇದವ್ಯಾಸ ಕಾಮತ್ ಅವರ ಉಪಸ್ಥಿತಿಯಲ್ಲಿ ಭೂಮಿ ಪೂಜೆ ನಡೆಯಿತು.

ಈ ವೇಳೆ ಮಾತನಾಡಿದ ಶಾಸಕರು, ಕನ್ನಗುಡ್ಡೆಯು ಎತ್ತರದ ಪ್ರದೇಶವಾಗಿದ್ದು ಪ್ರಾಕೃತಿಕ ವಿಕೋಪ ಸಂದರ್ಭ ಹಾನಿ ಪ್ರಮಾಣವೂ ಹೆಚ್ಚಾಗಿರುತ್ತದೆ. ಈ ಹಿಂದೆ ಮಳೆಗಾಲದಲ್ಲಿ ಉಂಟಾಗಿರುವ ಹಾನಿಯನ್ನು ಸರಿಪಡಿಸುವ ನಿಟ್ಟಿನಲ್ಲಿ ಈ ಕಾಮಗಾರಿ ಆರಂಭವಾಗಲಿದೆ ಎಂದರು.

ಪ್ರಮುಖರಾದ ಪ್ರವೀಣ್ ನಿಡ್ಡೇಲ್, ಸುರೇಶ್ ಆಚಾರ್, ಸುರೇಶ್ ಕನ್ನಗುಡ್ಡ, ದೀಕ್ಷಿತ್ ಕನ್ನಗುಡ್ಡ, ಕಿಶೋರ್, ಗಣೇಶ್, ವಿವೇಕ್, ವಿಜಯ್, ಸುದೇಶ್, ದೀಕ್ಷಿತ್ ಅರ್ಲಬೆಟ್ಟು, ಕವಿರಾಜ್, ದಾಮೋದರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಶ್ರೀ ಕ್ಷೇತ್ರ ಧ.ಗ್ರಾ.ಯೋಜನೆಯ ವೀರಕಂಭ ಒಕ್ಕೂಟ ತ್ರೈಮಾಸಿಕ ಸಭೆ



ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ ಸಿ ಟ್ರಸ್ಟ್ ವಿಟ್ಲ ಇದರ ಕಲ್ಲಡ್ಕ ವಲಯ ವೀರಕಂಭ ಕೂಟದ ತ್ರೈಮಾಸಿಕ ಸಭೆ ಭಾನುವಾರ ವೀರಕಂಭ ಮಜಿ ಸರಕಾರಿ ಹಿ.ಪ್ರಾ. ಶಾಲೆ ಸಭಾಭವನದಲ್ಲಿ ಜರಗಿತು. ವೀರಕಂಭ ಒಕ್ಕೂಟ ಅಧ್ಯಕ್ಷೆ ಶಾಂಭವಿ ಆಚಾರ್ಯ ಅಧ್ಯಕ್ಷತೆ ವಹಿಸಿದ್ದರು.

ಗ್ರಾಮಾಭಿವೃದ್ಧಿ ಯೋಜನೆಯ ಕಲ್ಲಡ್ಕ ವಲಯ ಮೇಲ್ವಿಚಾರಕ ಶುಕರಾಜ್ ಯೋಜನೆಯ ಗುಂಪುಗಳ ಕಾರ್ಯ, ಜವಾಬ್ದಾರಿ, ಗುಂಪುಗಳಿಗೆ ನೀಡುವ ಸಾಲ ಸೌಲಭ್ಯಗಳು, ಆರೋಗ್ಯ ವಿಮೆ, ಪ್ರಸಕ್ತ ಸಾಲಿನಲ್ಲಿ ವೀರಕಂಬ ಒಕ್ಕೂಟ ವ್ಯಾಪ್ತಿಯಲ್ಲಿ ಯೋಜನೆಯಿಂದ ಸಿಕ್ಕ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು.

ಪದಾಧಿಕಾರಿಗಳ ಆಯ್ಕೆ

ಈ ಸಂದರ್ಭ ಒಕ್ಕೂಟದ ನೂತನ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು.

ವೇದಿಕೆಯಲ್ಲಿ ಕಲ್ಲಡ್ಕ ಶೌರ್ಯ ವಿಪತ್ತು ನಿರ್ವಹಣಾ ಘಟಕ ಸದಸ್ಯ ಚಿನ್ನಾ ಮೈರಾ, ವೀರಕಂಬ ಒಕ್ಕೂಟ ಕಾರ್ಯದರ್ಶಿ ಆನಂದ ಮಜಿ, ಉಪ ಸಮಿತಿಯ ಸದಸ್ಯ ವೇದಾವತಿ, ಕೆಲಿಂಜ ಒಕ್ಕೂಟ ಸೇವಾ ಪ್ರತಿನಿಧಿ ರೇವತಿ, ಉಪಸ್ಥಿತರಿದ್ದರು

ಯೋಗೀಶ್ ಮಜಿ ಸ್ವಾಗತಿಸಿ, ಸುನಿಲ್ ನಾಯ್ಕ ವರದಿ ವಾಚಿಸಿ, ಒಕ್ಕೂಟ ಸೇವಾ ಪ್ರತಿನಿಧಿ ವಿಜಯ ನಿರೂಪಿಸಿದರು.

ಸ್ವಯಂಪ್ರೇರಿತವಾಗಿ ರಕ್ತದಾನ ಮಾಡುವ ಮೂಲಕ ಮಾನವೀಯತೆ ಮೆರೆಯಬೇಕು



ಶಿರ್ವ: ಮೂಲ್ಕಿ ಸುಂದರರಾಮ್ ಶೆಟ್ಟಿ ಕಾಲೇಜು, ಶಿರ್ವ ಇಲ್ಲಿನ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಆಂತರಿಕ ಗುಣಮಟ್ಟಕೋಶ (ಐಕ್ಯೂಎಸಿ) ಹಾಗೂ ಯುವ ರೆಡ್‌ಕ್ರಾಸ್ ಘಟಕವು ಕುಂದಾಪುರ ರೆಡ್‌ಕ್ರಾಸ್ ಸೊಸೈಟಿಯ ಸಹಯೋಗದಲ್ಲಿ ಶನಿವಾರ ಕಾಲೇಜಿನ ಸಭಾಂಗಣದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಹಾಗೂ ರಕ್ತನಿಧಿ, ಕುಂದಾಪುರ ಇದರ ಅಧ್ಯಕ್ಷ ಎಸ್. ಜಯಕರ್ ಶೆಟ್ಟಿ ಮಾತನಾಡಿ, ಮಾನವಜೀವನದಲ್ಲಿ ಅತ್ಯುನ್ನತ ಸ್ಥಾನವನ್ನು ರಕ್ತದಾನ , ಅಂಗಾಂಗ ದಾನ ಪಡೆದಿವೆ. ಅವಘಡದ ಸಂದರ್ಭ ರೆಡ್‌ಕ್ರಾಸ್ ರಕ್ತನಿಧಿಯಿಂದ ತುರ್ತಾಗಿ ಸಹಾಯ ಹಸ್ತ ಸಾಧ್ಯವಾಗುತ್ತದೆ. ರಕ್ತದ ಕೊರತೆಯಿಂದ ಯಾವುದೇ ಜೀವಹಾನಿಯಾಗದಂತೆ ಎಲ್ಲರಲ್ಲೂ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದರು.

ಅಧ್ಯಕ್ಷತೆ ವಹಿಸಿದ ಕಾಲೇಜಿನ ಪ್ರಾಂಶುಪಾಲ ಡಾ. ಮಿಥುನ್ ಚಕ್ರವರ್ತಿ ಮಾತನಾಡಿ, ರಕ್ತದಾನ ಎಂಬುದು ಸಮಾಜದಲ್ಲಿ ಒಂದು ದೊಡ್ಡ ಮೌಲ್ಯವಾಗಿದೆ. ಈ ಮೌಲ್ಯವನ್ನು ವಿದ್ಯಾರ್ಥಿ ದೆಸೆಯಲ್ಲಿ ಅನುಸರಿಸಿ ಸ್ವಯಂಪ್ರೇರಿತ ರಕ್ತದಾನದ ಮೂಲಕ ಮಾನವೀಯತೆ ಮೆರೆಯಬೇಕು ಎಂದರು.

ಉದ್ಯಾವರ ಎಸ್.ಡಿ.ಎಂ ಆರೋಗ್ಯ ಕೇಂದ್ರ, ವೈದ್ಯಾಧಿಕಾರಿ ಡಾ.ಶಮಿತಾ ಉಪಸ್ಥಿತರಿದ್ದರು. ಎನ್ನೆಸ್ಸೆಸ್ ಕಾರ್ಯಕ್ರಮಾಧಿಕಾರಿ ಡಾ. ಸೋನಾ ಎಚ್.ಸಿ. ಸ್ವಾಗತಿಸಿ, ಎನ್ನೆಸ್ಸೆಸ್ ಸ್ವಯಂ ಸೇವಕಿ ಅಪೇಕ್ಷಾ ನಿರೂಪಿಸಿ, ಯುವ ರೆಡ್‌ಕ್ರಾಸ್ ವಿದ್ಯಾರ್ಥಿ ಸಂಯೋಜಕಿ ಸ್ವರ್ಣ ವಂದಿಸಿದರು. ವಿದ್ಯಾರ್ಥಿ ಸಂಯೋಜಕರಾದ ಕೌಶಿಕ್, ಶ್ರೇಯಸ್, ಕುಮಾರಿತನಿಷ್ಕಾ ಹಾಗೂ ಯುವರೆಡ್‌ಕ್ರಾಸ್ ವಿದ್ಯಾರ್ಥಿ ಸಂಯೋಜಕ ರಿತೇಶ್ ಸಹಕರಿಸಿದರು.

ಗಾಂಧಿ ಭವನದಲ್ಲಿ ಸೆಸ್ಕ್ ವಿಭಾಗದಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



ಮಡಿಕೇರಿ: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ವತಿಯಿಂದ ನಗರದ ಗಾಂಧಿ ಭವನದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ನಡೆಯಿತು.

ನಿಗಮದ ಮೈಸೂರು ಕಚೇರಿಯ ನಿರ್ದೇಶಕ (ತಾಂತ್ರಿಕ)ರಾಗಿರುವ ಶರಣಮ್ಮ ಎಸ್. ಜಂಗಿನ ಅವರು ಮಾತನಾಡಿ, ಮಹಿಳೆಯರು ವಿಜ್ಞಾನ, ತಂತ್ರಜ್ಞಾನ, ಸಾಹಿತ್ಯ, ಸಂಗೀತ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಇದ್ದಾರೆ. ತಂದೆ ತಾಯಿಯರನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುವ ಹೆಣ್ಣು ಮಕ್ಕಳು, ಅತ್ತೆ ಮಾವರನ್ನ ಅದೇ ರೀತಿ ಅಷ್ಟೇ ಚೆನ್ನಾಗಿ ನೋಡಿಕೊಳ್ಳಬೇಕು. ಆಗ ಸಂಸಾರ - ಸಂಬಂಧಕ್ಕೆ ಒಂದು ಅರ್ಥವಿರುತ್ತದೆ ಎಂದರು.

ಧೈರ್ಯವಾಗಿ ಮುಂದೆ ಸಾಗಬೇಕು

ಮುಖ್ಯ ಭಾಷಣಕಾರರಾಗಿದ್ದ ಮಹಿಳಾ - ಮಕ್ಕಳ ಕಲ್ಯಾಣ ಇಲಾಖೆ ಆಡಳಿತಾಧಿಕಾರಿ ಪ್ರಭಾವತಿ ಕೆ.ಎಚ್., ಮಹಿಳೆ ಏನೇ ಸಮಸ್ಯೆ ಇದ್ದರೂ ಹೇಳಿಕೊಳ್ಳುವಂತಾಗಬೇಕು. ಸಮಸ್ಯೆ ಬಗೆಹರಿಸಲೆಂದೇ ಸಖಿ ಒನ್ ಸ್ಟಾಪ್ ಸೆಂಟರ್ ಇದ್ದು, ಧೈರ್ಯವಾಗಿ ಮುಂದೆ ಸಾಗಬೇಕು ಎಂದರು.

ಸೆಸ್ಕ್ ಮಡಿಕೇರಿ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ರಾಮಚಂದ್ರ ಎಂ. , ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ, ಕಾರ್ಯಕ್ರಮ ನಿರ್ವಹಣೆಯ ಜವಾಬ್ದಾರಿ ಹೊತ್ತ ಪದ್ಮಶ್ರೀ ನಾಯ್ಕ್ , ಎಚ್. ಎಂ.ಮೇಘನಾ ಅವರನ್ನು ಪ್ರಶಂಸಿಸಿದರು.

ವೀರಾಜಪೇಟೆ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಆರ್. ಪಿ.ನೀತಾ ಅಧ್ಯಕ್ಷತೆ ವಹಿಸಿದ್ದರು. ಮಡಿಕೇರಿ ವಿಭಾಗ ಕಚೇರಿ ಲೆಕ್ಕಾಧಿಕಾರಿ ಸಂತೋಷ್ ಕುಮಾರ್ ಎಂ.ಎಸ್., ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ವಿನಯ್ ಕುಮಾರ್, ಕೆ.ಎಂ.ದಿಲೀಪ್, ಕೆ.ಬಿ. ಕೃಷ್ಣರಾಜ್, ಶಿವಾನಂದ ಶೆಟ್ಟಿಮತ್ತಿತರರಿದ್ದರು.



ಕಾಸರಗೋಡು ಎಡನೀರು ಕಾನ ಶ್ರೀ ವನಶಾಸ್ತಾವೇಶ್ವರ ದೇವಸ್ಥಾನದ 12ನೇ ವಾರ್ಷಿಕ ಪ್ರತಿಷ್ಠಾ ಮಹೋತ್ಸವದ ಆಮಂತ್ರಣ ಪತ್ರಿಕೆಯನ್ನು ಶ್ರೀಮದ್ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರು ಬಿಡುಗಡೆಗೊಳಿಸಿ ಅನುಗ್ರಹಿಸಿದರು.

ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕೆ ಕ್ರಮವಹಿಸಲು ಜಿಲ್ಲಾಧಿಕಾರಿ ಸೋಮಶೇಖರ್ ಸೂಚನೆ

ಮಡಿಕೇರಿ: ಜಿಲ್ಲೆಯಲ್ಲಿ ಆಗಾಗ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಮನೆಯ ಸುತ್ತಮುತ್ತ, ತೆಂಗಿನ ಚಿಪ್ಪು ಟೈರು, ಹೂಕುಂಡದಲ್ಲಿ ನೀರು ನಿಲ್ಲದಂತೆ ಗಮನ ಹರಿಸಬೇಕು. ಪರಿಸರ ಶುಚಿತ್ವಕ್ಕೆ ಹೆಚ್ಚು ಒತ್ತು ನೀಡಬೇಕು. ಆ ನಿಟ್ಟಿನಲ್ಲಿ ಹೆಚ್ಚಿನ ಜಾಗೃತಿ ಮೂಡಿಸಬೇಕೆಂದು ಸಂಬಂಧಿಸಿದ ಇಲಾಖಾಧಿಕಾರಿಗಳಿಗೆ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸಾಂಕ್ರಾಮಿಕ ರೋಗಗಳ ನಿಯಂತ್ರಣ ಕುರಿತು ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಈ ಸಂದರ್ಭ ಮಾತಾಡಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್ ಅವರು, ಪ್ರಸಕ್ತ ಸಾಲಿನ ಮಾರ್ಚ್ ಅಂತ್ಯದವರೆಗೆ ಜಿಲ್ಲೆಯಲ್ಲಿ ಒಂದು ಮಲೇರಿಯಾ ಪ್ರಕರಣ ಕಂಡು ಬಂದಿದ್ದು, ಸೋಮವಾರಪೇಟೆ ತಾಲೂಕಿನ 16,860 ಮಂದಿಯ ರಕ್ತ ಪರೀಕ್ಷೆಯಲ್ಲಿ ಒಬ್ಬರಲ್ಲಿ ಮಾತ್ರ



ರೋಗ ಲಕ್ಷಣ ಕಂಡುಬಂದಿದೆ. ಚಿಕಿತ್ಸೆಯಲ್ಲಿ ಅವರು ಗುಣಮುಖರಾಗಿದ್ದಾರೆ ಎಂದರು.

ಮಲೇರಿಯ ನಿಯಂತ್ರಣಕ್ಕಾಗಿ ಜಿಲ್ಲೆಯಲ್ಲಿ ಶೀಘ್ರ ಪತ್ತೆಗಾಗಿ ರಕ್ತ ಲೇಪನಗಳ ಪರೀಕ್ಷೆ, ಜಿಲ್ಲೆಯ ವಲಸಿಗರ ಮತ್ತು ಹೊರ ರಾಜ್ಯದ ವಲಸಿಗರ ಸಮೀಕ್ಷೆ, ವಿವಿಧ ಕಾರ್ಯಕ್ರಮ ಮೂಲಕ ಜಾಗೃತಿ ಮೂಡಿಸುವುದು, ಮಲೇರಿಯ ಪತ್ತೆಯಾದ ಗ್ರಾಮ/ ಪ್ರದೇಶಗಳಲ್ಲಿ ರಕ್ತ ಲೇಪ ಸಂಗ್ರಹ, ಐ.ಇ.ಸಿ ಚಟುವಟಿಕೆಗಳು, ಸ್ವಚ್ಛ ನೀರಿನ ತಾಣಗಳಿಗೆ ಲಾರ್ವಾಹಾರಿ ಮೀನು (ಗಪ್ಪಿ-ಗ್ಯಾಂಬೂಸಿಯ) ಬಿಡುಗಡೆ ಮಾಡಲಾಗುತ್ತಿದೆ ಎಂದು ಜಿಲ್ಲಾ ಆರೋಗ್ಯ - ಕುಟುಂಬ ಕಲ್ಯಾಣಾಧಿಕಾರಿ ತಿಳಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್/ ಸಾರ್ವಜನಿಕ ಆರೋಗ್ಯ ಎಂಜಿನಿಯರಿಂಗ್ ಇಲಾಖೆ ಮೂಲಕ ಸೊಳ್ಳೆ ಉತ್ಪತ್ತಿ ತಾಣಗಳ ನಿವಾರಣೆ , ಗ್ರಾಮ ನೈರ್ಮಲ್ಯ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು, ನೀರು ಸರಬರಾಜು ಮಾಡುವ ತೊಟ್ಟಿಗಳನ್ನು ಭದ್ರವಾಗಿ ಮುಚ್ಚುವುದು, ನಗರಾಭಿವೃದ್ಧಿ ಇಲಾಖೆಯಿಂದ ಫ್ಲೆಕ್ಸ್, ಪೋಸ್ಟರ್, ಭಿತ್ತಿಪತ್ರಗಳ ಮೂಲಕ ಮಾಹಿತಿ ನೀಡುವುದು, ನೀರು ಸರಬರಾಜು ಪೈಪುಗಳ ಕಾಲಕಾಲಕ್ಕೆ ಪರೀಕ್ಷಿಸುವುದು, ನೀರಾವರಿ ಇಲಾಖೆಯಿಂದ ನೀರಾವರಿ ಯೋಜನೆಗಳಡಿ ಕೆಲಸಕ್ಕೆ ಬರುವ ಕಾರ್ಮಿಕರ ಬಗ್ಗೆ ಮುಂಚಿತ ಆರೋಗ್ಯ ಇಲಾಖೆಗೆ ತಿಳಿಸಲಾಗುವುದೆಂದು ಡಾ.ಸತೀಶ್ ಕುಮಾರ್ ನುಡಿದರು.

ಹೆಚ್ ಪಿವಿ ಲಸಿಕೆ

ಮಹಿಳೆಯರಲ್ಲಿ ಗರ್ಭಕಂಠದ ಕ್ಯಾನ್ಸರ್ ತಡೆಯಲು ಹೆಣ್ಣು ಮಕ್ಕಳಿಗೆ ಮುನ್ನೆಚ್ಚರಿಕೆ ಕ್ರಮವಾಗಿ ಹೆಚ್ ಪಿವಿ (ಹ್ಯೂಮನ್ ಪ್ಯಾಪಿಲೋಮ ವೈರಸ್) ಲಸಿಕೆ ನೀಡಲಾಗುತ್ತಿದ್ದು, ಈ ಬಗ್ಗೆ ವಿದ್ಯಾರ್ಥಿನಿಯರು, ಪೋಷಕರು , ಶಿಕ್ಷಕರನ್ನು ಹೆಚ್ಚು ಗಮನ ಸೆಳೆಯಬೇಕೆಂದು ಜಿಲ್ಲಾಧಿಕಾರಿ ಹೇಳಿದರು.

ಜಿಲ್ಲಾ ಆರೋಗ್ಯ -ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್ , 14 ವರ್ಷ ವಯಸ್ಸಿನ ಹುಡುಗಿಯರು (ತಮ್ಮ 14ನೇ ಹುಟ್ಟು ಹಬ್ಬವನ್ನು ಆಚರಿಸಿಕೊಂಡವರು ಆದರೆ ಇನ್ನೂ 15ನೇ ಹುಟ್ಟು ಹಬ್ಬ ಆಚರಿಸದವರು) ಲಸಿಕೆ ಪಡೆಯಬೇಕು. ಆ ನಿಟ್ಟಿನಲ್ಲಿ ಹೆಚ್ಚಿನ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವಿಕೆ, ನಿಯಂತ್ರಣ ಕ್ರಮಗಳ ಯಶಸ್ವಿಯಾಗಿ ಕಾರ್ಯಗತ ಮಾಡದೇ ಇದ್ದಲ್ಲಿ 2030ರ ವೇಳೆಗೆ ಸರಿ ಸುಮಾರು 8 ಲಕ್ಷ ಹೊಸ ಗರ್ಭಕಂಠದ ಕ್ಯಾನ್ಸರ್ ಪ್ರಕರಣಗಳು ವಾರ್ಷಿಕವಾಗಿ ಸಂಭವಿಸುವ ಸಾಧ್ಯತೆ ಇದೆ ಎಂದು ಅಂದಾಜಿಸಿ ರುವುದರಿಂದ ಜಿಲ್ಲೆಯಲ್ಲಿ ಜಾಗೃತಿ ಅಗತ್ಯ ಇದೆ ಎಂದರು.

29 ಗ್ರಾ.ಪಂ.ಗಳು ಕ್ಷಯ ಮುಕ್ತ

ಜಿಲ್ಲೆಯ 29 ಗ್ರಾ.ಪಂ. ಟಿಬಿ ಮುಕ್ತಗೊಳಿಸಲಾಗಿದ್ದು, ಶೇಕಡವಾರು ಪ್ರಗತಿಸಾಧಿಸಲು ಹೆಚ್ಚಿನ ಜಾಗೃತಿ ಮೂಡಿಸಲಾಗಿದೆ. ಈ ನಿಟ್ಟಿನಲ್ಲಿ ಮಿಷನ್ ಏಡ್ಸ್ ಸುರಕ್ಷಾ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಆರೋಗ್ಯ-ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್ ತಿಳಿಸಿದರು. ಮಿಷನ್ ಏಡ್ಸ್ ಸುರಕ್ಷಾ ಅಭಿಯಾನದ ಭಿತ್ತಿ ಪತ್ರ ಬಿಡುಗಡೆ ಮಾಡಲಾಯಿತು. ಆರೋಗ್ಯ-ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳಿದ್ದರು.

> **ಒತ್ತಡ ಬೇಡ,ಮನವೊಲಿಸಿ**
>
> ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವಿಕೆ ಲಸಿಕೆ ಪಡೆಯುವ ಬಗ್ಗೆ ವಿದ್ಯಾರ್ಥಿನಿಯರಿಗೆ ಒತ್ತಡ ಹೇರದೆ, ಅವರ ಮನ ಒಲಿಸಿ, ವಿಶ್ವಾಸಕ್ಕೆ ತೆಗೆದುಕೊಂಡು ಇಲಾಖಾಧಿಕಾರಿಗಳು ಕಾರ್ಯನಿರ್ವಹಿಸಬೇಕಿದೆ. ಹೆಣ್ಣುಮಕ್ಕಳ ಹಿತದೃಷ್ಟಿಯಿಂದ ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ, ಪೋಷಕರಿಗೆ ಹಾಗೂ ಧರ್ಮಗುರುಗಳು ಸಮುದಾಯ ಬಾಂಧವರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಬೇಕು.
>
> ● ಎಸ್.ಜೆ.ಸೋಮಶೇಖರ್ , ಡಿಸಿ

ಸುತ್ತಮುತ್ತ

ನಾಳೆ ವಿದ್ಯುತ್ ವ್ಯತ್ಯಯ

ಕಾರ್ಕಳ: ಕೇಮಾರ್ ಮತ್ತು ಹಿರಿಯಡ್ಕ ಬೇ, ಪಿಟಿ ಬೇ ಮತ್ತು ಎಲ್ಲಾ ಉಪಕರಣಗಳ ತ್ರೈಮಾಸಿಕ ನಿರ್ವಹಣೆ ಕಾಮಗಾರಿ ಮತ್ತು 11 ಕೆವಿ ಫೀಡರ್ ಗಳ ಐಸೋಲೇಟರ್ (ಉ.ಔ.ಖ) ನ ಬದಲಾವಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ, ಮೇ 26ರಂದು ಬೆಳಿಗ್ಗೆ 9ರಿಂದ ಸಂಜೆ 5.30 ಗಂಟೆಯವರೆಗೆ ಕಾರ್ಕಳ ವಿದ್ಯುತ್ ಕೇಂದ್ರದಿಂದ ಹೊರಡುವ 11ಕೆವಿ ಬಂಡಿಮಠ, ಮುಂಡ್ಲಿ, ದುರ್ಗಾ, ಜಾರ್ಕಳ, ಹಿರ್ಗಾನ, ನೆಲ್ಲಿಕಟ್ಟೆ, ಕೆಎಚ್ ಬಿ, ಕಾರ್ಕಳ ಟೌನ್, ಬೈಲೂರು ಎಕ್ಸ್‌ಪ್ರೆಸ್, ನಕ್ರೆ, ಪದವು, ಫೀಡರ್ ಗಳು ಹಾಗೂ ಕೆವಿ ಬಜಗೋಳಿ ವಿದ್ಯುತ್ ಕೇಂದ್ರದಿಂದ ಹೊರಡುವ ಕರ್ಮಾರ್ ಕಟ್ಟೆ, ಚೌಕಿ ನೆಲ್ಲಿಕಾರು, ಹೊಸ್ಮಾರು ಎಕ್ಸ್‌ಪ್ರೆಸ್, ಮಲ್ಲಾರು, ಬಜಗೋಳಿ ಟೌನ್ ಮತ್ತು ಕೆರ್ವಾಶೆ ಫೀಡರ್ ಗಳಲ್ಲಿ ಕಾರ್ಕಳ ತಾಲೂಕಿನ ಕಡಂಬಲ, ನಾರ್ಕಟ್ಟ, ಮಲೆಬೆಟ್ಟು, ಪೊಲ್ಲಾರು, ಪತ್ತೊಂಜಿಕಟ್ಟೆ, ತೆಳ್ಳಾರು, ಕಲ್ಲೊಟ್ಟೆ, ಕುಕ್ಕುಂದೂರು, ಪೆರ್ವಾಜೆ, ಬಂಗ್ಲೆಗುಡ್ಡೆ, ಜೋಡುರಸ್ತೆ, ಮುಂಡ್ಲ, ಪಲಾಯಿಬಾಕ್ಯಾರು, ಅಯ್ಯಪ್ಪ ನಗರ, ಮಂಗಳಕಲ್ಲು, ಗಣಿತನಗರ, ಜಾರ್ಕಳ, ಬೈಲೂರು, ನೀರೆ, ಕಣಜಾರು, ಕೌಡೂರು, ಪಿಲಿಚಂಡಿ ಸ್ಥಾನ, ಕುಂದೇಶ್ವರ, ಕಾನಂಗಿ, ಹಿರ್ಗಾನ, ಚಿಕ್ಕಲ್ ಬೆಟ್ಟು, ಮಂಗಿಲಾರು, ನೆಲ್ಲಿಕಟ್ಟೆ, ಕಾಂತರಗೋಳಿ, ಎರ್ಲಪಾಡಿ, ಗೋವಿಂದೂರು, ಕಾರ್ಕಳ ಟೌನ್, ಮೂರು ಮಾರ್ಗ ಏರಿಯ, ಮಾರ್ಕೆಟ್ ರೋಡ್, ಮಂಗಳೂರು ರೋಡ್, ಬಜಗೋಳಿ, ಕೆರ್ವಾಶೆ, ಮುಡ್ರಾಲು, ಕಡಾರಿ, ಮುಲ್ಲೂರು, ಮಾಳ, ಗುರ್ಗಲ್ ಗುಡ್ಡೆ, ಚೌಕಿ, ಹುಕ್ರಟ್ಟೆ, ನೆಲ್ಲಿಕಾರು, ಚೆಂಡೆ ಬಸದಿ, ಪುಚ್ಚಬೆಟ್ಟು, ಜ್ಯೋತಿನಗರ, ಪೇರಲ್ಕೆ, ಪೆರ್ನೋಡಿ, ಹೊಸ್ಮಾರು, ಈದು, ನಲ್ಲೂರು, ನೆಲ್ಲಿಗುಡ್ಡೆ, ನೂರಾಳ್ ಬೆಟ್ಟು, ಕೆಹೆಚ್ ಬಿ ಕಾಲೋನಿ ಏರಿಯಾ, ಪರಪು, ನಕ್ರೆ, ಗುಂಡ್ಯಡ್ಕ, ಬೋರ್ಗಲ್ ಗುಡ್ಡೆ, ಕುಂಟಾಡಿ, ಪೊಸನೊಟ್ಟು, ಪಳ್ಳಿ, ಆನಂದಿ ಮೈದಾನ, ಓಣಿ ಮಜಲು, ಕಲ್ಲಂಬ, ಬೈಲೂರು ಟೌನ್, ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಮೇ 27: ಆಮ್ ಆದ್ಮಿ ಪಾರ್ಟಿ ಕಚೇರಿ ಉದ್ಘಾಟನೆ

ಮಡಿಕೇರಿ: ಆಮ್ ಆದ್ಮಿ ಪಾರ್ಟಿಯ ಕೊಡಗು ಜಿಲ್ಲಾ ಕಚೇರಿ ಮೇ 27ರಂದು ಮಡಿಕೇರಿಯ ಮಹದೇವಪೇಟೆಯಲ್ಲಿ ಉದ್ಘಾಟನೆಗೊಳ್ಳಲಿದೆ. ನೂತನ ಕಚೇರಿಯನ್ನು ಆಮ್ ಆದ್ಮಿ ಪಾರ್ಟಿಯ ಕಾನೂನು ಸಲಹೆಗಾರ ಹಾಗೂ ಹಿರಿಯ ವಕೀಲ ಕೆ.ಪಿ.ಬಾಲಸುಬ್ರಹ್ಮಣ್ಯ ಅವರು ಉದ್ಘಾಟಿಸಲಿದ್ದಾರೆ. ಪಕ್ಷದ ಜಿಲ್ಲಾಧ್ಯಕ್ಷ ಎಂ.ಕೆ.ಅಪ್ಪಯ್ಯ, ವಿವಿಧ ಘಟಕಗಳ ಪದಾಧಿಕಾರಿಗಳು ಹಾಗೂ ಮೈಸೂರು ಘಟಕದ ಪ್ರಮುಖರು ಪಾಲ್ಗೊಳ್ಳಲಿದ್ದಾರೆ ಎಂದು ಜಿಲ್ಲಾ ಕಾರ್ಯದರ್ಶಿ ಎಚ್.ಬಿ.ಪೃಥ್ವಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಾಲೂರು ಗ್ರಾಮದ ಶ್ರೀ ಕಾಳಿಕಾಂಬ ಅಮನೂರು ಉತ್ಸವ

ನಾಪೋಕ್ಲು: ಸಮೀಪದ ಪಾಲೂರು ಗ್ರಾಮದ ಗ್ರಾಮದೇವತೆಯಾದ ಶ್ರೀ ಕಾಳಿಕಾಂಬ ಅಮನೂರು ತಾಯಿಯ ವಾರ್ಷಿಕೋತ್ಸವ ಭಾನುವಾರ ಶ್ರದ್ಧಾ ಭಕ್ತಿಯಿಂದ ವಿಜೃಂಭಣೆಯಿಂದ ಸಂಪನ್ನಗೊಂಡಿತು. ವಾರ್ಷಿಕೋತ್ಸವದ ಅಂಗವಾಗಿ ಬೆಳಿಗ್ಗೆ ದೇವರ ಜಳಕ ಕೈಗೊಂಡರು.ಬಳಿಕ ವಾದ್ಯ ಮೇಲ ಹಾಗೂ



ದೇವರ ಅಲಂಕೃತ ಮೂರ್ತಿಯೊಂದಿಗೆ ತಿರುವಳಕಾರರು ಭಕ್ತರು ಮೆರವಣಿಗೆ ತೆರಳಿ ದೇವಾಲಯದಲ್ಲಿ ದೇವರಿಗೆ ಮಹಾಪೂಜೆ ಇನ್ನಿತರ ದೇವರ ಸೇವೆಗಳು ಜರುಗಿತು. ಈ ಸಂದರ್ಭ ಭಕ್ತಾದಿಗಳು ಇಷ್ಟಾರ್ಥ ಸಿದ್ದಿಗೆ ವಿವಿಧ ಹರಕೆ ,ಕಾಣಿಕೆ ಒಪ್ಪಿಸಿದರು. ಕಾರ್ಯಕ್ರಮದಲ್ಲಿ ದೇವಾಲಯದ ಪ್ರಮುಖರಾದ ಎಡಿಕೇರಿ ಪ್ರವೀಣ್,(ಪವಿ) ದೇವರ ಮುಖ್ಯ ಪೂಜಾರಿ ಬೈತಡ್ಕ ಡೆಲ್ವಿ ದೇವಯ್ಯ, ಅಣ್ಣಿ ಗಣಪತಿ , ಸೋನಾಜಿತ್, ಸೂದನ ಮಧು, ಬೈತಡ್ಕ ಜೀವನ್, ಜಿಲ್ಲು, ಹಿರಿಯರಾದ ಬೈತಡ್ಕ ದೇವಯ್ಯ, ಚಿನ್ನಪ್ಪ, ಕುಟ್ಟಪ್ಪ, ಪುದಿಯನೆರವವನ ಮೋಹನ್ ಪೊನ್ನಪ್ಪ, ದಿಲೀಪ್, ಅಶೋಕ, ಅಜಿತ್, ದಿನೇಶ್, ಸೂದನ, ಮದನ್, ಈರಪ್ಪ, ಅಚ್ಚುಡ ಗಣೇಶ, ಚಿಕ್ಕನ ದಿನೇಶ್ ಮತ್ತು ಭಕ್ತರು ಉತ್ಸವದಲ್ಲಿ ಪಾಲ್ಗೊಂಡರು.

ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ

ಮಂಗಳೂರು: 2025–26ನೇ ಸಾಲಿನಲ್ಲಿ 7ನೇ ತರಗತಿ ಮತ್ತು 10 ನೇ ತರಗತಿ ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ಬಾರಿಗೆ ಉತ್ತೀರ್ಣರಾದ ಆದಿವಾಸಿ ಕೊರಗ ಸಮುದಾಯಕ್ಕೆ ಸೇರಿದ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಮಂಜೂರು ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ನಿಗಧಿತ ನಮೂನೆಯ ಅರ್ಜಿಗಳನ್ನು ಮಂಗಳೂರು, ಬಂಟ್ವಾಳ, ಪುತ್ತೂರು, ಬೆಳ್ತಂಗಡಿ ಮತ್ತು ಸುಳ್ಯ ತಾಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಿಂದ ಪಡೆದು ಭರ್ತಿ ಮಾಡಿ ಶಾಲಾ ಮುಖ್ಯೋಪಾಧ್ಯಾಯರಿಂದ ಧೃಡೀಕರಿಸಿ, ಅಂಕಪಟ್ಟಿ ಪ್ರತಿ, ಜಾತಿ ಪ್ರಮಾಣ ಪತ್ರದ ಪ್ರತಿ, ಆಧಾರ್ ಕಾರ್ಡ್ ಪ್ರತಿ, ಬ್ಯಾಂಕ್ ಪಾಸ್ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸಿ, ಸಂಬಂಧಪಟ್ಟ ತಾಲೂಕುಗಳ ಸಮಾಜ ಕಲ್ಯಾಣ ಇಲಾಖೆಯ ಕಛೇರಿಗೆ ಜೂನ್ 30 ರೊಳಗೆ ಸಲ್ಲಿಸಬೇಕು. ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ ಯೋಜನಾ ಸಮನ್ವಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೊಡಗು ಮುಂಗಾರು ಮಳೆ-ಗಾಳಿಗೆ ಅವಘಡ ತಪ್ಪಿಸಲು ಕ್ರಮ | ದೂರು, ಸಮಸ್ಯೆಗೆ ಸಿಬ್ಬಂದಿ ಸ್ಪಂದನೆ

ವಿದ್ಯುತ್ ಅಡಚಣೆ ನಿವಾರಣೆಗೆ ಸೆಸ್ಕ್ ಸಹಾಯವಾಣಿ ಆರಂಭ

ಮಡಿಕೇರಿ: ಕೊಡಗು ಜಿಲ್ಲೆಯಾದ್ಯಂತ ಮುಂಗಾರು ಮಳೆ-ಗಾಳಿ ಪ್ರಾರಂಭವಾಗುತ್ತಿದ್ದು, ಮಳೆ ಹಾನಿಯಿಂದಾಗಿ ವಿದ್ಯುತ್ ಸರಬರಾಜಿನಲ್ಲಿ ಹೆಚ್ಚಿನ ಪ್ರಮಾಣದ ಅಡಚಣೆಗಳು, ವಿದ್ಯುತ್ ಅವಘಡಗಳು ಉಂಟಾಗುವ ಸಾಧ್ಯತೆ ಇರುತ್ತದೆ. ಸಾರ್ವಜನಿಕರು ಯಾವುದೇ ರೀತಿಯ ವಿದ್ಯುತ್ ಜಾಲದ ವ್ಯತ್ಯಯಗಳನ್ನು (ವಿದ್ಯುತ್ ಮಾರ್ಗದ ತಂತಿ ಹಾಗೂ ಕಂಬಗಳು ತುಂಡಾಗುವುದು) ಗಮನಿಸಿದಲ್ಲಿ, ಸ್ವತಃ ಕ್ರಮಕೈಗೊಳ್ಳದೆ, (ವಿದ್ಯುತ್ ತಂತಿಗಳನ್ನು ಸ್ಪರ್ಶಿಸದೆ) ತಕ್ಷಣ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್) ಈ ಕೆಳಗಿನ ದೂರವಾಣಿ ಸಂಖ್ಯೆಗಳಲ್ಲಿ ತಮ್ಮ ದೂರುಗಳನ್ನು ದಾಖಲಿಸುಂತೆ ಮತ್ತು ಗ್ರಾಹಕರು ಸಂಪರ್ಕಿಸಲು ಸಾಧ್ಯವಾಗದಿದ್ದಲ್ಲಿ ಪರ್ಯಾಯವಾಗಿ ವಾಟ್ಸ್‌ಆಪ್ ಮೂಲಕ ಫೋಟೋ ಸಂದೇಶವನ್ನು ಕಳುಹಿಸುವಂತೆ ಮಡಿಕೇರಿ ವಿಭಾಗದ ಸೆಸ್ಕ್ ಕಾರ್ಯನಿರ್ವಾಹಕ ಎಂಜಿನಿಯರ್ ಎಂ.ರಾಮಚಂದ್ರ ಅವರು ಕೋರಿದ್ದಾರೆ.

ಸಹಾಯವಾಣಿ: ಕೊಡಗು ಜಿಲ್ಲೆಯ (24★7)



ಸಹಾಯವಾಣಿ (ಸರ್ವಿಸ್ ಸೆಂಟರ್)ನ ದೂರವಾಣಿ ಸಂಖ್ಯೆ 1912, ಗ್ರಾಹಕರ ಸೇವಾ ಕೇಂದ್ರ ಸಂಖ್ಯೆ 18005990061.

ಮಡಿಕೇರಿ ತಾಲೂಕಿನ ಮಡಿಕೇರಿ, ತಾಳತ್ ಮನೆ, ಮೂರ್ನಾಡು, ಸಂಪಾಜೆ, ಭಾಗಮಂಡಲ, ನಾಪೋಕ್ಲು ಹಾಗೂ ಗ್ರಾಹಕರ ಸೇವಾ ಕೇಂದ್ರಕ್ಕೆ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ವಿನಯ ಕುಮಾರ್ 9449598602, ಸಹಾಯಕ, ಜೂನಿಯರ್ ಎಂಜಿನಿಯರ್‌ಗಳು ಮಡಿಕೇರಿಗೆ ತೇಜ 9449598603, ತಾಳತ್‌ಮನೆ ಹೇಮಂತ್ ರಾಜ್ 9449598604, ಮೂರ್ನಾಡು ಶಾಖೆಗೆ ಚೈತ್ರೇಶ್ 9449598605, ಸಂಪಾಜೆಗೆ ಅನಿಲ್ ಕುಮಾರ್ 9448994851, ಭಾಗಮಂಡಲ ಹರಿಣಾಕ್ಷಿ 9480810344, ನಾಪೋಕ್ಲು ಶಾಖೆಗೆ ಹರೀಶ್ 9449598606 ಹಾಗೂ ಗ್ರಾಹಕರ ಸೇವಾ ಕೇಂದ್ರ ಮಡಿಕೇರಿ ಉಪ ವಿಭಾಗ ದೂ.ಸಂ. 08272–248454 ಮತ್ತು 9449598665.

ಕುಶಾಲನಗರ ತಾಲೂಕಿನ ಸುಂಟಿಕೊಪ್ಪ, ಕುಶಾಲನಗರ, ಕೂಡಿಗೆ, ಮಾದಾಪುರ, ಚೆಟ್ಟಳ್ಳಿ, ಗ್ರಾಹಕರ ಸೇವಾ ಕೇಂದ್ರಕ್ಕೆ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಮಂಜುನಾಥ 9449598538, ಸಹಾಯಕ/ಜೂನಿಯರ್ ಎಂಜಿನಿಯರ್‌ಗಳು ಸುಂಟಿಕೊಪ್ಪ ಶಾಖೆಗೆ ಲವಕುಮಾರ್ ಕೆ.ಎ. 9449598615, ಕುಶಾಲನಗರ ಯೋಗಾಚಾರಿ 9449598589, ಕೂಡಿಗೆ ಶಾಖೆಗೆ ರಾಣಿ 9449598613, ಮಾದಾಪುರ ನಿರಂಜನ್ ಎಸ್ .ಜಿ. 9449598588, ಚೆಟ್ಟಳ್ಳಿ ಮಂಜುನಾಥ ಜಿ.ಆರ್ .9448499965 ಹಾಗೂ ಗ್ರಾಹಕರ ಸೇವಾ ಕೇಂದ್ರ ಕುಶಾಲನಗರ ಉಪ ವಿಭಾಗ 08276–271046.

ಸೋಮವಾರಪೇಟೆ ತಾಲೂಕಿನ ಸೋಮವಾರಪೇಟೆ, ಶನಿವಾರಸಂತೆ, ಕೊಡ್ಲಿಪೇಟೆ, ಆಲೂರು ಸಿದ್ದಾಪುರ, ಶಾಂತಳ್ಳಿ, ಗ್ರಾಹಕರ ಸೇವಾ ಕೇಂದ್ರ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ವಿನಯ ಕುಮಾರ್ 9449598612, ಸಹಾಯಕ/ಜೂನಿಯರ್ ಎಂಜಿನಿಯರ್‌ಗಳು ಸೋಮವಾರಪೇಟೆ ಶಾಖೆಗೆ ಶಿವಪ್ರಸಾದ್ 9449598614, ಶನಿವಾರಸಂತೆ ಸುದೀಪ್ ಕುಮಾರ್ 9449598616, ಕೊಡ್ಲಿಪೇಟೆ ಶಾಖೆಗೆ ಪ್ರಕಾಶ್ 9449598617, ಆಲೂರು ಸಿದ್ದಾಪುರ ಮನುಕುಮಾರ್ 9449598622, ಶಾಂತಳ್ಳಿ ಎಚ್.ಡಿ.ಲೋಕೇಶ್(ಪ್ರಭಾರ) 9480837509, ಗ್ರಾಹಕರ ಸೇವಾ ಕೇಂದ್ರ ಸೋಮವಾರಪೇಟೆ ಉಪ ವಿಭಾಗ 9448283394.

ವೀರಾಜಪೇಟೆ ತಾಲೂಕಿನ ವೀರಾಜಪೇಟೆ, ಅಮ್ಮತ್ತಿ, ಸಿದ್ದಾಪುರ, ಪಾಲಿಬೆಟ್ಟ ಗ್ರಾಹಕರ ಸೇವಾ ಕೇಂದ್ರಕ್ಕೆ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ನೀತಾ(ಪ್ರಭಾರ) 9480837545, ಸಹಾಯಕ/ಜೂನಿಯರ್ ಎಂಜಿನಿಯರ್‌ಗಳು ವೀರಾಜಪೇಟೆಗೆ ಸೋಮೇಶ್ 9449598610, ಅಮ್ಮತ್ತಿ ಮನೋಜ್ 9448994344, ಸಿದ್ದಾಪುರ ಶಾಖೆಗೆ ಸ್ವರಾಗ್ 9449598611, ಪಾಲಿಬೆಟ್ಟ ಶಿವರಾಜ 9448994341, ಗ್ರಾಹಕರ ಸೇವಾ ಕೇಂದ್ರ ವೀರಾಜಪೇಟೆ ಉಪ ವಿಭಾಗ 9448289409.

ಪೊನ್ನಂಪೇಟೆ ತಾಲೂಕಿನ ಗೋಣಿಕೊಪ್ಪಲು, ಶ್ರೀಮಂಗಲ, ಬಾಳೆಲೆ ಹಾಗೂ ಗ್ರಾಹಕರ ಸೇವಾ ಕೇಂದ್ರ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಸತೀಶ್ 9449598607, ಸಹಾಯಕ, ಜೂನಿಯರ್ ಎಂಜಿನಿಯರ್‌ಗಳು ಗೋಣಿಕೊಪ್ಪ ಶಾಖೆಗೆ ಹೇಮಂತ್ ಕುಮಾರ್ 9449598608, ಶ್ರೀಮಂಗಲ ನಾಗೇಂದ್ರ ಪ್ರಸಾದ್ 9449598609, ಬಾಳೆಲೆ ಶಾಖೆಗೆ ರಂಗಸ್ವಾಮಿ 9449597484, ಗ್ರಾಹಕರ ಸೇವಾ ಕೇಂದ್ರ ಗೋಣಿಕೊಪ್ಪಲು ಉಪ ವಿಭಾಗ 9449878072 ಹಾಗೂ ಕಾರ್ಯನಿರ್ವಾಹಕ ಎಂಜಿನಿಯರ್ (ವಿ), ಮಡಿಕೇರಿ ವಿಭಾಗ ಎಂ.ರಾಮಚಂದ್ರ ದೂ. ಸಂ.9449598601 ನ್ನು ಸಂಪರ್ಕಿಸಬಹುದು ಎಂದು ಸೆಸ್ಕ್ ಕಾರ್ಯನಿರ್ವಾಹಕ ಎಂಜಿನಿಯರ್ ರಾಮಚಂದ್ರ ಅವರು ವಿವರಿಸಿದ್ದಾರೆ.

ಮಾಲಿನ್ಯ ಸಮಸ್ಯೆ | ಧರಣಿ ಸ್ಥಳಕ್ಕೆ ಮಾಜಿ ಸಚಿವ ಅಭಯಚಂದ್ರ ಜೈನ್ ಭೇಟಿ

ಜೋಕಟ್ಟೆ ಗ್ರಾಮಸ್ಥರ ಬೇಡಿಕೆ ಈಡೇರಿಸಿ

ಸುರತ್ಕಲ್: ಕೋಕ್ ಸಲ್ಫರ್ ಘಟಕದಿಂದ ಮಾಲಿನ್ಯ ಸಮಸ್ಯೆ ಎದುರಿಸುತ್ತಿರುವ ಜೋಕಟ್ಟೆ, ಕೆಂಜಾರು, ಕಳವಾರು ಗ್ರಾಮಸ್ಥರು ಎಂಆರ್‌ಪಿಎಲ್ ಕೋಕ್ ಸಲ್ಫರ್ ಘಟಕದ ಮುಂಭಾಗ ನಡೆಸುತ್ತಿರುವ ಹಗಲು-ರಾತ್ರಿ ಧರಣಿ ನಡೆಯುತ್ತಿದ್ದು ಧರಣಿಯಲ್ಲಿ ಪಾಲ್ಗೊಂಡ ಮಾಜಿ ಸಚಿವ ಅಭಯಚಂದ್ರ ಜೈನ್ ಅವರು ಸಂತ್ರಸ್ತರಿಗೆ ಬೆಂಬಲ ಸೂಚಿಸಿದರು.



ಈ ಸಂಧರ್ಭದಲ್ಲಿ ಮಾತನಾಡಿ, '2016ರಲ್ಲಿ ನಾನು ಸಚಿವನಾಗಿದ್ದಾಗ ಕೋಕ್ ಸಲ್ಫರ್ ಮಾಲಿನ್ಯದಿಂದ ಜೋಕಟ್ಟೆಯಲ್ಲಿ ಗಂಭೀರ ಪರಿಸ್ಥಿತಿ ನಿರ್ಮಾಣವಾಗಿತ್ತು. ಆಗ ಸರ್ಕಾರ ತಜ್ಞರ ಸಮಿತಿ ರಚಿಸಿ ಪರಿಹಾರೋಪಾಯ ಕಂಡು ಆದೇಶ ಹೊರಡಿಸಿತ್ತು. ಆದೇಶ ಬಂದು 10 ವರ್ಷವಾದರೂ ಎಂಆರ್‌ಪಿಎಲ್ ಹಸಿರು ವಲಯ ನಿರ್ಮಿಸಲು, ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ನೆಪ ಹೇಳುತ್ತಿದೆ. ಇದು ಸರಿಯಲ್ಲ, ಜಿಲ್ಲಾಡಳಿತ ಹಾಗೂ ಕಂಪೆನಿ ಕೊಟ್ಟ ಮಾತಿನಂತೆ ನೇರವಾಗಿ ಭೂಸ್ವಾಧೀನ ನಡೆಸಿ ಸಂತ್ರಸ್ತರಿಗೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು. ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಮಾತನಾಡಿ ಸಮಸ್ಯೆ ಬಗೆಹರಿಸುವುದಾಗಿ ತಿಳಿಸಿದರು.

ಶಾಸಕ ಉಮಾನಾಥ್ ಕೋಟ್ಯಾನ್ ಭೇಟಿ

ಧರಣಿ ಸ್ಥಳಕ್ಕೆ ಶಾಸಕರಾದ ಉಮಾನಾಥ ಕೋಟ್ಯಾನ್ ಭೇಟಿ ನೀಡಿದರು.ಹಸಿರು ವಲಯ ನಿರ್ಮಾಣಕ್ಕೆ ಭೂಸ್ವಾಧೀನ ಪ್ರಕ್ರಿಯೆ ಮತ್ತು ಸಂತ್ರಸ್ತರಿಗೆ ಶೀಘ್ರ ಪುನರ್ವಸತಿ ಕಲ್ಪಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡ ಕೆ ಯಾದವ ಶೆಟ್ಟಿ, ಬಜ್ಪೆ ಪಟ್ಟಣ ಪಂಚಾಯತ್ ಸದಸ್ಯ ಸಿರಾಜ್ ಬಜ್ಪೆ, ನಿಸಾರ್ ಕರಾವಳಿ ಮುಂತಾದವರು ಭಾಗವಹಿಸಿ ಧರಣಿಗೆ ಬೆಂಬಲವನ್ನು ವ್ಯಕ್ತಪಡಿಸಿದರು.

ಹೋರಾಟ ಸಮಿತಿಯ ಸಂಚಾಲಕ ಮುನೀರ್ ಕಾಟಿಪಳ್ಳ, ಬಾಳ ಗ್ರಾಪಂ ಮಾಜಿ ಅಧ್ಯಕ್ಷ ಆದಂ ಕಳವಾರು, ಜೋಕಟ್ಟೆ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಉಮರ್ ಫಾರೂಕ್, ಕುಂಭಾರ ಯುವ ವೇದಿಕೆಯ ಅಧ್ಯಕ್ಷ ಗಂಗಾಧರ ಬಂಜನ್, ಸಿಐಎಂ ಮುಖಂಡ ಶ್ರೀನಾಥ್ ಕುಲಾಲ್, ಜನವಾದಿ ಮಹಿಳಾ ಸಂಘಟನೆಯ ಅಧ್ಯಕ್ಷೆ ಕಿರಣ ಪ್ರಭ, ಕಾರ್ಯದರ್ಶಿ ಪ್ರಮೀಳಾ ಕೆ, ಸಿಲ್ವಿಯಾ ಜೋಕಟ್ಟೆ, ಪುಷ್ಪಾ ಡಿ., ಹೋರಾಟ ಸಮಿತಿಯ ಪ್ರಮುಖರಾದ ಅಬೂಬಕ್ಕರ್ ಬಾವ, ಜಾಬಿರ್ ಜೆ.ಎಂ, ಇಕ್ಬಾಲ್ ಜೋಕಟ್ಟೆ, ಹಸೈನಾರ್, ಸೀತಾರಾಮ ಆಚಾರ್ಯ, ಮನೋಜ್ ಜೋಕಟ್ಟೆ, ಮೋಹನ್ ಕುಲಾಲ್ ಜೋಕಟ್ಟೆ, ಗಣೇಶ್ ನಿರ್ಮುಂಜೆ, ಶರೀಫ್ ನಿರ್ಮುಂಜೆ, ಹನೀಫ್ ಜೋಕಟ್ಟೆ ಧರಣಿಯಲ್ಲಿ ಭಾಗವಹಿಸಿದ್ದರು.

ಮಡಿಕೇರಿಯಲ್ಲಿ 'ಭಯೋತ್ಪಾದನಾ ವಿರೋಧಿ' ದಿನ | ಪ್ರಮಾಣ ವಚನ ಸ್ವೀಕಾರ

ವಿಚ್ಛಿದ್ರಕಾರಿ ಶಕ್ತಿ ವಿರುದ್ಧ ಹೋರಾಟಕ್ಕೆ ಪಣತೊಡಿ

ಮಡಿಕೇರಿ: ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿ ಸಹನಾ ಎಸ್. ಹಾದಿಮನಿ ಅವರ ಉಪಸ್ಥಿತಿಯಲ್ಲಿ ಗುರುವಾರ 'ಭಯೋತ್ಪಾದನಾ ವಿರೋಧಿ' ದಿನಾಚರಣೆ ಪ್ರಯುಕ್ತ 'ಪ್ರತಿಜ್ಞಾ ವಿಧಿ' ಸ್ವೀಕರಿಸುವ ಕಾರ್ಯಕ್ರಮ ನಡೆಯಿತು.



ಪ್ರತಿಜ್ಞಾ ವಿಧಿಯನ್ನು ಜಿಲ್ಲಾಧಿಕಾರಿಯವರ ಆಪ್ತ ಸಹಾಯಕ ಜಿ.ಷಣ್ಮುಖ ಅವರು ಬೋಧಿಸಿದರು.

ಅಹಿಂಸೆ ಹಾಗೂ ಸಹನೆಗೆ ಹೆಸರಾದ ಭಾರತ ರಾಷ್ಟ್ರದ ಭವ್ಯ ಪರಂಪರೆಯಲ್ಲಿ ದೃಢ ವಿಶ್ವಾಸದಿಂದ ಎಲ್ಲಾ ಬಗೆಯ ಭಯೋತ್ಪಾದನೆ ಮತ್ತು ಹಿಂಸೆಯನ್ನು ನಮ್ಮೆಲ್ಲ ಶಕ್ತಿ ಸಾಮರ್ಥ್ಯದಿಂದ ಎದುರಿಸುತ್ತೇವೆ ಎಂದು ಅವರು ಪ್ರತಿಜ್ಞಾ ವಿಧಿ ಬೋಧಿಸಿದರು.

ಶಾಂತಿ, ಸಾಮಾಜಿಕ ಸೌಹಾರ್ದತೆ ಮತ್ತು ಪರಸ್ಪರ ಅರಿವು ಸಾಧಿಸಲು ಹಾಗೂ ಉತ್ತೇಜಿಸಲು ಮತ್ತು ಮಾನವ ಜೀವಕ್ಕೆ ಹಾಗೂ ಮೌಲ್ಯಗಳಿಗೆ ಬೆದರಿಕೆಯೊಡ್ಡುತ್ತಿರುವ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡಲು ಎಲ್ಲರೂ ಪಣತೊಡಬೇಕು ಎಂದು ಷಣ್ಮುಖ ಅವರು ತಿಳಿಸಿದರು.

ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಚಂದ್ರಶೇಖರ್, ಸೈನಿಕ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಬಿ.ಆರ್. ಶೆಟ್ಟಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್, ಪ್ರಾದೇಶಿಕ ಸಾರಿಗೆ ಅಧಿಕಾರಿ ಸತೀಶ್, ಐಟಿಡಿಪಿ ಇಲಾಖಾ ಅಧಿಕಾರಿ ಎಸ್. ಹೊನ್ನೇಗೌಡ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶೇಖರ್, ಪಶುಪಾಲನಾ ಇಲಾಖೆ ಉಪ ನಿರ್ದೇಶಕ ಲಿಂಗರಾಜು ದೊಡ್ಡಮನಿ, ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಶಶಿಧರ, ಲೋಕೋಪಯೋಗಿ ಇಲಾಖೆ ಇಇ ಪ್ರಭು, ಜಿ.ಪಂ.ಇಇ ಭಾಸ್ಕರ, ಆಹಾರ ಇಲಾಖೆಯ ಉಪ ನಿರ್ದೇಶಕ ಭೀಮರಾಯ, ಕೈಗಾರಿಕೆ ಇಲಾಖೆಯ ಉಪ ನಿರ್ದೇಶಕ ರಘು, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಬಸವರಾಜು, ಜಿಲ್ಲಾ ಉದ್ಯೋಗ ವಿನಿಮಯ ಅಧಿಕಾರಿ ಮಂಜುನಾಥ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಪ್ರಸನ್ನ ಕುಮಾರ್, ಕಾರ್ಮಿಕ ಅಧಿಕಾರಿ ಎಂ.ಎಂ.ಯತ್ನಟ್ಟಿ, ಕೆಎಸ್‌ಆರ್‌ಟಿಸಿ ಮಡಿಕೇರಿ ಘಟಕ ವ್ಯವಸ್ಥಾಪಕ ಈರಸಪ್ಪ, ವಿಕಲಚೇತನರ ಅಧಿಕಾರಿ ವಿಮಲಾ, ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕಿ ಸ್ನೇಹಾ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ ದಿವಾಕರ, ತಹಶೀಲ್ದಾರರಾದ ಪ್ರವೀಣ್ ಕುಮಾರ್, ಶ್ರೀಧರ, ಸಂಜನಾ, ಪೌರಾಯುಕ್ತ ಎಚ್. ಆರ್.ರಮೇಶ್, ವೀರಾಜಪೇಟೆ ಪುರಸಭೆ ಮುಖ್ಯಾಧಿಕಾರಿ ನಾಚಪ್ಪ, ಒಳಚರಂಡಿ ಮಂಡಳಿ ಎಂಜಿನಿಯರ್ ಪ್ರಸನ್ನ, ಕೌಶಲ್ಯ ಅಭಿವೃದ್ಧಿ ಅಧಿಕಾರಿ ರೇಖಾ, ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಸಚಿನ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಾಲೂಕು ಅಧಿಕಾರಿ ಶ್ರೀಕಾಂತ್, ಶಿವಶಂಕರ, ವಿವಿಧ ನಿಗಮಗಳ ವ್ಯವಸ್ಥಾಪಕರು ಮತ್ತು ಸಿಬ್ಬಂದಿ ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಗೌರವ ಪುರಸ್ಕಾರ, ವಿದ್ಯಾರ್ಥಿ ವೇತನ ವಿತರಣೆ



ಮಂಗಳೂರು: ಬದುಕಿಗೊಂದು ಆಸರೆ ಮಲ್ಲೂರು ಮತ್ತು ಲಯನ್ಸ್‌ಕ್ಲಬ್ ಕಾವೂರು ಇವರ ಸಹಭಾಗಿತ್ವದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಗೌರವ ಪುರಸ್ಕಾರ, ವಿದ್ಯಾರ್ಥಿ ವೇತನ ವಿತರಣೆ ಉಚಿತ ಪುಸ್ತಕ ವಿತರಣೆ ಹಾಗೂ ಸಹಾಯಧನ ವಿತರಣಾ ಕಾರ್ಯಕ್ರಮ ಮಲ್ಲೂರು ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ನಡೆಯಿತು.

ಕಾರ್ಯಕ್ರಮದಲ್ಲಿ 45 ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ವಿತರಣೆ ಮಾಡಲಾಯಿತು. ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೈಕ್ಷಣಿಕ ಸಾಧನೆಗೈದ ವಿದ್ಯಾರ್ಥಿಗಳಿಗೆ ಗೌರವ ಪುರಸ್ಕಾರ ಮತ್ತು ವಿದ್ಯಾರ್ಥಿ ವೇತನ ವಿತರಿಸಲಾಯಿತು. ಆರ್ಥಿಕವಾಗಿ ಹಿಂದುಳಿದವರಿಗೆ ಸಹಾಯಧನ ಮತ್ತು ಮಲ್ಲೂರು ಅಂಚೆ ಪಾಲಕಿಯಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಯಾಗಿರುವ ಉಷಾ ಇವರನ್ನು ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು. ಲಯನ್ಸ್ ಕ್ಲಬ್ ಕಾವೂರ್ ಇದರ ಅಧ್ಯಕ್ಷ ರಾಕೇಶ್ ಶೆಟ್ಟಿ ವಾಮಂಜೂರ್, ನಿಕಟ ಪೂರ್ವ ಮಹಾನಗರ ಪಾಲಿಕೆ ಸದಸ್ಯರಾದ ಕಿರಣ್ ಕುಮಾರ್ ಕೋಡಿಕಲ್, ಮಹಾಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನ ಸಮಿತಿ ಅಧ್ಯಕ್ಷರಾದ ರಮೇಶ್ ಆಳ್ವ, ಮಲರಾಯ ದೈವದ ಪಾತ್ರಿ ಯೋಗೀಶ್ ಪೂಜಾರಿ ಮಲ್ಲೂರು, ಬದುಕಿಗೊಂದು ಆಸರೆ ಇದರ ಅಧ್ಯಕ್ಷರಾದ ಲಕ್ಷ್ಮಣ್ ಆಚಾರ್ಯ ಮಲ್ಲೂರು ಹಾಗೂ ಗೌರವ ಅಧ್ಯಕ್ಷರಾದ ಪ್ರದೀಪನಾಯ್ಕ್ ದೇಮ್ಮಲೆ ಉಪಸ್ಥಿತರಿದ್ದರು. ಸೋಹನ್ ಆಳ್ವ ಮಲ್ಲೂರು ಸ್ವಾಗತಿಸಿ, ಪವಿತ್ರ ಪ್ರಾರ್ಥಿಸಿ, ನಿರೀಕ್ಷಾ ನಿರೂಪಿಸಿದರು.

ಚಿಕ್ಕ ವಯಸ್ಸಿನಲ್ಲಿಯೇ ಮಕ್ಕಳಿಗೆ ಸಂಸ್ಕಾರ, ಸಂಸ್ಕೃತಿ ಕಲಿಸಿ: ಚೌಧರಿ



ಉಡುಪಿ: ಚಿಕ್ಕ ವಯಸ್ಸಿನಲ್ಲಿಯೇ ಮಕ್ಕಳಿಗೆ ಸಂಸ್ಕಾರ, ಸಂಸ್ಕೃತಿ ಮತ್ತು ನಮ್ಮ ಪರಂಪರೆಯನ್ನು ಕಲಿಸಿ ಉತ್ತಮ ವ್ಯಕ್ತಿಯಾಗಿ ರೂಪಿಸಿದಾಗ ಮಾತ್ರ ಸಮಾಜದಲ್ಲಿ ದೌರ್ಜನ್ಯಗಳನ್ನು ತಡೆಯಲು ಸಾಧ್ಯ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಹೇಳಿದ್ದಾರೆ.

ತೆಕ್ಕಟ್ಟೆಯ ಶ್ರೀ ದುರ್ಗಾಪರಮೇಶ್ವರಿ ಕಲ್ಯಾಣ ಮಂಟಪದಲ್ಲಿ ರವಿವಾರ ಆಯೋಜಿಸಲಾಗಿದ್ದ 'ಮಹಿಳಾ ಸ್ಪಂದನಾ ಸಮಾವೇಶ: ನಿಮ್ಮ ದೂರು ನಮ್ಮ ಪರಿಹಾರ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಈ ಸಮಾವೇಶವನ್ನು ಜಿಲ್ಲಾ ಚೈತನ್ಯ ಸ್ತ್ರೀ ಶಕ್ತಿ ಒಕ್ಕೂಟ, ಜಿಲ್ಲಾ ಮಹಿಳಾ ಮಂಡಲಗಳ ಒಕ್ಕೂಟ, ಜಿಲ್ಲಾ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘ ಹಾಗೂ ವಿವಿಧ ಸಂಘಟನೆಗಳ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿತ್ತು. ಉಡುಪಿ ಜಿಲ್ಲಾ ಚೈತನ್ಯ ಸ್ತ್ರೀ ಶಕ್ತಿ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಪ್ರೇಮಾ ಮಂಜುನಾಥ್ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಜಿ.ಪಂ. ಮಾಜಿ ಸದಸ್ಯರಾದ ಗೀತಾಂಜಲಿ ಸುವರ್ಣ, ಶ್ರೀಲತಾ ಸುರೇಶ ಶೆಟ್ಟಿ, ವಿಕಲಚೇತನರ ಕಲ್ಯಾಣ ಇಲಾಖೆ ಅಧಿಕಾರಿ ರತ್ನಾ, ರಾಜ್ಯ ಮಹಿಳಾ ನಿಲಯದ (ಸ್ಟೇಟ್ ಹೋಮ್) ಅಧೀಕ್ಷಕಿ ಪುಷ್ಪಾ ರಾಣಿ ಹಾಗೂ ಸಿಡಿಪಿಒ ಉಮೇಶ್ ಕೋಟ್ಯಾನ್ ಉಪಸ್ಥಿತರಿದ್ದರು.

ಸ್ಥಳದಲ್ಲೇ ದೂರು ಸ್ವೀಕಾರ

ಸಮಾವೇಶದಲ್ಲಿ ಮಹಿಳೆಯರು ಸೇರಿದಂತೆ ಸಾರ್ವಜನಿಕರು ತಮ್ಮ ವಿವಿಧ ಸಮಸ್ಯೆಗಳ ಕುರಿತು ಆಯೋಗದ ಅಧ್ಯಕ್ಷರಿಗೆ ನೇರವಾಗಿ ದೂರುಗಳನ್ನು ಸಲ್ಲಿಸಿದರು ವಸಂತಿ ಕೊರಡ್ಕಲ್ ಸ್ವಾಗತಿಸಿದರು. ಜ್ಯೋತಿ ಸಾಲಿಗ್ರಾಮ ಕಾರ್ಯಕ್ರಮ ನಿರ್ವಹಿಸಿದರೆ, ಸುಗುಣ ವಂದಿಸಿದರು.

ಕಿನ್ನಿಗೋಳಿ ವಿಶ್ವಬ್ರಾಹ್ಮಣ ಸಮಾಜ ಸೇವಾ ಸಂಘದ ವಾರ್ಷಿಕೋತ್ಸವ



ಕಿನ್ನಿಗೋಳಿ: ಇಲ್ಲಿನ ವಿಶ್ವಬ್ರಾಹ್ಮಣ ಸಮಾಜ ಸೇವಾ ಸಂಘ, ಶ್ರೀ ಕಾಳಿಕಾಂಬಾ ಮಹಿಳಾ ವೃಂದದ 40ನೇ ವಾರ್ಷಿಕೋತ್ಸವ ಸರಾಫ್ ಅಣ್ಣಯ್ಯಾಚಾರ್ಯ ಸಭಾಭವನದಲ್ಲಿ ನಡೆಯಿತು.

ಕಟೀಲು ದೇಗುಲದ ಅರ್ಚಕ ಅನಂತಪದ್ಮನಾಭ ಆಸ್ರಣ್ಣ ಮಾತನಾಡಿ, ವಿಶ್ವಬ್ರಾಹ್ಮಣ ಕುಶಲಕರ್ಮಿಗಳು. ಕಲಾವಿದರು, ಪ್ರತಿಭಾವಂತರು ಆಗಿದ್ದಾರೆ. ಸಂಘಟನೆ ಮೂಲಕ ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ತೊಡಗಿಸಿ ಕೊಳ್ಳುತ್ತಿರುವುದು ಅಭಿನಂದನೀಯ ಎಂದರು.

ಕಾಷ್ಠಶಿಲ್ಪಿ ವಿಠಲ ಆಚಾರ್ಯ ತಾಳಿಪಾಡಿ, ಖ್ಯಾತ ಕಲಾವಿದೆ ರಂಜಿತಾ ಜಿ. ಆಚಾರ್ಯ,ಶೈಕ್ಷಣಿಕ ಸಾಧಕಿ ಕುಮಾರಿ ಅನ್ಯ ಆಚಾರ್ಯ ಇವರನ್ನು ಸನ್ಮಾನಿಸಲಾಯಿತು. ದುಬೈ ಶ್ರೀ ವಿಶ್ವಕರ್ಮ ಸೇವಾ ಸಮಿತಿ ಸ್ಥಾಪಕ ಅಧ್ಯಕ್ಷ ಶಾಂತಾರಾಮ ಆಚಾರ್ಯ, ಉದ್ಯಮಿ ಎಂ. ಶ್ರೀನಿವಾಸ ಆಚಾರ್ಯ, ಮೂಡುಬಿದ್ರೆ ಶ್ರೀ ಗುರುಮಠ ಕಾಳಿಕಾಂಬ ದೇವಸ್ಥಾನದ ಬಾಲಕೃಷ್ಣ ಆಚಾರ್ಯ, ಕೊಡೆತ್ತೂರುಗುತ್ತು ನಿತಿನ್ ಶೆಟ್ಟಿ ಗುತ್ತಿನಾರ್, ಉಡುಪಿ ಕೊಡಂಕೂರು ಸಂಸ್ಕೃತ ವಿದ್ಯಾ ಪೀಠದ ಪೋಷಕ ಅಧ್ಯಕ್ಷೆ ಶ್ರೀಮತಿ ಶಶಿಕಲಾ ಪ್ರಭಾಕರ ಆಚಾರ್ಯ, ಕಿನ್ನಿಗೋಳಿ ವಿಶ್ವಬ್ರಾಹ್ಮಣ ಸಮಾಜ ಸೇವಾ ಸಂಘದ ಜಗದೀಶ ಆಚಾರ್ಯ ಸುರಗಿರಿ, ಕಾರ್ಯದರ್ಶಿ ರಂಜನ್ ಕುಮಾರ್, ಕೋಶಾಧಿಕಾರಿ ಜಗದೀಶ ಆಚಾರ್ಯ, ಸರಾಫ್ ಅಣ್ಣಯ್ಯಾಚಾರ್ಯ ಸಭಾಭವನದ ಅಧ್ಯಕ್ಷ ಎಂ. ಪ್ರಥ್ವೀರಾಜ ಆಚಾರ್ಯ, ಕಾಳಿಕಾಂಬ ಮಹಿಳಾ ವೃಂದದ ಅನಿತಾ ಪ್ರಥ್ವಿರಾಜ ಆಚಾರ್ಯ, ಸವಿತಾ ದಿನೇಶ್ ಆಚಾರ್ಯ, ಸವಿತಾ ಜಗದೀಶ ಆಚಾರ್ಯ ಇದ್ದರು. ಶಿವಪ್ರಣಾಮ್ ಸಂಸ್ಥೆಯವರಿಂದ ನೃತ್ಯ ನಡೆಯಿತು.

ಮುಲ್ಕಿ: 'ಅಪ್ಪೆ ಬೇರ್‌ದ ತುಳುನಾಡ್' ರಾಷ್ಟ್ರೀಯ ತುಳು ವಿಚಾರ ಸಂಕಿರಣ | ಸಾಧ್ವಿ ಶ್ರೀ ಮಾತಾನಂದಮಯೀ ಆಶಯ

ರಾಜ್ಯದಲ್ಲಿ ವಿಶೇಷ ಸ್ಥಾನಮಾನವಿರುವ ತುಳು ಭಾಷೆ 8ನೇ ಪರಿಚ್ಛೇದಕ್ಕೆ ಸೇರಲಿ

ಮುಲ್ಕಿ: ತುಳು ವರ್ಲ್ಡ್ ಫೌಂಡೇಶನ್, ತುಳುವ ಮಹಾಸಭೆ, ಇಂಟರ್ನ್ಯಾಷನಲ್, ಮುಲ್ಕಿ ಬಂಟರ ಸಂಘದ ನೇತೃತ್ವದಲ್ಲಿ ಮುಲ್ಕಿ ಬಿಲ್ಲವ ಸಂಘ ಮಹಿಳಾ ಮಂಡಳಿ, ರೋಟರಿ ಕ್ಲಬ್ , ಲಯನ್ ಕ್ಲಬ್ ಹಾಗೂ ವಿಜಯ ಕಾಲೇಜು ರಾಷ್ಟ್ರೀಯ ಸೇವಾ ಯೋಜನೆಯ ಸಹಯೋಗದಲ್ಲಿ 'ಅಪ್ಪೆ ಬೇರ್'ದ ತುಳುನಾಡ್' ರಾಷ್ಟ್ರೀಯ ತುಳು ವಿಚಾರ ಸಂಕಿರಣವು ಭಾನುವಾರ ಮುಲ್ಕಿಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಅನ್ನಪೂರ್ಣೇಶ್ವರೀ ಸಭಾಂಗಣದಲ್ಲಿ ನಡೆಯಿತು.



ತುಳು ವಿಚಾರ ಸಂಕಿರಣದ ಉದ್ಘಾಟನೆಯನ್ನು ಒಡಿಯೂರು ಸಾಧ್ವಿ ಶ್ರೀ ಮಾತಾನಂದಮಯೀ ನೆರವೇರಿಸಿ ಮಾತನಾಡಿ, ತುಳುವಿನಲ್ಲಿ ಸಂಸ್ಕಾರ ಹಾಗೂ ಸಂಸ್ಕೃತಿ ಇದೆ. ತುಳು ಹೆಮ್ಮೆಯ ಭಾಷೆಯಾಗಿದ್ದು, ರಾಜ್ಯದಲ್ಲಿ ತುಳುವಿಗೆ ವಿಶೇಷ ಸ್ಥಾನಮಾನವಿದೆ. ಕಾರ್ಯಕ್ರಮಗಳ ಸಂಘಟನೆಯ ಮೂಲಕ ತುಳುನಾಡಿನ ತಾಯಿಯನ್ನು ನೆನಪಿಸಿಕೊಳ್ಳುವ ಕಾರ್ಯ ಅಭಿನಂದನೀಯ. ತುಳು ಭಾಷೆಯು 8ನೇ ಪರಿಚ್ಛೇದ ಸೇರಲಿ ತುಳುವಪ್ಪೆಯ ಈ ನೆಲ ವಿಶ್ವದಲ್ಲಿ ಮೇಳೈಸಲಿ ಎಂದು ಶುಭ ಹಾರೈಸಿದರು.

ತುಳುವ ಮಹಾಸಭೆ ಇಂಟರ್ನ್ಯಾಷನಲ್‌ನ ಪ್ರಧಾನ ಸಂಚಾಲಕಿ ಭಾನುಮತಿ ಶೆಟ್ಟಿ ಕಕ್ವಗುತ್ತು ಪ್ರಾಸ್ತಾವಿಕವಾಗಿ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಖ್ಯಾತ ಸಾಹಿತಿ ಹಾಗೂ ತುಳು ಜಾನಪದ ವಿದ್ವಾಂಸೆಯಾದ ಡಾ. ಇಂದಿರಾ ಹೆಗ್ಗಡೆ ವಹಿಸಿ ಮಾತನಾಡಿದರು. ತುಳು ಜನಪದ ವಿದ್ವಾಂಸ ಪ್ರೊ. ಪುರುಷೋತ್ತಮ ಬಲ್ಯಾಯ ದಿಕ್ಸೂಚಿ ಭಾಷಣ ನೆರವೇರಿಸಿದರು ಕಟೀಲು ಕ್ಷೇತ್ರದ ಅರ್ಚಕ ಶ್ರೀಹರಿನಾರಾಯಣದಾಸ ಆಸ್ರಣ್ಣ, ಮುಲ್ಕಿ ಮೂಡಬಿದ್ರೆ ಕ್ಷೇತ್ರದ ಶಾಸಕ ಉಮಾನಾಥ ಎ. ಕೋಟ್ಯಾನ್, ಕಸಾಪ ಮಾಜೀ ರಾಜ್ಯಾಧ್ಯಕ್ಷ ಧರ್ಮದರ್ಶಿ ಡಾ ಹರಿಕೃಷ್ಣ ಪುನರೂರು,ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಮಾಜೀ ಅಧ್ಯಕ್ಷೆ ಜಾನಕಿ ಬ್ರಹ್ಮಾವರ, ಮಾಜೀ ಶಾಸಕಿ ಶಕುಂತಲಾ ಶೆಟ್ಟಿ, ಮುಲ್ಕಿ ಬಂಟರ ಸಂಘದ ಅಧ್ಯಕ್ಷ ಅಶೋಕ್ ಕುಮಾರ್ ಶೆಟ್ಟಿ, ಬಪ್ಪನಾಡು ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ಶ್ವೇತ ಪಳ್ಳಿ ಹಾಗೂ ಕಾರ್ನಾಡ್ ಸರಕಾರಿ ಜೂನಿಯರ್ ಕಾಲೇಜು ಪ್ರಾಂಶುಪಾಲ ಡಾ. ವಾಸುದೇವ ಬೆಳ್ಳೆ, ತುಳುವ ಮಹಾಸಭೆ ಇಂಟರ್ನ್ಯಾಷನಲ್ ನ ನಿರ್ದೇಶಕ ರಾಜೇಶ್ ಆಳ್ವ ಬದಿಯಡ್ಕ, ತುಳುವ ಮಹಾಸಭೆ ಪ್ರಧಾನ ಸಂಚಾಲಕ ಅರವಿಂದ ಬೆಳ್ಚಡ, ಸಮಿತಿಯ ಸರೋಜಿನಿ ಸುವರ್ಣ, ಗೀತಾ ಗಣೇಶ್ ಬಂಗೇರ, ಲತಾ ಶೇಖರ್ ಪೂಜಾರಿ, ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪ್ರಧಾನ ಸಂಚಾಲಕ ಸುನಿಲ್ ಆಳ್ವ ಸ್ವಾಗತಿಸಿದರು, ನವೀನ್ ಶೆಟ್ಟಿ ಎಡ್ಮೆ ಮಾರ್ ನಿರೂಪಿಸಿದರು.'ಅಪ್ಪೆ ಬೇರ್'ದ ತುಳುನಾಡ್'' ರಾಷ್ಟ್ರೀಯ ತುಳು ವಿಚಾರ ಸಂಕಿರಣದಲ್ಲಿ ವಿವಿಧ ಗೋಷ್ಠಿಗಳು ಮೇಳೈಸಿದವು.

ಸುತ್ತ ಮುತ್ತ

ಮೇ 29: ಉಪನ್ಯಾಸಕರ ಹುದ್ದೆಗೆ ನೇಮಕಾತಿ

ಕಾಸರಗೋಡು: ತೃಕ್ಕರೀಪ್ಪುರ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಕಂಪ್ಯೂಟರ್ ಇಂಜಿನಿಯರಿಂಗ್ ವಿಭಾಗದಲ್ಲಿ ಉಪನ್ಯಾಸಕರ ನೇಮಕಾತಿಗಾಗಿ ಮೇ 29 ರಂದು ಬೆಳಗ್ಗೆ 10 ಗಂಟೆಗೆ ಸಂದರ್ಶನ ನಡೆಯಲಿದೆ. ಕಂಪ್ಯೂಟರ್ ಇಂಜಿನಿಯರಿಂಗ್‌ನಲ್ಲಿ ಬಿ.ಟೆಕ್ ಪ್ರಥಮ ದರ್ಜೆಯಲ್ಲಿ ಉತ್ತೀರ್ಣ ಹೊಂದಿರುವುದು ವಿದ್ಯಾರ್ಹತೆಯಾಗಿದೆ. ವಿವರಗಳಿಗೆ 0467 2211400 ಅಥವಾ 9496690222 ಸಂಪರ್ಕಿಸಬಹುದು.

ಮೇ 30ರಂದು ಸರಸ್ವತೀ ಮಹಾಪೂಜೆ

ಕಾಞಂಗಾಡು: ಪೆರಿಯ ಓಂ ಶ್ರೀ ಮಠದ ನೇತೃತ್ವದಲ್ಲಿ ಕಳೆದ ಮೂರು ವರ್ಷಗಳಿಂದ ಅಧ್ಯಯನ ವರ್ಷ ಆರಂಭದಲ್ಲಿ ನಡೆಸಿಕೊಂಡು ಬರುತ್ತಿದ್ದ ಸರಸ್ವತಿ ಮಹಾಪೂಜೆ ಮೇ 30ರಂದು ಬೆಳಿಗ್ಗೆ 10 ಗಂಟೆಯಿಂದ ಪೆರಿಯ ಶ್ರೀ ಶೈಲಂ ದೇವಿ ಕ್ಷೇತ್ರದಲ್ಲಿ ಜರಗಲಿದೆ. ಪೂಜೆಗೆ ಆಗಮಿಸುವ ಪ್ರತಿಯೊಬ್ಬ ಮಕ್ಕಳ ಹೆಸರು, ನಕ್ಷತ್ರ ತಿಳಿಸಬೇಕು. ಪ್ರತ್ಯೇಕ ಸಂಕಲ್ಪ ಜಪ ಇರುವುದು. ಮಕ್ಕಳ ಪೆನ್ನು, ಪುಸ್ತಕಗಳ ಪೂಜಿಸಿ ನೀಡಲಾಗುವುದು. ಅಲ್ಲದೆ ಅಂದು ವಿದ್ಯಾರಂಭವೂ ನಡೆಯುವುದು.

ಮೇ 30: ಅಧ್ಯಾಪಕ ಹುದ್ದೆಗೆ ಸಂದರ್ಶನ

ಮುಳ್ಳೇರಿಯ: ಆಡೂರು ಸಮೀಪದ ಎಡಪರಂಬ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಅರೇಬಿಕ್ ಪೂರ್ಣಾವಧಿ ಶಿಕ್ಷಕ ಹುದ್ದೆಗೆ ದಿನವೇತನ ಆಧಾರದಲ್ಲಿ ನೇಮಕಾತಿಗೆ ಮೇ 30 ರಂದು ಬೆಳಿಗ್ಗೆ 10 ಗಂಟೆಗೆ ಶಾಲಾ ಕಾರ್ಯಾಲಯದಲ್ಲಿ ಸಂದರ್ಶನ ನಡೆಯಲಿದೆ. ಅರ್ಹ ಅಭ್ಯರ್ಥಿಗಳು ಸಂದರ್ಶನದಲ್ಲಿ ಅಸಲಿ ಪ್ರಮಾಣಪತ್ರಗಳೊಂದಿಗೆ ಹಾಜರಾಗಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಗದು ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

ಕಾಸರಗೋಡು: ಕೇರಳ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳ ಸದಸ್ಯರ ಮಕ್ಕಳಲ್ಲಿ 10ನೇ ತರಗತಿಯಲ್ಲಿ ಎಲ್ಲಾ ವಿಷಯಗಳಲ್ಲಿ ಎ ಪ್ಲಸ್ ಗ್ರೇಡ್ ಪಡೆದ ವಿದ್ಯಾರ್ಥಿಗಳ ಪೋಷಕರಿಂದ ನಗದು ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ. ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ ಜೂನ್ 15 ಆಗಿದ್ದು ಮಾಹಿತಿಗೆ 0497 2970272 ಕರೆ ಮಾಡಬಹುದು.

ಆರ್ಥಿಕ ಸಹಾಯಕ್ಕಾಗಿ ಅರ್ಜಿ ಆಹ್ವಾನ

ಕಾಸರಗೋಡು: ಕೇರಳ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳ ಸದಸ್ಯರ ಮಕ್ಕಳಿಗೆ ಎಲ್‌ಕೆಜಿ ಮತ್ತು 1ನೇ ತರಗತಿಗಳಿಗೆ ಹೊಸದಾಗಿ ಪ್ರವೇಶ ಪಡೆಯಲು ಮತ್ತು ಅಧ್ಯಯನ ಸಾಮಗ್ರಿಗಳನ್ನು ಖರೀದಿಸಲು ಆರ್ಥಿಕ ಸಹಾಯಕ್ಕಾಗಿ ಅರ್ಜಿಗಳ ಆಹ್ವಾನಿಸಿದೆ. ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ ಜೂನ್ 5 ಆಗಿದ್ದು, ಹೆಚ್ಚಿನ ವಿವರಗಳಿಗೆ 0497 2970272 ಕರೆ ಮಾಡಬಹುದು.

ಶಿಕ್ಷಣ ಪ್ರಶಸ್ತಿಗೆ ಅರ್ಜಿ ಆಹ್ವಾನ

ಕಾಸರಗೋಡು: ಮತ್ಸ್ಯಫೆಡ್‌ಗೆ ಸಂಯೋಜಿತವಾಗಿರುವ ಮೀನುಗಾರರ ಅಭಿವೃದ್ಧಿ ಮತ್ತು ಕಲ್ಯಾಣ ಸಹಕಾರಿ ಸಂಘಗಳ ಸದಸ್ಯರಾಗಿರುವ ಮತ್ತು ಜಿಲ್ಲೆಯಲ್ಲಿ ಎಸ್ಸೆಸ್ಸೆಲ್ಸಿ, ಪ್ಲಸ್ ಟು, ಸಿಬಿಎಸ್‌ಇ ಮತ್ತು ವಿಎಚ್‌ಎಸ್‌ಇ ಪರೀಕ್ಷೆಗಳಲ್ಲಿ ಎಲ್ಲಾ ವಿಷಯ ಗಳಲ್ಲಿ ಎ ಪ್ಲಸ್ ಮತ್ತು ಎ ವನ್ ಪಡೆದ ಮೀನುಗಾರರ ಮಕ್ಕಳಿಗೆ ಶೈಕ್ಷಣಿಕ ಪ್ರಶಸ್ತಿಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳ ಪೋಷಕರು ತಾವು ಸದಸ್ಯರಾಗಿರುವ ಪ್ರಾಥಮಿಕ ಸಹಕಾರಿ ಸಂಘಗಳ ಮೂಲಕ ಸಿದ್ಧಪಡಿಸಿದ ಅರ್ಜಿಯನ್ನು ಪ್ರಮಾಣಪತ್ರದ ಪ್ರತಿಗಳು, ಸದಸ್ಯತ್ವವನ್ನು ಸಾಬೀತುಪಡಿಸುವ ಪ್ರಮಾಣಪತ್ರ ಮತ್ತು ಮೀನುಗಾರರ ಕಲ್ಯಾಣ ನಿಧಿ ಮಂಡಳಿಯ ಪಾಸ್ ಪುಸ್ತಕದ ಪ್ರತಿಯೊಂದಿಗೆ ಮೇ 30ರೊಳಗೆ ಜಿಲ್ಲಾ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ 9526041127 ಸಂಪರ್ಕಿಸಬಹುದು.

ಸಂದರ್ಶನ ಮುಂದೂಡಿಕೆ

ಕಾಸರಗೋಡು: ಮಧೂರು ಸಮೀಪದ ಪಟ್ಲ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯ ಹೈಯರ್ ಸೆಕೆಂಡರಿ ವಿಭಾಗದಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿಗೊಳಿಸಲು ಮೇ 28ರಂದು ನಡೆಸಲು ನಿರ್ಧರಿಸಿದ್ದ ಸಂದರ್ಶನವನ್ನು ಮೇ 30ರಂದು ಬೆಳಗ್ಗೆ 10ಗಂಟೆಗೆ ಮುಂದೂಡಲಾಗಿದೆ ಎಂದು ಶಾಲಾ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್ಸೆಸೆಲ್ಸಿ ಪರೀಕ್ಷೆಯಲ್ಲಿ ಕೊಡ್ಲಮೊಗರು ಶಾಲೆ ಶೇಕಡಾ 100 ಸಾಧನೆ



ಮಂಜೇಶ್ವರ: 2025–26ನೇ ಶೈಕ್ಷಣಿಕ ವರ್ಷದ ಕೇರಳ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕೊಡ್ಲಮೊಗರು ಶ್ರೀ ವಾಣಿ ವಿಜಯ ಹೈಸ್ಕೂಲು ಶೇ.100 ಫಲಿತಾಂಶ ದಾಖಲಿಸಿದೆ. ಒಟ್ಟು 194 ಮಂದಿ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು ಎಲ್ಲರೂ ಉತ್ತೀರ್ಣರಾಗಿದ್ದಾರೆ. ಶಾಲೆಯ ವಿದ್ಯಾರ್ಥಿಗಳಾದ ಸೃಜನ್ ಎಂ.ಬಿ. ಹಾಗೂ ಹಿತಾಶ್ರೀ ಎಸ್.ನಾಯಕ್ ಎಲ್ಲಾ ವಿಷಯಗಳಲ್ಲಿ 'ಎ' ಪ್ಲಸ್ ಗ್ರೇಡ್ ಪಡೆದಿದ್ದಾರೆ. ನಿಶ್ಮಿತಾ ಒಂಬತ್ತು ವಿಷಯಗಳಲ್ಲಿ ಮತ್ತು ಲಕ್ಷ್ಯ ಎಂಟು ವಿಷಯ ಗಳಲ್ಲಿ 'ಎ' ಪ್ಲಸ್ ಗಳಿಸಿದ್ದಾರೆ.

ಕಾಸರಗೋಡು ಜಿಲ್ಲೆಯ 42ನೇ ವಾರ್ಷಿಕೋತ್ಸವ ಪ್ರಯುಕ್ತ 'ಬೀಚ್ ರನ್ 2026' ಕಾರ್ಯಕ್ರಮ

ಓಟದಲ್ಲಿ ಕ್ರೀಡಾಳುಗಳಿಗೆ ಸಾಥ್ ನೀಡಿದ ಜಿಲ್ಲಾಧಿಕಾರಿ!



ಕಾಸರಗೋಡು: ಜಿಲ್ಲೆಯ 42ನೇ ವಾರ್ಷಿಕೋತ್ಸವದ ಅಂಗವಾಗಿನೆಲ್ಲಿಕುಂಜೆಬೀಚ್‌ನನೈಸರ್ಗಿಕಸೌಂದರ್ಯ ಮತ್ತು ಪ್ರವಾಸೋದ್ಯಮ ಸಾಮರ್ಥ್ಯ ಜಗತ್ತಿಗೆ ತೋರ್ಪಡಿಸುವ ಉದ್ದೇಶದಿಂದ ಜಿಲ್ಲಾಡಳಿತ, ಜಿಲ್ಲಾ ಪ್ರವಾಸೋದ್ಯಮ ಪ್ರಚಾರ ಮಂಡಳಿ (ಡಿಟಿಪಿಸಿ) ಮತ್ತು ಕಾಸರಗೋಡು ನಗರಸಭೆ ಜಂಟಿಯಾಗಿ ಭಾನುವಾರ ಆಯೋಜಿಸಿದ್ದ 'ಕಾಸರಗೋಡು ಬೀಚ್ ರನ್ –2026' ಕಾರ್ಯಕ್ರಮ ಸಡಗರದಿಂದ ನಡೆಯಿತು.

ಬೀಚ್ ಓಟವನ್ನು ವೀಕ್ಷಿಸಲು ಮತ್ತು ಭಾಗವಹಿಸಲು ಅಪಾರ ಸಂಖ್ಯೆಯಲ್ಲಿ ಜನರು ಪಾಲ್ಗೊಂಡಿದ್ದರು.

400 ಮಂದಿ ಕ್ರೀಡಾಪಟುಗಳ ಭಾಗಿ

ತಂಪಾದ ಮಳೆ, ಸಮುದ್ರದ ಗಾಳಿ ಮತ್ತು ಬೆಳಗಿನ ತಾಜಾತನದ ಸಂಯೋಜನೆಯಾಗಿದ್ದ ಓಟದಲ್ಲಿ ಸುಮಾರು 400 ಮಂದಿ ಕ್ರೀಡಾ ಉತ್ಸಾಹಿಗಳು ಭಾಗವಹಿಸಿದ್ದರು. ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಸಂಪೂರ್ಣ ಓಟದಲ್ಲಿ ಪಾಲ್ಗೊಂಡಿದ್ದರೂ ಅಲ್ಲದೆ ಅವರು ಈ ಹಿಂದೆ ಜಿಲ್ಲಾಧಿಕಾರಿಯಾಗಿದ್ದ ತ್ರಿಶೂರು ಜಿಲ್ಲೆಯಿಂದಲೂ ಕ್ರೀಡಾಪಟುಗಳು ಬಂದಿರುವುದು ಕಾರ್ಯಕ್ರಮಕ್ಕೆ ಹೆಚ್ಚಿನ ಮೆರುಗು ನೀಡಿತು.

ಬೆಳಿಗ್ಗೆ 6.50ಕ್ಕೆ ನೆಲ್ಲಿಕುಂಜೆ ಲೈಟ್ ಹೌಸ್‌ನಿಂದ ಪ್ರಾರಂಭವಾದ ಓಟವು ನೆಲ್ಲಿಕುಂಜೆ ಬೀಚ್, ಕಸಬಾ ಬೀಚ್ ರಸ್ತೆ, ಪುಲಿಮುಟ್ಟು ಮೂಲಕ ಕರಾವಳಿ ಭಾಗದಲ್ಲಿ ಏಳು ಕಿಲೋ ಮೀಟರ್ ಕ್ರಮಿಸಿ ಮತ್ತೆ ಲೈಟ್ ಹೌಸ್‌ನಲ್ಲಿ ಕೊನೆಗೊಂಡಿತು.

ಎಲ್ಲರಿಗೂ ಪದಕ ಪ್ರದಾನ

ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಓಟವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಎಲ್ಲರಿಗೂ ಪದಕ ಪ್ರದಾನ ಮಾಡಿದರು. ವಿ.ವಿ.ಚಂದ್ರನ್ 33 ನಿಮಿಷ ಮತ್ತು 32 ಸೆಕೆಂಡುಗಳಲ್ಲಿ ಓಟ ಮುಗಿಸಿ ಪ್ರಥಮ ಸ್ಥಾನ ಪಡೆದರು. ಪಿ.ವಿ.ಬಿಜು ಎರಡನೇ ಸ್ಥಾನ ಮತ್ತು ಅಬ್ದುಲ್ ರೆಹಮಾನ್ ಶಹಾದ್ ಮೂರನೇ ಸ್ಥಾನ ಗಳಿಸಿದರು.

ಕಾಸರಗೋಡು ಬೀಚ್ ರನ್

ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್ ಹಾಜಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾಸರಗೋಡಿನ ಜನರು ಇಂತಹ ಜನಪ್ರಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವುದು ಸಂತೋಷ ತಂದಿದೆ ಮತ್ತು ಮುಂಬರುವ ವರ್ಷಗಳಲ್ಲಿ ಕಾಸರಗೋಡು ಬೀಚ್ ರನ್ ನಿಯಮಿತ ಕಾರ್ಯಕ್ರಮವಾಗಿ ಮುಂದುವರಿಯಲಿದೆ ಎಂದರು.

> **ಸಂತಸ ತಂದಿದೆ**
>
> ಕಾಸರಗೋಡಿನ ಪ್ರವಾಸೋದ್ಯಮ ವಲಯವನ್ನು ಮತ್ತಷ್ಟು ಸಕ್ರಿಯ ಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಬೀಚ್ ಓಟಕ್ಕೆ ನಿರೀಕ್ಷೆಗಿಂತ ಹೆಚ್ಚಿನ ಜನರು ಸೇರಿರು ವುದು ಸಂತಸ ತಂದಿದೆ. ಕ್ರೀಡೆ ಮತ್ತು ಆರೋಗ್ಯ ರಕ್ಷಣೆ ಎರಡನ್ನೂ ಉತ್ತೇಜಿಸುವ ಇಂತಹ ಕಾರ್ಯಕ್ರಮಗಳನ್ನು ಭವಿಷ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ಆಯೋಜಿಸಲಾಗುವುದು.
>
> ● ಕಲ್ಲಟ್ರ ಮಾಹಿನ್ ಹಾಜಿ

ಸಮರ್ಪಕ ಸ್ವಚ್ಛತಾ ಚಟುವಟಿಕೆಗೆ ಕ್ರಮ

ಮುಂದಿನ ದಿನಗಳಲ್ಲಿ ನೆಲ್ಲಿಕುಂಜೆ ಬೀಚ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಮರ್ಪಕ ಸ್ವಚ್ಛತಾ ಚಟುವಟಿಕೆ ಕೈಗೊಳ್ಳಲಾಗುವುದು ಎಂದು ಕಾಸರಗೋಡು ನಗರಸಭಾ ಕಾರ್ಯದರ್ಶಿ ಘೋಷಿಸಿದರು. ಕಡಲತೀರ ಪ್ರದೇಶದ ಸ್ವಚ್ಛತೆ ಮತ್ತು ಸೌಂದರ್ಯ ಕಾಪಾಡಿಕೊಳ್ಳಲು ಸಾರ್ವಜನಿಕರ ಸಹಕಾರ ಅತೀ ಅಗತ್ಯ ಎಂದು ಅವರು ಹೇಳಿದರು.

ನಗರಸಭೆಯ ಉಪಾಧ್ಯಕ್ಷ ಕೆ.ಎಂ.ಹನೀಫ್, ಸ್ಥಾಯೀ ಸಮಿತಿ ಅಧ್ಯಕ್ಷರಾದ ಜಾಫರ್ ಕಮಲ್, ಹಮೀದ್ ಬೆದಿರ, ಸಮೀನಾ ಮುಜೀಬ್, ಮೆಹರುನ್ನೀಸಾ, ಡಿಟಿಪಿಸಿ ಕಾರ್ಯದರ್ಶಿ ಜೆ.ಕೆ.ಜಿತೇಶ್ ಕುಮಾರ್, ವಿವಿಧ ಡಿಟಿಪಿಸಿ ಪ್ರತಿನಿಧಿಗಳು, ವಾರ್ಡ್ ಕೌನ್ಸಿಲರ್ ಗಳು ಪಾಲ್ಗೊಂಡಿದ್ದರು. ವಾರ್ಡ್ ಕೌನ್ಸಿಲರ್ ಕೆ.ಎನ್. ರಾಮಕೃಷ್ಣ ಹೊಳ್ಳ ಓಟದಲ್ಲಿ ಭಾಗವಹಿಸಿದ್ದರು.

ಓಟದ ಮಾರ್ಗದುದ್ದಕ್ಕೂ ಉಪಹಾರ ಮತ್ತು ಕುಡಿಯುವ ನೀರು ವಿತರಣಾ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. ಆರೋಗ್ಯ ಇಲಾಖೆ, ಪೊಲೀಸ್, ಮೀನುಗಾರಿಕೆ, ಬಂದರು ಇಂಜಿನಿಯರಿಂಗ್, ಕುಟುಂಬಶ್ರೀ– ಶುಚಿತ್ವ ಮಿಷನ್ ಸೇರಿದಂತೆ ವಿವಿಧ ಸರಕಾರಿ ಇಲಾಖೆಗಳ ಸಂಘಟಿತ ಪ್ರಯತ್ನಗಳಿಂದ ಈ ಕಾರ್ಯಕ್ರಮ ಯಶಸ್ಸಿಗೆ ಕಾರಣವಾಯಿತು.

ಬಿಜೆಪಿ ಒಬಿಸಿ ಮೋರ್ಚಾ: ಎಸ್ಸೆಸೆಲ್ಸಿ ಉನ್ನತ ಗ್ರೇಡ್ ಪಡೆದ ವಿದ್ಯಾರ್ಥಿಗಳಿಗೆ ಪುರಸ್ಕಾರ



ಕಾಸರಗೋಡು: ಕೇರಳದ ಎಸ್ಸೆಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ ಕೀರ್ತಿ ಗಳಿಸಿದ ವಿದ್ಯಾರ್ಥಿಗಳನ್ನು ಬಿಜೆಪಿ ಒಬಿಸಿ ಮೋರ್ಚಾ ವತಿಯಿಂದ ಪುರಸ್ಕರಿಸಿ ಅಭಿನಂದನೆ ಸಲ್ಲಿಸಲಾಯಿತು.

ಕುಂಬಳೆ ನಾರಾಯಣಮಂಗಲ ನಿವಾಸಿಗಳಾದ ಅನಘಲಕ್ಷ್ಮಿ ಮತ್ತು ವರ್ಷಾ ಹಾಗೂ ನಾಯ್ಕಾಪು ನಿವಾಸಿ ಕೃತಿಕಾ ಎಂಬ ವಿದ್ಯಾರ್ಥಿನಿಯ ಮನೆಗಳಿಗೆ ತೆರಳಿ ಶಾಲು ಹೊದೆಸಿ ಹಣ್ಣು ಹಂಪಲು ನೀಡಿ ಗೌರವಿಸಲಾಯಿತು.

ಬಿಜೆಪಿ ಒಬಿಸಿ ಮೋರ್ಚಾ ಕಾಸರಗೋಡು ಜಿಲ್ಲಾ ಉಪಾಧ್ಯಕ್ಷ ಮುರಳಿ ಕುಮಾರ್ ಮಧೂರು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಯಾನಂದ ಮುಜುಂಗಾವು, ಜಿಲ್ಲಾ ಕಾರ್ಯದರ್ಶಿ ದಿನೇಶ್ ಚೆರುಗೋಳಿ, ಒಬಿಸಿ ಮೋರ್ಚಾ ಕುಂಬಳೆ ಮಂಡಲ ಅಧ್ಯಕ್ಷ ಮಹೇಶ ಪುಣೆಯೂರು, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಮುರಳೀಧರ ಯಾದವ್ ನಾಯ್ಕಾಪು ಮುಂತಾದವರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

> **ಅಭಿನಂದನೆ**
>
> ಬಿಜೆಪಿ ಒಬಿಸಿ ಮೋರ್ಚಾದಿಂದ ಕೇರಳದ ಎಸ್ಸೆಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಾದ ಅನಘಲಕ್ಷ್ಮಿ , ವರ್ಷಾ ಹಾಗೂ ಕೃತಿಕಾ ಅವರು ಮನೆಗೆ ತೆರಳಿ ಅಭಿನಂದನೆ ಸನ್ಮಾನಿಸಲಾಯಿತು

ಬಡವರಿಗೆ ಉಪಹಾರ ನೀಡುವ ಯೋಜನೆ 'ಹಂಗರ್ ಫ್ರೀ ಕಾಸರಗೋಡು' ಉದ್ಘಾಟನೆ



ಕಾಸರಗೋಡು: ರೈಲ್ವೆ ನಿಲ್ದಾಣದ ಪರಿಸರದಲ್ಲಿ ಬಡವರಿಗೆ ಉಚಿತವಾಗಿ ಉಪಾಹಾರ ವಿತರಿಸುವ ಕಾಸರಗೋಡು ಆಸ್ಟರ್ ಮಿಮ್ಸ್ ಸಂಸ್ಥೆಯ 'ಹಂಗರ್ ಕಾಸರಗೋಡು' ಯೋಜನೆಯ ಅಧಿಕೃತ ಉದ್ಘಾಟನೆಯನ್ನು ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್ ನೇರವೇರಿಸಿದರು. ಬಳಿಕ ಶಾಸಕರು ಹಾಗೂ ನಗರಸಭಾ ಅಧ್ಯಕ್ಷರು ಜೊತೆಯಾಗಿ ಆ ಭಾಗದ ಬಡ ಹಾಗೂ ನಿರ್ಗತಿಕ ಜನರಿಗೆ ಉಪಾಹಾರ ವಿತರಿಸುವ ಮೂಲಕ ಯೋಜನೆಗೆ ಚಾಲನೆ ನೀಡಿದರು.

ಕಾಸರಗೋಡು ನಗರಸಭಾ ಅಧ್ಯಕ್ಷೆ ಶಾಹಿನಾ ಸಲೀಂ, ಆಸ್ಟರ್ ಮಿಮ್ಸ್ ಸಿಒಒ ಸುಧೀರ್ ಬಾಸುರಿ, ಆಸ್ಟರ್ ವಾಲಂಟಿಯರ್ಸ್ ಮಲಬಾರ್ ಹೆಡ್ ಮುಹಮ್ಮದ್ ಆಸೀಮ್ ಕೆ.ವಿ. ಮೊದಲಾದವರು ಭಾಗವಹಿಸಿದ್ದರು.

ಕಾಸರಗೋಡು ನಗರಸಭೆಯ ವಾರ್ಡ್ ಗಳನ್ನು ಪ್ರತಿನಿಧಿಸುವ ಕೌನ್ಸಿಲರ್‌ಗಳು ಈ ಕಾರುಣ್ಯ ಕಾರ್ಯದಲ್ಲಿ ಭಾಗವಹಿಸಿದ್ದರು.

ಉಪವಾಸ ಇರಬಾರದೆಂಬ ಉದ್ದೇಶ

ಸಮಾಜದ ತಳಮಟ್ಟದ ಜನರಿಗೆ ಒಂದು ಹೊತ್ತು ಉಪವಾಸ ಇರಬಾರದು ಎಂಬ ಉದ್ದೇಶದಿಂದ ಈ ಆರೋಗ್ಯ ರಕ್ಷಣೆಯೊಂದಿಗೆ ಸಾಮಾಜಿಕ ಬದ್ಧತೆಯಿರುವ ಇಂತಹ ಯೋಜನೆ ರೂಪಿಸಲಾಗಿದೆ ಎಂದು ಆಸ್ಪತ್ರೆ ಸಿಒಒ ಸುಧೀರ್ ಬಾಸುರಿ ಹೇಳಿದರು.

ಆಸ್ಟರ್ ವಾಲಂಟಿಯರ್ಸ್ ಮತ್ತು ಆಸ್ಟರ್ ಚಾರಿಟಬಲ್ ಟ್ರಸ್ಟ್ ಜಂಟಿಯಾಗಿ ಸಿದ್ದಪಡಿಸಿದ ಈ ಯೋಜನೆಯನ್ನು 'ಲೈವ್ ಟು ಸ್ಮೈಲ್ ಫೌಂಡೇಶನ್' ಸಹಯೋಗದೊಂದಿಗೆ ಸಾರ್ವಜನಿಕರಿಗೆ ತಲುಪಿಸಲಾಗುತ್ತಿದೆ.

> **ಶ್ಲಾಘನೀಯ**
>
> ಬಡವರ ಆರೋಗ್ಯ - ಕಲ್ಯಾಣಕ್ಕೆ ಆದ್ಯತೆ ನೀಡಿ ಇಂತಹ ಒಂದು ಕಾರುಣ್ಯ ಸೇವೆ ಯೊಂದಿಗೆ ಮುಂದೆ ಬಂದಿರುವುದು ಮಾದರಿ ಶ್ಲಾಘನೀಯ. ಸಾರ್ವಜನಿಕರಿಗೆ ಪ್ರಯೋಜನಕಾರಿಯಾಗುವ ಈ ಯೋಜನೆ ಯೊಂದಿಗೆ ಸಹಕರಿಸಲು ಸಾಧ್ಯವಾಗಿರುವುದು ಹೆಮ್ಮೆಯ ವಿಷಯ .
>
> ● ಕಲ್ಲಟ್ಟ ಮಾಹಿನ್, ಶಾಸಕ

ವಿಶಿಷ್ಟ ಉದ್ಯಮಕ್ಕೆ ಮುನ್ನುಡಿ ಬರೆದಿದೆ

ಕೇವಲ ಒಂದು ಆರೋಗ್ಯ ಸಂಸ್ಥೆಯಷ್ಟೇ ಅಲ್ಲದೆ, ಸಾಮಾನ್ಯ ಜನರ ಹಸಿವನ್ನು ನೀಗಿಸುವ ಸಾಮಾಜಿಕ ಬದ್ಧತೆಯನ್ನು ಮುಂದಿಟ್ಟು ಕೊಂಡು ಆಸ್ಪತ್ರೆ ಆಡಳಿತ ಮಂಡಳಿ ಈ ವಿಶಿಷ್ಟ ಉದ್ಯಮಕ್ಕೆ ಮುನ್ನುಡಿ ಬರೆದಿದೆ. ರೈಲ್ವೆ ನಿಲ್ದಾಣದ ಪರಿಸರದಲ್ಲಿ ಆಯೋಜಿಸಲಾಗಿದ್ದ ವಿಶೇಷ ಕಾರ್ಯಕ್ರಮದಲ್ಲಿ ಪ್ರಯಾಣಿಕರು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.

ಕನ್ನೆಪ್ಪಾಡಿ ಅಂಗನವಾಡಿಯಲ್ಲಿ ಪಾಲಕರಿಗೆ ತಿಳುವಳಿಕಾ ತರಗತಿ



ಬದಿಯಡ್ಕ: ಬದಿಯಡ್ಕ ಗ್ರಾಮ ಪಂಚಾಯತ್ ನೀರ್ಚಾಲು 3ನೇ ವಾರ್ಡ್ ಕನ್ನೆಪ್ಪಾಡಿ ಅಂಗನವಾಡಿ ಯಲ್ಲಿ ಪಾಲಕರಿಗೆ ತಿಳುವಳಿಕಾ ತರಗತಿ ನಡೆಸಲಾಯಿತು.

ವಾರ್ಡ್ ಸದಸ್ಯ ಶ್ಯಾಮಪ್ರಸಾದ ಸರಳಿ ಉದ್ಘಾಟಿಸಿದರು. ಪೇರೆಂಟಿಗ್ ಅವೇರ್‌ನೆಸ್ ಕೌನ್ಸಿಲರ್ ಪ್ರೀತಿ ಎಡನೀರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಪಾಲಕರೊಂದಿಗೆ ಸಂವಾದ ನಡೆಸಿದರು.

ಶಾಲೆಗೆ ಹಾಗೂ ವಿವಿಧೆಡೆಗಳಿಗೆ ಮಕ್ಕಳನ್ನು ಕಳುಹಿಸಿಕೊಡುವಾಗ ನಾವು ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳನ್ನು ವಿವರಿಸಿದರು.

ಮೊಬೈಲ್ ಬಳಕೆಯಿಂದ ಮಕ್ಕಳು ದೂರವಿರಬೇಕಾದರೆ ಹೆತ್ತವರೂ ಕೆಲವೊಂದು ತ್ಯಾಗಕ್ಕೆ ತಯಾರಾಗಬೇಕು. ಇಂದಿನ ಕಾಲದಲ್ಲಿ ಹಿರಿಯರು ಮನೆಯಲ್ಲಿ ಮೊಬೈಲ್ ವೀಕ್ಷಿಸುತ್ತಾ ಕಾಲಕಳೆಯುತ್ತಿದ್ದು, ಮಕ್ಕಳನ್ನು ಆ ಚಟದಿಂದ ಹಿಂದೆ ಸರಿಯುವಂತೆ ಮಾಡಲು ವಿಫಲರಾಗುತ್ತಿದ್ದಾರೆ. ಈ ನಿಟ್ಟಿನಲ್ಲಿಹೆತ್ತವರೇಅತಿಜಾಗರೂಕರಾಗಿ ಮುಂದುವರಿಯಬೇಕು ಎಂದರು.

ಅಂಗನವಾಡಿ ಅಭಿವೃದ್ಧಿ ಸಮಿತಿ ಸದಸ್ಯ ದೇವದಾಸ್, ಶಿಕ್ಷಕಿ ಹೈಮಾವತಿ, ಸಹಾಯಕಿ ಜಯಲಕ್ಷ್ಮೀ ವಂದಿಸಿದರು.

ಜೂ.12ರಂದು ಶಿಕ್ಷಕರ ಹುದ್ದೆಗೆ ಸಂದರ್ಶನ

ಮಂಜೇಶ್ವರ: ಕೊಡ್ಲಮೊಗರು ಶ್ರೀ ವಾಣಿ ವಿಜಯ ಹೈಯರ್ ಸೆಕೆಂಡರಿ ಶಾಲೆಯ ಹೈಯರ್ ಸೆಕೆಂಡರಿ ವಿಭಾಗದಲ್ಲಿ ಎಚ್‌ಎಸ್‌ಎಸ್‌ಟಿ ಇಂಗ್ಲಿಷ್ ಸೀನಿಯರ್ ಶಿಕ್ಷಕರ ಹುದ್ದೆ ಖಾಲಿಯಿದೆ. ಅರ್ಹ ಅಭ್ಯರ್ಥಿಗಳು ಜೂನ್ 12 ರಂದು ಬೆಳಗ್ಗೆ 10.30ಕ್ಕೆ ಮೂಲ ಪ್ರಮಾಣಪತ್ರಗಳೊಂದಿಗೆ ಶಾಲಾ ಕಚೇರಿಯಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು. ವಿದ್ಯಾರ್ಹತೆ ಪಿಜಿ, ಬಿ.ಎಡ್, ಸೆಟ್ ಆಗಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿಗೆ 8893367293 ಕರೆ ಮಾಡಬಹುದು.

ಕೇರಳ ರಾಜ್ಯ ಮಿನಿ ಹ್ಯಾಂಡ್‌ಬಾಲ್: ಜಿಲ್ಲೆಗೆ ದ್ವಿತೀಯ, ತೃತೀಯ ಸ್ಥಾನಗಳು



ಕಾಸರಗೋಡು: ಹ್ಯಾಂಡ್ ಬಾಲ್ ಸಂಸ್ಥೆಯ ಆಶ್ರಯದಲ್ಲಿ ಪಾಡಿಯೊಟ್ಟುಚಾಲ್‌ನಲ್ಲಿ ನಡೆದ 22ನೇ ಕೇರಳ ರಾಜ್ಯ ಮಿನಿ ಹ್ಯಾಂಡ್ ಬಾಲ್ ಚಾಂಪಿಯನ್ ಶಿಪ್‌ನಲ್ಲಿ ಕಾಸರಗೋಡು ಜಿಲ್ಲೆಯು ದ್ವಿತೀಯ ಹಾಗೂ ತೃತೀಯ ಸ್ಥಾನಗಳನ್ನು ಗೆದ್ದುಕೊಂಡಿದೆ.

ಬಾಲಕರ ವಿಭಾಗದಲ್ಲಿ ದ್ವಿತೀಯ ಮತ್ತು ಬಾಲಕಿಯರ ತೃತೀಯ ಸ್ಥಾನಗಳು ಲಭಿಸಿದವು. ಬಾಲಕರ ತಂಡದ ಸದಸ್ಯರಾದ ಕೆ.ಶ್ರೀರಾಜ್, ಕೆ.ಶಿವಾನಂದ್, ಪಿ.ಶ್ರವಣಕೃಷ್ಣ ಟಿ.ಗೌತಮಕೃಷ್ಣ ಪಿ.ವಿ.ಆದಿನಾಥ್, ಮಹಮ್ಮದ್ ಶಬಾನಾಸ್, ವಿ.ಶಿವದತ್, ಪಿ.ಕಾಶಿನಾಥ್, ಜಸ್ವಿನ್ ಜೋಸ್, ಧ್ಯಾನ್ ಮನೋಜ್ (ಎಲ್ಲರೂ ಬನಂ ಸರಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳು), ಎಸ್. ಯಾದವ್, ಮುಹಮ್ಮದ್ ಸುಬಾನ್ ಮೊಗ್ರಾಲ್, ಮುಹಮ್ಮದ್ ಸುಬಾನ್ ಮೊಗ್ರಾಲ್ (ಕೇಂದ್ರೀಯ ವಿದ್ಯಾಲಯ ವಿದ್ಯಾರ್ಥಿಗಳು) ಮುಂತಾದವರು ಸ್ಪರ್ಧಾಕಣದಲ್ಲಿದ್ದರು.

ಅಲ್ಲದೆ ಎಂ.ಗೌರಿನಂದ, ಎಂ.ಅನುಷ್ಕಾ, ಎಂ.ಎ.ಅನನ್ಯ, ಕೆ.ಫಾತಿಮಾ, ಕೆ.ರತುನಾ, ಟಿ.ಎಂ.ಅನ್ವಿಕಾ ಪ್ರವೀಣ್, ಬಿ.ಅಕ್ಷರ, ಚಿಂತಾ, ಕೆ.ಪರ್ವನೇಂದು (ಎಲ್ಲರೂ ಬನಂ ಸರಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳು) ಸ್ಪರ್ಧಾತಂಡದಲ್ಲಿ ಭಾಗವಹಿಸಿದ್ದರು.

ವಿಜೇತರಿಗೆ ಅಭಿನಂದನೆ

ಟಿ.ಎಂ. ಪ್ರವೀಣ, ಎಸ್.ಸಂಜಯ್ (ತರಬೇತುದಾರರು), ಇರ್ಷಾದ್, ಸಕಿಯಾ ಮತ್ತು ಜರೀನಾ (ತಂಡದ ವ್ಯವಸ್ಥಾಪಕರು) ತಂಡವನ್ನು ಸಮರ್ಥವಾಗಿ ಮುನ್ನಡೆಸಿದರು. ವಿಜೇತ ತಂಡಗಳನ್ನು ಶಾಲಾ ರಕ್ಷಕ ಶಿಕ್ಷಕ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಅಭಿನಂದಿಸಿದ್ದಾರೆ.

ಅಪಾಯವನ್ನು ಆಹ್ವಾನಿಸುತ್ತಿದೆ ಮಂಜೇಶ್ವರ ಸಮುದ್ರ ತೀರದಲ್ಲಿರುವ ಒಣಗಿದ ಮರ!

ಮಂಜೇಶ್ವರ: ಮಂಜೇಶ್ವರ ಸಮುದ್ರ ತೀರದಲ್ಲಿರುವ ಓಷನ್ ವಾಟರ್ ಪಾರ್ಕ್‌ನ ಮುಂಭಾಗದಲ್ಲಿರುವ ಬೃಹತ್ ಮರವೊಂದು ಯಾವುದೇ ಕ್ಷಣದಲ್ಲಾದರೂ ಧರೆಗುರುಳುವ ಸ್ಥಿತಿಯಲ್ಲಿದ್ದು, ಸಾರ್ವಜನಿಕರಲ್ಲಿ ಆತಂಕ ಉಂಟಾಗಿದೆ.

ವಾಟರ್ ಪಾರ್ಕ್‌ನ ಎದುರಿನ ಸಣ್ಣ ಅಂಗಡಿ ಸಮೀಪವೇ ಈ ಮರವಿದ್ದು ಪ್ರತಿದಿನ ಸಂಜೆಯ ವೇಳೆ ಕಡಲ ತಂಗಾಳಿ ಸವಿಯಲು ಮತ್ತು ಸಮಯ ಕಳೆಯಲು ನೂರಾರು ಮಂದಿ ಇಲ್ಲಿಗೆ ಆಗಮಿಸುತ್ತಿದ್ದಾರೆ. ಜನನಿಬಿಡ ಪ್ರದೇಶವಾಗಿರುವುದರಿಂದ ಈ ಮರ ಯಾವುದೇ ಸಮಯದಲ್ಲಿ ಬೀಳಬಹುದು. ಇದರಿಂದ ದೊಡ್ಡ ದುರಂತಕ್ಕೆ ಕಾರಣವಾಗಬಹುದು. ಈ ಬಗ್ಗೆ ಆಡಳಿತಕ್ಕೆ ಗಮನಕ್ಕೆ ತಂದಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಮಾತ್ರ ಗಮನವೇ ಹರಿಸುತ್ತಿಲ್ಲ ಎಂದು ಸ್ಥಳೀಯರು ಆರೋಪಿಸಿದ್ದಾರೆ.



ಮರ ತೆರವುಗೊಳಿಸಿ

ಅನಾಹುತ ಸಂಭವಿಸುವ ಮುನ್ನವೇ ಪಂಚಾಯತ್ ಆಡಳಿತ ಎಚ್ಚೆತ್ತುಕೊಂಡು ಅಪಾಯಕಾರಿ ಮರವನ್ನು ತೆರವುಗೊಳಿಸುವ ಮೂಲಕ ಸಾರ್ವಜನಿಕರ ಸುರಕ್ಷತೆ ಖಾತರಿ ಪಡಿಸಬೇಕೆಂದು ಸ್ಥಳೀಯರು, ವ್ಯಾಪಾರಿಗಳು ಒತ್ತಾಯಿಸಿದ್ದಾರೆ.

ಇಂದು ಮುಳ್ಳೇರಿಯ ಪೇಟೆಯಲ್ಲಿ ಜಗನ್ನಾಥಾ ಹಾಸ್ಪಿಟಲ್ ಉದ್ಘಾಟನೆ

ಮುಳ್ಳೇರಿಯ: ಪೇಟೆಯ ಹೃದಯ ಭಾಗದಲ್ಲಿ ಈ ಹಿಂದೆ ಕಾರ್ಯಾಚರಿಸುತ್ತಿದ್ದ ಕೃಷ್ಣ ಕ್ಲಿನಿಕ್ ಮತ್ತು ಹೆರಿಗೆ ಆಸ್ಪತ್ರೆಯು ವೈ.ಯು.ಜೆ. ಹೆಲ್ತ್ ಕೇರ್ ಎಲ್.ಎಲ್.ಪಿ. ಇದರ ಅಂಗಸಂಸ್ಥೆ ಯಾಗಿ ಬದಲಾವಣೆಗೊಂಡು 'ಜಗನ್ನಾಥಾ ಹಾಸ್ಪಿಟಲ್' ಎಂಬ ಹೆಸರಿನೊಂದಿಗೆ ಜನರ ಸೇವೆಗೆ ಸಿದ್ಧವಾಗಿದೆ. ಮೇ 25ರಂದು ಬೆಳಿಗ್ಗೆ 10 ಗಂಟೆಗೆ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ದಿವ್ಯ ಉಪಸ್ಥಿತಿ ಮತ್ತು ಶುಭಾಶೀರ್ವಾದಗಳೊಂದಿಗೆ ಮಂಗಳೂರಿನ ತೇಜಸ್ವಿನಿ ಆಸ್ಪತ್ರೆಯ ಮುಖ್ಯಸ್ಥ ಖ್ಯಾತ ಎಲುಬು ತಜ್ಞ ಡಾ.ಎಂ.ಶಾಂತಾರಾಮ ಶೆಟ್ಟಿ ಉದ್ಘಾಟಿಸುವರು.



ಕಾರಡ್ಕ ಗ್ರಾ.ಪಂ. ಅಧ್ಯಕ್ಷೆ ಜನನಿ ಎಂ. ಅಧ್ಯಕ್ಷತೆ ವಹಿಸುವರು. ಕಾಸರಗೋಡು ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್ ಒ.ಪಿ.ವಿಭಾಗ ಉದ್ಘಾಟಿಸುವರು. ತುರ್ತು ಚಿಕಿತ್ಸಾ ವಿಭಾಗವನ್ನು ದ.ಕ. ಸಂಸದ ಕ್ಯಾ.ಬ್ರಿಜೇಶ್ ಚೌಟ, ಲೇಬರ್ ರೂಮ್‌ನ್ನು ಕಾಸರಗೋಡು ವಿಧಾನಸಭಾ ಕ್ಷೇತ್ರ ಶಾಸಕ ಕಲ್ಲಟ್ರ ಮಾಹಿನ್ ಹಾಜಿ, ಪ್ರಯೋಗಾಲಯವನ್ನು ಉದುಮ ವಿಧಾನಸಭಾ ಕ್ಷೇತ್ರ ಶಾಸಕ ಕೆ.ನೀಲಕಂಠನ್, ಆಡಳಿತ ಕಚೇರಿ ಯನ್ನು ಕ್ಯಾಂಪ್ಕೋ ಅಧ್ಯಕ್ಷ ಎಸ್. ಆರ್.ಸತೀಶ್ಚಂದ್ರ, ಎಕ್ಸರೇ ವಿಭಾಗವನ್ನು ಕಜಂಪಾಡಿ ಸುಬ್ರಹ್ಮಣ್ಯ ಭಟ್, ಹೈಡಿಪೆಂಡೆನ್ಸಿ ಘಟಕವನ್ನು ರವೀಶ ತಂತ್ರಿ ಕುಂಟಾರು ಉದ್ಘಾಟಿಸಲಿರುವರು.

ಕಾರಡ್ಕ ಬ್ಲಾಕ್ ಪಂ. ಅಧ್ಯಕ್ಷ ಸಿ.ಬಾಲನ್, ಕಾರಡ್ಕ ಗ್ರಾಮ ಪಂಚಾಯತ್ ಸದಸ್ಯೆ ವಸಂತಿ, ಕೆವಿವಿಇಎಸ್ ಮುಳ್ಳೇರಿಯ ಘಟಕ ಅಧ್ಯಕ್ಷ ಗಣೇಶ ವತ್ಸ ಅತಿಥಿಗಳಾಗಿ ಭಾಗವಹಿಸುವರು.

ನೂತನವಾಗಿ ನಿರ್ಮಿಸಲಾದ ಕಾಸರಗೋಡು ಜಿಲ್ಲಾ ಆಶ್ರಯ ಕೇಂದ್ರದ ಉದ್ಘಾಟನಾ ಸಮಾರಂಭ

ನಾವೆಲ್ಲರೂ ಸದಾ ಸಮಾಜದ ಸೇವೆಗಾಗಿ ಬದ್ಧರಾಗಿರಬೇಕು: ಎಡನೀರು ಶ್ರೀ

ಕಾಸರಗೋಡು: ಸೇವೆ ಎನ್ನುವುದು ನಮ್ಮ ಮೂಲಮಂತ್ರವಾಗಿದೆ. ಸನಾತನ ಹಿಂದು ಧರ್ಮವು ಸೇವೆಗೆ ಹೆಚ್ಚಿನ ಮಹತ್ವ ನೀಡುತ್ತಿದೆ. ನಾವು ಸದಾ ಸಮಾಜದ ಸೇವೆಗೆ ಬದ್ಧರಾಗಿರಬೇಕು. ಆರೆಸ್ಸೆಸ್, ಅದರ ಸಹ ಸಂಘಟನೆಗಳು ಹಲವಾರು ಅತ್ಯುತ್ತಮ ಸೇವಾ ಕಾರ್ಯ ಮಾಡುತ್ತಿವೆ. ಇದು ನಿಜಕ್ಕೂ ಶ್ಲಾಘನೀಯ ಎಂದು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಹೇಳಿದ್ದಾರೆ.

ದೇಶೀಯ ಸೇವಾ ಭಾರತಿ ಕಾಸರಗೋಡು ಇದರ ನೇತೃತ್ವದಲ್ಲಿ ಭಾನುವಾರ ಕಾಸರಗೋಡು ಅಶೋಕನಗರದ ಟ್ರಾಫಿಕ್ ಪೊಲೀಸ್ ಠಾಣೆ ಸಮೀಪ ನೂತನವಾಗಿ ನಿರ್ಮಿಸಲಾದ ಕಾಸರಗೋಡು ಜಿಲ್ಲಾ ಆಶ್ರಯ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಆಶೀರ್ವಚನ ನೀಡಿ ಅವರು ಮಾತನಾಡಿದರು.



ಸಮಾರಂಭವನ್ನು ಉದ್ಘಾಟಿಸಿದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಕಾರ್ಯಕಾರಿಣಿ ವಿಶೇಷ ಆಹ್ವಾನಿತ ಕಜಂಪಾಡಿ ಸುಬ್ರಹ್ಮಣ್ಯ ಭಟ್ ಮಾತನಾಡಿ, ಸ್ವಂತದ ಬಗ್ಗೆ ಯೋಚನೆ ಮಾಡದೆ ಕೇವಲ ಸೇವೆ ಮಾಡುವುದೇ ಸಮಾಜ ಸೇವೆಯಾಗಿದೆ ಎಂದರು.

ಮುಂಬರುವ ದಿನಗಳಲ್ಲಿ ಕಾಸರಗೋಡು ತಾಲೂಕಿನ ಎಲ್ಲಾ ಪಂಚಾಯತ್ ಕೇಂದ್ರಗಳಲ್ಲಿಯೂ ಆಶ್ರಯ ಕೇಂದ್ರವನ್ನು ಸ್ಥಾಪಿಸಬೇಕೆಂದು ಕಜಂಪಾಡಿ ಅವರು ಸಂಬಂಧಪಟ್ಟವರಿಗೆ ಸಲಹೆ ನೀಡಿದರು.

ಸೇವಾ ಭಾರತಿ ಜಿಲ್ಲಾಧ್ಯಕ್ಷ ಎಂ.ಟಿ.ದಿನೇಶ್ ಅಧ್ಯಕ್ಷತೆ ವಹಿಸಿದ್ದರು. ದಿ.ಕೃಷ್ಣಮೋಹನ್ ಅವರ ಪತ್ನಿ ಎಂ. ಜಯಶ್ರೀ ಕೀಲಿ ಕೈ ಹಸ್ತಾಂತರಿಸಿದರು. ಸೇವಾಭಾರತಿ ಕೇರಳ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ. ಶ್ರೀರಾಮ್ ಶಂಕರ್ ಆಶ್ರಯ ಕೇಂದ್ರದ ಧ್ಯೇಯದ ಕುರಿತು ಮಾತನಾಡಿದರು. ಬೋವಿಕ್ಕಾನ ಹೈಯರ್ ಸೆಕೆಂಡರಿ ಶಾಲೆಯ ನಿರ್ವಾಹಕ ನಿರ್ದೇಶಕ ಗಂಗಾಧರನ್ ನಾಯರ್ ಪಾಡಿ, ಯುಗಪುರುಷ ನರೇಂದ್ರ ಮೋದಿ ವಿದ್ಯಾಲಯದ ಅಧ್ಯಕ್ಷ ಡಾ. ಸುರೇಶ್ ಮಲ್ಯ, ಕಾಸರಗೋಡು ನಗರಸಭಾ ಸದಸ್ಯೆ ಕೆ.ಎಸ್.ಶ್ರುತಿ, ಆರೆಸ್ಸೆಸ್ ಉತ್ತರ ಕೇರಳ ಪ್ರಾಂತ ಸೇವಾಪ್ರಮುಖ್ ಎಂ.ಸಿ.ವಲ್ಸನ್ ಮತ್ತಿತರರಿದ್ದರು.

ಸ್ವಸ್ತಿಕಾ ಅಣಂಗೂರು ವಂದೇ ಮಾತರಂ ಹಾಡಿದರು. ಸೇವಾಭಾರತಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂಗೀತ ವಿಜಯನ್ ಸ್ವಾಗತಿಸಿ, ಜಿಲ್ಲಾ ಕಾರ್ಯದರ್ಶಿ ಟಿ.ವಿ.ಅಶೋಕನ್ ವಂದಿಸಿದರು.

> **ಪ್ರತಿಫಲ ಬಯಸದೆ ಮಾಡುವ ಸೇವೆ ನಿಜವಾದ ಸೇವೆ**
>
> ಋಣದಲ್ಲಿ ದೊಡ್ಡದು ಸಮಾಜ ಸೇವೆಯಾಗಿದೆ. ಯಾವುದೇ ಪ್ರತಿ ಫಲ ಬಯಸದೆ ಕೆಲಸ ಮಾಡುವುದೇ ನಿಜವಾದ ಸೇವೆಯಾಗಿದೆ. ಆರೆಸ್ಸೆಸ್ ಪ್ರಾರಂಭಗೊಂಡ ಬಳಿಕ ಅನೇಕ ಸಮಾಜಮುಖಿ ಕೆಲಸ ಕಾರ್ಯ ಪ್ರಾರಂಭಿಸಲಾಗಿದ್ದು, ಸೇವೆ ಎಂದರೆ ಶರೀರ, ಮನಸ್ಸು, ಬುದ್ಧಿ, ಆತ್ಮ ಎಂಬಿವುಗಳ ಪ್ರತೀಕವಾಗಿದೆ. ತಾನು ಮಾಡಿದ ಉತ್ತಮ ಕೆಲಸ ಇತರರಿಗೆ ತಿಳಿಯದಂತೆ ಮಾಡುವುದೇ ಬಹುದೊಡ್ಡ ಕಾರ್ಯವಾಗಿದೆ.
>
> ● ಕಜಂಪಾಡಿ ಸುಬ್ರಹ್ಮಣ್ಯ ಭಟ್

ಸುತ್ತಮುತ್ತ

ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಲಕ್ಷ ತುಳಸಿ ಅರ್ಚನೆ



ಕುಂದಾಪುರ: ಕುಂದಾಪುರದ ಪೇಟೆ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಅಧಿಕ ಜೇಷ್ಠ ಮಾಸದ ಪ್ರಯುಕ್ತ ಲೋಕ ಕಲ್ಯಾಣಾರ್ಥವಾಗಿ ಶ್ರೀ ದೇವರಿಗೆ ಲಕ್ಷ ತುಳಸಿ ಅರ್ಚನೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಭಾನುವಾರ ನಡೆಯಿತು. ಬೆಳಿಗ್ಗೆ ಪ್ರಾರ್ಥನೆಯೊಂದಿಗೆ ಧಾರ್ಮಿಕ ವಿಧಿವಿಧಾನಗಳು ಪ್ರಾರಂಭಗೊಂಡಿತು. ಮಧ್ಯಾಹ್ನ ದೇವರಿಗೆ ಮಹಾಪೂಜೆ, ಸಮಾರಾಧನೆ ಮೊದಲಾದ ಕಾರ್ಯಕ್ರಮಗಳು ನಡೆಯಿತು. ದೇವಳದ ಆಡಳಿತ ಮೊಕ್ತೇಸರ, ಆಡಳಿತ ಮಂಡಳಿ ಸದಸ್ಯರು, ಊರಿನ ಹತ್ತು ಸಮಸ್ತರು ಹಾಗೂ ಸಮಾಜಬಾಂಧವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ನಾಳೆ ವಿದ್ಯುತ್ ವ್ಯತ್ಯಯ

ಉಡುಪಿ: ಹಿರಿಯಡ್ಕ ವಿದ್ಯುತ್ ಉಪಕೇಂದ್ರದಲ್ಲಿ ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ, ಮೇ 26ರಂದು ಬೆಳಿಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ಮಾಹೆ, ಪರ್ಕಳ, ಹಿರಿಯಡ್ಕ, ಬಜೆ, ಪೆರ್ಡೂರು, ಮಾಣೈ, ಹಿರೇಬೆಟ್ಟು ಹಾಗೂ ಮೆಸಿಲಿ ಫೀಡರ್ ಮಾರ್ಗದಲ್ಲಿ ನಡಿದಾರೆ, ನಲ್ಲೂರು, ಹಿರೇಬೆಟ್ಟು, ವೈರಾಲಜಿ ಹಾಸ್ಟೆಲ್, ಎಂ.ಐ.ಟಿ ಕ್ಯಾಂಪಸ್, ಪರ್ಕಳ ಸಿಟಿ, ಶೆಟ್ಟಿ ಬೆಟ್ಟು, ಗೋಳಿಕಟ್ಟೆ, ಪರೀಕಾ, ಮಾಹೆ, ಬಜೆ ವಾಟರ್ ಸಪ್ಲೈ, ಹಿರಿಯಡ್ಕ ಪೇಟೆ, ಪಾವುಜೆ, ಬಜೆ, ಗುಡ್ಡೆಯಂಗಡಿ, ಕೊಂಡಾಡಿ, ಕೋಡಿಬೆಟ್ಟು, ಪೆರ್ಣಂಕಿಲ, ಕಣಂಜಾರು, ಕಾಜರಗುತ್ತು, ಹರಿಖಂಡಿಗೆ, ವಡ್ಡ, ಸಾಣೆಕಲ್ಲು, ಮಾಣೈ ನವಗ್ರಾಮ, ಪಂಚನಬೆಟ್ಟು, ಮೂಂಡುಜೆ, ಪುತ್ತಿಗೆ, ಪಕ್ಕಾಲು, ಪೆರ್ಡೂರು ಪೇಟೆ, ಮುತ್ತೂರ್ಮೆ, ಕುಕ್ಕೆಹಳ್ಳಿ, ಪಾಡಿಗಾರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ. ಮಣಿಪಾಲ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಮೂಡುಬೆಳ್ಳೆ, ಇಂದ್ರಾಳಿ, ವಿ.ಪಿ ನಗರ, ವಿ.ಆರ್.ನಗರ, ಅನಂತನಗರ, ಮಣಿಪಾಲ ಟೌನ್, ಕೆ.ಎಂ. ಎಫ್ ಫೀಡರ್ ಮಾರ್ಗದಲ್ಲಿ ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ 26ರಂದು ಬೆಳಿಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ಮಣಿಪುರ, ಮೂಡುಬೆಳ್ಳೆ, ಮರ್ಣೆ, ಕಟ್ಟಿಂಗೇರಿ, ಕೆಮ್ಮೂತ್ತೂರು, ಹಯಗ್ರೀವನಗರ, ಲಕ್ಷ್ಮೀಂದ್ರನಗರ, ಇಂದ್ರಾಳಿ ರೈಲ್ವೆ ನಿಲ್ದಾಣ, ಸಿಂಡಿಕೇಟ್ ಸರ್ಕಲ್, ಎಂ.ಜಿ.ಸಿ ಸ್ಕೂಲ್, ಬಿ.ಎಸ್.ಎನ್.ಎಲ್, ವಿದ್ಯಾರತ್ನ ನಗರ, ಡಿ.ಸಿ ಆಫೀಸ್, ಆರ್.ಟಿ ಓ ಆಫೀಸ್, ಪೆರಂಪಳ್ಳಿ, ಸಗ್ರಿ ನೋಳೆ, ಹುಡ್ಕೋ, ಅನಂತನಗರ, ಕಲ್ಯಾಣನಗರ, ಸೋನಿಯಾ ಕ್ಲಿನಿಕ್, ಮಣಿಪಾಲ ಟೌನ್, ವೇಣುಗೋಪಾಲ ಟೆಂಪಲ್, ಮೀಡಿಯಾ ನೆಟ್ ವರ್ಕ್ ಏರಿಯಾ, ಈಶ್ವರನಗರ, ಸರಳೇಬೆಟ್ಟು, ಗಣೇಶ್ ಭಾಗ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ.

ಮೊದಲನೇ ಪುಟದಿಂದ

ನಿಗಾ

ಕೊಚ್ಚಿ ಸಹಿತ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಐಸೋಲೇಶನ್ ಸೌಲಭ್ಯ ಒಳಗೊಂಡ ತೀವ್ರ ನಿಗಾ ಘಟಕಗಳನ್ನು ತೆರೆಯಲಾಗಿದೆ. ಎಬೋಲಾ ವೈರಸ್‌ನಲ್ಲಿ ಇಲ್ಲಿಯವರೆಗೆ ಐದು ಪ್ರಭೇದಗಳು ವರದಿಯಾಗಿದ್ದು, ಅವುಗಳ ಬಗ್ಗೆ ವಿಶೇಷ ಜಾಗ್ರತೆ ಪಾಲಿಸಲು ತಿಳಿಸಲಾಗಿದೆ. ಎಬೋಲಾ ವೈರಸ್ ಪ್ರಾಣಿಗಳಿಂದ ಮನುಷ್ಯರಿಗೆ ಮತ್ತು ಸೋಂಕಿತ ವ್ಯಕ್ತಿಗಳ ದೈಹಿಕ ದ್ರವಗಳ ನೇರ ಸಂಪರ್ಕದಿಂದ ಮನುಷ್ಯರ ನಡುವೆಯೂ ಹರಡುತ್ತದೆ ಎಂದು ವೈದ್ಯಕೀಯ ಇಲಾಖೆಯು ಸ್ಪಷ್ಟಪಡಿಸಿದೆ. ಸೋಂಕಿತ ವ್ಯಕ್ತಿಯನ್ನು 21 ದಿನಗಳ ತನಕ ನಿಗಾದಲ್ಲಿರಿಸಬೇಕಾಗುತ್ತದೆ. ಜ್ವರ, ಗಂಟಲು ನೋವು, ತಲೆನೋವು, ಸ್ನಾಯುಗಳ ಸೆಳೆತ ಇತ್ಯಾದಿ ಈ ರೋಗದ ಲಕ್ಷಣಗಳಾಗಿವೆ. ಈ ಕಾಯಿಲೆ ತಗುಲಿದರೆ ಸಾವಿನ ಪ್ರಮಾಣ ಶೇಕಡಾ 30ರಿಂದ 50ರಷ್ಟಿರುತ್ತದೆ ಎಂದು ಆರೋಗ್ಯ ಇಲಾಖೆಯ ಅ ಕಾರಿಗಳು ತಿಳಿಸಿದ್ದಾರೆ.

ಮುನ್ನೆಚ್ಚರಿಕೆ

ಕರಾವಳಿಯಲ್ಲಿ ಗಾಳಿಯ ತೀವ್ರತೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಸಮುದ್ರ ಪ್ರಕ್ಷುಬ್ಧಗೊಳ್ಳುವ ಸಾಧ್ಯತೆಯಿದ್ದು, ಪ್ರವಾಸಿಗರು, ನಾಗರಿಕರು ಸಮುದ್ರದ ಬಳಿಗೆ ತೆರಳದಂತೆ ಎಚ್ಚರಿಕೆ ನೀಡಲಾಗಿದೆ. ಇದೇ ಸಂದರ್ಭ ಮೀನುಗಾರರಿಗೂ ಇಲಾಖೆ ಎಚ್ಚರಿಕೆ ನೀಡಿದ್ದು, ಈ ಅವಧಿಯಲ್ಲಿ ಸಮುದ್ರಕ್ಕೆ ಇಳಿಯದಂತೆ ಹಾಗೂ ಮೀನುಗಾರಿಕೆ ನಡೆಸದಂತೆ ಸೂಚನೆ ನೀಡಿದೆ. ಭಾನುವಾರ ಬೆಳಗ್ಗೆ 8.30ಕ್ಕೆ ಅಂತ್ಯಗೊಂಡ ಹಿಂದಿನ 24 ತಾಸುಗಳ ಅವಧಿಯಲ್ಲಿ ಉಡುಪಿಯಲ್ಲಿ ಅತೀ ಹೆಚ್ಚು ಮಳೆ ಪ್ರಮಾಣ ದಾಖಲಾಗಿದ್ದು, ಒಟ್ಟು 6 ಸೆಂ.ಮೀ ಮಳೆಯಾಗಿದೆ. ಕುಂದಾಪುರದಲ್ಲಿ 5 ಸೆಂ.ಮೀ ಮಳೆಯಾಗಿದೆ ಎಂದು ಇಲಾಖೆ ಮಾಹಿತಿ ನೀಡಿದೆ.

ಉಡುಪಿ ಜಿಲ್ಲಾಡಳಿತ, ಜಿ.ಪಂ. ದಿಟ್ಟ ಕ್ರಮ | ಸ್ವಚ್ಛತೆಗೆ ಸ್ಥಳೀಯಾಡಳಿತ ಆದ್ಯತೆ, ಸಾರ್ವಜನಿಕರ ಪ್ರಶಂಸೆ

ಕೊನೆಗೂ ಮಾಯವಾಗುತ್ತಿವೆ ತ್ಯಾಜ್ಯದ ಬ್ಲ್ಯಾಕ್ ಸ್ಪಾಟ್‌ಗಳು!

ಕೋಟ: ಸ್ವಚ್ಛತೆಗಾಗಿ ಉಡುಪಿ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ದಿಟ್ಟ ಕ್ರಮ ಕೈಗೊಂಡು ಸ್ಥಳೀಯಾಡಳಿತಗಳಿಗೆ ಸುತ್ತೋಲೆ ಹೊರಡಿಸಿದ್ದು, ಸ್ಥಳೀಯಾಳಿತಗಳು ಕರಾರುವಾಕ್ಕಾಗಿ ಅನುಷ್ಠಾನಗೊಳಿಸಲು ಮುಂದಾಗಿದೆ. ಸ್ಥಳೀಯಾಡಳಿತಗಳು ಸಾಕಷ್ಟು ಭಾಗಗಳಲ್ಲಿನ ತ್ಯಾಜ್ಯಗಳನ್ನು ಸ್ವಚ್ಛಗೊಳಿಸಿವೆ. ಅಲ್ಲದೆ ಸ್ಥಳೀಯ ಸಂಘ–ಸಂಸ್ಥೆಗಳ ಸಹಕಾರ ಪಡೆದು ರಾಷ್ಟ್ರೀಯ ಹೆದ್ದಾರಿ, ಒಳರಸ್ತೆ, ಬ್ಲ್ಯಾಕ್ ಸ್ಪಾಟ್‌ಗಳಲ್ಲಿನ ತ್ಯಾಜ್ಯಗಳನ್ನು ತೆರವುಗೊಳಿಸುತ್ತಿವೆ. ಇದು ಸಾರ್ವಜನಿಕರ ಪ್ರಶಂಸೆಗೆ ಕಾರಣವಾಗಿದೆ.

ಸಿಸಿ ಕ್ಯಾಮರ ಕಣ್ಗಾವಲು!

ಇಡೀ ಜಿಲ್ಲೆಯನ್ನೇ ತ್ಯಾಜ್ಯ ಮುಕ್ತ ಜಿಲ್ಲೆಯಾಗಿಸಲು ಪಣ ತೊಟ್ಟಿರುವ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್ ಅವರು ಹೊರಡಿಸಿರುವ ಸುತ್ತೋಲೆಯಂತೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಬ್ಲ್ಯಾಕ್ ಸ್ಪಾಟ್ ಪ್ರದೇಶಗಳಲ್ಲಿ ಸಿಸಿ ಕ್ಯಾಮರ ಅಳವಡಿಸಿ ಕಣ್ಗಾವಲು ಇರಿಸಲು ಮುಂದಾಗಿದೆ. ಅಲ್ಲದೆ ಈ ವರೆಗೆ ಹೆಚ್ಚಿನ ಗ್ರಾಮಪಂಚಾಯತ್‌ಗಳು ಸಿಸಿ ಕ್ಯಾಮರ ಅಳವಡಿಸಿ ತ್ಯಾಜ್ಯ ಎಸೆದವರಿಗೆ ಬಾರಿ ದಂಡ ಕೂಡ ವಿಧಿಸಿದೆ.

ತ್ಯಾಜ್ಯ ಎಸೆದವರಿದೆ 5000 ರೂ. ದಂಡ

ಗ್ರಾಮೀಣ ವ್ಯಾಪ್ತಿಯ ವಿವಿಧ ಭಾಗಗಳಲ್ಲಿ ಪಂಚಾಯತ್‌ಗಳ ಎಸ್‌ಎಲ್‌ಆರ್‌ಎಂ ಘಟಕಗಳು ಕಾರ್ಯ ನಿರ್ವಹಿಸುತ್ತಿದ್ದು ಕೆಲ ಪಂಚಾಯತ್ ವ್ಯಾಪ್ತಿಯಲ್ಲಿ ಮನೆಗಳ ಕಸ ನೀಡಲು ನಿರಾಸಕ್ತಿ ತೋರಿ ಹೆದ್ದಾರಿಗಳಲ್ಲಿ ಎಸೆದು ಮಲಿನಗೊಳಿಸುತ್ತಿರುವ ಬಗ್ಗೆ ಜಿಲ್ಲಾಡಳಿತದ ಕಂಗೆಣ್ಣಿಗೆ ಗುರಿಯಾಗಿದೆ. ಈ ಹಿನ್ನೆಲೆಯಲ್ಲಿ ಜಿ.ಪಂ. ವಿಶೇಷ ಮುತುವರ್ಜಿಯಲ್ಲಿ ಆಯಾ ಪಂಚಾಯತ್‌ಗಳಿಗೆ ನಿರ್ದೇಶನ ನೀಡಿದ್ದು ಪಂಚಾಯತ್ ವ್ಯಾಪ್ತಿಯಲ್ಲಿ ಮಲಿನಗೊಳಿಸುವವರ ವಿರುದ್ಧ 5000 ರೂ. ದಂಡಾಸ್ತ್ರ ವಿಧಿಸಿ ಆದೇಶ ಹೊರಡಿಸಿದೆ. ಈ ಹಿನ್ನೆಲೆಯಲ್ಲಿ ಈಗಾಲೇ ಜಿಲ್ಲಾಡಳಿತದ ಬೊಕ್ಕಸಕ್ಕೆ ತ್ಯಾಜ್ಯ ಎಸೆದ ದಂಡದ ಪಾವತಿ ಒಂದೇ ತಿಂಗಳೊಳಗೆ 8 ಲಕ್ಷ ಗಡಿ ದಾಟುತ್ತಿದೆ.

ದಿನಂಪ್ರತಿ ಹೆದ್ದಾರಿ ಸ್ವಚ್ಛತೆ

ಜಿಲ್ಲಾ ಪಂಚಾಯತ್ ನಿಂದ ಮಳೆಗಾಲ ಮಂಜಾಗ್ರತ ತಯಾರಿ ಪ್ರಯುಕ್ತ ಸಿದ್ಧಗೊಂಡ ಈ ಸ್ವಚ್ಛತಾ ಕಾರ್ಯಕ್ರಮ ಪಂಚಾಯತ್ ವ್ಯಾಪ್ತಿಯ ಎಸ್‌ಎಲ್‌ಆರ್‌ಎಂ ಘಟಕಕ್ಕೆ ತಲೆನೋವಾಗಿ ಪರಿಣಮಿಸಿದೆ. ಏಕೆಂದರೆ ಪ್ರತಿ ದಿನ ಪಂಚಾಯತ್ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ ಸಹಿತ ಹಲವು ಭಾಗಗಳ ರಸ್ತೆ ಮತ್ತು ತ್ಯಾಜ್ಯವಿರುವ ಪ್ರದೇಶಗಳನ್ನು ಸ್ವಚ್ಛಗೊಳಿಸುವ ಯೋಜನೆ ಹಮ್ಮಿಕೊಳ್ಳುತ್ತಿದೆ. ಪ್ರಸ್ತುತ ಎಲ್ಲಾ ಹೆದ್ದಾರಿ, ಒಳರಸ್ತೆ ಪ್ರದೇಶಗಳು ಸ್ವಚವಾಗಿ ಕಂಗೊಳಿಸುತ್ತಿವೆ.

ಸಾಥ್ ನೀಡುತ್ತಿರುವ ಸಂಘಸಂಸ್ಥೆಗಳು

ಜಿಲ್ಲಾದ್ಯಂತ ಸ್ವಚ್ಛತಾ ಅಭಿಯಾನಕ್ಕೆ ಮುನ್ನುಡಿ ಬರೆದ ಸಂಘಸಂಸ್ಥೆಗಳೇ ಸ್ಥಳೀಯಾಡಳಿತ ಹಾಗೂ ಜಿಲ್ಲಾಡಳಿತಕ್ಕೆ ಮಾದರಿಯಾಗಿವೆ. ಈ ನಿಟ್ಟಿನಲ್ಲಿ ಕ್ಲೀನ್ ಕುಂದಾಪುರ, ಕೋಟದ ಪಂಚವರ್ಣ ಸಂಘಟನೆ, ಕ್ಲೀನ್ ಕಿನಾರ ಬೈಂದೂರು, ಸ್ವಚ್ಛ ಬ್ರಿಗೇಡ್ ಕಾರ್ಕಳ ಸೇರಿದಂತೆ ಅನೇಕ ಸಂಘಸಂಸ್ಥೆಗಳು ನಿರಂತರವಾಗಿ ತಮ್ಮ ವ್ಯಾಪ್ತಿಯನ್ನು ಸ್ವಚ್ಛಗೊಳಿಸುತ್ತಿವೆ. ಈ ಹಿನ್ನೆಲೆಯಲ್ಲಿ ಗ್ರಾಮಪಂಚಾಯತ್, ಜಿಲ್ಲಾಡಳಿತಕ್ಕೆ ಸಂಘಸಂಸ್ಥೆಗಳು ಸ್ವಚ್ಛತಾ ಕಾರ್ಯಕ್ಕೆ ಬಲ ನೀಡುತ್ತಿವೆ.



5000 ರೂ. ದಂಡ

ಜಿಲ್ಲಾ ಪಂಚಾಯತ್ ನಿರ್ದೇಶನವನ್ನು ಚಾಚು ತಪ್ಪದೆ ಪಾಲಿಸುತ್ತಿದ್ದು ಈಗಾಗಲೇ ನಮ್ಮ ಪಂಚಾಯತ್ ವ್ಯಾಪ್ತಿಯನ್ನು ತ್ಯಾಜ್ಯ ಮುಕ್ತವಾಗಿಸಲು ಹಲವು ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸಂಬಂಧಿಸಿದ ಬ್ಲ್ಯಾಕ್ ಸ್ಪಾಟ್ ಪ್ರದೇಶಗಳಲ್ಲಿ ಸಿಸಿ ಕ್ಯಾಮರ ಕಣ್ಗಾವಲು ಇರಿಸಲಾಗಿದೆ. ಅಲ್ಲದೆ ತ್ಯಾಜ್ಯ ಎಸೆದವರಿಗೆ 5000 ರೂ. ದಂಡ ವಿಧಿಸಲು ಕ್ರಮಕೈಗೊಳ್ಳಲಾಗಿದೆ.

● ರವೀಂದ್ರ ರಾವ್ ಕೋಡಿ, ಪಿಡಿಒ, ಕೋಟತಟ್ಟು ಗ್ರಾ.ಪಂ

ಶೇ. 100 ಸ್ವಚ್ಛತೆ

ಇಡೀ ಜಿಲ್ಲಾ ವ್ಯಾಪ್ತಿಯಲ್ಲಿ ಎಸ್‌ಎಲ್‌ಆರ್‌ಎಂ ಘಟಕಗಳುಕಾರ್ಯನಿರ್ವಹಿಸುತ್ತಿವೆ. ಪ್ರಸ್ತುತ ಜಿಲ್ಲೆಯನ್ನು ನೂರಕ್ಕೆ ನೂರರಷ್ಟು ಸ್ವಚ್ಛವಾಗಿರಿಸಲು ಕಾರ್ಯಕ್ರಮ ರೂಪಿಸಿದ್ದು, ಅದರಂತೆ ಸ್ಥಳೀಯಾಡಳಿತಕ್ಕೆ ನಿರ್ದೇಶನ ನೀಡಲಾಗಿದೆ.ಈ ದಿಸೆಯಲ್ಲಿ ಎನ್‌ಜಿಒ, ಸಂಘಟನೆಗಳ ಕೈಜೋಡಿಸುತ್ತಿರುವುದು ಸ್ವಾಗತಾರ್ಹ.

● ಪ್ರತೀಕ್ ಬಾಯಲ್, ಸಿಇಒ, ಉಡುಪಿ ಜಿಲ್ಲಾ ಪಂಚಾಯತ್

ಸಿಸಿ ಟಿವಿ ಕಣ್ಗಾವಲು

ಜಿಲ್ಲೆಯನ್ನು ಸ್ವಚ್ಛ ಜಿಲ್ಲೆಯಾಗಿಸಲು ಒಂದಿಷ್ಟು ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದು ಅದರಂತೆ ಜಿಲ್ಲಾ ಸ್ವಚ್ಛ ಭಾರತ್ ಮಿಷನ್ ಕಾಯೋನ್ಮುಖವಾಗಿದೆ ಇದಕ್ಕೆ ಸ್ಥಳೀಯಾಡಳಿತಗಳು ಕರಾರುವಾಕ್ಕಾಗಿ ಯೋಜನೆಗಳನ್ನು ರೂಪಿಸುತ್ತಿದ್ದು ಕಸ ಎಸೆದವರಿಗೆ ದಂಡ,ಸಿಸಿ ಕ್ಯಾಮರ ಕಣ್ಗಾವಲು ಇರಿಸಲಿದೆ .

● ರಘುನಾಥ ಉಡುಪಿ, ಸಂಯೋಜಕ ಜಿಲ್ಲಾ ಸ್ವಚ್ಛಭಾರತ್ ಮಿಷನ್

ಜಿಲ್ಲಾಡಳಿತಕ್ಕೆ ಸಹಕಾರ

ನಮ್ಮ ಪ್ರತಿ ಭಾನುವಾರ ಸ್ವಚ್ಛತಾ ಕಾರ್ಯಕ್ಕೆ ಮುನ್ನೂರಕ್ಕೂ ಅಧಿಕ ವಾರ ಆಯೋಜಿಸಿಕೊಂಡಿವೆ. ಜಿಲ್ಲಾಡಳಿತ ಕೈಗೊಂಡ ಸ್ವಚ್ಛ ಜಿಲ್ಲಾ ಕನಸ ಅತಿ ಶೀಘ್ರ ಸಾಕಾರಗೊಳ್ಳಲಿದೆ. ಆ ರೀತಿಯ ಯೋಜನೆ ಈಗಾಲೇ ಅನುಷ್ಠಾನಗೊಳಿಸಿದೆ. ನಮ್ಮಂತ ಎಲ್ಲಾ ಸಂಘಟನೆಗಳು ಜಿಲ್ಲಾಡಳಿತಕ್ಕೆ ಸಂಪೂರ್ಣ ಸಹಕಾರ ನೀಡಲಿದೆ.

● ಕೆ. ಮನೋಹರ್ ಪೂಜಾರಿ, ಅಧ್ಯಕ್ಷ, ಪಂಚವರ್ಣ ಯುವಕ ಮಂಡಲ

ಕಾರ್ಕಳ ಆನೆಕೆರೆಯಿಂದ ಪುಲ್ಕೇರಿ ಬೈಪಾಸ್‌ಗೆ ಹೋಗುವ ರಸ್ತೆ

ಸಂಚಾರಕ್ಕೆ ತೊಡಕ್ಕಾಗಿದ್ದ ರಸ್ತೆ ತಾತ್ಕಾಲಿಕ ದುರಸ್ತಿ



ಕಾರ್ಕಳ: ಕಾರ್ಕಳ ಪುರಸಭಾ ವ್ಯಾಪ್ತಿಯ ರಾಜ್ಯ ಹೆದ್ದಾರಿ ಕಾರ್ಕಳ ಆನೆಕೆರೆಯಿಂದ ಪುಲ್ಕೇರಿ ಬೈಪಾಸ್‌ಗೆ ಹೋಗುವ ರಸ್ತೆ ಮೋರಿ ದುರಸ್ತಿ ಬಳಿಕ ವಾಹನಗಳ ಸಂಚಾರಕ್ಕೆತೊಡಕಾಗಿತ್ತು. ಈಗ ರಸ್ತೆಯನ್ನು ತಾತ್ಕಾಲಿಕ ದುರಸ್ತಿ ಮಾಡಲಾಗಿದೆ.

ಕೃಷ್ಣ ಎನ್ಕ್ಲೆವ್ ಕಟ್ಟಡ ಸಮುಚ್ಚಯದ ಮುಂಭಾಗದಲ್ಲಿ ಕಳೆದ ಎರಡು ತಿಂಗಳುಗಳಿಂದ ರಸ್ತೆ ಮಧ್ಯದಲ್ಲಿ ಮೋರಿ ಕೆಲಸದಿಂದಾಗಿ, ವಾಹನ ಸಂಚಾರಕ್ಕೆ ತೀವ್ರ ತೊಡಕುಂಟಾಗಿ ವಾಹನ ಚಾಲಕರು ಭಾರೀ ಹಿಂಸೆಯನ್ನು ಅನುಭವಿಸಿದ್ದರು.

'ಹೊಸದಿಗಂತ'ದಲ್ಲಿ ವರದಿ

'ಕಳಪೆ ಮತ್ತು ಅವೈಜ್ಞಾನಿಕ ಕಾಮಗಾರಿ.. ರಾಜ್ಯ ಹೆದ್ದಾರಿಯಲ್ಲಿ ವಾಹನ ಸವಾರರ ಪರದಾಟ...' ಎಂಬ ವರದಿ ಪ್ರಕಟಗೊಂಡ ಬೆನ್ನಲ್ಲೆ ತಾತ್ಕಾಲಿಕ ದುರಸ್ತಿ ಕಂಡಿದೆ.

ಇಲ್ಲಿನ ಪರಿಸರದ ನಿವಾಸಿಗಳು ಈ ಬಗ್ಗೆ ಪುರಸಭೆ ಅಧಿಕಾರಿಗಳು ಮತ್ತು ಸ್ಥಳೀಯ ನಿಕಟಪೂರ್ವ ಪುರಸಭಾ


ಕಾರ್ಕಳ : ಕಳಪೆ, ಅವೈಜ್ಞಾನಿಕ ಕಾಮಗಾರಿ
ರಾಜ್ಯ ಹೆದ್ದಾರಿಯಲ್ಲಿ ವಾಹನ ಸವಾರರ ಪರದಾಟ
ಪ್ರತಿಭಟನೆಯ ಎಚ್ಚರಿಕೆ...

ಸದಸ್ಯರ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಕೆಲವೇ ದಿನದಲ್ಲಿ ಮುಂಗಾರು ಮಳೆ ಪ್ರಾರಂಭವಾಗುವ ಮುನ್ಸೂಚನೆ ಇದೆ. ನಿರಂತರ ಮಳೆ ಸುರಿಯುತ್ತಿದ್ದರೆ, ವಾಹನಗಳ ಸಂಚಾರಕ್ಕೆ ತೀವ್ರ ತೊಡಕುಂಟಾಗಿ ಇನ್ನಷ್ಟು ಅಪಘಾತಗಳು ಸಂಭವಿಸುವ ಸಾಧ್ಯತೆ ಇದೆ. ಆದುದರಿಂದ ಕೂಡಲೇ ಮೋರಿ ಮೇಲೆ ಡಾಮರು ಹಾಕಲು ಕ್ರಮಕೈಗೊಳ್ಳಬೇಕಿದೆ.

ಸಂಚಾರ ನಿಯಮ ಉಲ್ಲಂಘಿಸುವವರ ಮೇಲೆ ಕ್ಯಾಮೆರಾ ಕಣ್ಣು

ಸ್ಪೀಡ್ ರಾಡಾರ್ ಕ್ಯಾಮೆರಾ ಕಾರ್ಯಾರಂಭ

ಕಾರ್ಕಳ: ಕಾರ್ಕಳ ತಾಲೂಕಿನ ದೂಪದಕಟ್ಟೆ (ಪಡುಬಿದ್ರಿ –ಕಾರ್ಕಳ) ರಾಜ್ಯ ಹೆದ್ದಾರಿಯಲ್ಲಿ ಎಐ ಆಧಾರಿತ ಸ್ಮಾರ್ಟ್ ಕ್ಯಾಮೆರಾ ಅಳವಡಿಸಲಾಗಿದ್ದು ಈಗ ಕಾರ್ಯರಂಭಗೊಂಡಿದೆ.

ಈವರೆಗೆ ಪೊಲೀಸರ ಕಣ್ತಪ್ಪಿಸಿ ಸಂಚಾರ ನಿಯಮ ಉಲ್ಲಂಘನೆ ಮಾಡುತ್ತಿದ್ದವರು, ಟ್ರಾಫಿಕ್ ಪೊಲೀಸರು ಇರಲ್ಲ ಎಂದುಕೊಂಡು ಸಂಚಾರ ನಿಯಮಗಳನ್ನು ಗಾಳಿಗೆ ತೂರಿ ಆರಾಮಾಗಿ ಓಡಾಡಿಕೊಂಡಿದ್ದವರಿಗೆ ಪೊಲೀಸ್ ಇಲಾಖೆ ಶಾಕ್ ಕೊಟ್ಟಿದೆ.

ಪೋಸ್ಟ್ ಮೂಲಕ ನೋಟೀಸ್

ಉಡುಪಿ ಜಿಲ್ಲೆಯಾದ್ಯಂತ ರಾಷ್ಟ್ರೀಯ ಹೆದ್ದಾರಿಯ 6 ಕಡೆಗಳಲ್ಲಿ ಅಳವಡಿಸಿರುವ ಅತ್ಯಾಧುನಿಕ ಸ್ಪೀಡ್ ರಾಡಾರ್ ಕ್ಯಾಮರಾಗಳು ಕಾರ್ಯ ಆರಂಭಗೊಂಡಿದ್ದು, ಸಂಚಾರ ನಿಯಮ ಉಲ್ಲಂಘಿಸುವ ವಾಹನಗಳನ್ನು ಜಿಲ್ಲಾ ನಿಯಂತ್ರಣ ಕೊಠಡಿಯಿಂದ ಮಾನಿಟರ್ ಮಾಡಿ ನಿಯಮ ಉಲ್ಲಂಘನೆ ಗಳಿಗೆ



ಸಂಬಂಧಿಸಿದ ಚಲನ್ ಗಳನ್ನು ಪೋಸ್ಟ್ ಮೂಲಕ ಕಳುಹಿಸಲಾಗುತ್ತದೆ.

ಪೊಲೀಸರ ಸೂಚನೆ

ಚಲನ್ ಸ್ವೀಕರಿಸಿದ ಏಳು ದಿನದ ಒಳಗೆ ಉಡುಪಿ ಜಿಲ್ಲೆಯ ಯಾವುದೇ ಪೊಲೀಸ್ ಠಾಣೆಯಲ್ಲಿ ದಂಡ ಪಾವತಿಸಬೇಕು.

ಪತ್ತೆ ಮಾಡುವ ಉಲ್ಲಂಘನೆಗಳು

- ಅತಿವೇಗ ಚಾಲನೆ
- ಟ್ರಿಪಲ್ ರೈಡಿಂಗ್
- ಸೀಟ್ ಬೆಲ್ಟ್ ಉಲ್ಲಂಘನೆ
- ಹೆಲ್ಮಟ್ ಉಲ್ಲಂಘನೆ
- ಮೊಬೈಲ್ ಬಳಸಿ ಚಾಲನೆ
- ತಪ್ಪು ದಿಕ್ಕಿನಲ್ಲಿ ಚಾಲನೆ
- ಇತರೆ ಸಂಚಾರ ನಿಯಮ ಉಲ್ಲಂಘನೆಗಳು

ವಾಹನ ಸವಾರರು ಕಡ್ಡಾಯವಾಗಿ ಸಂಚಾರ ನಿಯಮಗಳನ್ನು ಪಾಲಿಸಲೇಬೇಕು. ತಪ್ಪಿದ್ದಲ್ಲಿ ಪೊಲೀಸರು ಕಾನೂನು ಕ್ರಮ ಕೈಗೊಳ್ಳುವುದು ನಿಶ್ಚಿತ ಎಂದು ಕಾರ್ಕಳ ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

ದಾನಿಗಳ ನೆರವಿನಿಂದ ಪರಿಶಿಷ್ಟ ವರ್ಗದ ಮಕ್ಕಳಿಗೆ ನೋಟ್‌ಬುಕ್‌ಗಳ ವಿತರಣೆ



ಕುಂದಾಪುರ: ಕಲಾಶ್ರೀ ಶಿಕ್ಷಣ ಪ್ರೇಮಿ ಬಳಗ ಗಂಗೊಳ್ಳಿ ಇದರ ವತಿಯಿಂದ ದಾನಿಗಳ ನೆರವಿನಿಂದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಮಕ್ಕಳಿಗೆ ಉಚಿತ ನೋಟ್ಸ್ ಬುಕ್ ಹಾಗೂ ಲೇಖನ ಸಾಮಾಗ್ರಿ ವಿತರಣಾ ಕಾರ್ಯಕ್ರಮ ಮೇಲ್‌ಗಂಗೊಳ್ಳಿಯ ಡಾ. ಅಂಬೇಡ್ಕರ್ ಸಭಾಭವನದಲ್ಲಿ ಭಾನುವಾರ ಜರಗಿತು.

ಕೆನರಾ ಬ್ಯಾಂಕಿನ ನಿವೃತ್ತ ಸಿಬ್ಬಂದಿ ಪ್ರಮೋದ ಗಾಣಿಗ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ವಿದ್ಯಾರ್ಥಿಗಳಿಗೆ ನೋಟ್ಸ್ ಬುಕ್ ಹಾಗೂ ಲೇಖನ ಸಾಮಗ್ರಿಗಳನ್ನು ವಿತರಿಸಿ ಶುಭ ಹಾರೈಸಿದರು. ಉಡುಪಿ ಜಿಲ್ಲಾ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಘದ ಅಧ್ಯಕ್ಷೆ ಫಿಲೋಮಿನಾ ಫೆರ್ನಾಂಡಿಸ್ ಅವರು ಶಿಕ್ಷಣ ಮಾಹಿತಿ ನೀಡಿದರು. ಗಂಗೊಳ್ಳಿ ಜೇಸಿಐ ಕಾರ್ಯದರ್ಶಿ ನಾಗರಾಜ ಖಾರ್ವಿ, ಮಹಮ್ಮದ್ ಹುಸೇನ್, ಸರಸ್ವತಿ, ಜಿ.ಈಶ್ವರ, ಕಲಾಶ್ರೀ ಶಿಕ್ಷಣ ಬಳಗದ ಅಧ್ಯಕ್ಷೆ ಸುಮಿತ್ರಾ ಜಿ., ನವೀನ್ ಜಿ., ವಿಜೇತ ಕೆ., ಸುನೀತಾ, ಹೇಮಾ, ಸುಕನ್ಯಾ, ಮಂಜುನಾಥ ಜಿ., ನವೀನ್ ಜಿ. ಉಪಸ್ಥಿತರಿದ್ದರು. ಸುಮಿತ್ರಾ ಸ್ವಾಗತಿಸಿದರು. ವಿಜೇತ ಕಾರ್ಯಕ್ರಮ ನಿರ್ವಹಿಸಿದರು. ಸರಸ್ವತಿ ವಂದಿಸಿದರು.

- ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಮಕ್ಕಳಿಗೆ ಉಚಿತ ನೋಟ್ಸ್ ಬುಕ್ ಹಾಗೂ ಲೇಖನ ಸಾಮಾಗ್ರಿ ವಿತರಣಾ ಕಾರ್ಯಕ್ರಮ

ಕಡಲ ಕಿನಾರೆಯಲ್ಲಿ ಗ್ರಾಮೀಣ ಕ್ರೀಡೆ: ಕಾಣಿಯೂರು ಶ್ರೀ ಚಾಲನೆ



ಉಡುಪಿ: ದೇಹ ಮತ್ತು ಮನಸ್ಸು ಎರಡನ್ನೂ ಜೀವನದ ಯಶಸ್ಸಿಗಾಗಿ ಸಮತೂಕದಿಂದ ಆರೋಗ್ಯವಾಗಿಟ್ಟುಕೊಳ್ಳುವುದು ಅಗತ್ಯ. ಇಂದಿನ ಆಧುನಿಕ ಯುಗದಲ್ಲಿ ಗ್ರಾಮೀಣ ಕ್ರೀಡಾಕೂಟಗಳು ಕೇವಲ ದೇಹವನ್ನು ಸ್ವಸ್ಥವಾಗಿಡಲು ಮಾತ್ರವಲ್ಲದೆ, ಮಾನಸಿಕ ಒತ್ತಡ ನಿವಾರಿಸಿ ಮನಸ್ಸನ್ನು ಪ್ರಸನ್ನವಾಗಿಟ್ಟುಕೊಳ್ಳಲು ಅತ್ಯಂತ ಸಹಕಾರಿಯಾಗಿದೆ ಎಂದು ಕಾಣಿಯೂರು ಮಠಾಧೀಶರಾದ ಶ್ರೀವಿದ್ಯಾವಲ್ಲಭ ತೀರ್ಥ ಸ್ವಾಮೀಜಿ ನುಡಿದರು.

ಶ್ರೀಕೃಷ್ಣ ಪರಿಸರ ಪ್ರತಿಷ್ಠಾನದ ವತಿಯಿಂದ ಮಲ್ಪೆ ಕಡಲ ತೀರದ ಶ್ರೀಆನಂದ ಶರಧಿಯಲ್ಲಿ ಆಯೋಜಿಸಲಾದ ಗ್ರಾಮೀಣ ಕ್ರೀಡಾ ಸ್ಪರ್ಧೆಯನ್ನು ರವಿವಾರ ದೀಪ ಬೆಳಗಿಸಿ ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು. ಉದ್ಘಾಟನೆಯ ಬಳಿಕ ಕರಾವಳಿಯ ಕಡಲ ಕಿನಾರೆಯಲ್ಲಿ ಸ್ವತಃ ತಾವೇ ಲಗೋರಿ ಆಡುವ ಮೂಲಕ ಕಾಣಿಯೂರು ಶ್ರೀಗಳು ಕ್ರೀಡಾಕೂಟಕ್ಕೆ ಅತ್ಯಂತ ಸಡಗರದ ಚಾಲನೆ ನೀಡಿದ್ದು ವಿಶೇಷವಾಗಿತ್ತು.

ಈ ಕ್ರೀಡಾ ಹಬ್ಬದ ಭವ್ಯ ವೇದಿಕೆಯಲ್ಲಿ ಪ್ರಮುಖರಾದ ಡಾ. ದೇರೆಬೈಲು ಶಿವಪ್ರಸಾದ ತಂತ್ರಿ, ಜಿಲ್ಲಾ ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ರೋಶನ್ ಶೆಟ್ಟಿ, ಪ್ರಮುಖರಾದ ಸಂದೀಪ್ ಕುಮಾರ್, ಹಿರಿಯ ವಕೀಲರಾದ ಮಟ್ಟಾರು ರತ್ನಾಕರ ಹೆಗ್ಡೆ, ಸಮಾಜ ಸೇವಕ ಹಾಗೂ ಸಾಮಾಜಿಕ ಕಾರ್ಯಕರ್ತ ನಿತ್ಯಾನಂದ ಒಳಕಾಡು, ನಗರಸಭೆ ಮಾಜಿ ಸದಸ್ಯರಾದ ಯೋಗೀಶ್ ಸಾಲ್ಯಾನ್, ಮುಖಂಡರುಗಳಾದ ದಯೇಶ್, ದಶ ಮಹಾಬಲ ಮತ್ತು ವಿಶಾಲ್ ಉಪಸ್ಥಿತರಿದ್ದರು. ಸಂಸ್ಥೆಯ ಸಂಘಟನಾ ಕಾರ್ಯದರ್ಶಿ ಗೋವಿಂದರಾಜ್ ಸ್ವಾಗತಿಸಿದರು. ವೈಭವ್ ಕೊಡವೂರು ವಂದಿಸಿದರು. ವಿಜಯ್ ಕೊಡವೂರು ನಿರೂಪಿಸಿದರು. ಕಡಲ ಕಿನಾರೆಯ ಹಿತಕರ ಗಾಳಿಯ ನಡುವೆ ನಡೆದ ಈ ವಿಶಿಷ್ಟ ಗ್ರಾಮೀಣ ಕ್ರೀಡಾಕೂಟದಲ್ಲಿ ಉಡುಪಿ ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ ಸುಮಾರು 500ಕ್ಕೂ ಅಧಿಕ ಮಂದಿ ಉತ್ಸಾಹಿ ಸ್ಪರ್ಧಾಳುಗಳು ಭಾಗವಹಿಸಿದ್ದರು.

ಮುಂಡೂರು: ನೇತ್ರ ತಪಾಸಣೆ, ಪೊರೆ ಶಸ್ತ್ರಚಿಕಿತ್ಸೆ ಮಧುಮೇಹ ಪರೀಕ್ಷಾ ಶಿಬಿರ



ಉಡುಪಿ: ಸಮೃದ್ಧಿ ಸಂಜೀವಿನಿ ಒಕ್ಕೂಟ ರಿ. ಮುಂಡೂರು, ನಮ್ಮ ಫ್ರೆಂಡ್ಸ್ ಮುಂಡೂರು, ದುರ್ಗಾಪರಮೇಶ್ವರಿ ದೇವಸ್ಥಾನ ಮುಂಡೂರು, ಪ್ರಾಥಮಿಕ ಆರೋಗ್ಯ ಕೇಂದ್ರ ಸಚ್ಚೇರಿಪೇಟೆ ಗ್ರಾಮ ಪಂಚಾಯತ್ ಮತ್ತು ಲಯನ್ಸ್ ಕ್ಲಬ್ ಮುಂಡೂರು ಕಡಂದಲೆ ಸಹಯೋಗದೊಂದಿಗೆ ನೇತ್ರಜ್ಯೋತಿ ಚಾರಿಟೇಬಲ್ ಟ್ರಸ್ಟ್ ಉಡುಪಿ ಪ್ರಸಾದ್ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ ಉಡುಪಿ ವತಿಯಿಂದ ಉಚಿತ ನೇತ್ರ ತಪಾಸಣೆ, ಪೊರೆ ಶಸ್ತ್ರ ಚಿಕಿತ್ಸೆ ಮಧುಮೇಹ ರಕ್ತದೊತ್ತಡ ಪರೀಕ್ಷಾ ಶಿಬಿರ ದುರ್ಗಾಪರಮೇಶ್ವರಿ ದೇವಸ್ಥಾನದ ಸಮುದಾಯ ಭವನದಲ್ಲಿ ನಡೆಯಿತು.

ದೇವಸ್ಥಾನದ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಸುರೇಂದ್ರ ಶೆಟ್ಟಿ ಕೋರಿಬೆಟ್ಟುಗುತ್ತು ಉದ್ಘಾಟಿಸಿದರು. ಪ್ರಸಾದ್ ನೇತ್ರಾಲಯದ ನೇತ್ರ ತಜ್ಞ ಡಾ. ನಿರಂಜನ್ ಅಧ್ಯಕ್ಷತೆ ವಹಿಸಿದ್ದರು. ಸಚ್ಚೇರಿಪೇಟೆ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಎಚ್‌ಒ ಮರ್ಲಿನ್ ಕ್ಷಯ ರೋಗದ ಬಗ್ಗೆ ಮಾಹಿತಿ ನೀಡಿದರು. ವೇದಿಕೆಯಲ್ಲಿ ನಮ್ಮ ಫ್ರೆಂಡ್ಸ್‌ನ ಸಂಚಾಲಕ ಅರುಣ್ ರಾವ್, ಲಯನ್ಸ್ ಕ್ಲಬ್ ಅಧ್ಯಕ್ಷ ಯಶವಂತ ಆಚಾರ್ಯ, ಪತ್ರಕರ್ತ ಉದಯ ಮುಂಡೂರು, ಸಮೃದ್ಧಿ ಸಂಜೀವಿನಿ ಒಕ್ಕೂಟದ ಅಧ್ಯಕ್ಷೆ ಮಲ್ಲಿಕಾ, ಉಪಾಧ್ಯಕ್ಷೆ ಆಶಾ, ಕಾರ್ಯದರ್ಶಿ ಸುಜಾತ ಇದ್ದರು. 70 ಶಿಬಿರಾರ್ಥಿಗಳು ಶಿಬಿರದ ಪ್ರಯೋಜನ ಪಡೆದುಕೊಂಡರು. ಶಶಿಕಲಾ ಪ್ರಾರ್ಥಿಸಿ, ಎಂ.ಬಿ.ಕೆ ವನಿತಾ ಶೆಟ್ಟಿ ವಂದಿಸಿದರು. ಉದಯ ಮುಂಡೂರು ಸ್ವಾಗತಿಸಿ,ಅರುಣ್ ರಾವ್ ಕಾರ್ಯಕ್ರಮ ನಿರೂಪಿಸಿದರು.

ಕೋಟದಲ್ಲಿ ಪಂಚವರ್ಣದ ರೈತರೆಡೆಗೆ ನಮ್ಮ ನಡಿಗೆ 54ನೇ ಸರಣಿ ಕಾರ್ಯಕ್ರಮ | ರೈತರಿಗೆ ಎಂ. ಜಯರಾಮ ಶೆಟ್ಟಿ ಎಚ್ಚರಿಕೆ

ಕೃಷಿ ಭೂಮಿಯನ್ನು ಹಡಿಲು ಬಿಟ್ಟರೆ ಮುಂದೆ ಬಾರಿ ಸಂಕಷ್ಟ ಎದುರಿಸಬೇಕಾದಿತು

ಕೋಟ: ಕೃಷಿ ಭೂಮಿ ಬಂಜೆಯಲ್ಲ, ಅದನ್ನು ಹಡಿಲು ಬೀಳಲು ಬಿಡಬೇಡಿ ಎಂದು ಕೋಟ ರೈತಧ್ವನಿ ಸಂಘಟನೆಯ ಅಧ್ಯಕ್ಷ ಎಂ. ಜಯರಾಮ ಶೆಟ್ಟಿ ರೈತ ಸಮುದಾಯಕ್ಕೆ ಕರೆ ನೀಡಿದರು.

ಶನಿವಾರ ಕೋಟದ ಪಂಚವರ್ಣ ಯುವಕ ಮಂಡಲ ಪ್ರವರ್ತಿತ ಸಂಸ್ಥೆ ಪಂಚವರ್ಣ ಮಹಿಳಾ ಮಂಡಲದ ನೇತೃತ್ವದಲ್ಲಿ ಗೀತಾನಂದ ಫೌಂಡೇಶನ್ ಮಣೂರು, ಗೆಳೆಯರ ಬಳಗ ಕಾರ್ಕಡ, ರೈತಧ್ವನಿ ಸಂಘ ಕೋಟ, ರೋಟರಿ ಕ್ಲಬ್ ಕೋಟ ಸಾಲಿಗ್ರಾಮ, ಸ್ನೇಹಕೂಟ ಮಣೂರು ಸಹಯೋಗದೊಂದಿಗೆ 54ನೇ ರೈತರೆಡೆಗೆ ನಮ್ಮ ನಡಿಗೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಸ್ತುತ ಕೃಷಿಯಿಂದ ಹೆಚ್ಚಿನವರು ವಿಮುಖರಾಗುತ್ತಿರುವ ಮಾಹಿತಿಗಳು ಕೇಳಿ ಬರುತ್ತಿವೆ. ಇದು



ಸಲ್ಲ. ಬದಲಾಗಿ ಇನ್ನು ಮುಂದಿನ ದಿನಗಳಲ್ಲಿ ಕೃಷಿ ಇದ್ದವರಲ್ಲಿ ಶ್ರೀಮಂತಿಕೆ ಉಳಿಯಲಿದೆ. ಪ್ರತಿಯೊಬ್ಬರು ಕೃಷಿ ಭೂಮಿ ಹಡಿಲು ಬಿಟ್ಟರೆ ಮುಂದೆ ಬಾರಿ ಸಂಕಷ್ಟವನ್ನು ಎದುರಿಸಬೇಕಾದಿತು. ಕೃಷಿ ಭೂಮಿ ಯಾವತ್ತುಬಂಜೆಯಾಗಲು ಸಾಧ್ಯವಿಲ್ಲ. ಕೃಷಿಯಲ್ಲಿ ಸಮಗ್ರ ಕೃಷಿ ನೀತಿ ಅನುಸರಿಸಿ ಯಶಸ್ಸು ಖಂಡಿತಾ ದೊರಕಲಿದೆ. ಪಂಚವರ್ಣ ರೈತರೆಡೆಗೆ ರೈತಸಮುದಾಯಕ್ಕೆ ಶಕ್ತಿ ನೀಡುತ್ತಿದ್ದು ಯುವ ಸಮೂಹ ಕೃಷಿಯತ್ತ ಆಕರ್ಷಿಸಲಿ ಎಂದು ರೈತ ಪುರಸ್ಕಾರ ಪಡೆದ ಚಂದ್ರಕಾಂತ್ ಮಧ್ಯಸ್ಥರಿಗೆ ಅಭಿನಂದನೆ ಸಲ್ಲಿಸಿದರು. ಪರಿಸರಸ್ನೇಹಿ ಪಾರಿಜಾತ ಗಿಡ ನೆಟ್ಟು ಗೋ ಪೂಜೆ ನೆರವೇರಿಸಲಾಯಿತು. ಸಭಾಧ್ಯಕ್ಷತೆಯನ್ನು ಪಂಚವರ್ಣ ಸಂಘಟನೆಯ ಸ್ಥಾಪಾಕಾಧ್ಯಕ್ಷ ಶೇವಧಿ ಸುರೇಶ್ ಗಾಣಿಗ ವಹಿಸಿದ್ದರು. ನಿವೃತ್ತಮುಖ್ಯ ಶಿಕ್ಷಕ ಎಂ.ಎನ್. ಮಧ್ಯಸ್ಥ ಅಭಿನಂದನಾ ನುಡಿಗಳನ್ನಾಡಿದರು. ಮಣೂರು ಮಹಾಲಿಂಗೇಶ್ವರ ಸಭಾಂಗಣದ ಮುಖ್ಯಸ್ಥ ರಾಜೇಂದ್ರ ಉರಾಳ ಸನ್ಮಾನಿತರ ಪರವಾಗಿ ಮಾತನಾಡಿದರು. ಮಣೂರು ಮಹಾಲಿಂಗೇಶ್ವರ ದೇವಸ್ಥಾನ ಆಡಳಿತ ಮಂಡಳಿಯ ಅಧ್ಯಕ್ಷ ಸತೀಶ್ ಎಚ್. ಕುಂದರ್ ಉದ್ಘಾಟಿಸಿದರು. ಮುಖ್ಯ ಅಭ್ಯಾಗತರಾಗಿ ಸ್ನೇಹಕೂಟದ ನಿರ್ದೇಶಕ ವಿಷ್ಣುಮೂರ್ತಿ ಮಯ್ಯ, ಗೆಳೆಯರ ಬಳಗ ಕಾರ್ಕಡ ಅಧ್ಯಕ್ಷ ಕೆ. ತಾರಾನಾಥ ಹೊಳ್ಳ, ಸ್ನೇಹಕೂಟದ ಅಧ್ಯಕ್ಷೆ ಭಾರತಿ ವಿ. ಮಯ್ಯ, ಪಂಚವರ್ಣ ಮಹಿಳಾ ಮಂಡಲದ ಅಧ್ಯಕ್ಷೆ ಲಲಿತಾ ಪೂಜಾರಿ ಇದ್ದರು. ಸನ್ಮಾನ ಪತ್ರವನ್ನು ವಿನಯ ಉಡುಪ ವಾಚಿಸಿದರು. ಪಂಚವರ್ಣ ಮಹಿಳಾ ಮಂಡಲದ ಕಾರ್ಯಾಧ್ಯಕ್ಷೆ ಕಲಾವತಿ ಅಶೋಕ್ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು.ಸಂಚಾಲಕಿ ಸುಜಾತ ಬಾಯರಿ ನಿರೂಪಿಸಿದರು. ರವೀಂದ್ರ ಕೋಟ ಸಂಯೋಜಿಸಿದರು.

ಪಂಚವರ್ಣ ರೈತ ಪರಸ್ಕಾರ

ಈ ವೇಳೆ ಯುವ ಕೃಷಿಕ ಮಣೂರು ಬಾಳೆಬೆಟ್ಟು ಚಂದ್ರಕಾಂತ್ ಮಧ್ಯಸ್ಥ ಅವರಿಗೆ ಕೃಷಿ ಪರಿಕರವನ್ನಿತ್ತು ಪಂಚವರ್ಣ ರೈತ ಪುರಸ್ಕಾರ ನೀಡಿ ಗೌರವಿಸಲಾಯಿತು.

ಮಂಗಳೂರು
ಸೋಮವಾರ, 25 ಮೇ 2026
ಸಂಪುಟ 48, ಸಂಚಿಕೆ 67 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಫಾಲ್ಟಾ ವಿಧಾನಸಭಾ ಕ್ಷೇತ್ರಕ್ಕೆ ಮರುಮತದಾನ | ಟಿಎಂಸಿಗೆ 4ನೇ ಸ್ಥಾನ

ಫಾಲ್ಟಾದಲ್ಲಿ ಬಿಜೆಪಿ ಜಯಭೇರಿ

ಕೋಲ್ಕತ್ತಾ: ತೃಣಮೂಲ ಕಾಂಗ್ರೆಸ್‌ನ ಭದ್ರಕೋಟೆ ಖ್ಯಾತ ಫಾಲ್ಟಾ ವಿಧಾನಸಭಾ ಕ್ಷೇತ್ರಕ್ಕೆ ನಡೆದ ಮರು ಮತದಾನದಲ್ಲಿ ಬಿಜೆಪಿ ಅಭ್ಯರ್ಥಿ ದೇಬಾಂಶು ಪಂಡಾ ಬರೋಬ್ಬರಿ 1.09 ಲಕ್ಷ ಮತಗಳ ಅಂತರದಲ್ಲಿ ವಿಜಯಿಯಾಗಿದ್ದಾರೆ. ಟಿಎಂಸಿ ಅಭ್ಯರ್ಥಿ ಜಹಂಗೀರ್ ಖಾನ್ ನಾಲ್ಕನೇ ಸ್ಥಾನಕ್ಕೆ ನೂಕಲ್ಪಟ್ಟಿದ್ದಾರೆ. ಪಂಡಾ ಅವರಿಗೆ ದೊರೆತಿರುವ ಮತಗಳು 1,49,666. 2.36 ಲಕ್ಷ ಮತದಾರರನ್ನು ಹೊಂದಿರುವ ಈ ಕ್ಷೇತ್ರದಲ್ಲಿ ಜಹಂಗೀರ್ ಖಾನ್‌ಗೆ ದೊರೆತಿರುವ ಮತಗಳು ಕೇವಲ 7,783. ಸಿಪಿಎಂನ ಸಂಭುನಾಥ್ ಕುರ್ಮಿ 40,645ಮತಗಳೊಂದಿಗೆ ದ್ವಿತೀಯ ಸ್ಥಾನಿಯಾಗಿದ್ದು, ಕಾಂಗ್ರೆಸ್‌ನ ಅಬ್ದುರ್ ರಜಾಕ್ ಮೊಲ್ಲಾ 10,084ಮತಗಳೊಂದಿಗೆ ತೃತೀಯ ಸ್ಥಾನದಲ್ಲಿದ್ದಾರೆ.

ಬೆಳಕಿಗೆ ಬರುತ್ತೆ ಸತ್ಯ: ಪ್ರಸ್ತುತ ವಿಜಯ ಮುಖೇನ ಪ.ಬಂಗಾಳ ಚುನಾವಣೆಗೆ ಸಂಬಂಧಿಸಿ ಚುನಾವಣಾ ಆಯೋಗದ ದಾಖಲೆಗಳಲ್ಲಿ ಬಿಜೆಪಿಯ ಸ್ಥಾನಬಲ 208ಕ್ಕೇರಿದೆ. ಬಿಜೆಪಿಗೆ ಅಭೂತಪೂರ್ವ ವಿಜಯ ನಿಶ್ಚಿತವೆಂಬುದು ಆರಂಭದ ಟ್ರೆಂಡ್‌ಗಳಿಂದಲೇ ವ್ಯಕ್ತವಾಗಿತ್ತು. ಜನರಿಗೆ ಮುಕ್ತವಾಗಿ ಮತ ಚಲಾಯಿಸಲು ಅವಕಾಶ ದೊರೆತಾಗ ಸತ್ಯ ಬೆಳಕಿಗೆ ಬರುವುದು ಎಂಬುದಕ್ಕೆ ಈ ಫಲಿತಾಂಶ ಸಾಕ್ಷಿ ಎಂದು ಮುಖ್ಯಮಂತ್ರಿ ಸುವೇಂದು ಅಧಿಕಾರಿ ಹರ್ಷ ವ್ಯಕ್ತಪಡಿಸಿದ್ದಾರೆ. ಬಿಜೆಪಿ ಅಭ್ಯರ್ಥಿ ದೇಬಾಂಶು ಪಂಡಾರನ್ನು ಬಲಿಷ್ಠ ಜನಾದೇಶ ಮುಖೇನ ಗೆಲ್ಲಿಸಿದ ಫಾಲ್ಟಾ ಜನತೆಗೆ ತಾನು ಶಿರಬಾಗಿ ನಮಿಸುತ್ತೇನೆ ಎಂದು ಸಿಎಂ ಅಧಿಕಾರಿ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ಹೇಳಿದ್ದಾರೆ. ➡ಪುಟ ೪



ಮಂಪರು ಸ್ಥಿತಿಯಲ್ಲಿ ಟಿಎಂಸಿ ಪಾಳಯ

ಮರು ಮತದಾನದಂದು ಟಿಎಂಸಿ ಪಾಳಯದಲ್ಲಿ ಹೆಚ್ಚಿನ ಚಟುವಟಿಕೆ ಕಂಡುಬರಲಿಲ್ಲ. ಪಕ್ಷದ ಕಚೇರಿಗಳು ನಿದ್ರೆ ತೂಗುತ್ತಿದ್ದವು. ಸ್ಪರ್ಧಿ ಖಾನ್ ಕೂಡ ಸಾರ್ವಜನಿಕರ ಕಣ್ಣಿಗೆ ಬಿದ್ದಂತಿರಲಿಲ್ಲ. ಮತದಾನದಂದು ಖಾನ್ ನಿವಾಸಕ್ಕೆ ಬೀಗ ಜಡಿಯಲಾಗಿತ್ತು ಎಂದು ಸ್ಥಳೀಯ ನಿವಾಸಿಗಳು ಹೇಳಿದ್ದಾರೆ. ಟಿಎಂಸಿಯ ಸ್ಥಳೀಯ ಕಾರ್ಯಕರ್ತರ ಗೈರು ಕೂಡ ಎದ್ದು ಕಾಣಿಸಿತ್ತು.

ಚಾಟ್‌ಜಿಪಿಟಿ, ಯೂಟ್ಯೂಬ್ ನೋಡಿ ಐಇಡಿ ತಯಾರಿಸಿದ್ದ ಆರೋಪಿಗಳು

ಬಾಂಬ್ ತಯಾರಿಕೆಗೆ ಎಐ ಬಳಕೆ

ಹೊಸದಿಲ್ಲಿ: ರಾಷ್ಟ್ರ ರಾಜಧಾನಿ ದಿಲ್ಲಿಯನ್ನು ಬೆಚ್ಚಿಬೀಳಿಸಿದ್ದ ಕೆಂಪುಕೋಟೆ ಪ್ರದೇಶದ ಭೀಕರ ಸ್ಫೋಟ ಪ್ರಕರಣದ ತನಿಖೆಯಲ್ಲಿ ಆತಂಕಕಾರಿ ಅಂಶಗಳು ಬೆಳಕಿಗೆ ಬಂದಿವೆ. ಸ್ಫೋಟ ಪ್ರಕರಣದ ಆರೋಪಿಗಳು ಕೃತಕ ಬುದ್ಧಿಮತ್ತೆ(ಎಐ) ತಂತ್ರಜ್ಞಾನ, ವಿಶೇಷವಾಗಿ ಚಾಟ್‌ಬಾಟ್‌ಗಳು ಮತ್ತು ಯೂಟ್ಯೂಬ್ ವಿಡಿಯೋಗಳ ಸಹಾಯದಿಂದ ಬಾಂಬ್ ತಯಾರಿಕೆ ಕುರಿತು ಮಾಹಿತಿ ಸಂಗ್ರಹಿಸಿ, ಸುಧಾರಿತ ಸ್ಫೋಟಕ ಸಾಧನಗಳನ್ನು(ಐಇಡಿ) ನಿರ್ಮಿಸಿದ್ದರೆಂದು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬಹಿರಂಗಪಡಿಸಿದೆ.

7,500 ಪುಟಗಳ ಚಾರ್ಜ್‌ಶೀಟ್: ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್‌ಐಎ ಮೇ 14ರಂದು ವಿಶೇಷ ಎನ್‌ಐಎ ನ್ಯಾಯಾಲಯಕ್ಕೆ ಸುಮಾರು 7,500 ಪುಟಗಳ ಬೃಹತ್ ಚಾರ್ಜ್‌ಶೀಟ್ ಸಲ್ಲಿಸಿದ್ದು, ಅದರಲ್ಲಿ ಉಗ್ರರ ಸಂಚಿನ ಸಂಪೂರ್ಣ ವಿವರಗಳನ್ನು ದಾಖಲಿಸಲಾಗಿದೆ. ➡ಪುಟ ೪

- ದಿಲ್ಲಿ ಸ್ಫೋಟ ಪ್ರಕರಣ
- ಎನ್‌ಐಎ ಮಾಹಿತಿ



- 5ರಿಂದ 10 ನಿಮಿಷಗಳಲ್ಲಿ ಬಾಂಬ್ ಜೋಡಣೆ
- ಕಲ್ಲಿದ್ದಲು ಗಣಿಗಳಿಂದ ಡಿಟೋನೇಟರ್ ಪೂರೈಕೆ
- ಅನಂತನಾಗ್ ಜಿಲ್ಲೆಯ ಖಾಜಿಗುಂಡ್ ಕಾಡಿನಲ್ಲಿ ಐಇಡಿ ಪರೀಕ್ಷೆ
- ಬಾಂಬ್ ತಯಾರಿಕೆಗೆ ಚಾಟ್‌ಬಾಟ್, ಎಐ ತಂತ್ರಜ್ಞಾನ, ಯೂಟ್ಯೂಬ್ ವಿಡಿಯೋ ದುರ್ಬಳಕೆ
- ಮೇ 14ಕ್ಕೆ 7,500 ಪುಟಗಳ ಚಾರ್ಜ್‌ಶೀಟ್ ಸಲ್ಲಿಸಿದ್ದ ಎನ್‌ಐಎ

ಕುಟುಂಬಸ್ಥರ ಆಕ್ರಂದನ
ಮೂವರು ಅಸ್ವಸ್ಥ, ಓರ್ವನಿಗಾಗಿ ಶೋಧ

ಮಳೆಯಿಂದಾಗಿ ನೀರಿನ ಸೆಳೆತ ಹೆಚ್ಚಾಗಿದ್ದೇ ದುರಂತಕ್ಕೆ ಕಾರಣ

ಭಟ್ಕಳ: ಕಪ್ಪೆಚಿಪ್ಪಿಗಾಗಿ ನದಿಗಿಳಿದ 10 ಮಂದಿ ಸಾವು

ಭಟ್ಕಳ/ ಕಾರವಾರ: ಹೊಳೆಯಲ್ಲಿ ಚಿಪ್ಪುಮೀನು ಕಪ್ಪೆಚಿಪ್ಪು ಆರಿಸಲು ಇಳಿದ 10 ಜನರು ನೀರಿನ ಸೆಳೆತಕ್ಕೆ ಕೊಚ್ಚಿ ಹೋಗಿದ್ದಾರೆ. ಭಾನುವಾರ ಭಟ್ಕಳ ತಾಲೂಕಿನ ಶಿರಾಲಿ ಅಳಿವೆಕೋಡಿ ಬಳಿ ಈ ದುರಂತ ಸಂಭವಿಸಿದೆ.

ಮೂವರು ತೀವ್ರ ಅಸ್ವಸ್ಥರಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನಾಪತ್ತೆಯಾಗಿರುವ ಓರ್ವನಿಗಾಗಿ ಶೋಧ ಕಾರ್ಯ ಸಾಗಿದೆ. ಎಂದಿನಂತೆ 14 ಜನ ಕಳಿನಟ್ಟಿ ಹೊಳೆಯಲ್ಲಿ ಕಪ್ಪೆ ಚಿಪ್ಪು ಆರಿಸಲು ನೀರಿಗಿಳಿದಿದ್ದರು. ರಾತ್ರಿಯಿಡೀ ಮಳೆ ಸುರಿದ ಕಾರಣ ಹೊಳೆಯಲ್ಲಿ ನೀರಿನ ಸೆಳೆತ ಹೆಚ್ಚಾಗಿದ್ದು ಇದರಿಂದಾಗಿ ಪರಸ್ಪರ ಕೈಹಿಡಿದು ನೀರಿಗಿಳಿದ ಎಲ್ಲರೂ ನೀರಿನಲ್ಲಿ ಕೊಚ್ಚಿ ಹೋಗಿ ಆಳ ಪ್ರದೇಶದಲ್ಲಿ ನೀರಿನಲ್ಲಿ ಮುಳುಗಿರುವುದಾಗಿ ತಿಳಿದುಬಂದಿದೆ. ಎಲ್ಲಾ 8 ಮೃತ ದೇಹಗಳು ಅಳಿವೆಕೋಡಿ ಬಳಿ ಪತ್ತೆಯಾಗಿವೆ. ➡ಪುಟ ೪



₹5ಲಕ್ಷ ಪರಿಹಾರ: ಸಿಎಂ ಘೋಷಣೆ

ಕಾರವಾರ: ಭಟ್ಕಳ ಸಮೀಪದ ತಟ್ಟೆಹಕ್ಕಲು ಕಡಲ ತೀರದಲ್ಲಿ ಕಪ್ಪೆಚಿಪ್ಪು ತರಲು ಹೋದವರ ಪೈಕಿ ಒಂದೇ ಕುಟುಂಬದ 10 ಮಂದಿ ನೀರಿನಲ್ಲಿ ಮುಳುಗಿ ಸಾವಿಗೀಡಾಗಿದ ಘಟನೆಗೆ ತೀವ್ರ ಶೋಕ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಮೃತರ ಕುಟುಂಬಕ್ಕೆ ತಲಾ 5 ಲಕ್ಷ ರೂ. ಪರಿಹಾರ ಘೋಷಿಸಿದ್ದಾರೆ. ಕಾಣೆಯಾದವರು ಬದುಕಿಬಂದು ತಮ್ಮವರನ್ನು ಕೂಡಿಕೊಳ್ಳಲಿ ಎಂದು ದೇವರಲ್ಲಿ ಪ್ರಾರ್ಥಿಸುವುದಾಗಿ ತಿಳಿಸಿದ್ದಾರೆ. ಜಿಲ್ಲಾ ಉಸ್ತುವಾರಿ ಮಂತ್ರಿ ಮಂಕಾಳ ವೈದ್ಯ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ, ಬಿಜೆಪಿ ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯ್ಕ, ಶಾಸಕ ಶಿವರಾಮ ಹೆಬ್ಬಾರ್, ಶಾಸಕ ಸತೀಶ ಸೈಲ್ ಮತ್ತಿತರರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಅನುಮಾನಾಸ್ಪದ ಫಲಾನುಭವಿಗಳನ್ನು ಕೈಬಿಡಲು ಕಂದಾಯ ಇಲಾಖೆ ಸೂಚನೆ

84 ಸಾವಿರ ಜನರ ಪಿಂಚಣಿ ರದ್ದು

ವೀರಣ್ಣ ಬಳಿಗಾರ

ಬೆಂಗಳೂರು: ಸಾಮಾಜಿಕ ಭದ್ರತಾ ಯೋಜನೆಯಲ್ಲಿ ಸರ್ಕಾರದ ವತಿಯಿಂದ ನೀಡುತ್ತಿರುವ ಪಿಂಚಣಿಗಳಲ್ಲಿ ಸಂದೇಹಾಸ್ಪದ ಫಲಾನುಭವಿಗಳ ಪತ್ತೆ ಕಾರ್ಯ ಕೈಗೊಂಡಿರುವ ಕಂದಾಯ ಇಲಾಖೆಯು ರಾಜ್ಯದಲ್ಲಿ 84,211 ಜನರು ಅನರ್ಹರು ಎಂದು ಗುರುತಿಸಿದ್ದು, ಇವರ ಪಿಂಚಣಿ ರದ್ದುಗೊಳಿಸಲು ತೀರ್ಮಾನಿಸಿದೆ.

ಇ-ಆಡಳಿತ ಇಲಾಖೆಯ ಕುಟುಂಬ ದತ್ತಾಂಶದಿಂದ ಸಮಾಜದ ವಿವಿಧ ವರ್ಗಗಳ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ಲಭ್ಯ ಮಾಹಿತಿಗಳನ್ನು ಪಡೆದು ಸಾಮಾಜಿಕ ಭದ್ರತೆ ಫಲಾನುಭವಿಗಳ ಮಾಹಿತಿಗಳೊಂದಿಗೆ ತಾಳೆ ಮಾಡಲಾಗಿ, 82.98 ಲಕ್ಷ ಫಲಾನುಭವಿಗಳ ಪೈಕಿ 23.12 ಲಕ್ಷ ಫಲಾನುಭವಿಗಳು ಅರ್ಹತಾ ಮಾನದಂಡಗಳಿಗೆ ಒಳಪಡದೆ ಸಂದೇಹಾಸ್ಪದವಾಗಿ ಪಿಂಚಣಿಗಳನ್ನು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.ಸಂದೇಹಾಸ್ಪದ ಪ್ರಕರಣಗಳನ್ನು ಗ್ರಾಮ ಆಡಳಿತ ಅಧಿಕಾರಿಗಳ ಮೂಲಕ ಪರಿಶೀಲಿಸಿ ನಿಯಮಾನುಸಾರ ಸೂಕ್ತ ಕ್ರಮ ವಹಿಸಲು ಸಂಯೋಜನೆ ಮೊಬೈಲ್ ಆ್ಯಪ್ ಸಿದ್ಧಪಡಿಸಿ ರಾಜ್ಯದಲ್ಲಿ ಈಗಾಗಲೇ ಮೇ 21ರ ಅಂತ್ಯಕ್ಕೆ 23,12,667 ಸಂದೇಹಾಸ್ಪದ ಫಲಾನುಭವಿಗಳ ಪೈಕಿ 19,22,833 ಫಲಾನುಭವಿಗಳ ಪರಿಶೀಲನಾ ಕಾರ್ಯವು ಮುಕ್ತಾಯಗೊಂಡಿದೆ. ಉಳಿದ 3,89,834 ಸಂದೇಹಾಸ್ಪದ ಫಲಾನುಭವಿಗಳ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದೆ. ➡ಪುಟ ೪



14,68,723 ಜನರ ಸೌಲಭ್ಯ ಸ್ಥಗಿತ

2,07,156 ಸಂದೇಹಾಸ್ಪದ ಫಲಾನುಭವಿಗಳು ನೀಡಿದ್ದ ವಿಳಾಸದಲ್ಲಿ ವಾಸವಿಲ್ಲದೆ ಇರುವುದು ದೃಢಪಟ್ಟಿದೆ. **12,48,994** ಸಂದೇಹಾಸ್ಪದ ಫಲಾನುಭವಿಗಳು ಪರಿಶೀಲನಾ ಸಮಯದಲ್ಲಿ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸಲು ವಿಫಲರಾಗಿದ್ದಾರೆ ಮತ್ತು **12,573** ಸಂದೇಹಾಸ್ಪದ ಫಲಾನುಭವಿಗಳು ತಮ್ಮ ಆದಾಯದ ಬಗ್ಗೆ ಆದಾಯ ದೃಢೀಕರಣ ಪತ್ರ ನೀಡಿರುವುದಿಲ್ಲ. ಈ ಪಿಂಚಣಿಗಳನ್ನು ಸ್ಥಗಿತಗೊಳಿಸಲು ತೀರ್ಮಾನಿಸಲಾಗಿದೆ.

ಸಂಪುಟ 48, ಸಂಚಿಕೆ 67 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಕೀವ್ ಮೇಲೆ ಭಾರೀ ದಾಳಿ |೦೭
ಒಳಜಗಳದಿಂದ ಅಭಿವೃದ್ಧಿ ಕುಂಠಿತ: ನಿತಿನ್ |೦೫
ಪಂಜಾಬ್ ಮನೆಗೆ, ಆರ್‌ಆರ್ ಪ್ಲೇಆಫ್‌ಗೆ |೧೧

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಉತ್ತರೆ

ದಿನದ ಮಾತು

ಇತರರು ಹೊಗಳಿದರೆ ಅದು ತನಗೆ ಗೌರವ; ತಾನೇ ಹೊಗಳಿಕೊಂಡರೆ ಲೋಕ ಅದನ್ನು ಹುಚ್ಚು ಎನ್ನುತ್ತದೆ.

▲ನೀತಿ ಮಂಜರಿ

ಮೋದಿಯ ಬೆನ್ನು ಹತ್ತಿರುವ ಜಿರಳೆಗಳು!

ನೇರ ನೋಟ

• ದು.ಗು. ಲಕ್ಷ್ಮಣ

• ಪುಟ ೬

ಕಿರುಸುದ್ದಿ

ಎಸ್‌ಐಆರ್ ಬಗ್ಗೆ ಜಾಗೃತಿ ಮೂಡಿಸಿ: ಡಿಸಿಎಂ ಡಿಕೆಶಿ

• **ಬೆಂಗಳೂರು:** ಜವಾಬ್ದಾರಿಯುತ ಸರ್ಕಾರವಾಗಿ ನಾವು ಜನರಿಗೆ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಬಗ್ಗೆ ಜಾಗೃತಿ ಮೂಡಿಸಬೇಕು. ನಾವು ಆ ಕೆಲಸ ಮಾಡುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ಭಾನುವಾರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಎಸ್‌ಐಆರ್‌ನಿಂದ ಈ ದೇಶದಲ್ಲಿ ಸಾಕಷ್ಟು ಅನಾಹುತಗಳು ನಡೆ ಯುತ್ತಿವೆ. ಅದಕ್ಕೆ ಇದರ ಬಗ್ಗೆ ನಾವು ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದೇವೆ. ಬಡ, ಸಾಮಾನ್ಯರಿಗೆ ಎಸ್‌ಐಆರ್ ಬಗ್ಗೆ ಪರಿಚಯ ಮಾಡಿಕೊಡಬೇಕಿದೆ.

• ಪುಟ ೫

ಡಿಜಿಟಲ್ ವಂಚನೆ: ಆರೋಪಿಗಳ ಬಂಧನ

• ಪುಟ ೫

ಹಾರ್ಮುಜ್ ಮಾರ್ಗ ಪುನರಾರಂಭ ಸನ್ನಿಹಿತ

• ಪುಟ ೭

ಜಪಾನ್‌ನಲ್ಲಿವೆ 90 ಲಕ್ಷ ಖಾಲಿ ಮನೆ!

• ಪುಟ ೭

ಬಲೂಚಿಸ್ತಾನದಲ್ಲಿ ರೈಲು ಸ್ಫೋಟಕ್ಕೆ 24 ಜನ ಸಾವು

• ಪುಟ ೭

ಮೋದಿ ಆತ್ಮೀಯ ಸ್ನೇಹಿತ, ನನ್ನ ನಂಬಿ ಎಂದ ಟ್ರಂಪ್

• ಪುಟ ೭

ಏನಾಸಂ: ಬುಡಕಟ್ಟು ಜನರಿಗಿಲ್ಲ ತೊಂದರೆ: ಶಾ

• ಪುಟ ೭



ಭಾರತದ ಭದ್ರತಾ ಗುರಾಣಿ ಹಿಡಿದ ಬಾಹುಬಲಿ ಮೋದಿ

• ಪುಟ ೭

ಸುದ್ದಿ ಸಮಗ್ರ

ಅಮೆರಿಕ ವಿದೇಶಾಂಗ ಕಾರ್ಯದರ್ಶಿ ರೂಬಿಯೊ ಅಭಿಪ್ರಾಯ

ಭಾರತವೇ ಮಹಾಶಕ್ತಿ

• **ಹೊಸದಿಲ್ಲಿ:** ಭಾರತ ಮತ್ತು ಅಮೆರಿಕ ದೇಶಗಳು ತಮ್ಮ ನಡುವಿನ ಬಿಗುವಿನ ಸಂಬಂಧವನ್ನು ಸರಿಪಡಿಸುವ ಸ್ಪಷ್ಟ ಮುನ್ಸೂಚನೆ ನೀಡಿವೆ. ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಮತ್ತು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಅವರು ಭಾನುವಾರ ಭೇಟಿಯಾಗಿ ವ್ಯಾಪಾರ, ವೀಸಾ, ಇಂಧನ ಭದ್ರತೆ, ಗಡಿಯಾಚೆಗಿನ ಭಯೋತ್ಪಾದನೆ ಮತ್ತು ಪಶ್ಚಿಮ ಏಷ್ಯಾ ಸಂಘರ್ಷದ ಪರಿಣಾಮಗಳಂತಹ ಸೂಕ್ಷ್ಮ ವಿಷಯಗಳ ಕುರಿತು ಮುಕ್ತ ಚರ್ಚೆ ನಡೆಸಿದರು.

ನಾಲ್ಕು ದಿನಗಳ ಭಾರತ ಪ್ರವಾಸದಲ್ಲಿರುವ ರೂಬಿಯೊ, ಹೊಸದಿಲ್ಲಿಯನ್ನು ಜಾಗತಿಕ ಮಹಾಶಕ್ತಿ ಎಂದು ಬಣ್ಣಿಸಿದರು. ಕಳೆದ ಎರಡು ದಶಕಗಳಿಂದ ಭಾರತ–ಅಮೆರಿಕ ಸಂಬಂಧದಲ್ಲಿದ್ದ ವೇಗ ಕಡಿಮೆಯಾಗಿದೆ ಎಂಬ ವಾದಗಳನ್ನು ತಳ್ಳಿಹಾಕಿದ ಅವರು, ಪ್ರಸ್ತುತ ಅಮೆರಿಕ ಆಡಳಿತದ ಅವಧಿ ಮುಗಿಯುವ ವೇಳೆಗೆ ಉಭಯ ದೇಶಗಳ ಬಾಂಧವ್ಯ ಮತ್ತಷ್ಟು ಬಲಗೊಳ್ಳಲಿದೆ ಎಂದು ಆಶ್ವಾಸನೆ ನೀಡಿದರು.

ಜಾಗತಿಕ ಸ್ಥಿರತೆಗೆ ಭಾರತದ 5 ಅಂಶಗಳ ಕಾರ್ಯಸೂಚಿ: ಚರ್ಚೆಯ ವೇಳೆ ಜೈಶಂಕರ್ ಅವರು ಭಾರತದ ವಿದೇಶಾಂಗ ನೀತಿಯ ಆದ್ಯತೆ ಗಳನ್ನು ಒಳ ಗೊಂಡ 5 ಅಂಶಗಳ ಕಾರ್ಯಸೂಚಿ ಪ್ರಸ್ತಾಪಿಸಿದರು.

1. ಸಂಘರ್ಷಗಳನ್ನು ಬಗೆಹರಿಸಲು ಸದಾ ಸಂವಾದ ಮತ್ತು ರಾಜತಾಂತ್ರಿಕತೆ ಬೆಂಬಲಿಸುವುದು.
2. ಸುರಕ್ಷಿತ ಮತ್ತು ತಡೆರಹಿತ ಕಡಲ ವ್ಯಾಪಾರಕ್ಕೆ ಬೆಂಬಲ ನೀಡುವುದು.
3. ಅಂತಾರಾಷ್ಟ್ರೀಯ ಕಾನೂನುಗಳಿಗೆ ಕಟ್ಟುನಿಟ್ಟಿನ ಗೌರವ ನೀಡುವುದು.
4. ಮಾರುಕಟ್ಟೆ ಪಾಲು ಮತ್ತು ಸಂಪನ್ಮೂಲಗಳನ್ನು ಅಸ್ತ್ರವಾಗಿ ಬಳಸಿಕೊಳ್ಳುವುದನ್ನು ವಿರೋಧಿಸುವುದು.
5. ಜಾಗತಿಕ ಆರ್ಥಿಕತೆಯ ಅಪಾಯ ತಗ್ಗಿಸಲು ವಿಶ್ವಾಸಾರ್ಹ ಪಾಲುದಾರಿಕೆ ಮತ್ತು ಸ್ಥಿತಿಸ್ಥಾಪಕ ಪೂರೈಕೆ ಸರಪಳಿಗಳನ್ನು ನಂಬುವುದು.

ತೈಲ ಬೆಲೆ ನಿಯಂತ್ರಣ ಅಗತ್ಯ: ಪಶ್ಚಿಮ ಏಷ್ಯಾದ ಬಿಕ್ಕಟ್ಟು ಭಾರತದ ಇಂಧನ ಭದ್ರತೆಯ ಮೇಲೆ ಭಾರೀ ಹೊಡೆತ ನೀಡಿದ್ದು, ಆರ್ಥಿಕ ಸಂಕಷ್ಟ ತಂದೊಡ್ಡಿದೆ ಎಂದು ಜೈಶಂಕರ್ ಬಲವಾಗಿ ಪ್ರತಿಪಾದಿಸಿದರು. ➡ಪುಟ ೪



ವೀಸಾ ನೀತಿಗೆ ಜೈಶಂಕರ್ ಕಳವಳ

ಟ್ರಂಪ್ ಆಡಳಿತದ ಹೊಸ ವೀಸಾ ಮತ್ತು ವಲಸೆ ನೀತಿಗಳಿಂದಾಗಿ ಭಾರತೀಯರ ಕಾನೂನುಬದ್ಧ ಸಂಚಾರಕ್ಕೆ ತೊಂದರೆಯಾಗಬಾರದು ಎಂದು ಜೈಶಂಕರ್ ಕಳವಳ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ರೂಬಿಯೊ, ವಲಸೆ ವ್ಯವಸ್ಥೆಯನ್ನು ಸುಧಾರಿಸುವಾಗ ಪರಿವರ್ತನೆಯ ಅವಧಿಯಲ್ಲಿ ಕೆಲವು ಸಣ್ಣಪುಟ್ಟ ಅಡೆತಡೆಗಳು ಎದುರಾಗುವುದು ಸಹಜ. ಆದರೆ ಇದು ಭಾರತವನ್ನು ಗುರಿಯಾಗಿಸಿಕೊಂಡು ಮಾಡುತ್ತಿರುವುದಲ್ಲ. ಅಂತಿಮವಾಗಿ ಇದು ಎಲ್ಲರಿಗೂ ಸಹಕಾರಿಯಾಗಲಿದೆ ಎಂದರು.

ಸುಸ್ಥಿರವಾದ ವ್ಯಾಪಾರ ಒಪ್ಪಂದ ಶೀಘ್ರ: ಮಾರ್ಕೊ ರೂಬಿಯೊ

ಆರ್ಥಿಕ ಸಂಬಂಧಗಳ ಕುರಿತು ಮಾತನಾಡಿದ ರೂಬಿಯೊ, ಭಾರತ ಮತ್ತು ಅಮೆರಿಕ ಶೀಘ್ರದಲ್ಲೇ ಉಭಯ ದೇಶಗಳ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಪೂರಕವಾದ ಹಾಗೂ ಸುಸ್ಥಿರವಾದ ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸಲಿವೆ ಎಂದು ತಿಳಿಸಿದರು. ಇದೇ ವೇಳೆ, ಚೀನಾ ಮತ್ತು ಪಾಕಿಸ್ತಾನದೊಂದಿಗೆ ಅಮೆರಿಕ ಹೊಂದಿರುವ ಸಂಬಂಧಗಳು ಭಾರತದೊಂದಿಗಿನ ಆಯಕಟ್ಟಿನ ಮೈತ್ರಿಗೆ ಯಾವುದೇ ಧಕ್ಕೆ ತರುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತೆ

ಭಯೋತ್ಪಾದನೆ ವಿರುದ್ಧ ಭಾರತದ ನಿಲುವು ಶೂನ್ಯ ಸಹಿಷ್ಣುತೆಯದ್ದಾಗಿದೆ ಎಂದು ಜೈಶಂಕರ್ ಪುನರುಚ್ಚರಿಸಿದರು. 26/11ರ ಮುಂಬೈ ದಾಳಿಯ ಪ್ರಮುಖ ಸಂಚುಕೋರನನ್ನು ಕಳೆದ ವರ್ಷ ಅಮೆರಿಕ ಭಾರತಕ್ಕೆ ಹಸ್ತಾಂತರಿಸಿದ್ದನ್ನು ಅವರು ಶ್ಲಾಘಿಸಿದರು. ನಂತರ ಜೈಶಂಕರ್ ಅವರು ಎಕ್ಸ್ ಜಾಲತಾಣದಲ್ಲಿ ಪೋಸ್ಟ್ ಮಾಡಿ, ಈ ಚರ್ಚೆಯು ಅತ್ಯಂತ ಸಕಾರಾತ್ಮಕವಾಗಿತ್ತು ಎಂದು ಉಲ್ಲೇಖಿಸಿದ್ದಾರೆ. ರಕ್ಷಣೆ, ಕೃತಕ ಬುದ್ಧಿಮತ್ತೆ (ಎಐ), ಪರಮಾಣು ಮತ್ತು ಅಪರೂಪದ ಖನಿಜಗಳ ಕ್ಷೇತ್ರಗಳಲ್ಲಿನ ಸಹಕಾರದ ಕುರಿತು ಪರಾಮರ್ಶೆ ನಡೆಸಲಾಗಿದೆ ಎಂದು ಹೇಳಿದರು. ಮಂಗಳವಾರ ನಡೆಯಲಿರುವ ಕ್ವಾಡ್ (ಕ್ಯುಯುಎಡಿ) ವಿದೇಶಾಂಗ ಸಚಿವರ ಸಭೆ ಯಲ್ಲಿ ಪಾಲ್ಗೊಳ್ಳಲು ಎದುರು ನೋಡುತ್ತಿರುವುದಾಗಿ ತಿಳಿಸಿದರು. ಇದೇ ವೇಳೆ, ರೂಬಿಯೊ ಅವರು ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ (ಎನ್‌ಎಸ್‌ಎ) ಅಜಿತ್ ದೋವಲ್ ಅವರನ್ನೂ ಭೇಟಿ ಯಾಗಿ ರಕ್ಷಣೆ ಮತ್ತು ಟ್ರಸ್ಟ್ (ಟಿಆರ್‌ಯುಎಸ್‌ಟಿ) ಯೋಜನೆ ಕುರಿತು ಚರ್ಚಿಸಿದರು.

ವೈಯಕ್ತಿಕ ವಿಚಾರ ಬದಿಗಿರಿಸಿ ಕೆಲಸ ಮಾಡಿ

ಪಕ್ಷ ಸಂಘಟನೆಗೆ ಈಗಲೇ ಸಜ್ಜಾಗಿ: ನಿತಿನ್ ಸೂಚನೆ



• **ಬೆಂಗಳೂರು:** ಮುಂಬರುವ ಕರ್ನಾಟಕ ವಿಧಾನಸಭಾ ಚುನಾವಣೆಗೆ ಮುನ್ನ ಪಕ್ಷದ ಸಂಘಟನೆಯನ್ನು ತಳಮಟ್ಟದಿಂದ ಬಲಪಡಿಸುವ ಮಾಸ್ಟರ್ ಪ್ಲಾನ್‌ನೊಂದಿಗೆ ಬೆಂಗಳೂರಿಗೆ ಆಗಮಿಸಿದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ಅದರಲ್ಲಿ ಯಶಸ್ವಿಯಾಗಿದ್ದಾರೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಬಳಿಕ ಮೊದಲ ಬಾರಿಗೆ ಕರ್ನಾಟಕಕ್ಕೆ ಆಗಮಿಸಿದ ನಿತಿನ್ ನವೀನ್ ಅವರು ರಾಜ್ಯದಲ್ಲಿ ಪಕ್ಷ ಸಂಘಟನೆ, ಅದರ ಲಯ, ಹದ ಎಲ್ಲವನ್ನೂ ಕಂಡುಕೊಂಡಿದ್ದಾರೆ. ಅಲ್ಲದೇ ಪಕ್ಷದ ನಾಯಕರು ಮತ್ತು ಪ್ರಮುಖರಿಗೆ ಅಗತ್ಯ ಸಂದೇಶವನ್ನೂ ರವಾನಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನಕ್ಕೆ ಆಗಮಿಸಿದ ನಿತಿನ್ ನವೀನ್ ಅವರಿಗೆ ಪಕ್ಷದ ಕಾರ್ಯಕರ್ತರು ಮತ್ತು ಪದಾಧಿಕಾರಿಗಳು ಭರ್ಜರಿ ಸ್ವಾಗತ ನೀಡಿದರು. ಬಳಿಕ ವಿಶೇಷ ಸಂಘಟನಾ ಸಭೆ ಆಯೋಜಿಸಲಾಗಿತ್ತು. ಇದರಲ್ಲಿ ರಾಜ್ಯಾಧ್ಯಕ್ಷರು, ರಾಜ್ಯ ಪದಾಧಿಕಾರಿಗಳು, ಪ್ರತಿಪಕ್ಷ ನಾಯಕರು, ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಜಿಲ್ಲಾಧ್ಯಕ್ಷರನ್ನೊಳಗೊಂಡಂತೆ ಸುಮಾರು ಎರಡು ಗಂಟೆ ಸಭೆ ನಡೆಸಿದ್ದಾರೆ. ಈ ವೇಳೆ ವೈಯಕ್ತಿಕ ವಿಚಾರಗಳನ್ನು ಬದಿಗಿಟ್ಟು ಪಕ್ಷ ಸಂಘಟನೆಗೆ ಒತ್ತು ನೀಡುವಂತೆ ನಿತಿನ್ ನವೀನ್ ಸೂಚನೆ ನೀಡಿದ್ದಾರೆ. ವ್ಯಕ್ತಿಗಿಂತ ಪಕ್ಷ ಮೊದಲು, ಪಕ್ಷಕ್ಕಿಂತ ದೇಶ ಮೊದಲು ಎಂಬ ಸಂದೇಶ ಪುನರುಚ್ಚರಿಸಿದ್ದಾರೆ. ➡ಪುಟ ೪

ಕೋರ್ ಕಮಿಟಿ ಸಭೆ

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರ ಅಧ್ಯಕ್ಷತೆಯಲ್ಲಿ ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಭಾನುವಾರ ಪಕ್ಷದ ರಾಜ್ಯ ಕೋರ್ ಕಮಿಟಿ ಸಭೆ ನಡೆಯಿತು. ಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್ .ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ನಿಕಟಪೂರ್ವ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸಂಸದ ಗೋವಿಂದ ಕಾರಜೋಳ, ಪ್ರತಿಪಕ್ಷ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣಸ್ವಾಮಿ, ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ, ಮಾಜಿ ಸಚಿವ ಬಿ.ಶ್ರೀರಾಮುಲು, ಪುದುಚೇರಿ ರಾಜ್ಯ ಉಸ್ತುವಾರಿ ನಿರ್ಮಲ್‌ಕುಮಾರ್ ಸುರಾಣಾ, ಕರ್ನಾಟಕ ರಾಜ್ಯ ಉಸ್ತುವಾರಿ ಮತ್ತು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಾ. ರಾಧಾಮೋಹನ್ ದಾಸ್ ಅಗ್ರವಾಲ್, ರಾಜ್ಯ ಸಹ–ಉಸ್ತುವಾರಿ ಸುಧಾಕರ್ ರೆಡ್ಡಿ, ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಭಾಗವಹಿಸಿದ್ದರು.

ವಿದೇಶಿ ಶಕ್ತಿಗಳ ಕೈಗೊಂಬೆಯಾಗಿರುವ ಕಾಂಗ್ರೆಸ್‌ನ ರಾಹುಲ್: ಬಿಜೆಪಿ ಆರೋಪ

ನರೇಂದ್ರ ಮೋದಿ ಸರ್ಕಾರ ಅಸ್ಥಿರಗೊಳಿಸಲು ಷಡ್ಯಂತ್ರ

• **ಹೊಸದಿಲ್ಲಿ:** ವಿದೇಶಿ ಶಕ್ತಿಗಳ ಕೈಗೊಂಬೆಯಾಗಿರುವ ಕಾಂಗ್ರೆಸ್‌ನ ರಾಹುಲ್ ಗಾಂಧಿ, ದೇಶದಲ್ಲಿ ಅರಾಜ ಕತೆ ಸೃಜಿಸುವ ಮೂಲಕ ನರೇಂದ್ರ ಮೋದಿ ಸರಕಾರವನ್ನು ಅಸ್ಥಿರಗೊಳಿಸಲು ಷಡ್ಯಂತ್ರ ನಡೆಸುತ್ತಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ.

ವರ್ಷದೊಳಗೆ ಮೋದಿ ಸರಕಾರ ಬೀಳುವುದೆಂದು ರಾಹುಲ್ ಕಾಂಗ್ರೆಸ್‌ನ ಅಲ್ಪಸಂಖ್ಯಾತ ಇಲಾಖೆಯ ಸಲಹಾ ಮಂಡಳಿ ಸಭೆಯಲ್ಲಿ ಹೇಳಿರುವುದು ಬಯಲಾಗಿದ್ದು, ಇದು ವಿಪಕ್ಷ ನಾಯಕ ಮೋದಿ ಸರಕಾರದ ವಿರುದ್ಧ ನಡೆಸುತ್ತಿರುವ ಷಡ್ಯಂತ್ರಕ್ಕೆ ಸಾಕ್ಷಿಯಾಗಿದೆ. ಕಾಂಗ್ರೆಸ್ ಸಹಿತ ಹಲವು ವಿಪಕ್ಷಗಳನ್ನು ಒಳಗೊಂಡ ಟೂಲ್‌ಕಿಟ್ ಗ್ಯಾಂಗ್ ಭಾರತವನ್ನು ಅಸ್ಥಿರಗೊಳಿಸುವ ಕನಸು ಕಾಣುತ್ತಿದ್ದು, ಇದಕ್ಕಾಗಿ ಭಾರೀ ಷಡ್ಯಂತ್ರ ಬೆಸೆದಿವೆ ಎಂಬುದು ರಾಹುಲ್ ಹೇಳಿಕೆಯಿಂದ ದೃಢಪಟ್ಟಿದೆ ಎಂದು ಕೇಂದ್ರ ಸಚಿವ ಪಿಯೂಷ್ ಗೋಯಲ್ ಎಕ್ಸ್‌ಗೆ ಹಿಂದಿಯಲ್ಲಿ ಹಾಕಿರುವ ಪೋಸ್ಟ್ ನಲ್ಲಿ ಆರೋಪಿಸಿದ್ದಾರೆ. ರಾಹುಲ್‌ನದು ಸಾಮಾನ್ಯ ಹೇಳಿಕೆಯಲ್ಲ, ದೇಶದಲ್ಲಿ ಅರಾಜಕತೆ ಹಬ್ಬುವ ಗಂಭೀರ ಷಡ್ಯಂತ್ರ ಇದರ ಹಿಂದಿದೆ ಎಂದು ಸಚಿವರು ಕಳವಳ




ವ್ಯಕ್ತಪಡಿಸಿದ್ದಾರೆ. ಮೋದಿ ಸರಕಾರ ವರ್ಷದೊಳಗೆ ಕುಸಿಯುವುದೆಂದು ರಾಹುಲ್ ಕಾಂಗ್ರೆಸ್ ಸಭೆಯಲ್ಲಿ ಹೇಳಿದ್ದಾರೆಂಬ ಮಾಧ್ಯಮ ವರದಿಯನ್ನು ಸಚಿವರು ಎಕ್ಸ್‌ನಲ್ಲಿ ಶೇರ್ ಮಾಡಿದ್ದಾರೆ.

ಇಂಡಿಕೂಟದ ಷಡ್ಯಂತ್ರ ಫಲಿಸದು: ದೇಶದ ಜನತೆ ಪ್ರಧಾನಿ ಮೋದಿ ಬಗ್ಗೆ ತುಂಬು ಗೌರವ–ಶ್ರದ್ಧೆ ಹೊಂದಿದ್ದಾರೆ. ಚುನಾವಣೆಯಲ್ಲಿ ಸ್ಪರ್ಧಿಸಿ ಬಿಜೆಪಿಯನ್ನು ನೇರಾನೇರ ಸೋಲಿಸುವುದು ಕಷ್ಟ ಅಥವಾ ಮೋದಿ ಸರಕಾರದ ಪದ ಚ್ಯುತಿ ಅಷ್ಟು ಸುಲಭವಲ್ಲವೆಂಬ ಸತ್ಯ ಅರಿತಿರುವ ರಾಹುಲ್ ಮತ್ತವರ ಸಹವರ್ತಿಗಳು ದೇಶಾದ್ಯಂತ ಹಿಂಸೆಗೆ ಪ್ರಚೋದಿಸಲು ಯತ್ನಿಸುತ್ತಿದ್ದಾರೆ. ಅವರ ಭಾರತ ವಿರೋಧಿ ದ್ವೇಷ ಅದೆಷ್ಟು ಗಾಢವಾಗಿ ದೆಯೆಂದರೆ, ದೇಶದಲ್ಲಿ ಯಾವುದೇ ಧನಾತ್ಮಕ ವಿದ್ಯಮಾನ, ಸಾಧನೆ ನಡೆದರೂ ಅದನ್ನವರು ಸಹಿಸುವುದಿಲ್ಲ. ➡ಪುಟ ೪

ತೆಲಂಗಾಣದಲ್ಲಿ 51, ಆಂಧ್ರಪ್ರದೇಶದಲ್ಲಿ 16 ಮಂದಿ ಸಾವು | ಹೆಚ್ಚಿದ ಆತಂಕ

ಬಿಸಿಲಾಘಾತಕ್ಕೆ ಒಂದೇ ದಿನ 67 ಬಲಿ

• **ಹೈದರಾಬಾದ್:** ತೆಲುಗು ರಾಜ್ಯಗಳಾದ ತೆಲಂಗಾಣ ಮತ್ತು ಆಂಧ್ರಪ್ರದೇಶಲ್ಲಿ ಸೂರ್ಯನ ಕಡುಬಿಸಿಲು ಪ್ರಾಣಹಾನಿ ಸೃಷ್ಟಿಸುತ್ತಿದೆ. ಶನಿವಾರ ಒಂದೇ ದಿನ ಉಭಯ ರಾಜ್ಯಗಳಲ್ಲಿ ಬಿಸಿಲಾಘಾತಕ್ಕೆ 67 ಜನರು ಮೃತಪಟ್ಟಿದ್ದಾರೆ. ತಾಪಮಾನ 45 ಡಿಗ್ರಿ ಸೆಲ್ಸಿಯಸ್ ದಾಟುತ್ತಿರುವುದರಿಂದ ಸಾರ್ವಜನಿಕರ ಜೀವನ ಅಸ್ತವ್ಯಸ್ತಗೊಂಡಿದೆ.



ತೆಲಂಗಾಣದಲ್ಲಿ ಶನಿವಾರ ಒಂದೇ ದಿನ 51 ಜನರು ಬಿಸಿಲಿನ ತಾಪಕ್ಕೆ ಬಲಿಯಾಗಿದ್ದಾರೆ. ವಾರಂಗಲ್ ಜಿಲ್ಲೆಯೊಂದರಲ್ಲೇ ಗರಿಷ್ಠ 23 ಮಂದಿ ಮೃತಪಟ್ಟಿದ್ದಾರೆ. ಕರೀಂನಗರದಲ್ಲಿ 11, ಖಮ್ಮಂನಲ್ಲಿ 7, ಆದಿಲಾಬಾದ್ ಹಾಗೂ ನಲ್ಗೊಂಡದಲ್ಲಿ ತಲಾ ಐವರು ಅಸುನೀಗಿದ್ದಾರೆ. ಮೃತರ ಕುಟುಂಬಗಳಿಗೆ ತಲಾ 4 ಲಕ್ಷ ರೂ. ಪರಿಹಾರವನ್ನು ಕಂದಾಯ ಮತ್ತು ವಿಪತ್ತು ನಿರ್ವಹಣಾ ಸಚಿವ ಪೊಂಗುಲೇಟಿ ಶ್ರೀನಿವಾಸ ರೆಡ್ಡಿ ಘೋಷಿಸಿದ್ದಾರೆ. ರಾಜ್ಯದ 15 ಜಿಲ್ಲೆಗಳಲ್ಲಿ 45 ಡಿಗ್ರಿ ತಾಪಮಾನ ದಾಖಲಾಗಿದ್ದು, ಕೊಥಗುಡೆಮ್‌ನಲ್ಲಿ ಗರಿಷ್ಠ 46.3 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ವರದಿಯಾಗಿದೆ.

ಆಂಧ್ರದಲ್ಲೂ ಪ್ರಖರ ಬಿಸಿಗಾಳಿ: ನೆರೆರಾಜ್ಯ ಆಂಧ್ರಪ್ರದೇಶದಲ್ಲೂ ಬಿಸಿಲಿನ ತಾಪಕ್ಕೆ 16 ಮಂದಿ ಜೀವ ಕಳೆದುಕೊಂಡಿದ್ದಾರೆ. ಇದರಲ್ಲಿ ಎನ್‌ಟಿಆರ್, ಕೃಷ್ಣಾ ಮತ್ತು ಗುಂಟೂರು ಜಿಲ್ಲೆಗಳಲ್ಲೇ 12 ಸಾವುಗಳು ಸಂಭವಿಸಿವೆ. ಕೃಷ್ಣಾ ಜಿಲ್ಲೆಯ ಕನುಮೋಲುವಿನಲ್ಲಿ 45.8 ಡಿಗ್ರಿ ತಾಪಮಾನ ದಾಖಲಾಗಿದೆ. ರಾಜ್ಯದ 95 ತಾಲೂಕುಗಳಲ್ಲಿ ತೀವ್ರ ಉಷ್ಣ ಗಾಳಿ ಬೀಸುತ್ತಿದ್ದು, ಹವಾಮಾನ ಇಲಾಖೆಯು ಮುನ್ನೆಚ್ಚರಿಕೆ ನೀಡಿದೆ. ಮಧ್ಯಾಹ್ನದ ಅವಧಿಯಲ್ಲಿ ಸಾರ್ವಜನಿಕರು ಅನಗತ್ಯವಾಗಿ ಹೊರಗೆ ಓಡಾಡುವುದನ್ನು ನಿಲ್ಲಿಸಬೇಕು. ಸಾಕಷ್ಟು ನೀರು ಕುಡಿಯುವ ಮೂಲಕ ದೇಹವನ್ನು ಹೈಡ್ರೇಟ್ ಆಗಿಟ್ಟುಕೊಳ್ಳಬೇಕು. ತೀರಾ ಅನಿವಾರ್ಯವಿದ್ದರೆ ಮಾತ್ರ ಮುನ್ನೆಚ್ಚರಿಕೆಗಳೊಂದಿಗೆ ಹೊರಬರಬೇಕು ಎಂದು ಆರೋಗ್ಯ ಅಧಿಕಾರಿಗಳು ಮನವಿ ಮಾಡಿದ್ದಾರೆ.

ಸರ್ಕಾರದ ತುರ್ತು ಕ್ರಮಗಳು

- ಬಸ್ ನಿಲ್ದಾಣ, ಮಾರುಕಟ್ಟೆ ಹಾಗೂ ಪ್ರಮುಖ ರಸ್ತೆಗಳಲ್ಲಿ ತಣ್ಣೀರು, ಮಜ್ಜಿಗೆ ಮತ್ತು ಒಆರ್‌ಎಸ್ ಪ್ಯಾಕೆಟ್‌ಗಳ ವಿತರಣೆಗೆ ಸೂಚನೆ
- ಮೂಕ ಪ್ರಾಣಿ–ಪಕ್ಷಿಗಳ ರಕ್ಷಣೆಗಾಗಿ ಆಯಕಟ್ಟಿನ ಸ್ಥಳಗಳಲ್ಲಿ ಕುಡಿಯುವ ನೀರಿನ ಟ್ಯಾಂಕ್ ಹಾಗೂ ಮಣ್ಣಿನ ಮಡಕೆಗಳ ವ್ಯವಸ್ಥೆ

ವೈಟ್‌ಹೌಸ್ ಬಳಿ ಮತ್ತೆ ಗುಂಡಿನ ಸದ್ದು

- ದಾಳಿಕೋರನ ಹತ್ಯೆಗೈದ ಸಿಬ್ಬಂದಿ
- ಟ್ರಂಪ್ ಸುತ್ತ ನಡೆದ 3ನೇ ಘಟನೆ

• **ವಾಷಿಂಗ್ಟನ್:** ಅಮೆರಿಕ ಅಧ್ಯಕ್ಷರ ನಿವಾಸ ವೈಟ್ ಹೌಸ್ ಭದ್ರತಾ ತಪಾಸಣಾ ಕೇಂದ್ರದ ಬಳಿ ಗುಂಡಿನ ದಾಳಿ ನಡೆಸಿದ ಶಂಕಿತನೊಬ್ಬನನ್ನು ಯುಎಸ್ ಸೀಕ್ರೆಟ್ ಸರ್ವಿಸ್ ಅಧಿಕಾರಿಗಳು ಸದೆಬಡಿದಿದ್ದಾರೆ. ಕಳೆದ ಒಂದು ತಿಂಗಳ ಅವಧಿಯಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುತ್ತಮುತ್ತ ನಡೆದ 3ನೇ ಗುಂಡಿನ ದಾಳಿ ಘಟನೆ ಇದಾಗಿದೆ. ➡ಪುಟ ೪

ಮಂಗಳೂರು
ಸೋಮವಾರ, 25 ಮೇ 2026
ಸಂಪುಟ 48, ಸಂಚಿಕೆ 67 ಪುಟಗಳು 12+6
■ ಬೆಂಗಳೂರು ■ ಮಂಗಳೂರು
■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಕೆನಡಾಗೆ ಪಿಯೂಷ್ ಗೋಯಲ್ ಇಂದು

• ಪುಟ ೦೭

ನರೇಂದ್ರ ಮೋದಿ ಸರ್ಕಾರ ಅಸ್ಥಿರಗೊಳಿಸಲು ಷಡ್ಯಂತ್ರ

ಪುಟ ೨➡ ಆದರೆ ಈ ದೇಶದ ಜನತೆ ವಿವೇಚನಾಶೀಲರು, ರಾಹುಲ್ ಗಾಂಧಿಯ ನೈಜ ಮುಖದ ಜತೆ ಜತೆಗೆ ಟೂಲ್‌ಕಿಟ್ ಗ್ಯಾಂಗ್ ಅಥವಾ ವಿಪಕ್ಷಗಳು ರಾಷ್ಟ್ರೀಯ ಹಿತಾಸಕ್ತಿ ವಿರುದ್ಧ ಕೆಲಸ ಮಾಡುತ್ತಿರುವುದನ್ನು ದೇಶದ ಜನರು ಸಂಪೂರ್ಣ ಅರ್ಥಮಾಡಿಕೊಂಡಿದ್ದಾರೆ. ಹಾಗಾಗಿಯೇ ಈ ಬಾರಿಯೂ ಈ ಶಕ್ತಿಗಳಿಗೆ ತಕ್ಕ ಪಾಠ ಕಲಿಸಿದ್ದಾರೆ ಎಂದು ಹೇಳಿರುವ ಸಚಿವ ಗೋಯಲ್, ಭಾರತವನ್ನು ಅಸ್ಥಿರಗೊಳಿಸುವ, ದೇಶಕ್ಕೆ ಕಿಚ್ಚಿಕ್ಕುವ ಇಂಡಿ ಕೂಟದ ಷಡ್ಯಂತ್ರ ಎಂದಿಗೂ ಫಲಿಸದು ಎಂದು ಎಚ್ಚರಿಸಿದ್ದಾರೆ.

ಅಪಾಯಕಾರಿ ಚಿಂತನೆ ಬಹಿರಂಗ: ರಾಹುಲ್ ಹೇಳಿಕೆ ಬರೇ ರಾಜಕೀಯ ಹತಾಶೆಯನ್ನಷ್ಟೇ ಅಲ್ಲ, ಬದಲಾಗಿ ಭಾರತವನ್ನು ಅಸ್ಥಿರಗೊಳಿಸುವ ಗಂಡಾಂತರಕಾರಿ ಚಿಂತನೆಯನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಿದೆ. ಯಾವಾಗ ಭಾರತವು ಜಾಗತಿಕ ವೇದಿಕೆಯಲ್ಲಿ ತನ್ನ ಸ್ಥಾನಮಾನವನ್ನು ಬಲಿಷ್ಠಗೊಳಿಸುವುದೋ ಆಗೆಲ್ಲ ದೇಶದ ಆರ್ಥಿಕತೆ ನವಶೃಂಗ ತಲುಪಿದೆ ಮತ್ತು ಪ್ರಧಾನಿ ಮೋದಿಯವರ ನಾಯಕತ್ವವನ್ನು ಇಡೀ ಜಗತ್ತು ಅರ್ಥೈಸಿಕೊಂಡಿದೆ ಎಂದು ಬಿಜೆಪಿ ರಾಜ್ಯಸಭಾ ಸಂಸದ ಸುಧಾಂಶು ತ್ರಿವೇದಿ ಹೇಳಿದ್ದಾರೆ. ಭಾರತ ವಿರೋಧಿ ಅಂತಾರಾಷ್ಟ್ರೀಯ ಶಕ್ತಿಗಳು ಭಾರತದ ಹೆಸರು ಕೆಡಿಸಲು ಅಭಿಯಾನ ನಡೆಸುತ್ತಿದ್ದು, ಈ ಶಕ್ತಿಗಳಿಗೆ ಕಾಂಗ್ರೆಸ್ ಬೆಂಬಲ ನೀಡುತ್ತಿರುವುದು ದುರಂತವೆಂದು ಬಿಜೆಪಿ ರಾಷ್ಟ್ರೀಯ ವಕ್ತಾರರಾಗಿರುವ ತ್ರಿವೇದಿ ಟೀಕಿಸಿದ್ದಾರೆ.


ಲೆಕ್ಕಾಚಾರದ ರಾಜನೀತಿ ಭಾಗ: ಈಚಿನ ವಿಧಾನಸಭಾ ಚುನಾವಣೆಗಳ ಸಂದರ್ಭ ವಿದೇಶ ಪ್ರವಾಸ ಕೈಗೊಂಡಿದ್ದ ರಾಹುಲ್, ಚುನಾವಣೆ ನಡೆಯುವ ರಾಜ್ಯಗಳ ಬೆರಳೆಣಿಕೆಯ ರ್ಯಾಲಿಗಳಲ್ಲಿ ಪಾಲ್ಗೊಂಡಿದ್ದರು ಎಂದು ಗಮನ ಸೆಳೆದಿರುವ ತ್ರಿವೇದಿ, ವಿದೇಶದಲ್ಲಿದ್ದುಕೊಂಡು ಭಾರತದ ಸಂಸ್ಥೆಗಳನ್ನು ಅಪಮಾನಿಸುವುದು ಅಥವಾ ಇಕ್ಕಟ್ಟಿಗೆ ಸಿಲುಕಿಸುವುದು, ಭಾರತ ವಿರೋಧಿ ಹೇಳಿಕೆಗಳಿಗೆ ಪ್ರಚೋದನೆ ಮತ್ತು ಭಾರತದಲ್ಲಿ ಅಸ್ಥಿರತೆಯಾಗುವುದೆಂದು ಭವಿಷ್ಯ ಹೇಳುವುದು ಇವೆಲ್ಲ ಕಾಕತಾಳೀಯವಲ್ಲ, ಬದಲಾಗಿ ಟೂಲ್‌ಕಿಟ್ ಗ್ಯಾಂಗ್‌ನ ತೀರಾ ಲೆಕ್ಕಾಚಾರದ ರಾಜನೀತಿ ಭಾಗವಾಗಿದೆ ಎಂದು ತ್ರಿವೇದಿ ಎಕ್ಸ್‌ಗೆ ಹಿಂದಿಯಲ್ಲಿ ಹಾಕಿರುವ ಪೋಸ್ಟ್‌ನಲ್ಲಿ ಆರೋಪಿಸಿದ್ದಾರೆ.

ದೇಶದಲ್ಲಿ ದೊಂಬಿ, ಹಿಂಸೆಗೆ ರಾಹುಲ್ ಸಂಚು: ದೇಶದಲ್ಲಿ ದೊಂಬಿಗೆ ಪ್ರಚೋದಿಸುವ ಮೂಲಕ ಕಾಂಗ್ರೆಸ್ ನಾಯಕ ರಾಹುಲ್ ಮೋದಿ ಸರಕಾರವನ್ನು ಪದಚ್ಯುತಗೊಳಿಸುವ ಸಂಚು ನಡೆಸಿದ್ದಾರೆ. ರಾಹುಲ್ ಗಾಂಧಿ ಮಗದೊಮ್ಮೆ ಉದ್ಧಟತನ ಮೆರೆದಿದ್ದಾರೆ. ಮೋದಿ ಸರಕಾರ ವರ್ಷದೊಳಗೆ ಬೀಳುವುದೆಂದು ಶನಿವಾರದ ಸಭೆಯೊಂದರಲ್ಲಿ ಘೋಷಿಸಿರುವುದು ಇದೇ ಷಡ್ಯಂತ್ರದ ಹಿನ್ನೆಲೆಯಲ್ಲಿ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರಾ ವಿಡಿಯೋ ಸಂದೇಶದಲ್ಲಿ ರಾಹುಲ್‌ಗೆ ಛೀಮಾರಿ ಹಾಕಿದ್ದಾರೆ.

ಭಾರತದ ಪ್ರಜಾಸತ್ತೆಯನ್ನು ಅಂತ್ಯಗೊಳಿಸುವ ದುರುದ್ದೇಶದಿಂದ, ತನ್ನ ವಿದೇಶ ಪ್ರವಾಸಗಳಿಗೆ ಹಣ ನೀಡುತ್ತಿರುವ ವಿದೇಶಿ ಕಂಪನಿಗಳು ಮತ್ತು ಜಾರ್ಜ್ ಸೊರೊಸ್‌ನಂತಹ ಈತನ 'ಗುರು'ಗಳ ಕುಮ್ಮಕ್ಕಿನ ಮೇರೆಗೆ ರಾಹುಲ್ ವಿದೇಶಿ ಅಜೆಂಡಾವನ್ನು ಕಾರ್ಯಗತಗೊಳಿಸಲು ಯತ್ನಿಸುತ್ತಿದ್ದಾರೆಂಬುದು ರಾಹುಲ್ ಹೇಳಿಕೆಯಿಂದಲೇ ದೃಢಪಟ್ಟಿದೆ. ಆದರೆ ದೇಶದ ಜನತೆ ಬುದ್ಧಿವಂತರು. ಭಾರತೀಯರಲ್ಲಿ ಆಧ್ಯಾತ್ಮಿಕ ಪ್ರಜ್ಞೆ ಗಾಢವಾಗಿದೆ. ಭಾರತದ ಜನರನ್ನು ಉದ್ರೇಕಿಸಿ ದೊಂಬಿ ಹುಟ್ಟುಹಾಕಲು ನಿಮಗೆ ಸಾಧ್ಯವಾಗುವುದೇ? ಅಸ್ಸಾಂ, ಪ.ಬಂಗಾಳದಲ್ಲಿ ಏನಾಯಿತೆಂಬುದನ್ನು ಕಂಡಿದ್ದೀರಾ. ಭಾರತದಲ್ಲಿ ಸಂವಿಧಾನವು ಶಾಶ್ವತ ಮತ್ತು ಪ್ರಜಾಸತ್ತೆಗೆ ಎಂದಿಗೂ ವಿಜಯವಾಗುತ್ತದೆ. ಇದು ಭಾರತದ 140ಕೋಟಿ ಜನತೆಯ ಸರಕಾರ. ಸೊರೊಸ್ ಸಹಿತ ನಿಮ್ಮ ವಿದೇಶಿ ಮಾಸ್ಟರ್‌ಗಳು ದೇಶಕ್ಕೆ ಯಾವುದೇ ಹಾನಿಯೊಡ್ಡಲಾಗದು ಎಂದು ಸಂಬಿತ್ ಪಾತ್ರಾ ಎಚ್ಚರಿಸಿದ್ದಾರೆ.

ಜಗತ್ತಿನ ಹಲವು ಭಾಗಗಳಲ್ಲಿನ ಸಂಘರ್ಷದಿಂದಾಗಿ ಹಲವಾರು ದೇಶಗಳಿಂದು ಸಮಸ್ಯೆಗಳಲ್ಲಿ ತೊಳಲಾಡುತ್ತಿವೆ. ಆದರೆ ಭಾರತವು ಪ್ರಧಾನಿ ಮೋದಿ ನಾಯಕತ್ವದಲ್ಲಿ ದಿನೇ ದಿನೇ ಪ್ರಗತಿ ಸಾಧಿಸುತ್ತಿದೆ. ಈ ಸರಕಾರಕ್ಕೆ ದೇಶವಾಸಿ ಜನರ ಆಶೀರ್ವಾದ ಬಲ ಇರುವವವರೆಗೂ ಸರಕಾರ ನಿರಂತರವಾಗಿ ದೇಶಸೇವೆ ಮಾಡಲಿದೆ ಎಂಬ ಕಟು ವಾಸ್ತವವನ್ನು ಸಂಬಿತ್ ಪಾತ್ರಾ ರಾಹುಲ್‌ಗೆ ಮನವರಿಕೆ ಮಾಡಿದ್ದಾರೆ.

ರಾಮ ಬಾಣ



ಕಿಡಿ ನುಡಿ

◆ ವಾಸುದೇವರಾವ್ ಕಕ್ಕೆನೇಜಿ

◈ ಇಡಿಯಾಗಿದ್ದುದನ್ನು ಒಡೆಯುವುದೇ ಎಡ ಪಂಥೀಯರ ವಾದ – ಚಕ್ರವರ್ತಿ ಸೂಲಿಬೆಲೆ
– ಒಡೆಯನಾಗಲು ಒಡೆದು ಆಳುವುದಕ್ಕಿಂತ ಸುಲಭದ ದಾರಿ ಬೇರೇನಿದೆ?

ದಿನ ಭವಿಷ್ಯ

ಮೇಷ
ಹರುಷದ ದಿನ. ಮನೆಯಲ್ಲಿ, ವೃತ್ತಿಯಲ್ಲಿ ಪೂರಕ ವಾತಾವರಣ. ಎಲ್ಲರ ಜತೆ ತಾಳ್ಮೆಯಿಂದ ವ್ಯವಹರಿಸಿ. ಕೋಪತಾಪ ನಿಯಂತ್ರಿಸಿಕೊಳ್ಳಿ.

ವೃಷಭ
ಸಮಸ್ಯೆ ಬಗ್ಗೆ ಮುಕ್ತವಾಗಿ ಚಿಂತಿಸಿ. ನಿಮ್ಮ ಲೋಪವಿದ್ದರೆ ಸರಿ ಮಾಡಿಕೊಳ್ಳಿ. ಖರ್ಚು ಹೆಚ್ಚಿದರೂ ಅದು ಅವಶ್ಯ ಕಾರ್ಯವಾಗಲಿದೆ.

ಮಿಥುನ
ಕೈಗೊಂಡ ಕಾರ್ಯ ಸಫಲ. ಸಮಸ್ಯೆಯನ್ನು ಜಾಣ್ಮೆಯಿಂದ ಪರಿಹರಿಸಿ. ಸಂಘರ್ಷ ತಪ್ಪಿಸಿ. ಹಳೆಯ ಕಹಿನೆನಪು ಮರೆತು ಮುಂದೆ ನೋಟ ಹರಿಸಿ.

ಕಟಕ
ಹಣ ಗಳಿಕೆಯ ಹಾದಿ ಸುಗಮ. ಉದ್ಯಮ ದಲ್ಲಿ ಯಶಸ್ಸು. ವೃತ್ತಿಯಲ್ಲಿ ಮೂಡಿದ್ದ ಕಿರಿಕಿರಿ ನಿವಾರಣೆ. ಮನೆಯವರ ಸಹಕಾರ, ಸಾಮರಸ್ಯ.

ಸಿಂಹ
ನಿಮಗೋ ಪೂರಕ ದಿನ. ಗುರಿ ಈಡೇರಿಕೆ. ಪ್ರೀತಿಪಾತ್ರರ ಜತೆ ಕಾಲಕ್ಷೇಪ. ಖರ್ಚು ಹೆಚ್ಚಿದರೂ ಹಣದ ಕೊರತೆ ಕಾಡದು. ಮಿತ್ರ ಸಂಗಮ.

ಕನ್ಯಾ
ವೃತ್ತಿಯಲ್ಲಿ ಪೂರಕ ಬೆಳವಣಿಗೆ. ಪರಿಶ್ರಮಕ್ಕೆ ತಕ್ಕ ಪ್ರತಿಫಲ ಸಿಗಲಿದೆ. ಆಪ್ತರ ಜತೆ ಹರ್ಷದ ಕೂಟ. ಆದಾಯ ಹೆಚ್ಚಳ, ಖರ್ಚೂ ಅಧಿಕವೆ.

ತುಲಾ
ಒತ್ತಡದ ದಿನ. ಅದನ್ನು ಸಂಭಾಳಿಸುವುದೇ ಮುಖ್ಯವಾಗಲಿದೆ. ಆಪ್ತರ ಜತೆ ಭಿನ್ನಮತ ನಿವಾರಿಸಿ. ಸ್ನೇಹಿತರಿಂದ ಅನವಶ್ಯ ಕಿರಿಕಿರಿ ಉಂಟಾದೀತು.

ವೃಶ್ಚಿಕ
ಮುಖ್ಯ ಕೆಲಸ ಇಂದೇ ಪೂರೈಸಿಕೊಳ್ಳಿ. ನಾಳೆಗೆ ಬಾಕಿ ಇಡದಿರಿ. ಸಂಗಾತಿ ಜತೆಗೆ ಸಾಮರಸ್ಯ. ಆರ್ಥಿಕ ಗಳಿಕೆ ಹೆಚ್ಚಳ. ಬಂಧುಗಳ ನೆರವು.

ಧನು
ಅನವಶ್ಯ ಚಿಂತೆ ನಿಮ್ಮ ಕೆಲಸ ಕೆಡಿಸಬಹುದು. ಭಾವನೆ ನಿಯಂತ್ರಿಸಿ. ಕುಟುಂಬ ಸದಸ್ಯರ ಜತೆ ಸಮಯ ಕಳೆದು ಚಿಂತೆ ಮರೆಯಿರಿ.

ಮಕರ
ಕಠಿಣ ಶ್ರಮದ ಬಳಿಕವಷ್ಟೇ ಉತ್ತಮ ಫಲ ದೊರಕೀತು. ಸುಲಭ ದಾರಿ ಹುಡುಕುವುದು ವ್ಯರ್ಥ. ಅನವಶ್ಯ ವಾಗ್ವಾದ ದಲ್ಲಿ ತೊಡಗಬೇಡಿ.

ಕುಂಭ
ಏಕತಾನತೆ ಬಿಟ್ಟು ಹೊಸದರತ್ತ ಮುಖ ಮಾಡಿ. ಇದ್ದ ಹಣವೆಲ್ಲ ಖರ್ಚು ಮಾಡುವ ಬದಲು ಉಳಿತಾಯಕ್ಕೆ ಗಮನ ಕೊಡಿ.

ಮೀನ
ಖಾಸಗಿ ಬದುಕಲ್ಲಿ ಸಂವಹನದ ಕೊರತೆ. ಗೊಂದಲ ಏರ್ಪಡ ಬಹುದು. ಹಣದ ವ್ಯವಹಾರದಲ್ಲಿ ಜಾಗ್ರತೆ ವಹಿಸಿ. ಖರ್ಚು ಅಧಿಕ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ: 6,2,7,1

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್‌ರಿಂದ ಸಲಹೆ: ಸಿಟಿ ರವಿ

ಬಿಜೆಪಿ ಅಧಿಕಾರಕ್ಕೆ ತರಲು ಯತ್ನ

◆ **ಬೆಂಗಳೂರು:** ಮುಂಬರುವ ಚುನಾವಣೆಗಳಲ್ಲಿ ಬಿಜೆಪಿ ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ವಹಿಸಬೇಕಾದ ಕ್ರಮಗಳ ಕುರಿತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ಸಲಹೆ ಮತ್ತು ಸೂಚನೆಗಳನ್ನು ನೀಡಿದರು ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ತಿಳಿಸಿದ್ದಾರೆ.

ನಿತಿನ್ ನವೀನ್ ಅವರೊಂದಿಗೆ ನಡೆದ ಸಭೆಯ ನಂತರ ರಾಜ್ಯ ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಸಭೆಯ ಕುರಿತು ಮಾಧ್ಯಮಗಳಿಗೆ ವಿವರಿಸಿದರು. ನಿತಿನ್ ನವೀನ್ ಅವರು ಅಧ್ಯಕ್ಷರಾದ ನಂತರ ಕರ್ನಾಟಕಕ್ಕೆ ಅಧಿಕೃತ ಭೇಟಿ ನೀಡಿದ್ದಾರೆ. ಪಕ್ಷದ ಸಂಸದರು, ಶಾಸಕರು, ಜಿಲ್ಲಾಧ್ಯಕ್ಷರ ಮಟ್ಟದ ಮೇಲಿನವರೊಂದಿಗೆ ಸಂವಾದ ನಡೆಸಿದರು.

ಪಕ್ಷದ ಪರಿಶ್ರಮದಿಂದಾಗಿ ಇಂದು 22ಕ್ಕೂ ಹೆಚ್ಚು ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದಲ್ಲಿದೆ. 400ಕ್ಕೂ ಹೆಚ್ಚು ಸಂಸದರಿದ್ದಾರೆ, 2000ಕ್ಕೂ ಹೆಚ್ಚು ಶಾಸಕರಿದ್ದಾರೆ. ಇದು ಪಕ್ಷದ ಮೇಲೆ ಜನರು ಇಟ್ಟು ವಿಶ್ವಾಸದಿಂದ ಸಾಧ್ಯವಾಗಿದೆ. ಇದೇ ನಂಬಿಕೆಯನ್ನು ಮುಂದಿನ ಚುನಾವಣೆಗಳಲ್ಲಿ ಉಳಿಸಿಕೊಳ್ಳಬೇಕು. ಪ್ರತಿಯೊಬ್ಬ ಮುಖಂಡರು, ಶಾಸಕರು ಕಾರ್ಯಕರ್ತರೊಂದಿಗೆ ಆತ್ಮೀಯ ಸಂಬಂಧ ಇಟ್ಟುಕೊಳ್ಳಬೇಕು. ಜನರೊಟ್ಟಿಗೆ ಸಂವಾದ ನಡೆಸಬೇಕು, ಜನಪರ ಕಾರ್ಯಗಳ ಮೂಲಕವೇ ಗೆಲ್ಲಬೇಕು, ಜನಪರ ಹೋರಾಟಗಳ ಮೂಲಕ ಸಮಸ್ಯೆಗಳ ನಿವಾರಣೆಗೆ ಪರಿಹಾರ ಕೊಡಬೇಕು ಎಂಬ ಮಾತನ್ನು ಹೇಳಿದರು ಎಂದು ತಿಳಿಸಿದರು.

ಕಾಂಗ್ರೆಸ್ ವೈಫಲ್ಯದಿಂದ ಬಿಜೆಪಿ ಅಧಿಕಾರಕ್ಕೇರುವ ಭ್ರಮೆ ಬೇಡ: ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಜನರಿಗೆ ಯಾವ ವಿಶ್ವಾಸವನ್ನು ಮೂಡಿಸಿ ಹೇಗೆ ಅಧಿಕಾರಕ್ಕೆ ಬಂದಿತ್ತೋ ಆ ವಿಶ್ವಾಸ ಉಳಿಸಿಕೊಳ್ಳಲು ವಿಫಲವಾಗಿದೆ. ಭ್ರಷ್ಟಾಚಾರದ ವಿರುದ್ಧ ಮಾತನಾಡಿದವರು ಈಗ ಎಲ್ಲ ಸಚಿವರು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಹೆಚ್ಚಿನ ಸಚಿವರ ಮೇಲೆ ಭ್ರಷ್ಟಾಚಾರ ಆರೋಪಗಳಿವೆ, ಮುಖ್ಯಮಂತ್ರಿಗಳೂ ಭ್ರಷ್ಟಾಚಾರ ಆರೋಪದಿಂದ ಮುಕ್ತರಾಗಿಲ್ಲ. ಯುವಕರು ಹತಾಶರಾಗಿದ್ದಾರೆ. ಅತಿ ಹೆಚ್ಚು ಮಹಿಳೆಯರ ನಾಪತ್ತೆ ಪ್ರಕರಣ ಆಗಿದೆ. ಹೀಗೆ ಎಲ್ಲದರಲ್ಲೂ ಕಾಂಗ್ರೆಸ್ ವಿಫಲವಾಗಿದೆ. ಇದೊಂದೇ ಬಿಜೆಪಿ ಅಧಿಕಾರಕ್ಕೆ ಬರಲು ಸಹಾಯ ಮಾಡದು. ಮುಂದೆ ನಾವೇ ಅಧಿಕಾರಕ್ಕೆ ಬರುವ ಭ್ರಮೆಯಲ್ಲಿ ಇರಬೇಡಿ ಎಂದು ಎಚ್ಚರಿಕೆ ನೀಡಿದರು ಎಂದು ಹೇಳಿದರು.



ಮುಂದಿನ ಚುನಾವಣೆಗೆ ಗಮನ ನೀಡಲು ಸಲಹೆ

ಮುಂದಿನ ಮೂರು ದಿನಗಳ ಪ್ರವಾಸದ ವೇಳೆ ವಿವರವಾಗಿ ಚರ್ಚೆ ಮಾಡಲಾಗುವುದು. ವಿಧಾನ ಪರಿಷತ್, ವಿಧಾನಸಭೆ ಉಪ ಚುನಾವಣೆ, ಜಿಬಿಎ ಚುನಾವಣೆ ಕಡೆಗೆ ಗಮನಕೊಡಿ. ಗೆಲ್ಲಲು ಕಾರ್ಯಯೋಜನೆ ತಯಾರಿಸಿ. ಕೋರ್ ಕಮಿಟಿ ಈ ಬಗ್ಗೆ ಅವಲೋಕನ ಮಾಡಲಿ ಎಂದು ರಾಷ್ಟ್ರೀಯ ಅಧ್ಯಕ್ಷರು ತಿಳಿಸಿದ್ದಾರೆ ಎಂದು ಸಿ.ಟಿ ರವಿ ಹೇಳಿದರು.

ತಮಿಳುನಾಡಿನಲ್ಲಿ ಡಿಎಂಕೆ ವೈಫಲ್ಯ ಎದ್ದು ಕಾಣುತ್ತಿತ್ತು. ಇದೊಂದೇ ಎಐಡಿಎಡಿಎಂಕೆ ಅಧಿಕಾರಕ್ಕೆ ಬರಲು ಸಹಾಯ ಮಾಡಬಹುದು ಎಂದು ಭಾವಿಸಲಾಗಿತ್ತು. ಆದರೆ, ಟಿವಿಕೆ ಪಕ್ಷ ಮಧ್ಯೆ ಬಂದು ಅಧಿಕಾರ ಪಡೆಯಿತು. ಕರ್ನಾಟಕದಲ್ಲೂ ಬಿಜೆಪಿ ನಾಯಕರು ಮುಂದೆ ನಮ್ಮದೇ ಅಧಿಕಾರ ಎಂದು ಸುಮ್ಮನೆ ಕೂರಬೇಡಿ. ದೇಶದಲ್ಲಿ ಕಾಂಗ್ರೆಸ್‌ಗೆ ಮೋದಿ ಅವರು ಒಳ್ಳೆಯ ಪರ್ಯಾಯ ಹೇಗೆ ಕೊಟ್ಟರೋ ಅದೇ ರೀತಿ ರಾಜ್ಯದಲ್ಲಿ ಕಾಂಗ್ರೆಸ್‌ಗೆ ಬಿಜೆಪಿ ಉತ್ತಮ ಪರ್ಯಾಯ ಎಂದು ಜನ ಭಾವಿಸುವ ರೀತಿ ಅಧಿಕಾರಕ್ಕೆ ಬರಬೇಕು ಎಂದರು.

> ಕರ್ನಾಟಕದ ಅಸ್ಮಿತೆ ಜೊತೆಗೆ ರಾಷ್ಟ್ರದ ಗೌರವ ಉಳಿಸಿ ನಾವು ಕೆಲಸ ಮಾಡಬೇಕಾಗಿದೆ. ದೇಶದ ಸಮಗ್ರತೆಗೆ ಅಡ್ಡಿಯಾಗದಂತೆ ಎಲ್ಲಾ ರಾಜ್ಯಗಳಲ್ಲಿ ಪ್ರಾದೇಶಿಕ ಅಸ್ಮಿತೆ ಉಳಿಸಿಕೊಂಡು ರಾಷ್ಟ್ರದ ಸಮಗ್ರತೆ ಕಾಪಾಡಿ ಎಂದು ನಿತಿನ್ ನವೀನ್ ಸಲಹೆ ನೀಡಿದ್ದಾರೆ.
>
> ■ **ಸಿ.ಟಿ. ರವಿ,** ವಿಧಾನಪರಿಷತ್ ಸದಸ್ಯ

ಕಾಂಗ್ರೆಸ್ ವೈಫಲ್ಯ ಇಟ್ಟುಕೊಂಡು ನಿರಂತರವಾಗಿ ಹೋರಾಟದ ಮೂಲಕ ತಂಡವಾಗಿ ಕೆಲಸ ಮಾಡಬೇಕು. ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಮೂರು ವರ್ಷಗಳ ಆಡಳಿತ ವೈಫಲ್ಯ ಕುರಿತು ಆರೋಪಪಟ್ಟಿ ತಯಾರಿಸಿ ಜನರ ಮುಂದಿಡಲು ಯೋಜನೆ ರೂಪಿಸಿ. ಕರ್ನಾಟಕವು ಕೇವಲ ದಕ್ಷಿಣ ಭಾರತದಲ್ಲಿ ಮಾತ್ರವಲ್ಲ ದೇಶದಲ್ಲೇ ಬಲವಾದ ಸಂಘಟನೆ ಹೊಂದಿರುವ ರಾಜ್ಯವಾಗಿದೆ. ಇಲ್ಲಿ ಜನಪರ ಹೋರಾಟ ಮಾಡಿದರೆ ಜನರೇ ಅಧಿಕಾರಕ್ಕೆ ಬರುವ ಶಕ್ತಿ ಕೊಡುತ್ತಾರೆಂಬುದನ್ನು ಅರಿಯಿರಿ. ವ್ಯಕ್ತಿ ಹಿತಕ್ಕಾಗಿ ಕೆಲಸ ಮಾಡದೇ ಜನರ ಮತ್ತು ಪಕ್ಷದ ಹಿತ ರಕ್ಷಿಸುವ ಕೆಲಸ ಮಾಡಿ. ರಾಜ್ಯದಲ್ಲಿನ ಅರಾಜಕ ಶಕ್ತಿ ಬಗ್ಗೆಯೂ ಎಚ್ಚರ ವಹಿಸಿ ಎಂದು ಸಲಹೆ ನೀಡಿದರು ಎಂದು ತಿಳಿಸಿದರು.

84 ಸಾವಿರ ಜನರ ಪಿಂಚಣಿ ರದ್ದು

ಪುಟ ೧➡ **1.20 ಲಕ್ಷಕ್ಕೆ ಆದಾಯ ಮಿತಿ ನಿಗದಿ:** ಸಾಮಾಜಿಕ ಭದ್ರತಾ ಯೋಜನೆಗಳ ಸವಲತ್ತು ಪಡೆಯಲು ಆದಾಯ ಮಿತಿಯನ್ನು 2021ರ ಫೆ.10ರ ಆದೇಶದಂತೆ 32,000 ರೂ.ಗಳಿಗೆ ನಿಗದಿಪಡಿಸಲಾಗಿದೆ. ಆದರೆ, ಬಡತನ ರೇಖೆಗಿಂತ ಕೆಳಗಿರುವ ವರ್ಗಗಳ ಕುಟುಂಬಗಳು ಪಡೆಯುವ ಪಡಿತರ ಚೀಟಿಗಳಿಗಾಗಿ ಆದಾಯ ಮಿತಿಯನ್ನು 1,20,000 ರೂ. ಗಳಿಗೆ ನಿಗದಿಪಡಿಸಿರುವಂತೆ, ಸಾಮಾಜಿಕ ಭದ್ರತಾ ಯೋಜನೆಗಳ ಪಿಂಚಣಿಗಳಿಗಾಗಿಯೂ ಇದೇ ಆದಾಯ ಮಿತಿಯನ್ನು ನಿಗದಿಪಡಿಸಲು ಅನೇಕ ಸಂಘ ಸಂಸ್ಥೆಗಳು ಮನವಿ ಸಲ್ಲಿಸಿವೆ.

ಬಡತನ ರೇಖೆಗಿಂತ ಕೆಳಗಿರುವ ಸಾರ್ವಜನಿಕರೂ ಮನವಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ವಿಚಾರದಲ್ಲಿ ನ್ಯಾಯಾಲಯವೂ ಸಹ ನಿರ್ದೇಶನ ನೀಡಿರುವುದರಿಂದ 1,20,000 ರೂ. ಗಳಿಗೆ ನಿಗದಿಪಡಿಸಲು ಸಚಿವ ಸಂಪುಟದ ಅನುಮೋದನೆಗೆ ಸಲ್ಲಿಸಲು ಕ್ರಮ ವಹಿಸಲಾಗಿದೆ.

ದಾಖಲೆ ಒದಗಿಸಿದರೆ ಕ್ರಮ

ಒಟ್ಟು 14,68,723 ಸಂದೇಹಾಸ್ಪದ ಫಲಾನುಭವಿಗಳ ಪಿಂಚಣಿಗಳನ್ನು ಸ್ಥಗಿತಗೊಳಿಸಿ ಅವರ ಮೊಬೈಲ್ ದೂರವಾಣಿ ಸಂಖ್ಯೆಗೆ ಎಸ್‌ಎಂಎಸ್ ಮೂಲಕ ಸಂದೇಶ ಕಳುಹಿಸಿ ಆದಾಯ ದೃಢೀಕರಣ ಪತ್ರ ಅಥವಾ ಇತರೆ ದಾಖಲಾತಿಗಳನ್ನು ಸಂಬಂಧಪಟ್ಟ ತಹಸೀಲ್ದಾರ್ ಕಚೇರಿಯಲ್ಲಿ 30 ದಿನಗಳೊಳಗಾಗಿ ಹಾಜರುಪಡಿಸಿ ನಿಯಮಾನುಸಾರ ಪಿಂಚಣಿ ಪಡೆಯಬಹುದಾಗಿದೆ. ರದ್ದುಗೊಳಿಸಲು ತೀರ್ಮಾನಿಸಿರುವ 84,211 ಪ್ರಕರಣಗಳು ಮತ್ತು ಸ್ಥಗಿತಗೊಳಿಸಲು ತೀರ್ಮಾನಿಸಿರುವ 14,68.723 ಪ್ರಕರಣಗಳು ಭೌತಿಕ ಪರಿಶೀಲನೆಗೆ ಬಾಕಿ ಇರುವ 3,89,834 ಪ್ರಕರಣಗಳನ್ನು ಹೊರತುಪಡಿಸಿ ಉಳಿಕೆ ಎಲ್ಲಾ ಪಿಂಚಣಿದಾರರಿಗೆ ಪಿಂಚಣಿಗಳನ್ನು ಪಾವತಿಸಲು ತೀರ್ಮಾನಿಸಲಾಗಿದ್ದು, ಕ್ರಮ ವಹಿಸಲಾಗುತ್ತಿದೆ.

- ಒಟ್ಟು ಪಿಂಚಣಿದಾರರು 82.98 ಲಕ್ಷ
- ಸಂದೇಹಾಸ್ಪದ ಪಿಂಚಣಿದಾರರು 23.12 ಲಕ್ಷ
- ರದ್ದುಗೊಳಿಸಲು ತೀರ್ಮಾನಿಸಿರುವ ಪಿಂಚಣಿದಾರರು 84,211
- ಪಿಂಚಣಿ ಸ್ಥಗಿತಗೊಳ್ಳಲಿರುವ ಫಲಾನುಭವಿಗಳು 14,68,723
- ಭೌತಿಕವಾಗಿ ಪರಿಶೀಲನೆ ಕೈಗೊಂಡಿರುವ ಪ್ರಕರಣಗಳು 19,22,833
- ಭೌತಿಕ ಪರಿಶೀಲನೆಗೆ ಬಾಕಿ ಇರುವ ಪ್ರಕರಣಗಳು 3,89,834

ವೈಟ್‌ಹೌಸ್ ಬಳಿ ಮತ್ತೆ ಗುಂಡಿನ ಸದ್ದು

ಪುಟ ೨➡ ಶನಿವಾರ ಸಂಜೆ 6 ಗಂಟೆಯ ಸುಮಾರಿಗೆ 17ನೇ ಸ್ಟ್ರೀಟ್ ಮತ್ತು ಪೆನ್ಸಿಲ್ವೇನಿಯಾ ಅವೆನ್ಯೂ ಪ್ರದೇಶದಲ್ಲಿದ್ದ ವ್ಯಕ್ತಿ, ತನ್ನ ಬ್ಯಾಗ್‌ನಿಂದ ಶಸ್ತ್ರಾಸ್ತ್ರ ಹೊರತೆಗೆದು ಏಕಾಏಕಿ ಗುಂಡಿನ ದಾಳಿ ಆರಂಭಿಸಿದ್ದಾನೆ. ತಕ್ಷಣ ಕಾರ್ಯಪ್ರವೃತ್ತರಾದ ಭದ್ರತಾ ಅಧಿಕಾರಿಗಳು ಆತನ ಮೇಲೆ ಪ್ರತಿಯಾಗಿ ಗುಂಡು ಹಾರಿಸಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಆತನನ್ನು ಆಸ್ಪತ್ರೆಗೆ ಸಾಗಿಸಲಾಯಿತಾದರೂ ಆತ ಮೃತಪಟ್ಟಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೃತನನ್ನು 21 ವರ್ಷದ ನಸಿರೆ ಬೆಸ್ಟ್ ಎಂದು ಗುರುತಿಸಲಾಗಿದೆ. ಈತ 2025ರ ಜುಲೈನಲ್ಲೂ ವೈಟ್ ಹೌಸ್‌ಗೆ ಅಕ್ರಮವಾಗಿ ನುಗ್ಗಲು ಯತ್ನಿಸಿ ಬಂಧನಕ್ಕೊಳಗಾಗಿದ್ದ. ಕೋರ್ಟ್ ಆದೇಶ ಉಲ್ಲಂಘಿಸಿ ತಲೆಮರೆಸಿಕೊಂಡಿದ್ದ ಈತ, ಈಗ ನೇರವಾಗಿ ಗುಂಡಿನ ದಾಳಿಗೆ ಇಳಿದಿರುವುದು ತೀವ್ರ ಆತಂಕ ಮೂಡಿಸಿದೆ. ಪ್ರಕರಣದ ತನಿಖೆ ಮುಂದುವರಿದಿದೆ.

ಪಕ್ಷ ಸಂಘಟನೆಗೆ ಈಗಲೇ ಸಜ್ಜಾಗಿ: ನಿತಿನ್ ಸೂಚನೆ

ಪುಟ ೨➡ ಜನಪ್ರತಿನಿಧಿಗಳು ಕೂಡ ತಮ್ಮ ಕ್ಷೇತ್ರದಲ್ಲಿ ಕೆಲಸ ಮಾಡುವುದಷ್ಟೇ ಅಲ್ಲದೇ ಸಂಘಟನೆಗೆ ಶ್ರಮಿಸುವಂತೆ ಸೂಚಿಸಿದ್ದಾರೆ. ರಾಜ್ಯದಲ್ಲೀಗ ಆಡಳಿತ ನಡೆಸುತ್ತಿರುವ ಕಾಂಗ್ರೆಸ್‌ನ ವೈಫಲ್ಯಗಳನ್ನು ಜನರಿಗೆ ಎತ್ತಿತೋರಿಸಿ ಬಿಜೆಪಿ ವಿಶ್ವಾಸಾರ್ಹ ಪಕ್ಷ ಎಂಬುದನ್ನು ಮನವರಿಕೆ ಮಾಡಿಕೊಡಲು ಎಲ್ಲರೂ ಸಂಘಟನಾತ್ಮಕವಾಗಿ ಶ್ರಮಿಸಬೇಕು.

ಪಕ್ಷಕ್ಕಾಗಿ ಕಟಿಬದ್ಧರಾಗಿ ದುಡಿಯಬೇಕು ಎಂದು ಸಲಹೆ ನೀಡಿದ್ದಾರೆ. ರಾಜ್ಯ ಪದಾಧಿಕಾರಿಗಳು ಜಿಲ್ಲಾ ಮತ್ತು ಮಂಡಲ ಮಟ್ಟಕ್ಕೆ ತೆರಳಿ ಸಂಘಟನೆಯಲ್ಲಿ ತೊಡಗಬೇಕು. ಅಲ್ಲದೇ ಜಿಲ್ಲಾ ಪಟ್ಟದ ಪದಾಧಿಕಾರಿಗಳು ಶಕ್ತಿಕೇಂದ್ರ, ಬೂತ್ ಮಟ್ಟಕ್ಕೂ ಹೋಗಿ ದುಡಿಯಲು ಪ್ರೇರೇಪಿಸಿದ್ದಾರೆ. ಮುಂದಿನ ಚುನಾವಣೆಗೆ ಈಗಿಂದಲೇ ಸಿದ್ಧತೆ ನಡೆಸುವಂತೆ ಕರೆ ನೀಡಿದ ರಾಷ್ಟ್ರೀಯ ಅಧ್ಯಕ್ಷರ ಭಾಷಣ ಆಲಿಸಿದ ರಾಜ್ಯ ಪದಾಧಿಕಾರಿಗಳು ಶಾಸಕರು, ಸಂಸದರ ಸಹಿತ ಜಿಲ್ಲಾಧ್ಯಕ್ಷರು ಉಲ್ಲಸಿತರಾಗಿದ್ದಾರೆ. ರಾಷ್ಟ್ರೀಯ ಅಧ್ಯಕ್ಷರ ಭೇಟಿಯು ಕಮಲ ಪಾಳಯದಲ್ಲಿ ಸಂಚಲನವನ್ನೇ ಮೂಡಿಸಿದೆ.

ಫಾಲ್ಟಾದಲ್ಲಿ ಬಿಜೆಪಿ ಜಯಭೇರಿ

ಪುಟ ೧➡ ಪಂಡಾ ಅವರನ್ನು 1ಲಕ್ಷ ಮತಗಳಿಂದ ಗೆಲ್ಲಿಸುವಂತೆ ತಾನು ಮನವಿ ಮಾಡಿದ್ದೆ. ಆದರೆ ಜನರು ನನ್ನ ಟಾರ್ಗೆಟ್ ಮೀರಿ ಮತ ನೀಡಿದ್ದಾರೆ ಎಂದು ಪೋಸ್ಟ್‌ನಲ್ಲಿ ಸಿಎಂ ಸಂತಸ ಹಂಚಿಕೊಂಡಿದ್ದಾರೆ. ಕ್ಷೇತ್ರದ ಅಭಿವೃದ್ಧಿ ಮೂಲಕ, ಚಿನ್ನದ ಫಾಲ್ಟಾ ನಿರ್ಮಾಣ ಮುಖೇನ ಫಾಲ್ಟಾ ಜನತೆಯ ಋಣವನ್ನು ತಾನು ಸಂದಾಯ ಮಾಡುವೆ ಎಂದು ಸಿಎಂ ಅಧಿಕಾರಿ ಜನರಿಗೆ ಭರವಸೆ ನೀಡಿದ್ದಾರೆ.

ಟಿಎಂಸಿಯನ್ನು ಕಟುವಾಗಿ ತರಾಟೆಗೆತ್ತಿಕೊಂಡ ಸಿಎಂ ಅಧಿಕಾರಿ, ಟಿಎಂಸಿ ವರ್ಷಗಟ್ಟಲೆ ಅಧಿಕಾರದಲ್ಲಿದ್ದಾಗ ಪಕ್ಷವನ್ನೇ ಮಾಫಿಯಾ ಕಂಪೆನಿಯಾಗಿ ಮಾರ್ಪಡಿಸಿ ರಾಜ್ಯದ ಸಮಸ್ತ ರಂಗಗಳನ್ನು ದುರ್ಬಳಸಿತ್ತು. ಸಾರ್ವಜನಿಕರ ಹಣ ಸುಲಿಗೆ, ಸಿಂಡಿಕೇಟ್ ಸಂಸ್ಕೃತಿಯನ್ನು ಪೋಷಿಸಿತ್ತು ಮತ್ತು ಬೆದರಿಕೆ ತಂತ್ರಗಳನ್ನು ಅನುಸರಿಸಿತ್ತು. ಟಿಎಂಸಿ ಆಡಳಿತದಲ್ಲಿ ಪ್ರಜಾಸತ್ತೆಯನ್ನು ಹೊಸಕಿ ಹಾಕಲಾಗಿತ್ತು, ಹಿಂದಿನ ಚುನಾವಣೆಗಳೆಲ್ಲವು ಬರೇ ಪ್ರಹಸನವಾಗಿತ್ತು ಎಂದವರು ಪರೋಕ್ಷವಾಗಿ ಟಿಎಂಸಿ ಪ್ರಧಾನ ಕಾರ್ಯದರ್ಶಿ ಡೈಮಂಡ್ ಹಾರ್ಬರ್ ಸಂಸದ ಅಭಿಷೇಕ್ ಬ್ಯಾನರ್ಜಿ ಉಲ್ಲೇಖಿಸಿ ಆರೋಪಿಸಿದರು. ಫಾಲ್ಟಾ ಕ್ಷೇತ್ರದ ಮತದಾರರು ಬರೋಬ್ಬರಿ 15 ವರ್ಷಗಳ ನಂತರ ಮತದಾನದ ಸ್ವಾತಂತ್ರ್ಯವನ್ನು ಮರಳಿ ಪಡೆದಿದ್ದಾರೆ. ಟಿಎಂಸಿ ಬೃಹದಾಗಿ ರಾಜಕೀಯ ತಿರಸ್ಕಾರಕ್ಕೀಡಾದ ಸನ್ನಿವೇಶದ ಆರಂಭವಿದಷ್ಟೆ. ಮುಂದಿನ ಚುನಾವಣೆಗಳಲ್ಲಿ ನೋಟಾ ವಿರುದ್ಧವೂ ಹೋರಾಟ ಮಾಡುವಂತಹ ಸನ್ನಿವೇಶ ಟಿಎಂಸಿ ನಾಯಕತ್ವಕ್ಕೆ ಎದುರಾಗಲಿದೆ. ಅಂತಹ ಸ್ಪರ್ಧೆಗೆ ಸಾಕ್ಷಿಯಾಗಲು ಪ.ಬಂಗಾಳದ ಜನತೆ ಕಾಯುತ್ತಿದ್ದಾರೆಂದು ಸಿಎಂ ಅಧಿಕಾರಿ ಹೇಳಿದರು.

ಫಾಲ್ಟಾ ತನಗೇ ಎಂದಿತ್ತು ಟಿಎಂಸಿ: ಡೈಮಂಡ್ ಹಾರ್ಬರ್ ವಲಯದಲ್ಲಿ ಟಿಎಂಸಿಯ ಸಂಘಟನಾತ್ಮಕ ಅಧಿಪತ್ಯಕ್ಕೊಂದು ದ್ಯೋತಕವಾಗಿದೆ ಫಾಲ್ಟಾ ಎಂದು ಟಿಎಂಸಿ ಪಾಳಯದಲ್ಲಿ ಬಣ್ಣಿಸಲಾಗಿತ್ತು ಮತ್ತು ಇದೇ ಹಿನ್ನೆಲೆಯಲ್ಲಿ ಚುನಾವಣೆ ಮುನ್ನ ಇಲ್ಲಿ ರಾಜಕೀಯ ಚಟುವಟಿಕೆಗಳು ಬಲು ತುರುಸಿನಿಂದ ಸಾಗಿದ್ದವು. ಪ್ರಚಾರ ಸಂದರ್ಭ ಬಿಜೆಪಿ ಮತ್ತು ಟಿಎಂಸಿ ನಾಯಕರ ಮಧ್ಯೆ ಸಾಕಷ್ಟು ವಾಗ್ಯುದ್ಧಗಳೂ ನಡೆದಿದ್ದವು. ಆದರೆ ಮತದಾನದ ಫಲಿತಾಂಶ ಟಿಎಂಸಿಯ ಎಲ್ಲಾ ಲೆಕ್ಕಾಚಾರಗಳನ್ನು ಬುಡಮೇಲು ಮಾಡಿದೆ. ಸ್ಪರ್ಧಿಗಳ ಪೈಕಿ ಹೆಚ್ಚು ತೂಕ ಕಾಯ್ದುಕೊಂಡಿದ್ದ ಮತ್ತು ಪುಷ್ಪಾ ಸ್ಟೈಲ್‌ನಲ್ಲಿ ಮಿಂಚಿದ್ದ ಜಹಂಗೀರ್ ಖಾನ್, ಮರು ಮತದಾನಕ್ಕೆ ಎರಡು ದಿನ ಮುನ್ನ ಪ್ಲೇಟ್ ಬದಲಾಯಿಸಿ, ಫಾಲ್ಟಾದ ಹಿತದೃಷ್ಟಿಯಿಂದ ತಾನು ಸ್ಪರ್ಧಿಸಲ್ಲ ಎಂದು ಘೋಷಿಸಿದ್ದರು. ಫಾಲ್ಟಾಗೆ ಸಂಬಂಧಿಸಿ ವಿಶೇಷ ಅಭಿವೃದ್ಧಿ ಪ್ಯಾಕೇಜ್‌ನ ಭರವಸೆಯನ್ನು ಸುವೇಂದು ಅಧಿಕಾರಿ ನೀಡಿರುವ ಕಾರಣ, ತಾನು ಸ್ಪರ್ಧಾಕಣದಿಂದ ಹಿಂದೆ ಸರಿಯುತ್ತಿರುವುದಾಗಿ ಖಾನ್ ಘೋಷಿಸಿದ್ದರು.

ಜನರಿಗಾಗಿ ಸಿನಿಮಾ ಮಾಡಿ



◆ **ಬೆಂಗಳೂರು:** ಹಣದ ಬಡತನ ಇದ್ದಾಗಲೇ ಗುಣಮಟ್ಟದಲ್ಲಿ ಅತ್ಯಂತ ಶ್ರೀಮಂತಿಕೆ ಇದ್ದ ಸಿನಿಮಾಗಳನ್ನು ಕೊಟ್ಟಿರುವ ಕನ್ನಡ ಚಿತ್ರರಂಗ ಈಗ ಹಣದ ಶ್ರೀಮಂತಿಕೆಯಲ್ಲಿ ಗುಣಮಟ್ಟ ಬಡವಾಗಿದೆ. ಇದಕ್ಕೆ ಸಿನಿಮಾ ರಂಗ ಕನ್ನಡತನದ ಬೇರುಗಳಿಂದ ಕಳಚಿಕೊಂಡಿರುವುದೇ ಕಾರಣ ಎಂದು ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅಭಿಪ್ರಾಯಪಟ್ಟರು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಆಯೋಜಿಸಿದ್ದ ವಿಚಾರ ಸಂಕಿರಣ ಉದ್ಘಾಟಿಸಿದ ಅವರು, ಶತಮಾನ ಪೂರೈಸಿರುವ ಚಂದನವನಕ್ಕೆ ಸತ್ತ್ವ, ಸಂಸ್ಕಾರದ ಜತೆಗೆ ಸಾಂಸ್ಕೃತಿಕವಾಗಿ ಆಳವಾದ ಬೇರುಗಳಿವೆ ಎಂದರು. ಆಗೆಲ್ಲಾ ಕೇವಲ ಗಲ್ಲಾಪೆಟ್ಟಿಗೆಯ ಯಶಸ್ಸಲ್ಲ, ಜನರ ಮನಸ್ಸು ಗೆಲ್ಲುವ ಉತ್ಸಾಹ ನಮ್ಮ ಸಿನಿಮಾಗಳಲ್ಲಿತ್ತು. ಇಂಥಾ ಕನ್ನಡ ಚಿತ್ರರಂಗಕ್ಕೆ ಈಗ ಮಚ್ಚಿನ ಹುಚ್ಚು ಹಿಡಿದಿದೆ. ಯಾವುದೇ ಮೌಲ್ಯಗಳಿಲ್ಲದ, ಹೀರೋಯಿಸಂ ಅನ್ನೇ ನಂಬಿಕೊಂಡಿರುವ ಚಿತ್ರಗಳಿಂದಾಗಿ ವಾರ್ಷಿಕ ಚಿತ್ರಗಳ ಸಂಖ್ಯೆ ಮಿತಿ ಮೀರುತ್ತಿವೆ. ಆದ್ದರಿಂದ ಹೀರೋಗಳಿಗಾಗಿ ಯಾರು ಕೂಡ ಸಿನಿಮಾ ಮಾಡಬೇಡಿ, ಜನರಿಗಾಗಿ ಸಿನಿಮಾ ಮಾಡಿ ಆಗ ಎಲ್ಲರೂ ಸಿನಿಮಾ ನೋಡುತ್ತಾರೆ. ಕನ್ನಡ ಚಿತ್ರರಂಗವು ಬೆಳೆಯುತ್ತದೆ ಎಂದು ತಿಳಿಸಿದರು.

ಪ್ರಧಾನಿ ಮೋದಿಯಿಂದ ಸಂತಾಪ, ಪರಿಹಾರ ಘೋಷಣೆ

◆ **ಕಾರವಾರ:** ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿ ಭಾನುವಾರ ಸಮುದ್ರಕ್ಕೆ ಕಪ್ಪೆ ಚಿಪ್ಪು ಹಿಡಿಯಲು ಹೋಗಿದ್ದ ಮೀನುಗಾರರು ಮೃತಪಟ್ಟ ದುರಂತ ತಿಳಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತೀವ್ರ ಆಘಾತ ಮತ್ತು ಸಂತಾಪ ವ್ಯಕ್ತಪಡಿಸಿದ್ದಾರೆ. ಸಂತ್ರಸ್ತರ ಕಷ್ಟಕ್ಕೆ ತಕ್ಷಣವೇ ಸ್ಪಂದಿಸಿರುವ ಅವರು, ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ (PM-NRF) ತುರ್ತು ಆರ್ಥಿಕ ನೆರವನ್ನು ಘೋಷಿಸಿದ್ದಾರೆ. ದುರಂತದಲ್ಲಿ ಮೃತಪಟ್ಟವರ ವಾರಸುದಾರರಿಗೆ ತಲಾ 2 ಲಕ್ಷ ರೂಪಾಯಿ ಹಾಗೂ ತೀವ್ರವಾಗಿ ಗಾಯಗೊಂಡವರಿಗೆ ತಲಾ 50 ಸಾವಿರ ರೂಪಾಯಿಗಳ ಪರಿಹಾರ ಧನವನ್ನು ಪ್ರಧಾನಿ



ಕಾರ್ಯಾಲಯ (PMO) ಪ್ರಕಟಿಸಿದೆ. ಈ ಕುರಿತು ಕಂಬನಿ ಮಿಡಿದಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಂಭವಿಸಿದ ದುರಂತದ ಬಗ್ಗೆ ಕೇಳಿ ತೀವ್ರ ಆಘಾತವಾಯಿತು. ತಮ್ಮ ಪ್ರೀತಿ ಪಾತ್ರರನ್ನು ಕಳೆದುಕೊಂಡ ಕುಟುಂಬಗಳ ದುಃಖದಲ್ಲಿ ನಾನು ಭಾಗಿಯಾಗಿದ್ದೇನೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಗಾಯಗೊಂಡವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸುತ್ತೇನೆ ಎಂದಿದ್ದಾರೆ. ದುರಂತ ನಡೆದ ಬೆನ್ನಲ್ಲೇ ಪರಿಸ್ಥಿತಿಯನ್ನು ಅವಲೋಕಿಸಿ, ಸಂತ್ರಸ್ತರ ನೋವಿಗೆ ಸ್ಪಂದಿಸಿ ತಕ್ಷಣವೇ ಪರಿಹಾರ ಘೋಷಿಸಿದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಕೃತಜ್ಞತೆ ಸಲ್ಲಿಸಿದ್ದಾರೆ.

ಭಟ್ಕಳ: ಕಪ್ಪೆಚಿಪ್ಪಿಗಾಗಿ ನದಿಗಿಳಿದ 10 ಮಂದಿ ಸಾವು

ಪುಟ ೧➡ ಮೃತಪಟ್ಟವರನ್ನು ಲಕ್ಷ್ಮೀ ಮಾದೇವ ನಾಯ್ಕ ಮಳುಮನೆ (38), ಮಾಲತಿ ಜಟ್ಟಪ್ಪ ನಾಯ್ಕ (38), ಲಕ್ಷ್ಮಿ ಅಣ್ಣಪ್ಪ ನಾಯ್ಕ (44), ಮಾಸ್ತಮ್ಮ ಮಂಜುನಾಥ ನಾಯ್ಕ (43), ಉಮೇಶ್ ಮಂಜುನಾಥ ನಾಯ್ಕ(42), ಲಕ್ಷ್ಮೀ ಶಿವರಾಮ ನಾಯ್ಕ (39), ಜ್ಯೋತಿ ನಾಗಪ್ಪ ನಾಯ್ಕ (37), ಲಕ್ಷ್ಮೀ ಮಹಾದೇವ ನಾಯ್ಕ ಎಂದು ಗುರುತಿಸಲಾಗಿದೆ. ನೀರಿನಲ್ಲಿ ಕೊಚ್ಚಿ ಹೋಗಿದ್ದ ಮೂವರಲ್ಲಿ ಮಂಜಮ್ಮ ಗೋಯ್ದ ನಾಯ್ಕ (45), ನಾಗರತ್ನ ಪರಮೇಶ್ವರ ನಾಯ್ಕ (40) ಅವರ ಶವ ಪತ್ತೆಯಾಗಿದ್ದು, ಮಾದೇವ ಬೈರಪ್ಪ ನಾಯ್ಕ (40) ಶೋಧ ಕಾರ್ಯ ಭರದಿಂದ ಸಾಗಿದೆ.

ನೀರಿನ ಸೆಳೆತಕ್ಕೆ ಸಿಲುಕ್ಕಿದ್ದ ಮಾದೇವಿ ಮಂಜುನಾಥ ನಾಯ್ಕ (60), ಲತಾ ಜಗದೀಶ ನಾಯ್ಕ (38), ನಾಗರತ್ನ ಈಶ್ವರ ನಾಯ್ಕ (40) ಎನ್ನುವವರನ್ನು ರಕ್ಷಣೆ ಮಾಡಲಾಗಿದ್ದು ಮಣಿಪಾಲದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳದಲ್ಲಿ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಆಸ್ಪತ್ರೆಗೆ ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯ, ಎಸ್ಪಿ ದೀಪನ್ ಭೇಟಿ ನೀಡಿದ್ದು ಪರಿಹಾರ ಕಾರ್ಯ ಸಾಗಿದೆ.

> ಭಟ್ಕಳ ಸಮೀಪದ ತಟ್ಟಿಹಕ್ಕಲು ಕಡಲ ತೀರದಲ್ಲಿ ಕಪ್ಪೆಚಿಪ್ಪು ಸಂಗ್ರಹಿಸಲು ಹೋದ 10 ಮಂದಿ ನೀರಿನಲ್ಲಿ ಮುಳುಗಿ ಸಾವಿಗೀಡಾಗಿರುವ ಘಟನೆ ಅತ್ಯಂತ ದುಃಖಕರ ಮತ್ತು ಹೃದಯವಿದ್ರಾವಕವಾಗಿದೆ. ಸಂತ್ರಸ್ತ ಕುಟುಂಬಗಳಿಗೆ ಆಸರೆಯಾಗಲು ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ (PM-NRF) ಸೂಕ್ತ ಮತ್ತು ಗರಿಷ್ಠ ಪ್ರಮಾಣದ ಆರ್ಥಿಕ ಪರಿಹಾರವನ್ನು ಒದಗಿಸಿಕೊಡಲು ಸಂಬಂಧಪಟ್ಟ ಸಚಿವಾಲಯ ಹಾಗೂ ಅಧಿಕಾರಿಗಳೊಂದಿಗೆ ತಕ್ಷಣವೇ ಮಾತುಕತೆ ನಡೆಸಲಾಗುವುದು.
>
> ■ **ವಿಶ್ವೇಶ್ವರ ಹೆಗಡೆ ಕಾಗೇರಿ,** ಸಂಸದ

ಭಾರತವೇ ಮಹಾಶಕ್ತಿ

ಪುಟ ೨➡ ಜಾಗತಿಕ ಬೆಳವಣಿಗೆಗಾಗಿ ಇಂಧನ ಮಾರುಕಟ್ಟೆಯನ್ನು ಸಂಕುಚಿತಗೊಳಿಸಬಾರದು ಮತ್ತು ತೈಲ ಬೆಲೆಗಳನ್ನು ನಿಯಂತ್ರಣದಲ್ಲಿಡಬೇಕು ಎಂದರು. ಭಾರತವು ಅಮೆರಿಕದಿಂದ ಇಂಧನ ಆಮದನ್ನು ಗಣನೀಯವಾಗಿ ಹೆಚ್ಚಿಸಿದೆ ಎಂದು ಉಲ್ಲೇಖಿಸಿದರು. ಭಾರತವು ಅಮೆರಿಕ, ಇಸ್ರೇಲ್, ಇರಾನ್ ಮತ್ತು ಗಲ್ಫ್ ದೇಶಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವ ಕೆಲವೇ ದೇಶಗಳಲ್ಲಿ ಒಂದಾಗಿದೆ. ನಾವು ಇದನ್ನು ಸ್ಪರ್ಧಾತ್ಮಕ ಎಂದು ನೋಡುವುದಿಲ್ಲ. ದೇಶಗಳೊಂದಿಗೆ ಸಂಬಂಧವನ್ನು ಸಮತೋಲನದಲ್ಲಿ ಕಾಯ್ದುಕೊಳ್ಳುವುದು ನಮ್ಮ ಗುರಿ ಎಂದು ಜೈಶಂಕರ್ ವಿವರಿಸಿದರು.

ಬಾಂಬ್ ತಯಾರಿಕೆಗೆ ಎಐ ಬಳಕೆ

ಪುಟ ೧➡ ತನಿಖೆಯ ಪ್ರಕಾರ, ಜಾಗತಿಕ ಭಯೋತ್ಪಾದಕ ಸಂಘಟನೆ ಅಲ್-ಖೈದಾ ಜತೆ ಸಂಪರ್ಕ ಹೊಂದಿದ್ದ ಆರೋಪಿಗಳು ತಂತ್ರಜ್ಞಾನವನ್ನು ದುರುಪಯೋಗಪಡಿಸಿಕೊಂಡು ದಾಳಿಯ ಸಂಚು ರೂಪಿಸಿದ್ದರು.

ಜಾಸಿರ್ ಇನ್-ಹೌಸ್ ಎಂಜಿನಿಯರ್: ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖವಾಗಿರುವ ಪ್ರಮುಖ ಆರೋಪಿಗಳಲ್ಲಿ ಜಾಸಿರ್ ಬಿಲಾಲ್ ವಾನಿ ಎಂಬಾತ 'ಇನ್-ಹೌಸ್ ಎಂಜಿನಿಯರ್' ಆಗಿ ಕಾರ್ಯನಿರ್ವಹಿಸುತ್ತಿದ್ದ ಎಂದು ತಿಳಿದುಬಂದಿದೆ. ಆತ ಭಾರತದಲ್ಲಿ ಅಲ್-ಖೈದಾ ಸಂಪರ್ಕಿತ ಸಂಘಟನೆ ಅನ್ಸಾರ್ ಘಜ್ವತ್-ಉಲ್-ಹಿಂದ್ (ಜಿಯುಎಚ್) ಪರವಾಗಿ ತಾಂತ್ರಿಕ ನೆರವು ನೀಡುತ್ತಿದ್ದನೆಂದು ಎನ್‌ಐಎ ಹೇಳಿದೆ.

2024–25ರ ಅವಧಿಯಲ್ಲಿ ಹರ್ಯಾಣದ ಫರಿದಾಬಾದ್‌ನ ಅಲ್ ಫಲಾಹ್ ವಿಶ್ವವಿದ್ಯಾಲಯದಲ್ಲಿ ಆತ ಹಲವು ಬಾರಿ ತಂಗಿದ್ದಾನೆ ಎಂಬ ಮಾಹಿತಿ ದೊರೆತಿದ್ದು, ಬಳಿಕ ವಿಶ್ವವಿದ್ಯಾಲಯದ ಆವರಣದಲ್ಲಿ ಶೋಧ ಕಾರ್ಯಾಚರಣೆ ಕೂಡ ನಡೆಸಲಾಗಿತ್ತು. ಈ ಪ್ರಕರಣದಲ್ಲಿ ವಿಶ್ವವಿದ್ಯಾಲಯದ ಮೂವರು ವೈದ್ಯರ ಹೆಸರುಗಳು ಕೇಳಿಬಂದಿರುವುದು ಮತ್ತಷ್ಟು ಸಂಚಲನ ಮೂಡಿಸಿದೆ. ತನಿಖೆ ವೇಳೆ ಸ್ಫೋಟಕ ತಯಾರಿಕೆಯ ವಿಧಾನಗಳೂ ಬಹಿರಂಗ ಗೊಂಡಿವೆ. ಅಮೋನಿಯಂ ನೈಟ್ರೇಟ್‌ಗೆ ಇಂಧನ ತೈಲ ಹಾಗೂ ಟ್ರಾನ್ಸ್ ಫಾರ್ಮರ್ ಆಯಿಲ್ ಬೆರೆಸಿ ಪ್ರಬಲ ಐಇಡಿ ತಯಾರಿಸಲಾಗಿತ್ತು. ಇದನ್ನು ಬ್ಯಾಟರಿ ಆಧಾರಿತ ಟೈಮಿಂಗ್ ಸಾಧನಕ್ಕೆ ಕೇಬಲ್ ಮೂಲಕ ಸಂಪರ್ಕಿಸಲಾಗಿದ್ದು, ಮನೆಯ ಸ್ವಿಚ್ ಮಾದರಿಯ ಕೈಚಾಲಿತ ವ್ಯವಸ್ಥೆಯಿಂದ ಸ್ಫೋಟ ನಡೆಸಲಾಗುತ್ತಿತ್ತು. ಆರೋಪಿಗಳು ಕೇವಲ 5ರಿಂದ 10 ನಿಮಿಷಗಳಲ್ಲಿ ಬಾಂಬ್ ಜೋಡಣೆ ಪೂರ್ಣಗೊಳಿಸುತ್ತಿದ್ದರು ಎಂದು ಎನ್‌ಐಎ ತಿಳಿಸಿದೆ.

ಕಾಶ್ಮೀರದಲ್ಲಿ ಐಇಡಿ ಪರೀಕ್ಷೆ: ಜಮ್ಮು-ಕಾಶ್ಮೀರದ ಅನಂತನಾಗ್ ಜಿಲ್ಲೆಯ ಖಾಜಿಗುಂಡ್ ಕಾಡು ಪ್ರದೇಶದಲ್ಲಿ ಆರೋಪಿಗಳು ಐಇಡಿ ಪರೀಕ್ಷೆ ನಡೆಸಿದ್ದರೆಂದು ತನಿಖೆಯಲ್ಲಿ ಬಹಿರಂಗವಾಗಿದೆ. ಸ್ಫೋಟಕ್ಕೆ ಬೇಕಾದ ಡಿಟೋನೇಟರ್‌ಗಳನ್ನು ಸಾಮಾನ್ಯ ಕಲ್ಲಿದ್ದಲು ಗಣಿಗಳಿಂದಲೇ ಸುಲಭವಾಗಿ ಪಡೆಯಲಾಗುತ್ತಿತ್ತು ಎಂಬ ಮಾಹಿತಿಯೂ ತನಿಖಾ ಸಂಸ್ಥೆಗೆ ಲಭ್ಯವಾಗಿದೆ.

ಏನಿದು ಪ್ರಕರಣ?: ಕಳೆದ ನವೆಂಬರ್ 10ರಂದು ಕೆಂಪುಕೋಟೆ ಸಮೀಪ ಸಂಭವಿಸಿದ್ದ ಸ್ಫೋಟದಲ್ಲಿ 11 ಮಂದಿ ಮೃತಪಟ್ಟಿದ್ದರು. ಇತರೆ ಹಲವರು ಗಂಭೀರವಾಗಿ ಗಾಯಗೊಂಡಿದ್ದರು. ಸ್ಫೋಟದ ದೃಶ್ಯಗಳು ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ಬಾಂಬ್ ಸ್ಫೋಟಗೊಂಡ ಕ್ಷಣದಲ್ಲಿ ಮೆಟ್ರೋ ನಿಲ್ದಾಣವೇ ನಡುಗಿದಂತಾಗಿತ್ತು. ಈ ಪ್ರಕರಣ ದೇಶದ ಭದ್ರತಾ ವ್ಯವಸ್ಥೆಗೆ ದೊಡ್ಡ ಎಚ್ಚರಿಕೆಯಾಗಿ ಪರಿಣಮಿಸಿದ್ದು, ಎಐ ತಂತ್ರಜ್ಞಾನದ ದುರುಪಯೋಗದ ಭೀತಿಯನ್ನೂ ಮತ್ತೊಮ್ಮೆ ಬೆಳಕಿಗೆ ತಂದಿದೆ.

- ಸಂಚಿನಲ್ಲಿ ಜಾಗತಿಕ ಉಗ್ರ ಸಂಘಟನೆ ಅಲ್-ಖೈದಾ ಸಂಪರ್ಕಿತ ಘಟಕ ಭಾಗಿ
- 'ಇನ್-ಹೌಸ್ ಎಂಜಿನಿಯರ್' ಆಗಿ ಕಾರ್ಯನಿರ್ವಹಿಸಿದ್ದ ಜಾಸಿರ್ ಬಿಲಾಲ್ ವಾನಿ
- ಪ್ರಕರಣದಲ್ಲಿ ವಿವಿಯ 3 ವೈದ್ಯರ ಹೆಸರು ಕೇಳಿಬಂದಿದ್ದರಿಂದಮ ಮತ್ತಷ್ಟು ಸಂಚಲನ
- ಐಇಡಿಗೆ ಅಮೋನಿಯಂ ನೈಟ್ರೇಟ್, ಇಂಧನ ತೈಲ ಮತ್ತು ಟ್ರಾನ್ಸ್‌ಫಾರ್ಮರ್ ಆಯಿಲ್ ಬಳಕೆ

ಈ ಅಂಗಳದಲ್ಲಿ ಪುಟ್ಟ ಜೀವಗಳ ಜೀವನ ಅರಳುತ್ತದೆ

ಸುಬ್ರಾಯ ನಂದೋಡಿ

ಹಳದಿ, ನೀಲಿ, ಕೆಂಪು, ಬಣ್ಣಗಳು ನಾಲ್ದೆಸೆಗಳಲ್ಲಿಯೂ ಹರಡಿಕೊಂಡಿತ್ತು.ಬಾಲಗೋಪಾಲರು ಬಣ್ಣಗಳನ್ನು ಕೈಯಲ್ಲಿ ಹಿಡಿದು ಯಶೋದೆಯರ ಜೊತೆಗೆ ಹೋಳಿ ಹಬ್ಬದ ಆನಂದವನ್ನು ಸವಿಯುತ್ತಿದ್ದರು. ಎಲ್ಲಾ ಕಡೆಯ ಸಂತೋಷವೂ ಮಾತೃಛಾಯಾದ ಅಂಗಳದಲ್ಲಿಯೇ ನೆಲೆಸಿದೆಯೇನೊ ಎಂಬಂತೆ ತೋರುತ್ತಿತ್ತು. ಆಗ ಆ ಮಕ್ಕಳೊಂದಿಗೆ ಹೋಳಿ ಆಚರಿಸಲು ಬಂದ ಸೇವಾ ಭಾರತಿ ಮಾತೃಮಂಡಳಿಯ ಸಹೋದರಿಯರ ದೃಷ್ಟಿ ಬಾಗಿಲಲ್ಲಿ ಇರಿಸಲಾಗಿರುವ ವಾರಸುದಾರರಿಲ್ಲದ ಚೀಲದ ಮೇಲೆ ಬಿತ್ತು. ಅದರಲ್ಲಿ ಯಾವುದೇ ಬಾಂಬ್ ಇರಲಾರದಲ್ಲವೇ ಎಂಬ ಸಂಶಯ ಕಾಡುತ್ತಿರುವಾಗ, ಅವರಲ್ಲಿ ಒಬ್ಬರು ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಆ ಚೀಲವನ್ನು ಆವರಣದಿಂದ ಹೊರಗೆಸೆಯಲು ಓಡಲಾರಂಭಿಸಿದಾಗ ಚೀಲದೊಳಗಿನಿಂದ ಮುಗ್ಧ ಅಳು ಕೇಳಿ ಎಲ್ಲರ ಕಾಲು ಹಿಂದೆ ಸರಿಯಿತು.

ಇದೇನಿದು? ಆ ಸಂಶಯಿಸಲ್ಪಟ್ಟ ಚೀಲದಲ್ಲಿ, ಅಸಹಾಯಕ ತಾಯಿಯ ಪುಟ್ಟದೊಂದು ಜೀವ ಇತ್ತು. ಎರಡು ದಿನಗಳ ಈ ಪುಟ್ಟ ದೇವತೆಯ ಜೊತೆಗೆ ಹಾಲಿನ ಬಾಟಲಿಯೂ ಇತ್ತು. ಅಂದುಮಾತೃಛಾಯಾ ಕುಟುಂಬಕ್ಕೆ ಹೊಸ ಸದಸ್ಯರ ಸೇರ್ಪಡೆಯಿಂದಾಗಿ ಎಲ್ಲರ ಹೋಳಿಯ ಸಂತೋಷ ದ್ವಿಗುಣಗೊಂಡಿತು.ಭೋಪಾಲದಲ್ಲಿ ನಿರಾಶ್ರಿತ ಮಕ್ಕಳಿಗಾಗಿ ಸೇವಾ ಭಾರತಿ ನಡೆಸುತ್ತಿರುವ ಈ ಶಿಶುಪಾಲನಾ ಕೇಂದ್ರಕ್ಕೆ ಬಂದ ಆ



ಪುಟ್ಟಹುಡುಗಿ ಈಗ ಅಲ್ಲಿಯವಳೇಆದಳು. ಇಲ್ಲಿಂದ ಅವಳು ಹೊಸ ಜೀವನವನ್ನು ಪಡೆಯುವವಳಿದ್ದಳು.

ಈ ಪ್ರಕಲ್ಪವು 1997ರಲ್ಲಿ ಸಂಘದ ಪ್ರಚಾಕರೂ ಮತ್ತು ಸೇವಾ ಭಾರತಿಯ ಸ್ಥಾಪಕರೂಆದ ದಿವಂಗತ ವಿಷ್ಣು ಕುಮಾರ್ಜೀಯವರ ಪ್ರೇರಣೆಯಿಂದ ಪ್ರಾರಂಭವಾಯಿತು. ಇದು ಮಧ್ಯಪ್ರದೇಶದಲ್ಲಿ ಮಾನ್ಯತೆ ಪಡೆದ ಮೊದಲ ಅಂತಾರಾಷ್ಟ್ರೀಯ ದತ್ತು ಸ್ವೀಕಾರ ಕೇಂದ್ರವಾಗಿದೆ. ಅಂಕಿ ಅಂಶಗಳ ಪ್ರಕಾರ, ಕೇಂದ್ರಕ್ಕೆ ಭೇಟಿ ನೀಡುವ 400 ಮಕ್ಕಳ ಪೈಕಿ 350 ಮಕ್ಕಳು ಈಗ ದೇಶದ ವಿವಿಧ ಭಾಗಗಳಲ್ಲಿ ತಮ್ಮ ತಮ್ಮ ಮನೆಗಳಲ್ಲಿ ಸಂತೋಷ ಮತ್ತು ಸಮೃದ್ಧ ಜೀವನವನ್ನು ನಡೆಸುತ್ತಿದ್ದಾರೆ. ಸಮರ್ಪಿತ ಭಾವದಿಂದ ಮಗುವಿನ ಆರೈಕೆಗಾಗಿ ಇಲ್ಲಿ ಯಶೋದೆಯರು (ಅಯಾ) ಇದ್ದಾರೆ. ಈ ಕೇಂದ್ರದಲ್ಲಿರುವ ಜನರು ಮತ್ತು ಸೇವಾ ಭಾರತಿ ಮಾತೃ ಮಂಡಳಿಯ ಸಹೋದರಿಯರೂ ಸಹ ಈ ಮಕ್ಕಳೊಂದಿಗೆ ಉತ್ತಮ ಆತ್ಮೀಯ ಸಂಬಂಧ ಹೊಂದಿದ್ದಾರೆ. ಕೆಲವರು ಚಿಕ್ಕಮ್ಮರಾಗಿ, ಕೆಲವರು ದೊಡ್ಡಮ್ಮರಾಗಿ ಈ ಪುಟ್ಟಮಕ್ಕಳೊಂದಿಗೆ ಆತ್ಮೀಯಸಂಬಂಧವನ್ನು ಬೆಸೆದುಕೊಂಡಿದ್ದಾರೆ. ಒಂದೆಡೆ ಈ ಮಕ್ಕಳ ಸುಂದರ ಭವಿಷ್ಯವನ್ನು ಕಲ್ಪಿಸಿ ಕೊಂಡು ಸಂತೋಷ ಪಟ್ಟರೆ ಮತ್ತೊಂದೆಡೆ ಅವರನ್ನು ಬೀಳ್ಕೊಡುವ ದುಃಖದಲ್ಲಿ ಕಣ್ಣುಗಳು ಒದ್ದೆಯಾಗುತ್ತಿದ್ದವು.

ಸೇವಾಗಾಥ
ಕಥೆ-7

ಸ ' ಂ ಧ ಾ ತ ಾ ಯಿ ಂ ತಮ್ಮ ನೆನಪುಗಳನ್ನು ಹಂಚಿಕೊಳ್ಳುತ್ತಾ, ಮೂರು ವರ್ಷದ ಅವಿನಾಶ್ ತನ್ನ ಪೋಷಕರೊಂದಿಗೆ ಆಸ್ಟ್ರೇಲಿಯಾಕ್ಕೆ ಹೊರಟಾಗ ಆತನ ಸಂತೋಷಕ್ಕೆ ಪಾರವೇ ಇರಲಿಲ್ಲ ಎಂದು ಹೇಳುತ್ತಾರೆ. ಅವನು ಪ್ರತಿ ಮಗು ವಿಗೂ ತನ್ನ ಕೋಣೆಯ ಫೋಟೋಗಳನ್ನು ತೋರಿಸುತ್ತಿದ್ದನು. ಇನ್ನು ಕಾವೇರಿಯ ವಿಷಯಕ್ಕೆ ಬಂದರೆ, ಅವಳಂತೂ ತನ್ನ ಪೋಷಕರಿಗೆ ಸ್ಪ್ಯಾನಿಷ್ ಭಾಷೆಯಲ್ಲೇ ನಮಸ್ಕರಿಸಿ ಎಲ್ಲರನ್ನೂ ಆಶ್ಚರ್ಯ ಚಕಿತಗೊಳಿಸಿದ್ದಳು. ಕಾವೇರಿ ಸ್ಪೇನ್‌ನಲ್ಲಿ ಸುಲಭವಾಗಿ ಹೊಂದಿಕೊಳ್ಳಲಿ ಎಂಬ ಕಾರಣಕ್ಕೆ, ದತ್ತು ಪ್ರಕ್ರಿಯೆ ಮುಗಿಯುವವರೆಗೆ ಐದು ವರ್ಷದ ಈ ಮಗುವಿಗೆ ಎರಡು ತಿಂಗಳಿನಿಂದ ಸ್ಪ್ಯಾನಿಷ್ ಕಲಿಸಲಾಗುತ್ತಿತ್ತು.ಅತೀತದ ದಿನಗಳನ್ನು ತಿರುವಿ ಹಾಕಿದರೆ, ಹಮೀದಿಯಾ ಆಸ್ಪತ್ರೆಯ ಕಸದ ತೊಟ್ಟಿಯಿಂದ ಕೇವಲ 2 ದಿನದ ಮಗುವಾಗಿದ್ದ ಅವಿನಾಶ್‌ನನ್ನು ಇಲ್ಲಿಗೆ ಕರೆತಂದಿದ್ದ ಆ ರಾತ್ರಿ ಮಾತೃಛಾಯಾ ಆಡಳಿತ ಮಂಡಳಿಗೆ ಇಂದಿಗೂ ನೆನಪಿದೆ. ಎಷ್ಟು ಜತನದಿಂದ, ಸತತ ಪ್ರಯತ್ನದ ನಂತರ ಈ ಪ್ರಿಮೆಚ್ಯೂರ್ ಮಗುವಿನ ಜೀವವನ್ನು ಉಳಿಸಲು ಸಾಧ್ಯವಾಗಿತ್ತು ಎಂದು.

ಮಧ್ಯಪ್ರದೇಶದ ಮೊದಲ ಲೀಗಲ್ ಅಡಾಪ್ಷನ್ ಸೆಂಟರ್‌ಆಗಿರುವ ಮಾತೃ ಛಾಯಾ ಕೇವಲ ಒಂದು ಶಿಶುಗೃಹ ಮಾತ್ರವಲ್ಲ, ಅದು ಹಿಂದೂ ಸಂಸ್ಕೃತಿಗೆ ಅನುಗುಣವಾಗಿ ಮಗುವಿನ ಎಲ್ಲಾ ಸಂಸ್ಕಾರಗಳನ್ನು ನೆರವೇರಿಸುವ ಒಂದು ಕುಟುಂಬವಾಗಿದೆ. ಮಗುವಿನ ಅನ್ನ ಪ್ರಾಶನದಿಂದ ಹಿಡಿದು ಕಿವಿ ಚುಚ್ಚುವುದು ಮತ್ತು ನಾಮ ಕರಣದ ಸಂಸ್ಕಾರಗಳನ್ನು ಇಲ್ಲಿ ಅತ್ಯಂತ ಸಡಗರ-ಸಂಭ್ರಮ ದಿಂದ ಆಚರಿಸಲಾಗುತ್ತದೆ. ಸುರಕ್ಷತೆಯ ದೃಷ್ಟಿಯಿಂದ ಇಡೀ ಆವರಣದ ಪ್ರತಿಯೊಂದು ಜಾಗದಲ್ಲೂ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ.

ಮಾತೃಛಾಯಾ ಸಮಿತಿಯ ಉಪಾಧ್ಯಕ್ಷೆ ಹಾಗೂ ಸೇವಾ ಭಾರತಿಯ ರಾಷ್ಟ್ರೀಯ ಉಪಾಧ್ಯಕ್ಷೆಯಾಗಿರುವ ಅಮಿತಾ ಜೈನ್ ಅವರು ತಿಳಿಸುವಂತೆ, ಇಲ್ಲಿ ಮಕ್ಕಳ ಎಲ್ಲಾ ರೀತಿಯ ಅಗತ್ಯತೆಗಳ ಬಗ್ಗೆ ಸಂಪೂರ್ಣ ಗಮನ ಹರಿಸಲಾಗುತ್ತದೆ. ಚಿಕ್ಕ ಮಕ್ಕಳಿಗೆ ನಿಯಮಿತವಾಗಿ ಮಸಾಜ್ ಮಾಡಲಾಗುತ್ತದೆ ಮತ್ತು ಅವರಿಗೆ ಸೂಕ್ತವಾದ ಪೌಷ್ಟಿಕ ಆಹಾರವನ್ನು ನೀಡಲಾಗುತ್ತದೆ ಎಂದು ಹಾಗೂ, ದೊಡ್ಡ ಮಕ್ಕಳಿಗೆ ಶಾಲೆಯ ನಂತರ ಪಾಠ ಹೇಳಿಕೊಡಲು ಶಿಕ್ಷಕರನ್ನು ನೇಮಿಸಲಾಗಿದೆ. ಸಂಜೆಯ ಸಮಯದಲ್ಲಿ ಇವರಿಗೆ ಚಿತ್ರಕಲೆ, ಕಾರ್ಡ್ ಮೇಕಿಂಗ್ ಮತ್ತು ಸಂಗೀತವನ್ನು ಸಹ ಕಲಿಸಲಾಗುತ್ತದೆ. ಇಲ್ಲಿಗೆ ಬರುವ ವಿಶೇಷ ಚೇತನ (ದಿವ್ಯಾಂಗ) ಮಕ್ಕಳ ಪ್ರತಿಯೊಂದು ಅಗತ್ಯವನ್ನೂ ಸಹ ಇಲ್ಲಿ ಈಡೇರಿಸಲಾಗುತ್ತದೆ.

ಮಕ್ಕಳೊಂದಿಗೆ ಪ್ರತಿಯೊಂದು ಹಬ್ಬವನ್ನು ಆಚರಿಸಲು ಸೇವಾಭಾರತಿ ಪರಿವಾರವು ಮಾತೃಛಾಯಾದ ಅಂಗಳಕ್ಕೆ ಧಾವಿಸುತ್ತದೆ. ತಿಂಗಳಿಗೊಮ್ಮೆ ಮಕ್ಕಳನ್ನು ನಗರದ ಮೃಗಾಲಯ, ವಸ್ತುಸಂಗ್ರಹಾಲಯ (ಮ್ಯೂಸಿಯಂ) ಅಥವಾ ಶಾಪಿಂಗ್ ಮಾಲ್‌ಗಳಂತಹ ವಿವಿಧ ಸ್ಥಳಗಳಿಗೆ ಪ್ರವಾಸಕ್ಕೆ ಕರೆದೊಯ್ಯಲಾಗುತ್ತದೆ. ಇಲ್ಲಿಂದ ದತ್ತು ಹೋಗಿ ಬೇರೆಡೆಗೆ ನೆಲೆಸಿದ ಮೇಲೂ, ಪ್ರತಿ ಮಗುವಿನ 'ಫಾಲೋ-ಅಪ್' (ಮುಂದಿನ ಯೋಗಕ್ಷೇಮದ ಪರಿಶೀಲನೆ) ಅನ್ನು ಸಮಿತಿಯ ಪದಾಧಿಕಾರಿಗಳು ನಿರಂತರವಾಗಿ ಮಾಡುತ್ತಾಬಂದಿದ್ದಾರೆ.

ಇಲ್ಲಿ ಹೊರಗಡೆ ಇಡಲಾಗಿರುವ ತೊಟ್ಟಿಲಿನಲ್ಲಿ ಪ್ರತಿಯೊಂದು ಮಗುವಿಗೂ ಮುಕ್ತ ಸ್ವಾಗತವಿದೆ.ಆದರೂ, ಕೆಲವರುಮಕ್ಕಳನ್ನು ಆವರಣದ ಒಳಗಿರುವ ಪೊದೆಗಳಲ್ಲೋಅಥವಾ ಯಾವುದೋ ಬ್ಯಾಗ್‌ಗಳಲ್ಲೋಹಾಕಿ ಯಾಕೆ ಬಿಟ್ಟು ಹೋಗುತ್ತಾರೋ ತಿಳಿಯದು.ಇದರಿಂದಾಗಿ ಕೆಲವೊಮ್ಮೆ ಆ ಮಗುವಿನ ಜೀವ ಉಳಿಸುವುದೇ ಕಷ್ಟವಾಗಿಬಿಡುತ್ತದೆ. ಮಾತೃಛಾಯಾ ಪರಿವಾರದ ಈ ಪ್ರಶ್ನೆಯು ಇಂದಿನ ಸಮಾಜದ ಸಾಮಾಜಿಕ ವೈಪರೀತ್ಯಕ್ಕೆ ಕನ್ನಡಿ ಹಿಡಿದಂತಿದೆ.

ಕಿರುಸುದ್ದಿ

600 ಚೀಲ ಯೂರಿಯಾ ವಶ

ಮೈಸೂರು: ವ್ಯಕ್ತಿಯೊಬ್ಬರ ತೋಟವೊಂದರ ಮೇಲೆ ದಾಳಿ ನಡೆಸಿದ ಕೃಷಿ ಇಲಾಖೆ ಅಧಿಕಾರಿಗಳು, ಅಲ್ಲಿ ಅಕ್ರಮವಾಗಿ ದಾಸ್ತಾನು 600 ಚೀಲ ಯೂರಿಯಾ ರಸಗೊಬ್ಬರವನ್ನು ವಶಪಡಿಸಿಕೊಂಡಿರುವ ಘಟನೆ ಜಿಲ್ಲೆಯ ತಿ.ನರಸೀಪುರ ತಾಲೂಕಿನ ಬನ್ನೂರು ಹೋಬಳಿಯ ಕೊಡಗಹಳ್ಳಿ ಗ್ರಾಮದಲ್ಲಿ ನಡೆದಿದೆ. ಇದಾಯತ್ ಉಲ್ಲಾ ಎಂಬುವರು ತಮ್ಮ ತೋಟದಲ್ಲಿ ಕೃಷಿ ಬಳಕೆಗೆಂದು ಮೀಸಲಿಟ್ಟಿದ್ದ ಅಪಾರ ಪ್ರಮಾಣದ ಯೂರಿಯಾವನ್ನು ಅಕ್ರಮವಾಗಿ ದಾಸ್ತಾನು ಮಾಡಿದ್ದಾರೆ.ಖಚಿತ ಮಾಹಿತಿ ಮೇಲೆ ತಿ. ನರಸೀಪುರ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕಿ ರೂಪಾ ನೇತೃತ್ವದ ತಂಡವು ದಾಳಿ ನಡೆಸಿ, ಅಕ್ರಮವಾಗಿ ದಾಸ್ತಾನು ಮಾಡಿದ್ದ ಯೂರಿಯಾ ವಶಕ್ಕೆ ಪಡೆಯಿತು. ಈ ಬಗ್ಗೆ ಬನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬನ್ನೂರು ಹೋಬಳಿ ಕೃಷಿ ಅಧಿಕಾರಿ ವಿಶಾಲು, ಉಪ ಕೃಷಿ ನಿರ್ದೇಶಕ ರಾಜು, ಜಾರಿದಳ ಜಂಟಿ ಕೃಷಿ ನಿರ್ದೇಶಕ ರಾಮಕೃಷ್ಣ, ಉಪ ಕೃಷಿ ನಿರ್ದೇಶಕಿ ಮಮತಾ, ಸಹಾಯಕ ಕೃಷಿ ನಿರ್ದೇಶಕ ಸತೀಶ್, ಸಹಾಯಕ ತಂತ್ರಿಕ ವ್ಯವಸ್ಥಾಪಕ ಶಿವರಾಮು ದಾಳಿಯಲ್ಲಿ ಪಾಲ್ಗೊಂಡಿದ್ದರು.

ವಂಚನೆ: ಹೆಚ್ಚಿನ ಲಾಭ ಪಡೆದವರಿಗೂ ಆತಂಕ

ಬೆಳಗಾವಿ: ಬಹುಕೋಟಿ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳ ತನಿಖೆ ಮತ್ತಷ್ಟು ಚುರುಕುಗೊಂಡಿದೆ. ಶಿವಾನಂದ ನೀಲಣ್ಣವರ ಮಾಲೀಕತ್ವದ ಶಿವಂ ಅಸೋಸಿಯೇಟ್ಸ್ ಸಂಸ್ಥೆಯಲ್ಲಿ ಸುಮಾರು 35,000 ಜನರು ಹೂಡಿಕೆ ಮಾಡಿದ್ದರು. ಇದೀಗ ಹಣ ಸಂದಾಯದ ಪರಿಶೀಲನೆ ನಡೆಯುತ್ತಿದ್ದು, ಹೂಡಿಕೆಗಿಂತ ಹೆಚ್ಚಿನ ಲಾಭ ಪಡೆದವರಿಗೂ ಇದೀಗ ಆತಂಕ ಪ್ರಾರಂಭವಾಗಿದೆ. ಆರಂಭಿಕ ಹಂತದಲ್ಲಿ, ಹೂಡಿಕೆ ಮಾಡಿದ ಹಲವರು ತಮ್ಮ ಮೂಲ ಹೂಡಿಕೆಗಿಂತ ದುಪ್ಪಟ್ಟು ಲಾಭ ಪಡೆದಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. 50 ಲಕ್ಷ ಹೂಡಿಕೆ ಮಾಡಿದವರು 1 ಕೋಟಿವರೆಗೂ ಲಾಭಾಂಶ ಪಡೆದಿದ್ದಾರೆ. ಸಿಐಡಿ ಡಿಐಜಿ ಭೀಮಶಂಕರ್ ಗುಳೇದ ಮಾರ್ಗದರ್ಶನದಲ್ಲಿ ತನಿಖೆ ನಡೆಸುತ್ತಿರುವ ಸಿಐಡಿ ತಂಡ, ಈ ಹೆಚ್ಚಿನ ಲಾಭ ಪಡೆದ ಹೂಡಿಕೆದಾರರನ್ನು ಪತ್ತೆ ಹಚ್ಚಿ ಅವರಿಂದ ಹೆಚ್ಚುವರಿ ಹಣವನ್ನು ವಾಪಸ್ ಪಡೆಯುವ ಪ್ರಕ್ರಿಯೆ ಆರಂಭಿಸಿದೆ. ಇದರಿಂದ ವಂಚನೆಗೊಳಗಾದ ಉಳಿದ ಹೂಡಿಕೆದಾರರಿಗೆ ನ್ಯಾಯ ಒದಗಿಸುವುದು ಸಿಐಡಿ ಉದ್ದೇಶವಾಗಿದೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕಗಾನ ಮೇಳ

1. ಮಾಧವ ಸುವರ್ಣ, ಸ್ವಾಮಿ ಕೊರಗಜ್ಜ ಸನ್ನಿಧಿ, 62ನೇ ತೋಕೂರು, ಕೋಡಿಕೆರೆ.
2. ಸನತ್ ಕುಮಾರ್ ಶೆಟ್ಟಿ, ಕೊಡೆತ್ತೂರು ಗುತ್ತು, ಅಧ್ಯಕ್ಷರು, ಆಡಳಿತ ಸಮಿತಿ ಹಾಗೂ ಅನುವಂಶಿಕ ಮೊಕ್ತೇಸರರು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
3. ಮಾಡದಡಿ ಗುಡ್ಡೆ ದೈವಸ್ಥಾನ ಸೇವಾ ಸಮಿತಿ, ಊರ ಹತ್ತು ಸಮಸ್ತರು, ಗಾಂಧಿನಗರ, ಕಾವೂರು.
4. ಪೊನ್ನಗಿರಿ ಯಕ್ಷಗಾನ ಸೇವಾ ಟ್ರಸ್ಟ್, ಕುತ್ತೆತ್ತೂರು, ಸೂರಿಂಜೆ, ಪೊನ್ನಗಿರಿ ದೇವಸ್ಥಾನದಲ್ಲಿ.
5. ಶೀನ, ಲೀಲಾವತಿ ಶೆಟ್ಟಿ, 'ಶ್ರೀದೇವಿ ಕೃಪಾ', ಗಾಂಧೀನಗರ, ಮೂಡುಬಿದ್ರಿ – ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
6. ಶ್ರೀನಿವಾಸ ಸುಜಾತ ಆಚಾರ್ಯ, ಇಜ್ಜೋಡಿ ಗುಡ್ಡೆ ಹೌಸ್, ಒಂಜಾರಕಟ್ಟೆ, ಬೋಳ, ಪಿಲಿಯೂರು ದೇವಸ್ಥಾನದ ವಠಾರ.
7. ಬಜಪೆ ಹತ್ತು ಸಮಸ್ತರು, ಶಾಂತಿ ಇಂಡಸ್ಟ್ರೀಸ್ ವಠಾರದಲ್ಲಿ, ಬಜಪೆ.

ಶ್ರೀ ಧರ್ಮಸ್ಥಳ ಮೇಳ

ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಹತ್ತನಾವಧಿ ಜಾತ್ರೆ

ಶ್ರೀ ಪಾವಂಜೆ ಮೇಳ

ನಾಗವೃಜಕ್ಷೇತ್ರ ಪಾವಂಜೆಯಲ್ಲಿ
ಆರನೇ ವರ್ಷದ ಯಾನ ಸಮಾಪನ
ಕಲ್ಯಾಣೋತ್ಸವ

ಜನರ ಹಕ್ಕು ಉಳಿಸಲು ಇಂದು ಪಕ್ಷದ ಮುಖಂಡರ ಸಭೆ: ಡಿಕೆಶಿ

ಎಸ್‌ಐಆರ್ ಬಗ್ಗೆ ಜಾಗೃತಿ

ಬೆಂಗಳೂರು: ಜವಾಬ್ದಾರಿಯುತ ಸರ್ಕಾರವಾಗಿ ನಾವು ಜನರಿಗೆ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಬಗ್ಗೆ ಜಾಗೃತಿ ಮೂಡಿಸಬೇಕು. ನಾವು ಆ ಕೆಲಸ ಮಾಡುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.



ಭಾನುವಾರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಎಸ್‌ಐಆರ್‌ನಿಂದ ಈ ದೇಶದಲ್ಲಿ ಸಾಕಷ್ಟು ಅನಾಹುತಗಳು ನಡೆಯುತ್ತಿವೆ. ಅದಕ್ಕೆ ಇದರ ಬಗ್ಗೆ ನಾವು ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದೇವೆ. ಬಡ, ಸಾಮಾನ್ಯರಿಗೆ ಎಸ್‌ಐಆರ್ ಬಗ್ಗೆ ಪರಿಚಯ ಮಾಡಿಕೊಡಬೇಕಿದೆ. ಒಂದೊಂದು ರಾಜ್ಯದಲ್ಲಿ 50, 60 ಹಾಗೂ 90 ಲಕ್ಷದವರೆಗೆ ಮತಗಳನ್ನು ತೆಗೆದು ಹಾಕಲಾಗುತ್ತಿದೆ. ಕರ್ನಾಟಕದಲ್ಲೂ ಎಸ್ ಐಆರ್ ಪ್ರಾರಂಭವಾಗುತ್ತಿದೆ ಎಂದರು.

ರಾಜ್ಯದ ಎಲ್ಲಾ ಜನರ ಹಕ್ಕು ಉಳಿಸಲು ಇಂದು ಪಕ್ಷದ ಮುಖಂಡರ ಸಭೆ ಕರೆಯಲಾಗಿದೆ. ಚುನಾವಣಾ ಆಯೋಗ ನೀಡುವ ಅರ್ಜಿ ತುಂಬಿಸಿ ದಾಖಲೆ ಸಮೇತ ವಾಪಸ್ ನೀಡಿದವರ ಮತ ಮಾತ್ರ ಉಳಿಯುತ್ತದೆ, ಅರ್ಜಿ ವಾಪಸ್ ನೀಡದವರ ಮತದಾನದ ಹಕ್ಕು ನಷ್ಟವಾಗಲಿದೆ. ಈ ಬಗ್ಗೆ ಬಿಎಲ್‌ಒಗಳ ಮೂಲಕ ನಾವು ಇವುಗಳನ್ನು ಖಾತರಿಪಡಿಸಬೇಕಾಗಿದೆ ಎಂದರು.

ಮತದಾನದ ಹಕ್ಕನ್ನು ಕಳೆದುಕೊಂಡರೆ ಯಾವುದೇ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಗೃಹಲಕ್ಷ್ಮೀ ಯೋಜನೆ ಹಣ, ಪಿಂಚಣಿ, ಮನೆ, ಜಮೀನು ಸೇರಿದಂತೆ ಸರ್ಕಾರದ ಎಲ್ಲಾ ಯೋಜನೆಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ಸರ್ಕಾರ ಜನರಿಗೆ ಬೇಕಾದ ದಾಖಲೆಗಳನ್ನು ಒದಗಿಸಿಕೊಡಬೇಕು. ಇದು ಜವಾಬ್ದಾರಿಯುತ ಸರ್ಕಾರದ ಕೆಲಸ. ಕೇರಳದಲ್ಲಿ ಇದೇ ರೀತಿ ಮಾಡಲಾಗಿದೆ ಎಂದು ತಿಳಿಸಿದರು.

ಮತದಾರರು ಅರ್ಜಿ ಹಾಕಿಕೊಳ್ಳಬೇಕು. ಇಲ್ಲದಿದ್ದರೆ ಮತದಾನದ ಹಕ್ಕನ್ನು ಕಳೆದುಕೊಳ್ಳಲಿದ್ದಾರೆ. ಕಾಂಗ್ರೆಸ್, ಬಿಜೆಪಿ, ದಳ ಸೇರಿದಂತೆ ಎಲ್ಲಾ ಪಕ್ಷಗಳು ಬಿಎಲ್‌ಒಗಳಿಗೆ ತರಬೇತಿ ನೀಡುತ್ತಿವೆ. ನಮ್ಮಿಂದ ಹಾಗೂ ಸರ್ಕಾರದಿಂದ ಏನೂ ತೊಂದರೆಯಾಗಬಾರದು, ಎಲ್ಲರಿಗೂ ನ್ಯಾಯ ಒದಗಿಸಿಕೊಡಬೇಕು ಎಂಬುದು ನನ್ನ ಆಶಯ. ಚುನಾವಣೆ ಗೆಲ್ಲುವುದು, ಬಿಡುವುದು ಬೇರೆ ವಿಚಾರ. ಮತದಾನ ಕಳೆದುಕೊಳ್ಳಬೇಡಿ ಎಂದು ನಾವು ಹೇಳಬೇಕು ಎಂದರು.

ಜನಕಲ್ಯಾಣ ಯೋಜನೆ ಜಾರಿ

ಬಡವರ ಉಪಯೋಗಕ್ಕೆ ಜನಕಲ್ಯಾಣ ಯೋಜನೆಗಳನ್ನು ನೀಡಲಾಗುತ್ತಿದೆ. ಮತದಾನದ ಹಕ್ಕು ಇಲ್ಲ ಎಂದು ಯೋಜನಾ ಸೌಲಭ್ಯಗಳನ್ನು ನಿರಾಕರಿಸಿದರೆ ಆನಂತರ ಜನರು ನಿಮ್ಮಿಂದಲೇ ಸೌಲಭ್ಯಗಳು ಇಲ್ಲ ಎನ್ನುತ್ತಾರೆ. ಬಿಜೆಪಿಯವರೇ ಎಸ್‌ಐಆರ್ ಮಾಡಿರಬಹುದು. ಆದರೆ ಜನ ನಮ್ಮನ್ನು ಪ್ರಶ್ನೆ ಮಾಡುತ್ತಾರೆ ಎಂದು ಹೇಳಿದರು.

ಜನಹಿತದ ಕೆಲಸ, ಕಾರ್ಯಕ್ಕೆ ಮುಂದಾಗಿ : ನಿತಿನ್



ಬೆಂಗಳೂರು: ಕರ್ನಾಟಕದ ಕಾಂಗ್ರೆಸ್ ಸರ್ಕಾರವು ಇಲ್ಲಿನ ಜನರಿಗೆ ಕಳೆದ 3 ವರ್ಷಗಳಲ್ಲಿ ವಿಶ್ವಾಸಘಾತ ಮಾಡಿದೆ. ಜನರನ್ನು ವಂಚಿಸುವ ಕೆಲಸ ಮಾಡಿದೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ವಾಗ್ದಾಳಿ ನಡೆಸಿದ್ದಾರೆ.

ಮೊದಲ ಬಾರಿಗೆ ಕರ್ನಾಟಕಕ್ಕೆ ಭೇಟಿ ನೀಡಿದ ಅವರು ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ವಿಶೇಷ ಸಂಘಟನಾ ಸಭೆ ಮತ್ತು ರಾಜ್ಯ ಕೋರ್ ಕಮಿಟಿ ಸಭೆ ನಡೆಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಜನತೆಗೆ ಕೊಟ್ಟ ಭರವಸೆಗಳನ್ನು ಈಡೇರಿಸುವಲ್ಲಿ ಸರ್ಕಾರ ವಿಫಲವಾಗಿದೆ. ಅಭಿವೃದ್ಧಿ ಕಾರ್ಯಗಳಲ್ಲಿಯೂ ಸಂಪೂರ್ಣ ವಿಫಲಗೊಂಡಿದೆ. ಕಾಂಗ್ರೆಸ್ ಒಳಜಗಳದಿಂದ ಜನಹಿತದ ಕೆಲಸಗಳನ್ನು ಕಡೆಗಣಿಸಿದೆ. ಜನಹಿತಕ್ಕೂ ತಮಗೂ ಸಂಬಂಧವೇ ಇಲ್ಲದಂತೆ ಕಾಂಗ್ರೆಸ್ ಸರ್ಕಾರ ಆಡಳಿತ ನಡೆಸುತ್ತಿದೆ ಎಂದು ಆರೋಪಿಸಿದರು. ಸರ್ಕಾರ ನಡೆಸುತ್ತಿರುವ ನಾಯಕರು ಸರ್ಕಾರವನ್ನು ತಮಗಾಗಿ ಬಳಸಿಕೊಳ್ಳುತ್ತಿದ್ದಾರೆ. ಕಾಂಗ್ರೆಸ್ ಜನರನ್ನೂ ಅಧಿಕಾರವನ್ನೂ ಗುರಾಣಿ ಮಾಡಿಕೊಂಡಿದೆ. ಅಲ್ಲದೇ ಇಲ್ಲಿನ ಸರ್ಕಾರ ದಿಲ್ಲಿ ಕಾಂಗ್ರೆಸ್ಸಿನ ಎಟಿಎಂ ಆಗಿದೆ ಎಂದು ದೂರಿದರು.

ಮತಪಟ್ಟಿ ಪರಿಷ್ಕರಣೆ ವಿರುದ್ಧ ಅಪಪ್ರಚಾರ: ಕುಮಾರಸ್ವಾಮಿ

ಬೆಂಗಳೂರು: ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯ ಬಗ್ಗೆ ಕಾಂಗ್ರೆಸ್ ಅಪಪ್ರಚಾರ ಮಾಡುತ್ತಿದೆ ಹಾಗೂ ತನ್ನ ವೈಫಲ್ಯಗಳನ್ನು ಮುಚ್ಚಿಟ್ಟುಕೊಳ್ಳಲು ಜನರ ಗಮನವನ್ನು ಬೇರೆಡೆಗೆ ಸೆಳೆಯುವ ಕೃತ್ಯಕ್ಕೆ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಆರೋಪ ಮಾಡಿದ್ದಾರೆ.



ಪಕ್ಷದ ರಾಜ್ಯ ಕಚೇರಿ ಜೆ.ಪಿ. ಭವನದಲ್ಲಿ ಭಾನುವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಯಾವುದೋ ಒಂದು ವಿಷಯ ಇಟ್ಟುಕೊಂಡು ಸುದ್ದಿಯಲ್ಲಿರುವುದಕ್ಕೆ ಕಾಂಗ್ರೆಸ್‌ನವರು ಪ್ರಯತ್ನ ಮಾಡುತ್ತಲೇ ಇರುತ್ತಾರೆ. ಸ್ವಲ್ಪ ದಿನ ಮನರೇಗಾ ಬಗ್ಗೆ ಮಾತನಾಡಿದ್ದೆ ಮಾತನಾಡಿದ್ದು, ಈಗ ಎಸ್‌ಐಆರ್ ಎಂದು ಹೊರಟಿದ್ದಾರೆ ಎಂದು ಕಿಡಿಕಾರಿದರು.

ಮೊದಲು ಬಿಡದಿ ಟೌನ್‌ಶಿಪ್ ಬಗ್ಗೆ ಚರ್ಚೆಗೆ ಆಹ್ವಾನ ಕೊಟ್ಟಿದ್ದು ಅವರು. ಆದಕ್ಕೆ ನಾನು ಸಿದ್ಧ ಎಂದು ಹೇಳಿದ್ದೇನೆ. ಪಾಪ ಅವರು ತುಂಬಾ ಬ್ಯುಸಿ ಇದ್ದಾರೆ. ದಿನವೂ ಇಷ್ಟು ಅಂತ ವಸೂಲಿ ಆಗಲೇಬೇಕು ಅಂತ ಅವರು ಬ್ಯುಸಿ ಇದ್ದಾರೆ. ಮೀಟರ್ ಲೆಕ್ಕ ಹಾಕೋದು, ರೇಟ್ ಫಿಕ್ಸ್ ಮಾಡೋದು ಅವರ ಕೆಲಸ. ಆ ಬ್ಯುಸಿನಲ್ಲಿ ನಾನಿಲ್ಲ.

ರಾಜ್ಯಸಭೆ ಆಯ್ಕೆ ಬಿಜೆಪಿ ನಿರ್ಧಾರ: ನಾವು ಯಾರನ್ನೂ ರಾಜ್ಯಸಭೆಗೆ ಮರು ಆಯ್ಕೆ ಬಗ್ಗೆ ಕೇಳಿಲ್ಲ. ನಮ್ಮ ಮಿತ್ರಪಕ್ಷಕ್ಕೆ ವಿಧಾನಸಭೆಯಲ್ಲಿ 63 ಸ್ಥಾನಗಳಿವೆ. ಹೀಗಾಗಿ ಬಿಜೆಪಿ ಅವರೇ ನಿರ್ಧರಿಸುತ್ತಾರೆ. ನಾನಾಗಲಿ, ದೇವೇಗೌಡರಾಗಲಿ ಈ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಚರ್ಚೆ ಮಾಡೋಕೂ ಹೋಗಿಲ್ಲ. ದೇವೇಗೌಡರ ಅವಶ್ಯಕತೆ ಬಗ್ಗೆ ದಿಲ್ಲಿ ಮಟ್ಟದಲ್ಲಿ ತೀರ್ಮಾನ ಮಾಡಲಿ. ನಾವು ಇನ್ನೊಬ್ಬರಿಗೆ ತಪ್ಪಿಸಿ ನಮಗೆ ಕೊಡಿ ಎಂದು ಕೇಳಲ್ಲ ಎಂದರು.

ನಾಯಕರೊಂದಿಗೆ ನಿತಿನ್ ನಿರಂತರ ಸಭೆ

ಬೆಂಗಳೂರು: ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರ ಕರ್ನಾಟಕ ಭೇಟಿ ಪಕ್ಷದಲ್ಲಿ ಸಂಚಲನ ಮೂಡಿಸಿದೆ. ರಾಜ್ಯದ ಪ್ರಮುಖ ನಾಯಕರೊಂದಿಗೆ ನಿರಂತರ ಸಭೆಗಳು ಚೈತನ್ಯ ತುಂಬಿವೆ.

ಬೆಳಗ್ಗೆ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರ ಅಧಿಕೃತ ನಿವಾಸ ಧವಳಗಿರಿಗೆ ಭೇಟಿ ನೀಡಿದ ನಿತಿನ್ ನವೀನ್ ಅಲ್ಲಿಯೇ ಉಪಾಹಾರ ಸೇವಿಸಿದರು. ಈ ಉಪಾಹಾರ ಕೂಟದಲ್ಲಿ ಮಾಜಿ ಸಿಎಂ ಜಗದೀಶ್ ಶೆಟ್ಟರ್, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಪ್ರತಿಪಕ್ಷ ನಾಯಕ ಆರ್. ಅಶೋಕ, ಸಂಸದ ಗೋವಿಂದ ಕಾರಜೋಳ, ಮುಖಂಡರಾದ ಶ್ರೀರಾಮುಲು, ಡಾ. ಸಿ.ಎನ್. ಅಶ್ವಥ್ ನಾರಾಯಣ, ಅರವಿಂದ್ ಲಿಂಬಾವಳಿ ಸೇರಿದಂತೆ ಹಲವು ಹಿರಿಯ ನಾಯಕರು ಭಾಗಿಯಾಗಿದ್ದರು. ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರು ಶ್ರೀರಾಮಚರಿತಾ ಮಾನಸ ಪುಸ್ತಕವನ್ನು ನೀಡಿ ಗೌರವಿಸಿದರು.

ಕಾಡುಮಲ್ಲೇಶ್ವರನ ದರ್ಶನ ಪಡೆದ ನಿತಿನ್: ರಾಜಕೀಯ ಸಭೆಗಳಿಗೂ ಮುನ್ನ ಮಲ್ಲೇಶ್ವರಂನಲ್ಲಿರುವ ಪ್ರಸಿದ್ಧ ಇತಿಹಾಸ ಪ್ರಸಿದ್ಧ ಕಾಡುಮಲ್ಲೇಶ್ವರ ಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿದರು. ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ಹಾಗೂ ದರ್ಶನ ಪಡೆದರು.

ಬಳಿಕ ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸರಣಿ



ಸಭೆಗಳನ್ನು ನಡೆಸಿದರು. ತರುವಾಯ ಯಲಹಂಕದ ರಮಡಾ ರೆಸಾರ್ಟ್‌ನಲ್ಲಿ ಬೆಂಗಳೂರು ಉತ್ತರ ಜಿಲ್ಲೆಯ ಪ್ರಶಿಕ್ಷಣ ವರ್ಗದಲ್ಲಿ ಪಾಲ್ಗೊಂಡರು. ಮತದಾರರ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್)ಯ ಕುರಿತಾಗಿ ಪಕ್ಷದ ಪ್ರಮುಖರೊಂದಿಗೆ ಸಮಾಲೋಚನೆ ನಡೆಸಿದರು.

ಕರ್ನಾಟಕದ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರನ್ನು ಭೇಟಿಯಾದ ನಿತಿನ್ ನವೀನ್ ರಾತ್ರಿ ಬೆಂಗಳೂರಿನಿಂದ ದಿಲ್ಲಿಗೆ ವಾಪಸ್ಸಾದರು.

ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಸಂಘಟನಾ ಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಕರ್ನಾಟಕ ರಾಜ್ಯ ಉಸ್ತುವಾರಿ ಮತ್ತು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಧಾಮೋಹನ್ ದಾಸ್ ಅಗ್ರವಾಲ್, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಪ್ರತಿಪಕ್ಷದ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣಸ್ವಾಮಿ, ರಾಜ್ಯ ಸಹ-ಉಸ್ತುವಾರಿ ಸುಧಾಕರ್ ರೆಡ್ಡಿ, ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯರು, ರಾಜ್ಯ ಸಮಿತಿ ಸದಸ್ಯರು, ಮೋರ್ಚಾಗಳ ರಾಜ್ಯ ಅಧ್ಯಕ್ಷರು, ರಾಜ್ಯ ಮಾಧ್ಯಮ ತಂಡ, ರಾಜ್ಯ ಪ್ರಧಾನ ಕಾರ್ಯದರ್ಶಿಗಳು, ವಿಭಾಗ ಪ್ರಭಾರಿಗಳು, ಸಹ ಪ್ರಭಾರಿಗಳು, ಜಿಲ್ಲಾ ಅಧ್ಯಕ್ಷರು ಭಾಗವಹಿಸಿದ್ದರು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸಂಮೃದ್ಧಿ(ನಂ.SM-56) ಡ್ರಾ ಮೇ 24ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
MV 232040 (THIRUVANANTHAPURAM)
Consolation Prize Rs.5,000/-
MN 232040 MO 232040 MP 232040 MX 232040
MR 232040 MS 232040 MT 232040 MU 232040
MW 232040 MY 232040 MZ 232040
2nd Prize Rs.25,00,000/- [25 Lakhs]
MW 875281 (CHITTUR)
3rd Prize Rs. 5,00,000/- [5 Lakhs]
MP 879101 (IRINJALAKKUDA)

FOR THE TICKETS ENDING WITH THE FOLLOWING NUMBERS

4th Prize Rs.5,000/-
0301 0557 0848 1249 1477 2482 2934 3411 3565 4318
5248 6153 6959 7559 8228 8239 8662 9093 9344
5th Prize Rs.2,000/-
0431 1374 7451 8075 8644 9803
6th Prize Rs.1,000/-
0189 1088 1142 1353 2281 2723 3646 3813 3918 4800
4824 5105 6476 6521 6870 6944 7240 7311 7567 8106
9141 9205 9238 9665 9875
7th Prize Rs.500/-
0077 0198 0210 0475 0553 0578 0849 0865 0904 0908
0923 1034 1211 1266 2023 2259 2304 2497 2629 2656
2751 2756 3141 3198 3215 3216 3371 3875 3960 4295
4297 4357 4418 4434 4479 4558 4595 4618 4750 4994
5022 5073 5084 5171 5373 5613 5671 5926 5942 6109
6272 6525 6574 6578 6699 6759 6934 6958 7185 7205
7581 7698 7762 7807 8148 8603 8683 8743 8760 8768
8790 8947 9299 9746 9844 9859
8th Prize Rs.200/-
0019 0052 0060 0160 0232 0416 0580 0822 0983 0995
1165 1194 1231 1282 1310 1471 1478 1620 1661 1690
1812 1902 1913 2047 2125 2395 2426 2852 2895 3060
3301 3370 3444 3475 3599 3848 3963 4004 4046 4081
4346 4407 4454 5061 5081 5203 5441 5474 5701 5712
5720 5734 6027 6258 6394 6583 6599 6627 6724 7265
7279 7282 7595 7650 7679 7695 7707 7851 7937 8031
8082 8110 8220 8390 8449 8511 8805 8819 8872 8879
9125 9140 9321 9435 9456 9531 9545 9565 9567 9614
9649 9717
9th Prize Rs.100/-
0073 0113 0117 0256 0265 0294 0354 0387 0398 0447
0487 0494 0526 0730 0807 0821 0883 0898 0916 1064
1169 1200 1233 1293 1319 1328 1426 1489 1609 1624
1689 1704 1714 1723 1803 2024 2113 2199 2297 2380
2445 2470 2599 2603 2620 2636 2648 2653 2760 2794
2816 3104 3173 3264 3441 3474 3517 3588 3601 3780
3823 3845 3906 4049 4123 4151 4216 4376 4439 4461
4466 4492 4551 4599 4624 4717 4755 4767 4811 4927
4975 5115 5287 5301 5314 5350 5354 5411 5527 5528
5608 5649 5715 5810 5815 5819 5822 5862 6002 6011
6072 6075 6123 6384 6396 6490 6615 6637 6651 6715
6855 6872 7001 7049 7126 7152 7246 7298 7367 7425
7462 7494 7588 7877 8022 8081 8101 8137 8158 8203
8217 8332 8403 8439 8440 8529 8628 8850 8911 8962
9122 9129 9136 9357 9427 9431 9594 9750 9802 9850

ಡಿಜಿಟಲ್ ವಂಚನೆ: ಆರೋಪಿಗಳ ಬಂಧನ

ಬೆಂಗಳೂರು: ರಾಜ್ಯ ಸೈಬರ್ ಕ್ರೈಂ ಇತಿಹಾಸದಲ್ಲೇ ಬೃಹತ್ ಡಿಜಿಟಲ್ ಅರೆಸ್ಟ್ ವಂಚನೆಪ್ರಕರಣವೊಂದು ಬೆಳಕಿಗೆ ಬಂದಿದೆ. ನಿವೃತ್ತ ಶಿಕ್ಷಕಿಯೊಬ್ಬರನ್ನು ನಕಲಿ ಸಿಬಿಐ ಅಧಿಕಾರಿಗಳ ಸೋಗಿನಲ್ಲಿ ಬರೋಬ್ಬರಿ 5 ತಿಂಗಳ ಕಾಲ ಮಾನಸಿಕ ಬಂಧನದಲ್ಲಿಟ್ಟು, ಹಂತ ಹಂತವಾಗಿ 24 ಕೋಟಿ ರೂ.ಗಳನ್ನು ದೋಚಿದ್ದ ಅಂತಾರಾಜ್ಯ ಖದೀಮರ ಜಾಲವನ್ನು ಬೆಂಗಳೂರು ಸಿಸಿಬಿ ಸೈಬರ್ ಕ್ರೈಂ ಪೊಲೀಸರು ಭೇದಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ತಮಿಳುನಾಡು ಮೂಲದ ಎನ್.ಶಿವಗ್ನಾನಂ, ಮುಂಬೈನ ಅಕ್ಬರ್ ಮಲ್ಲಿಕ್, ಗುಜರಾತ್‌ನ ಪಲಕ್ ಭಾಯಿ ಪಟೇಲ್, ಅಮಿತ್ ನರೇಂದ್ರ ಪಟೇಲ್, ದಿಲ್ಲಿಯ ಓಂ ಪ್ರಕಾಶ್ ರಾಜ್‌ಪುತ್ ಹಾಗೂ ಬಿಹಾರದ ಗೌರವ್ ಕುಮಾರ್‌ನನ್ನು ಪೊಲೀಸರು ಬಂಧಿಸಿದ್ದು, ವಂಚಕರು ಬಳಸಿದ್ದ 22 ಬ್ಯಾಂಕ್ ಖಾತೆಗಳಲ್ಲಿದ್ದ 3 ಕೋಟಿ ರೂ.ಗಳನ್ನು ಫ್ರೀಜ್ ಮಾಡಿದ್ದಾರೆ.

ಆಸ್ತಿ ಮಾರಿದ ಹಣದ ಮೇಲೆ ಕಣ್ಣು: ಶಿವಾಜಿನಗರದ ಎಚ್‌ವಿಎಸ್ ಅಪಾರ್ಟ್‌ಮೆಂಟ್ ನಿವಾಸಿ ಲಕ್ಷ್ಮೀ ರಾಮಮೂರ್ತಿ ವಂಚನೆಗೊಳಗಾದ ವೃದ್ಧೆ. ಇವರು ಈ ಹಿಂದೆ ದುಬೈನಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಬೆಂಗಳೂರು ಮತ್ತು ಮುಂಬೈನಲ್ಲಿ ತಮಗಿದ್ದ ಆಸ್ತಿಗಳನ್ನು ಮಾರಾಟ ಮಾಡಿದ್ದ ಅವರು, ಬಂದ ಕೋಟ್ಯಾಂತರ ರೂಪಾಯಿ ಹಣದೊಂದಿಗೆ ಅಮೆರಿಕದಲ್ಲಿರುವ ತಮ್ಮ ಮಕ್ಕಳ ಬಳಿ ಹೋಗಿ ನೆಲೆಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದರು.

ಆದರೆ, ವೃದ್ಧೆಯ ಬ್ಯಾಂಕ್ ವಹಿವಾಟಿನ ದೊಡ್ಡ ಮೊತ್ತದ ಮಾಹಿತಿ ತಿಳಿದುಕೊಂಡ ಸೈಬರ್ ದರೋಡೆಕೋರರು ಕಳೆದ ಜನವರಿಯಲ್ಲಿ ಸಿಬಿಐ ಅಧಿಕಾರಿಗಳ ಸೋಗಿನಲ್ಲಿ ಅವರಿಗೆ ವಿಡಿಯೋ ಕಾಲ್ ಮಾಡಿದ್ದರು. ಅಲ್ಲದೇ ಕಾನೂನುಕ್ರಮದ ಭಯ ಹುಟ್ಟಿಸಿ ವೃದ್ಧೆಯನ್ನು ಡಿಜಿಟಲ್ ಅರೆಸ್ಟ್ ಮಾಡಿದ್ದರು. ಯಾರೊಂದಿಗೂ ವಿಷಯ ಹಂಚಿಕೊಳ್ಳದಂತೆ ತಾಕೀತು ಮಾಡಿ, ಹಣವನ್ನು ವೆರಿಫಿಕೇಶನ್ ಮಾಡಬೇಕು, ಆಮೇಲೆ ವಾಪಸ್ ಕೊಡುತ್ತೇವೆ ಎಂದು ನಂಬಿಸಿ ಆರ್‌ಟಿಜಿಎಸ್ ಮೂಲಕ ಹಂತ ಹಂತವಾಗಿ 24 ಕೋಟಿ ರೂ.ಅನ್ನು ವಿವಿಧ ಖಾತೆಗಳಿಗೆ ವರ್ಗಾಯಿಸಿಕೊಂಡಿದ್ದರು.

ರಕ್ಷಣೆಗೆ ಬಂದ ಬ್ಯಾಂಕ್ ಮ್ಯಾನೇಜರ್: ಬರೋಬ್ಬರಿ 24 ಕೋಟಿ ರೂ. ದೋಚಿದರೂ ವಂಚಕರ ದುರಾಸೆ ತೀರಿರಲಿಲ್ಲ. ಮತ್ತಷ್ಟು ಹಣಕ್ಕಾಗಿ ಅವರು ವೃದ್ಧೆಗೆ ಬೆದರಿಕೆ ಹಾಕುತ್ತಲೇ ಇದ್ದರು. ಕೊನೆಗೆ ವಿಧಿಯಿಲ್ಲದೆ ಲಕ್ಷ್ಮೀ ಅವರು ತಮ್ಮ ಮನೆಯಲ್ಲಿದ್ದ ಸುಮಾರು 1.300 ಕೆ.ಜಿ. ಚಿನ್ನದ ಒಡವೆಗಳನ್ನು ತೆಗೆದುಕೊಂಡು ಕಂಟೋನ್ಮೆಂಟ್ ಬ್ರಾಂಚ್‌ನ ಐಸಿಐಸಿಐ ಬ್ಯಾಂಕ್‌ಗೆ ಅಡಮಾನ ಇಡಲು ಬಂದಿದ್ದರು. ಬ್ಯಾಂಕ್ ಮ್ಯಾನೇಜರ್‌ಗೆ ತಕ್ಷಣವೇ ಅನುಮಾನ ಬಂದಿದೆ. ಸಮಯಪ್ರಜ್ಞೆ ಮೆರೆದು ತಡಮಾಡದೆ ಸಿಸಿಬಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಧಾವಿಸಿದ ಸಿಸಿಬಿ ಸೈಬರ್ ಪೊಲೀಸರು ವೃದ್ಧೆಯನ್ನು ವಿಚಾರಣೆಗೆ ಒಳಪಡಿಸಿದಾಗ, ತಾವು ಕಳೆದ ಜನವರಿಯಿಂದ ಅನುಭವಿಸುತ್ತಿದ್ದ ನರಕಯಾತನೆ ಮತ್ತು ಡಿಜಿಟಲ್ ಅರೆಸ್ಟ್ ಕಥೆಯನ್ನು ವಿವರಿಸಿದ್ದಾರೆ.

ವೃದ್ಧೆಯಿಂದ ತಕ್ಷಣವೇ ದೂರು ಪಡೆದ ಸಿಸಿಬಿ ಪೊಲೀಸರತಂಡದೇಶದವಿವಿಧೆಡೆಕಾರ್ಯಾಚರಣೆ ನಡೆಸಿ ಐವರು ಆರೋಪಿಗಳನ್ನು ಬೇಟೆಯಾಡಿದೆ. ಇತ್ತ ವೃದ್ಧೆಯ ಅಮೆರಿಕದಲ್ಲಿರುವ ಮಕ್ಕಳಿಗೆ ಸುದ್ದಿ ಮುಟ್ಟಿಸಲಾಗಿದೆ.

ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಸಂಪಾದಕೀಯ

ದುಡಿಮೆಗೆ ಗೌರವದ ನಿರ್ಧಾರ

ಕರ್ನಾಟಕ ಸರ್ಕಾರ ಕನಿಷ್ಠ ವೇತನವನ್ನು ಶೇ.60ರಷ್ಟು ಹೆಚ್ಚಿಸಿರುವುದು ಕಾರ್ಮಿಕ ವರ್ಗದ ಬದುಕಿಗೆ ಮಹತ್ವದ ನೆರವಾಗಲಿದೆ. ಹೊಸ ಪರಿಷ್ಕರಣೆಯಂತೆ ಬೆಂಗಳೂರಿನಲ್ಲಿ ಅಪ್ರಶಿಕ್ಷಿತ ಕಾರ್ಮಿಕನಿಗೂ ತಿಂಗಳಿಗೆ 23 ಸಾವಿರ ರೂ.ಗಿಂತ ಹೆಚ್ಚು ವೇತನ ದೊರೆಯಲಿದ್ದು, ಇದು ದುಡಿಮೆ ಮಾಡುವ ವರ್ಗಕ್ಕೆ ಸರ್ಕಾರ ನೀಡಿರುವ ಗೌರವದ ಸೂಚಕವಾಗಿದೆ. ಇದನ್ನು ವಲಯವಾರು ಲೆಕ್ಕಾಚಾರದಲ್ಲಿ ಮಾಡಿರುವುದರಿಂದ ಎಲ್ಲರಿಗೂ ಸಮಾನ ವೇತನ ಗೌರವ ಸಿಗಲಿದೆ.

ಬೆಲೆ ಏರಿಕೆ, ಮನೆ ಬಾಡಿಗೆ, ಆರೋಗ್ಯ ಮತ್ತು ಶಿಕ್ಷಣ ವೆಚ್ಚಗಳ ನಡುವೆ ಕಡಿಮೆ ಆದಾಯದ ಕುಟುಂಬಗಳು ಸಂಕಷ್ಟ ಅನುಭವಿಸುತ್ತಿದ್ದವು. ಇಂತಹ ಸಂದರ್ಭದಲ್ಲಿ ಕನಿಷ್ಠ ವೇತನ ಹೆಚ್ಚಳ ಕಾರ್ಮಿಕರ ಜೀವನಮಟ್ಟ ಸುಧಾರಣೆಗೆ ಸಹಕಾರಿಯಾಗಲಿದೆ. ವಿಶೇಷವಾಗಿ ನಿರ್ಮಾಣ, ಕೈಗಾರಿಕೆ, ಸೇವಾ ವಲಯ ಮತ್ತು ಅಸಂಘಟಿತ ಕ್ಷೇತ್ರದ ಸಾವಿರಾರು ಕಾರ್ಮಿಕರಿಗೆ ಇದು ನೇರ ಲಾಭ ತರುತ್ತದೆ. ಆದರೆ, ಕೇವಲ ಅಧಿಸೂಚನೆ ಹೊರಡಿಸುವುದರಿಂದ ಉದ್ದೇಶ ಸಫಲವಾಗುವುದಿಲ್ಲ. ನಿಯಮ ಪರಿಣಾಮಕಾರಿಯಾಗಿ ಜಾರಿಯಾಗಬೇಕು. ಅನೇಕ ಕಡೆಗಳಲ್ಲಿ ಕಾರ್ಮಿಕರಿಗೆ ಕಾನೂನಿನ ಪ್ರಕಾರ ವೇತನ ಸಿಗದೆ ಇರುವುದೂ ವಾಸ್ತವ. ಆದ್ದರಿಂದ ಕಾರ್ಮಿಕ ಇಲಾಖೆ ತಪಾಸಣೆಗಳನ್ನು ಬಲಪಡಿಸಿ, ಗುತ್ತಿಗೆದಾರರ ಮೂಲಕ ನಡೆಯುವ ಶೋಷಣೆಗೆ ಕಡಿವಾಣ ಹಾಕಬೇಕಿದೆ. ಡಿಜಿಟಲ್ ವೇತನ ಪಾವತಿ ವ್ಯವಸ್ಥೆ ಜಾರಿಗೆ ತಂದರೆ ಪಾರದರ್ಶಕತೆ ಹೆಚ್ಚುತ್ತದೆ.

ಇದರಿಂದ ರಾಜ್ಯದ ಆರ್ಥಿಕತೆಯ ಮೇಲೂ ಉತ್ತಮ ಪರಿಣಾಮ ಬೀಳುವ ಸಾಧ್ಯತೆ ಇದೆ. ಕಾರ್ಮಿಕರ ಕೈಯಲ್ಲಿ ಹೆಚ್ಚು ಹಣ ಹರಿದಾಡಿದರೆ ಮಾರುಕಟ್ಟೆಯಲ್ಲಿ ಖರೀದಿ ಚಟುವಟಿಕೆ ಹೆಚ್ಚುತ್ತದೆ. ಸಣ್ಣ ವ್ಯಾಪಾರ, ಸೇವಾ ವಲಯ ಮತ್ತು ಸ್ಥಳೀಯ ಆರ್ಥಿಕ ಚಟುವಟಿಕೆಗಳಿಗೆ ಇದು ಉತ್ತೇಜನ ನೀಡಬಹುದು. ಹೀಗಾಗಿ ಕಾರ್ಮಿಕರ ವೇತನ ಹೆಚ್ಚಳವನ್ನು ವೆಚ್ಚವೆಂದು ಮಾತ್ರ ನೋಡುವುದು ಸರಿಯಲ್ಲ.

ಇನ್ನೊಂದು ಪ್ರಮುಖ ಅಂಶವೆಂದರೆ ಕಾರ್ಮಿಕರಲ್ಲಿ ಕೆಲಸದ ಭದ್ರತೆ ಮತ್ತು ಆತ್ಮವಿಶ್ವಾಸ ಹೆಚ್ಚುವುದು. ನ್ಯಾಯಸಮ್ಮತ ವೇತನ ದೊರೆತಾಗ ಉತ್ಪಾದಕತೆ ಕೂಡ ಉತ್ತಮವಾಗುತ್ತದೆ. ಕೈಗಾರಿಕೆಗಳು ಮತ್ತು ಸಂಸ್ಥೆಗಳಿಗೂ ಸ್ಥಿರ ಹಾಗೂ ಸಮರ್ಥ ಕಾರ್ಮಿಕ ಶಕ್ತಿ ದೊರೆಯಲು ಇದು ನೆರವಾಗುತ್ತದೆ. ಗ್ರಾಮೀಣ ಭಾಗಗಳಿಂದ ನಗರಗಳಿಗೆ ಬರುವ ಕಾರ್ಮಿಕರ ಬದುಕಿನ ಮೇಲೂ ಈ ನಿರ್ಧಾರ ಸಕಾರಾತ್ಮಕ ಪರಿಣಾಮ ಬೀರುವ ಸಾಧ್ಯತೆ ಇದೆ. ಕನಿಷ್ಠ ವೇತನದಲ್ಲಿ ಏರಿಕೆಯಿಂದ ಅವರ ಕುಟುಂಬಗಳ ಶಿಕ್ಷಣ, ಆರೋಗ್ಯ ಮತ್ತು ಮೂಲಭೂತ ಅಗತ್ಯಗಳಿಗೆ ಹೆಚ್ಚು ಹಣ ಮೀಸಲಿಡಲು ಸಾಧ್ಯವಾಗುತ್ತದೆ. ಇದರಿಂದ ಸಾಮಾಜಿಕ ಭದ್ರತೆಯೂ ಬಲವಾಗುತ್ತದೆ. ಕಾರ್ಮಿಕ ಸಂಘಟನೆಗಳು ಹಾಗೂ ಕೈಗಾರಿಕೆಗಳ ನಡುವೆ ಸಮನ್ವಯವೂ ಅಗತ್ಯವಾಗಿದೆ. ಸರ್ಕಾರ ಈ ನಿರ್ಧಾರ ಜಾರಿಗೆ ತಂದಿರುವಾಗ ಕೈಗಾರಿಕೆಗಳಿಗೂ ಅಗತ್ಯ ಮಾರ್ಗದರ್ಶನ ಮತ್ತು ನೆರವು ಒದಗಿಸಬೇಕು. ಪರಸ್ಪರ ಸಹಕಾರದಿಂದ ಮಾತ್ರ ಕಾರ್ಮಿಕ ಕಲ್ಯಾಣ ಮತ್ತು ಕೈಗಾರಿಕಾ ಬೆಳವಣಿಗೆ ಎರಡನ್ನೂ ಸಮತೋಲನದಲ್ಲಿ ಕೊಂಡೊಯ್ಯಲು ಸಾಧ್ಯ. ರಾಜ್ಯದ ಅಭಿವೃದ್ಧಿ ಎಂದರೆ ಕೇವಲ ಕೈಗಾರಿಕೆಗಳ ಬೆಳವಣಿಗೆಯಲ್ಲ, ದುಡಿಯುವ ಕೈಗಳ ಬದುಕು ಸುಧಾರಿಸುವುದೂ ಆಗಿದೆ. ಸರ್ಕಾರದ ಈ ನಿರ್ಧಾರ ಕಾರ್ಮಿಕ ಕಲ್ಯಾಣ ಮತ್ತು ಆರ್ಥಿಕ ಪ್ರಗತಿ ಎರಡನ್ನೂ ಸಮತೋಲನದಲ್ಲಿ ಕೊಂಡೊಯ್ಯುವ ದೂರದೃಷ್ಟಿಯ ಹೆಜ್ಜೆಯಾಗಲಿ.

ಮೋದಿಯ ಬೆನ್ನು ಹತ್ತಿರುವ ಜಿರಳೆಗಳು!

ಆನ್‌ಲೈನ್ ಅಭಿಯಾನವೇ ಬೇರೆ. ಅದನ್ನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತವಾಗಿ ಪರಿವರ್ತಿಸುವುದೇ ಬೇರೆ.

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ಯುಎಇ, ನೆದರ್‌ಲ್ಯಾಂಡ್, ಸ್ವೀಡನ್, ನಾರ್ವೆ ಮತ್ತು ಇಟಲಿ ದೇಶಗಳಿಗೆ ಈಚೆಗೆ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡಿ ವಾಪಸ್ ಭಾರತಕ್ಕೆ ಮರಳುವುದರೊಳಗೆ ಸಾಮಾಜಿಕ ಜಾಲತಾಣ ಮತ್ತು ಕೆಲವು ಸುದ್ದಿ ವಾಹಿನಿಗಳಲ್ಲಿ ಮೋದಿ ವಿರುದ್ಧ ಭಯಂಕರ ಅಪಪ್ರಚಾರದ ಸದ್ದು ಕೇಳಿಬಂದಿತ್ತು. ನಾರ್ವೆಯಲ್ಲಿ ಪತ್ರಕರ್ತೆಯೊಬ್ಬಳ ಪ್ರಶ್ನೆಗೆ ಉತ್ತರಿಸದೆ ದೇಶದ ಮಾನ ಹರಾಜು ಹಾಕಿದರು, ಇಟಲಿಯಲ್ಲಿ ಅಲ್ಲಿನ ಪ್ರಧಾನಿ ಮೆಲೋನಿಗೆ ಮೆಲೋಡಿ ಚಾಕಲೇಟ್ ನೀಡಿ ದೇಶದ ಘನತೆಗೆ ಕುಂದು ತಂದರು ಎಂಬಿತ್ಯಾದಿ ಅಪಪ್ರಚಾರಗಳು ಮೊಳಗಿದವು. ನಾರ್ವೆ ಭೇಟಿ ವೇಳೆ ಪತ್ರಕರ್ತರು ಮೊದಲೇ ಪ್ರಶ್ನೆ ಸಿದ್ಧಪಡಿಸಿ ಕಳಿಸಬೇಕಿತ್ತು. ಇನ್ನೇನು ವೇದಿಕೆ ಇಳಿದು ಹೊರಟಾಗಲೇ ಪತ್ರಕರ್ತೆ ಪ್ರಶ್ನೆ ಕೇಳಿದ್ದು ಮೋದಿಗೆ, ತನ್ಮೂಲಕ ಭಾರತಕ್ಕೆ ಮುಜುಗರ ತರಲೆಂದೇ ಎಂಬುದು ವಿವೇಕ ಇರುವವರಿಗೆಲ್ಲ ಅರ್ಥವಾಗುವ ಸಂಗತಿ. ಇನ್ನು ಇಟಲಿ ಪ್ರಧಾನಿ ಮೆಲೋನಿಗೆ ಮೆಲೋಡಿ ಚಾಕಲೇಟ್ ಉಡುಗೊರೆಯಾಗಿ ನೀಡಿದ್ದು ಕೂಡ ರಂಧ್ರಾನ್ವೇಷಿ ಮಾಧ್ಯಮಗಳಿಗೆ 'ಅಪರಾಧ'ವಾಗಿ ಕಂಡಿದ್ದು ವಿಪರ್ಯಾಸ! ಯಾವುದೇ ದೇಶಕ್ಕೆ ಪ್ರಧಾನಿಯೊಬ್ಬರು ತೆರಳಿದಾಗ ಭೇಟಿಯ ವೇಳೆ ಭಾರತದ ವಸ್ತುವನ್ನು ಉಡುಗೊರೆಯಾಗಿ ನೀಡುವುದು ಸಂಪ್ರದಾಯ. ಭಾರತದ ಪಾರ್ಲೆಜಿ ಕಂಪನಿಯ ಉತ್ಪನ್ನವಾದ ಚಾಕಲೇಟ್ ನೀಡಿದ್ದನ್ನೇ ಕುಹಕದಿಂದ, ವಿಕೃತಾರ್ಥದಲ್ಲಿ ಲೇವಡಿ ಮಾಡುವುದು, ಬೌದ್ಧಿಕ ದಿವಾಳಿತನದ ಪ್ರದರ್ಶನವಾಗಬಹುದಷ್ಟೆ.

ಪ್ರಧಾನಿ ಮೋದಿ ಪ್ರವಾಸ ಮುಗಿಸಿ ದೆಹಲಿಗೆ ಬರುತ್ತಿದ್ದಂತೆ, ಇತ್ತ ವಿಪಕ್ಷ ನಾಯಕ ರಾಹುಲ್ ಗಾಂಧಿ ರಾಯ್ ಬರೇಲಿ ಮತ್ತು ಅಮೇಥಿಯ ಸಭೆಗಳಲ್ಲಿ ಮಾತನಾಡುತ್ತಾ 'ನಿತ್ಯವೂ ಸಂವಿಧಾನದ ಮೇಲೆ ದಾಳಿ ನಡೆಸುವ ಮತ್ತು ದೇಶದ ಹಿತಾಸಕ್ತಿಯನ್ನು ಆಯ್ದ ಉದ್ಯಮಿಗಳಿಗೆ ಮಾರಾಟ ಮಾಡುವ ಪ್ರಧಾನಿ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಆರೆಸ್ಸೆಸ್ ದೇಶದ್ರೋಹಿಗಳು' ಎಂದು ಗರ್ಜಿಸಿದ್ದಾರೆ. ಉಗ್ರರ ಭಾಷೆಯಲ್ಲಿ ಮಾತನಾಡಿದ ಅವರು, 'ಹೀಗೆ ಹೇಳಿದ್ದಕ್ಕಾಗಿ ಕ್ಷಮೆ ಕೇಳುವುದಿಲ್ಲ. ನಾನು ಯಾರಿಗೂ ಹೆದರುವುದಿಲ್ಲ' ಎಂದು ಎಂದಿನಂತೆ ಕೂಗಾಡಿದರು. ಸಂವಿಧಾನದ ಮೇಲೆ ಮೋದಿ ದಾಳಿ ಮಾಡಿದ್ದಕ್ಕೆ ಮತ್ತು ದೇಶದ ಹಿತಾಸಕ್ತಿಯನ್ನು ಆಯ್ದ ಉದ್ಯಮಿಗಳಿಗೆ ಮಾರಾಟ ಮಾಡಿದ್ದಕ್ಕೆ ಯಾವುದೇ ದಾಖಲೆಯನ್ನು ಮಾತ್ರ ರಾಹುಲ್ ಗಾಂಧಿ ಒದಗಿಸಲಿಲ್ಲ. ಅವರದೇನಿದ್ದರೂ ಬರಿದೇ ಆರೋಪ ಮತ್ತು ಪಲಾಯನ. ತಮ್ಮ ಆರೋಪಗಳಿಗೆ ಸಾಕ್ಷ್ಯ ಒದಗಿಸುವ ಉತ್ತರದಾಯಿತ್ವವನ್ನು ಲೋಕಸಭೆಯೊಳಗೆ ಮತ್ತು ಹೊರಗೆ ಎಂದೂ ಪ್ರದರ್ಶಿಸಿದ್ದಿಲ್ಲ. ವಿಪಕ್ಷ ನಾಯಕನೆಂದರೆ ಬೇಜವಾಬ್ದಾರಿಯ ಇಂತಹ ಹೇಳಿಕೆಗಳನ್ನು ಎಗ್ಗಿಲ್ಲದೆ ಕೊಡಬಹುದು ಎಂದು ಭಾವಿಸಿ ಬಿಟ್ಟಿದ್ದಾರೆ.

ಪ್ರಧಾನಿ ಮೋದಿಯವರ ವಿರುದ್ಧ ಇಂತಹ ಕುತ್ಸಿತ ಟೀಕೆಗಳು ವ್ಯಕ್ತವಾಗುತ್ತಿರುವುದು ಇದೇ ಮೊದಲನೆಯ ಸಲವಲ್ಲ. ಇದೇ ಕೊನೆಯದೂ ಖಂಡಿತ ಆಗಲಿಕ್ಕಿಲ್ಲ. ಮೋದಿ ಒಬ್ಬ ಚಾಯ್‌ವಾಲಾ, ದೇಶದ ಪ್ರಧಾನಿಯಾಗಲು ಅನರ್ಹ ಎಂದರು. ಗುಜರಾತ್ ಹತ್ಯಾಕಾಂಡದ ಹಿನ್ನೆಲೆಯಲ್ಲಿ ಯಾವುದೇ ಸಾಕ್ಷ್ಯ ಇಲ್ಲದಿದ್ದರೂ ಮೋದಿ 'ಸಾವಿನ ವ್ಯಾಪಾರಿ' ಎಂದು ಆಗ ಸೋನಿಯಾ ಗಾಂಧಿ ನಿಂದಿಸಿದ್ದರು. ಈ ತೆರನ ಇನ್ನೂ ಅದೆಷ್ಟೋ ನಿಂದನೆಯ ನುಡಿಗಳನ್ನು ಮೋದಿ ಪ್ರತಿನಿತ್ಯ ಕೇಳಿಸಿಕೊಳ್ಳುತ್ತಲೇ ಇದ್ದಾರೆ. ಆದರೆ ಅದಕ್ಕೆಲ್ಲ ಅವರೇನೂ ತಲೆಕೆಡಿಸಿಕೊಂಡಿಲ್ಲ.

ಒಮ್ಮೆ 'ಆಪ್ ಕೀ ಅದಾಲತ್' ಟಿವಿ ಕಾರ್ಯಕ್ರಮದಲ್ಲಿ ನಿರೂಪಕ ರಜತ್ ಶರ್ಮಾ 'ನೀವು ದಿನದ 24 ಗಂಟೆ ಕಾರ್ಯನಿರ್ವಹಿಸಿದರೂ ಎನರ್ಜಿಟಿಕ್ ಆಗಿಯೇ ಕಾಣಿಸುತ್ತೀರಲ್ಲ. ಇದರ ಹಿಂದಿನ ಗುಟ್ಟೇನು?' ಎಂದು ಪ್ರಶ್ನಿಸಿದ್ದರು. ಆಗ ಮೋದಿ ನಗುತ್ತಾ 'ಗುಟ್ಟೇನಿಲ್ಲ. ಪ್ರತಿನಿತ್ಯ ವಿರೋಧಿಗಳ ಕಡೆಯಿಂದ ಕನಿಷ್ಠ 10 ಕಿಲೋಗ್ರಾಂನಷ್ಟು ಬೈಗುಳ, ನಿಂದನೆ ಕೇಳಿಸಿಕೊಳ್ಳುತ್ತಲೇ ಇರುತ್ತೇನೆ. ನಾನು ಸಕ್ರಿಯತೆಯಿಂದ ಕಾರ್ಯನಿರ್ವಹಿಸಲು ಆ ಬೈಗುಳವೇ ಟಾನಿಕ್' ಎಂದಿದ್ದರು!

ಐದು ದೇಶಗಳ ಪ್ರವಾಸ ಮುಗಿಸಿ ಮೋದಿ ಭಾರತಕ್ಕೆ ಬರುವ ವೇಳೆಗೆ ಇನ್ನೊಂದು ರಾಜಕೀಯ ಸಂಚಲನ. ಕೆಲವು ದಿನಗಳ ಹಿಂದೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಾಧೀಶರು ಕೆಲವು ನಿರುದ್ಯೋಗಿಗಳು ಜಿರಳೆಗಳಿದ್ದಂತೆ ಎಂದು ಹೇಳಿದ್ದರು. ಅವರ ಈ ಹೇಳಿಕೆ ಹಾಗೂ ದೇಶದ ರಾಜಕೀಯ ವ್ಯವಸ್ಥೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಲು ಹುಟ್ಟು ಹಾಕಲಾದ 'ಕಾಕ್ರೋಚ್ ಜನತಾ ಪಾರ್ಟಿ' (ಸಿಜೆಪಿ) ಆನ್‌ಲೈನ್ ಅಭಿಯಾನ ಸಾಮಾಜಿಕ ಮಾಧ್ಯಮದಲ್ಲಿ ಸುನಾಮಿಯನ್ನೇ ಎಬ್ಬಿಸಿತು. ಸಾಮಾಜಿಕ ಮಾಧ್ಯಮದಲ್ಲಿ ಆರಂಭವಾದ ಈ ಪಾರ್ಟಿಗೆ ಕೇವಲ ಒಂದೇ ವಾರದಲ್ಲಿ ಎಕ್ಸ್ ಖಾತೆಯಲ್ಲಿ 16,800 ಸದಸ್ಯತ್ವ ಹಾಗೂ ಎರಡು ಕೋಟಿಗೂ ಅಧಿಕ ಫಾಲೋವರ್ಸ್. ಬಿಜೆಪಿ ಫಾಲೋವರ್‌ಗಳ ಸಂಖ್ಯೆಯಾದ 88 ಲಕ್ಷಕ್ಕಿಂತ ಇದು ಅಧಿಕ. ಈ ಪಕ್ಷದ ಸಂಸ್ಥಾಪಕ ಅಧ್ಯಕ್ಷ ಎಂದು ಕರೆದುಕೊಂಡಿರುವ ಅಭಿಜಿತ್ ದಿಪ್ಕೆ ಪುಣೆ ಮೂಲದ, ಈ ಹಿಂದೆ ಅರವಿಂದ ಕೇಜ್ರಿವಾಲ್ ಅವರ ಆಮ್ ಆದ್ಮಿ ಪಕ್ಷದ ಸಾಮಾಜಿಕ ಮಾಧ್ಯಮ ನಿರ್ವಹಿಸುತ್ತಿದ್ದ ಆಸಾಮಿ. ಅಮೆರಿಕದ ಬೋಸ್ಟನ್‌ನಲ್ಲಿ ಕುಳಿತೇ ಆತ ಈ ಪಕ್ಷ ಹುಟ್ಟು ಹಾಕಿ, ಹಾದಿ ತಪ್ಪಿರುವ ಜೆನ್‌ಝೀಗಳ (ಹಾದಿ ತಪ್ಪದ ಜೆನ್‌ಝೀಗಳ ಸಂಖ್ಯೆ ಅದಕ್ಕಿಂತಲೂ ದೊಡ್ಡದಿದೆ) ಗಮನ ಸೆಳೆಯುವಲ್ಲಿ ಯಶಸ್ವಿ ಆಗಿರುವುದಂತೂ ನಿಜ.



ಆದರೆ ಭಾರತದಲ್ಲಿ ಈ ಎಕ್ಸ್ ಖಾತೆಗೆ ನಿರ್ಬಂಧ ಹೇರಿದಾಗ 'ಕಾಕ್ರೋಚ್ ಈಸ್ ಬ್ಯಾಕ್' ಎಂಬ ಮತ್ತೊಂದು ಖಾತೆ ಆರಂಭಿಸಲಾಗಿದೆ. ಅಭಿಜಿತ್ ಜೊತೆಗೆ ಕೈಜೋಡಿಸಿರುವ ಇನ್ನೊಬ್ಬ ಯುವಕ ಅರ್ಪಿತ ಶರ್ಮಾ. 2024ರ ಲೋಕಸಭಾ ಚುನಾವಣೆ ವೇಳೆ ಇವರಿಬ್ಬರೂ ಕೇಜ್ರಿವಾಲರ ಪಕ್ಷದ ಪೂರ್ಣಾವಧಿ ಕಮ್ಯುನಿಕೇಷನ್ ಅಡ್ವೈಸರ್ ಆಗಿದ್ದರು. ಆದರೆ ಆ ಚುನಾವಣೆಯಲ್ಲಿ ಭಾರತದ ಪ್ರಜ್ಞಾವಂತ ಜನತೆ ಕೇಜ್ರಿವಾಲ್ ಮತ್ತು ರಾಹುಲ್ ಗಾಂಧಿಯವರ ಸುಳ್ಳುಗಳನ್ನು ಕಸದ ಬುಟ್ಟಿಗೆ ಎಸೆದಾಗ ಈ ಮಹಾಶಯರು ನೇರವಾಗಿ ಹಾರಿದ್ದು ಅಮೆರಿಕೆಗೆ. ಅಲ್ಲಿ ಕುಳಿತು ವೈ-ಫೈ ಬಳಸಿಕೊಂಡು ಈ 'ಜಿರಳೆ 'ನಾಟಕ ಆಡುತ್ತಿದ್ದಾರೆ. ಈ ಜಿರಳೆ ಪಾರ್ಟಿಗೆ ಸೇರಲು ನೀಡಿರುವ ಗೂಗಲ್ ಫಾರ್ಮ್ ಲಿಂಕ್‌ಗೆ ಮುಗ್ಧ ಯುವಕರು ಇದೇನೋ ಹೊಸ ಕ್ರಾಂತಿ ಎಂದು ಭ್ರಮಿಸಿ ತಮ್ಮ ಹೆಸರು, ಫೋನ್ ನಂಬರ್, ಇಮೇಲ್ ಎಲ್ಲವನ್ನು ತುಂಬುತ್ತಾರೆ . ಆದರೆ ನಿಜ ಸಂಗತಿ ಏನೆಂದರೆ ಯುವಕರ ಎಲ್ಲಾ ಡೇಟಾ ನೇರವಾಗಿ ಹೋಗುವುದು ಆಮ್ ಆದ್ಮಿ ಪಾರ್ಟಿಯ ಡೇಟಾಬೇಸ್‌ಗೆ! ಅಂದರೆ ಯುವ ಜನತೆಯ ವೈಯಕ್ತಿಕ ಮಾಹಿತಿಯನ್ನು ಕದ್ದು ಮುಂದೆ ಚುನಾವಣೆಗಳಲ್ಲಿ ಯುವಕರಿಗೆ ಸುಳ್ಳು ಪ್ರಚಾರದ ಮೆಸೇಜ್‌ಗಳನ್ನು ಕಳಿಸಲು ಹೂಡಿರುವ ದೊಡ್ಡ ಷಡ್ಯಂತ್ರ ಇದು! ಇದು ಕ್ರಾಂತಿಯಲ್ಲ. ಬದಲಿಗೆ ಹಣ ಕೊಟ್ಟು ರಾತ್ರೋರಾತ್ರಿ ವೈರಲ್ ಮಾಡುವ ಹುನ್ನಾರ. ಇದರ ಹಿಂದಿರುವವರು ಭಾರತದ ಪ್ರಗತಿಯನ್ನು ಸಹಿಸದ, ಹಿಂದು ಧರ್ಮ ಮತ್ತು ರಾಷ್ಟ್ರೀಯತೆಯನ್ನು ಸದಾ ದ್ವೇಷಿಸುವ ಕಾಂಗ್ರೆಸ್ ಮತ್ತು ಎಎಪಿ ಕೂಲಿ ಕೆಲಸಗಾರರು. ಹಾಗೆಂದೇ ಕಾಂಗ್ರೆಸ್, ಎಐಪಿ ಸೇರಿದಂತೆ ವಿಪಕ್ಷಗಳು ಜಿರಳೆ ಪಾರ್ಟಿಯನ್ನು ಬೆಂಬಲಿಸಿವೆ.

ಆದರೆ ಇದಾವುದನ್ನು ಪರಿಗಣಿಸದೆ ಕನಿಷ್ಠ ಫ್ಯಾಕ್ಟ್‌ಚೆಕ್ ಕೂಡ ಮಾಡದೆ ಕೆಲವು ಪತ್ರಿಕೆಗಳು ಮತ್ತು ಸುದ್ದಿ ವಾಹಿನಿಗಳು ಜಿರಳೆ ಪಾರ್ಟಿಗೆ ಭಾರಿ ಪ್ರಚಾರ ಒದಗಿಸಿರುವುದು ದೇಶವಿರೋಧಿ ನಡೆಯಲ್ಲದೆ ಮತ್ತೇನು?

ತಮಿಳುನಾಡು ಚುನಾವಣೆಯಲ್ಲಿ ಎಲ್ಲ ವರ್ಗದವರ ಮತ ಪಡೆದು ಅಧಿಕಾರಕ್ಕೇರಿದ ಟಿವಿಕೆ ಮುಖ್ಯಸ್ಥ ತನ್ನ ವಿಜಯೋತ್ಸವ ಮೆರವಣಿಗೆಯಲ್ಲಿ ಪ್ರದರ್ಶಿಸಿದ್ದು ಭಾರತ ಮಾತೆಯ ಚಿತ್ರವಲ್ಲ, ಏಸುಕ್ರಿಸ್ತನ ಚಿತ್ರವನ್ನು! ಅದನ್ನು ಎಡಪಂಥೀಯ ನಿಲುವಿನ ಯಾವ ಮಾಧ್ಯಮಗಳೂ ಟೀಕಿಸಲಿಲ್ಲ. ಡಿಎಂಕೆ ಮೈತ್ರಿಕೂಟದ ಭಾಗವಾಗಿದ್ದ ಕಾಂಗ್ರೆಸ್ ವಿಜಯ್ ಸರ್ಕಾರಕ್ಕೆ ಬೆಂಬಲ ನೀಡಿದ್ದು ಅನೈತಿಕ ನಡೆ ಎಂದು ಇದೇ ಮಾಧ್ಯಮಗಳು ಹೇಳಲೇ ಇಲ್ಲ . ಕೇರಳದಲ್ಲಿ ನೂತನ ಯುಡಿಎಫ್ ಸರ್ಕಾರದ ಪ್ರಮಾಣ ವಚನದ ವೇಳೆ 'ವಂದೇ ಮಾತರಂ'ಗಾಯನ ಮೊಳಗಿದಾಗ ಮುಖ್ಯಮಂತ್ರಿ ಸತೀಶನ್ ಎದ್ದುನಿಂತು ಗೌರವ ಸಲ್ಲಿಸದೆ ಅವಮಾನಿಸಿದಾಗ ಇದೇ ಮಾಧ್ಯಮಗಳು ಚಕಾರ ಕೂಡ ಎತ್ತಲಿಲ್ಲ. ಅದು 'ವಂದೇ ಮಾತರಂ' ಗೀತೆಗೆ ಮಾಡಿದ ಅಪಚಾರ ಎಂದು ಅವುಗಳಿಗೆ ಅನ್ನಿಸಲೇ ಇಲ್ಲ, ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ಕೊಡದೆ ಹಠ ಹಿಡಿದಾಗ ಅದೊಂದು ಅಸಂವಿಧಾನಿಕ ನಡೆ ಎಂದು ಅನ್ನಿಸಲೇ ಇಲ್ಲ. ಆದರೆ ಭಾರತದಲ್ಲಿ ಅರಾಜಕತೆ ಸೃಷ್ಟಿಸಲು ಕೆಲವು ಎಡಬಿಡಂಗಿಗಳು ಜಿರಳೆ ಪಾರ್ಟಿ ಕಟ್ಟಿ, ಪ್ರಚಾರಗಿಟ್ಟಿಸಿದರೆ ಈ ಮಾಧ್ಯಮಗಳಿಗೆ ಬ್ರೇಕಿಂಗ್ ನ್ಯೂಸ್!

ಜಿರಳೆ ಪಾರ್ಟಿಯ ಉದ್ದೇಶ ಬಲು ಸ್ಪಷ್ಟ. ಮೋದಿಯ ಪದಚ್ಯುತಿ, ಮತ್ತೆ ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟದ ಮರುಸ್ಥಾಪನೆ. ಬಾಂಗ್ಲಾದೇಶ, ನೇಪಾಳದಂತೆ ಜೆನ್ ಝೀ ದಂಗೆಯ ಮಾದರಿಯಲ್ಲಿ ಭಾರತದಲ್ಲಿ ದಂಗೆ ಎಬ್ಬಿಸುವ ಒಂದು ವಿಫಲ ಪ್ರಯತ್ನ ಇದು. ಆದರೆ ಭಾರತ ಬಾಂಗ್ಲಾದೇಶವೂ ಅಲ್ಲ, ನೇಪಾಳವೂ ಅಲ್ಲ. ಭಾರತ ಭಾರತವಾಗಿಯೇ ಇರುತ್ತದೆ. ಮೊಘಲರು, ಆಂಗ್ಲರು, ಹೂಣರನ್ನೇ ಬಗ್ಗು ಬಡಿದ ನೆಲ ಇದು. ನಕಲಿ ಆನ್‌ಲೈನ್ ಕ್ರಾಂತಿಕಾರಿಗಳ ಅಗ್ಗದ ಆಟವನ್ನು ನಂಬುವಷ್ಟು ನವ ಭಾರತದ ಪ್ರಜ್ಞಾವಂತ ಯುವಕರು ದಡ್ಡ ಶಿಖಾಮಣಿಗಳೆ? ದೇಶ ಮೊದಲು ಎಂದು ನಂಬಿರುವ ಈ ಪ್ರಜ್ಞಾವಂತ ತರುಣರು ಇಂತಹ ಮೋಸದಾಟಗಳಿಗೆ ಖಂಡಿತ ಬಲಿಯಾಗಲಾರರು.

ಆನ್‌ಲೈನ್ ಅಭಿಯಾನವೇ ಬೇರೆ. ಅದನ್ನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತವಾಗಿ ಪರಿವರ್ತಿಸುವುದೇ ಬೇರೆ. ಆನ್‌ಲೈನ್ ಮೂಲಕ ವ್ಯಕ್ತವಾಗುತ್ತಿರುವ ಬೆಂಬಲದ ಕಾವನ್ನು ಜಿರಳೆ ಜನತಾ ಪಾರ್ಟಿ ಆರದಂತೆ ಉಳಿಸಿಕೊಳ್ಳುತ್ತಾ? ಅಥವಾ ಸುನಾಮಿಯಾಗಿ ಎದ್ದ ಈ ಅಲೆ ಅಷ್ಟೇ ಬೇಗ ತಣ್ಣಗಾಗಿ ಹೋಗುತ್ತಾ? ಕಾದು ನೋಡಬೇಕಷ್ಟೆ. 'ಜಿರಳೆ' ಎಂದು ಸಿಜೆಐ ಬಣ್ಣಿಸಿದ್ದಕ್ಕೆ ಸಿಟ್ಟಾಗಿದ್ದ ಯುವಕರಿಗೆ "ಜಿರಳೆ ಜನತಾ ಪಾರ್ಟಿ" ಆಕರ್ಷಕವಾಗಿ ಕಂಡಿರಬಹುದು. ಹೀಗಾಗಿ ಬೆಂಬಲ ಕೊಟ್ಟಿರಬಹುದು.

ಈ ನಡುವೆ ಆ್ಯಕ್ಸಿಸ್ ಮೈ ಇಂಡಿಯಾ ಸಂಸ್ಥೆಯ ಮುಖ್ಯಸ್ಥರಾಗಿರುವ ಪ್ರದೀಪ್ ಗುಪ್ತಾ "2014ರಲ್ಲಿ ದೇಶಾದ್ಯಂತ ಶುರುವಾದ ಬಿಜೆಪಿಯ ರಾಜಕೀಯ ಪ್ರಾಬಲ್ಯ 2034ರ ವರೆಗೂ ಮುಂದುವರೆಯಲಿದೆ. ಬಿಜೆಪಿ ಸರ್ಕಾರದ ಸಾಧನೆ ದುರ್ಬಲ ಆಗುವವರೆಗೂ ಅದು ಅಧಿಕಾರದಲ್ಲಿರುತ್ತದೆ ' ಎಂದು ಭವಿಷ್ಯ ನುಡಿದಿದ್ದಾರೆ. ಈ ಹೇಳಿಕೆಗೆ ಮಾತ್ರ ನಿರೀಕ್ಷಿತ ಪ್ರಚಾರ ಸಿಕ್ಕಿಲ್ಲ!

ಜಿರಳೆ ಜನತಾ ಪಾರ್ಟಿಗೆ ನಾ ಮುಂದು ತಾ ಮುಂದು ಎಂದು ಬೆಂಬಲಿಸುತ್ತಿರುವ, ತಾವಾಗಿಯೇ ಜೋತು ಬೀಳುತ್ತಿರುವ ಪಕ್ಷಗಳನ್ನು ನೋಡಿದರೆ, ಅವುಗಳಿಗೆ ಇದುವರೆಗೆ ಸ್ವಸಾಮರ್ಥ್ಯವೇ ಇರಲಿಲ್ಲ ಎಂಬುದಂತೂ ಸಾಬೀತಾಗಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಹರೆಯದವರು

ಹರೆಯದವರು ದಿನಕ್ಕೆ ಎರಡು ಗಂಟೆಗಿಂತ ಹೆಚ್ಚು ಸ್ಕ್ರೀನ್ ಟೈಮ್‌ನ್ನು ಉಪಯೋಗಿಸುವುದು ಒಳ್ಳೆಯದಲ್ಲ.

ತಾರುಣ್ಯ ತಲ್ಲಣ
• ಡಾ.ಕೆ,ಆರ್, ಶ್ರೀಧರ್
drkrsridhar208@gmail.com



ಇದು ಮಾಹಿತಿ ತಂತ್ರಜ್ಞಾನದ ಯುಗ. ಮನೆಯಲ್ಲೇ ಕೂತು ಕ್ಷಣಮಾತ್ರದಲ್ಲಿ ನಮ್ಮ ಅನಿಸಿಕೆಗಳನ್ನು ಇತರರೊಂದಿಗೆ ಹಂಚಿಕೊಳ್ಳಬಹುದು. ಅವರಿಂದ ಮಾಹಿತಿಯನ್ನು ಸಂಗ್ರಹಿಸಲೂ ಬಹುದು. ಇದಕ್ಕೆ ಅವಶ್ಯವಿರುವುದು ಎಲ್ಲಾ ರೀತಿಯ ಸೌಲಭ್ಯಗಳನ್ನು ಹೊಂದಿರುವ ಸ್ಮಾರ್ಟ್ ಫೋನ್, ಲ್ಯಾಪ್‌ಟಾಪ್ ಮತ್ತು ಇಂಟರ್‌ನೆಟ್. ನಮ್ಮ ಯೋಚನೆಗಳನ್ನು ಹಂಚಿಕೊಳ್ಳಲು, ಕಳುಹಿಸಲು, ಬೇರೆಯವರಿಂದ ಮಾಹಿತಿ ಪಡೆಯಲು ಇರುವ ಮಾರ್ಗಗಳು ಎಂದರೆ ಇಂಟರ್‌ನೆಟ್, ವಾಟ್ಸ್ ಆಪ್, ಯೂಟ್ಯೂಬ್, ಫೇಸ್‌ಬುಕ್, ಇನ್ಸ್‌ಟಾಗ್ರಾಂ, ಟ್ವಿಟರ್, ಟಿಕ್‌ಟಾಕ್, ಸ್ನ್ಯಾಪ್ ಛಾಟ್ ಹೀಗೆ ಹಲವಾರು ಇವೆ. ಇವಕ್ಕೆ ಸಾಮಾಜಿಕ ಜಾಲತಾಣಗಳು ಎಂದು ಕರೆಯುತ್ತಾರೆ. ನಮ್ಮ ದೇಶದಲ್ಲಿ ಪ್ರತಿಶತ ತೊಂಭತ್ತಕ್ಕಿಂತ ಹೆಚ್ಚು ಮಂದಿ ಹರೆಯದವರು ಇವುಗಳಲ್ಲಿ ಒಂದಕ್ಕಿಂತ ಹೆಚ್ಚು ಜಾಲತಾಣಗಳನ್ನು ಉಪಯೋಗಿಸುತ್ತಾರೆ. ಇದು ಎಲ್ಲರಿಗೂ ಗೊತ್ತಿರುವ ವಿಚಾರ.

ಸಾಮಾಜಿಕ ಜಾಲತಾಣಗಳನ್ನು ಸರಿಯಾಗಿ ಉಪಯೋಗಿಸಿದಾಗ ಅದು ಒಂದು ವರ ಎಂಬುದರಲ್ಲಿ ಎರಡು ಮಾತಿಲ್ಲ ಆದರೆ ಎಗ್ರಾಬಿಗ್ರಿಯಾಗಿ ಉಪಯೋಗಿಸಿದಾಗ ಅದು ನಮ್ಮ ಭವಿಷ್ಯಕ್ಕೆ ಕುತ್ತು ತರಬಹುದು ಎಂಬುದನ್ನು ತಿಳಿದಿರಬೇಕು. ವಿಶೇಷವಾಗಿ ಹರೆಯದವರು ಜಾಲತಾಣಗಳನ್ನು ಮತ್ತು ಅದರ ಸಾಧಕ ಬಾಧಕಗಳು ಗೊತ್ತಿಲ್ಲದೇ, ಅವಕ್ಕೆ ಮಾರು ಹೋದಾಗ, ಅವರ ಭವಿಷ್ಯ ಹಾಳಾಗಿ ಅದರಿಂದ ಇಡೀ ಕುಟುಂಬವೇ ಅಧೋಗತಿಗೆ ತಲುಪಬಹುದು. ಅದಕ್ಕಾಗಿ ಈ ಲೇಖನ.

ಎರಡನೇ ಪಿಯುಸಿಯ ವಿದ್ಯಾರ್ಥಿ ಅರುಣ್. ಹತ್ತನೇ ತರಗತಿಯಲ್ಲಿ ಜಿಲ್ಲೆಗೆ ಮೊದಲ ಸ್ಥಾನ ಗಳಿಸಿ ಎಲ್ಲರಿಂದಲೂ ಹೊಗಳಿಸಿಕೊಂಡಿದ್ದ. ಅದಕ್ಕಾಗಿ ಅರುಣ್‌ಗೆ ಪುರಸ್ಕಾರಗಳು ಬಂದಿದ್ದವು. ಪಿಯುಸಿ ಓದಲು ಬೆಂಗಳೂರು ಸೇರಿದ. ಅಲ್ಲಿ ಹಾಸ್ಟೆಲ್‌ಗೆ ಸೇರಿಸಿದರು. ಅರುಣ್‌ಗೆ ಚೆನ್ನಾಗಿ ಓದಲು ಒಂದು ಸ್ಮಾರ್ಟ್ ಫೋನ್ ಬೇಕೆಂದ. ಅದನ್ನು ತಂದೆ ರವಿ ಕೊಡಿಸಿದರು. ಪಿಯುಸಿಯಲ್ಲಿ ಅರುಣ್‌ನ ಓದು ಮುಂದುವರೆದಿತ್ತು. ಆದರೆ ಮೊದಲ ಪಿಯುಸಿ ಅಂತಿಮ ಪರೀಕ್ಷೆಯಲ್ಲಿ ಕಡಿಮೆ ಅಂಕಗಳು ಬಂದವು. ಸ್ಥಳ ಬದಲಾವಣೆ, ಹೊಂದಿಕೊಳ್ಳುವ ಸಮಸ್ಯೆ ಎಂದು ತಂದೆ ರವಿ ಭಾವಿಸಿದರು. ಎರಡನೇ ಪಿಯುಸಿ ಪರೀಕ್ಷೆಯಲ್ಲಿ ಅರುಣ್ ತಾನು ಚೆನ್ನಾಗಿ ಬರೆದಿದ್ದೇನೆ. ಈ ಬಾರಿ ಫಸ್ಟ್ ಬರಬಹುದು ಎಂದು ಅಪ್ಪ ಅಮ್ಮನೊಂದಿಗೆ ಹೇಳಿದ್ದ. ಆದರೆ ಫಲಿತಾಂಶ ಬಂದಾಗ ಎರಡು ವಿಷಯಗಳಲ್ಲಿ ಫೇಲಾಗಿದ್ದ. ಇದನ್ನು ಕಂಡ ತಂದೆ ರವಿ ಯಾಕೆ ಹೀಗಾಯಿತು ಎಂದು ಖಡಕ್ಕಾಗಿ ಮಗನನ್ನು ಕೇಳಿದಾಗ, ತಾನು ತನ್ನ ಫೋನಿನಲ್ಲಿ ಕೆಲವು ವೀಡಿಯೋಗಳನ್ನು ಮತ್ತು ರೀಲ್ಸ್‌ಗಳನ್ನು ನೋಡುತ್ತಾ ರಾತ್ರಿ ಎರಡು ಗಂಟೆಯಾದರೂ ತಿಳಿಯುತ್ತಿರಲಿಲ್ಲ. ನಂತರ ನಿದ್ದೆ ಬಂದು ಮಲಗುತ್ತಿದ್ದೆ. ಇದರಿಂದ ಓದಿನಲ್ಲಿ ನಿರಾಸಕ್ತಿ ಉಂಟಾಯಿತು. ಅದರ ಕಾರಣ ತಾನು ಫೇಲಾದೆ ಎಂಬ ಸತ್ಯವನ್ನು ಹೊರಗೆಡಹಿದ.

ಉಮಾ ತಂದೆಗೆ ಒಬ್ಬಳೇ ಮಗಳು. ಪಿಯುಸಿ ಓದುತ್ತಿದ್ದಾಳೆ. ಚೆನ್ನಾಗಿ ಓದುತ್ತಿದ್ದ ಉಮಾ ಒಂದು ದಿನ ಮುಖ ಪೆಚ್ಚು ಹಾಕಿಕೊಂಡು ತರಗತಿಯಿಂದ ಮನೆಗೆ ಬಂದಳು. ಇದನ್ನು ಗಮನಿಸಿದ ತಾಯಿ ಸರೂ, ಕಾರಣ ಏನೆಂದು ಕೇಳಿದಾಗ ಉಮಾ ಒಂದೇ ಸಮನೆ ಮುಖ ಮುಚ್ಚಿಕೊಂಡು ಅಳಲು ಪ್ರಾರಂಭಿಸಿದಳು. ಕಾರಣ ಕೇಳಿದಾಗ ಫೇಸ್‌ಬುಕ್‌ನಲ್ಲಿ ತನ್ನ ಗೆಳತಿಯಿಂದ ಬಂದ ಮೆಸೇಜ್‌ಗಳನ್ನು ತೋರಿಸಿದಳು. ಅವಳ ಗೆಳತಿ ಅವಾಚ್ಯ ಶಬ್ದಗಳಿಂದ ಉಮಾಳಿಗೆ ಬೈಯ್ದ ಸಂದೇಶವಾಗಿತ್ತು. ಇದಕ್ಕೆ ಅವಳ ಗೆಳತಿಯರು ಕೆಲವರು ತಮ್ಮ ತಮ್ಮ ಹೌದು-ಇಲ್ಲ ಎಂಬ ಪ್ರತಿಕ್ರಿಯೆಯನ್ನು, ಕೆಲವರು ಈಮೋಜಿ ಮೂಲಕ ತಮ್ಮ ಅಭಿಪ್ರಾಯವನ್ನು ನಮೂದಿಸಿದ್ದರು. ಇದನ್ನು ನೋಡಿದ ಉಮಾ ಅವಮಾನದಿಂದ ತತ್ತರಿಸಿ ಹೋಗಿದ್ದಳು. ತಾನು ಇನ್ನು ಕಾಲೇಜಿಗೇ ಹೋಗುವುದಿಲ್ಲ ಎಂದು ಹಠ ಹಿಡಿದಳು. ಇಂತಹ ಬೈಯ್ಗುಳಗಳಿಗೆ ಇಂಗ್ಲೀಷಿನಲ್ಲಿ "Cyber bullying"(ಸೈಬರ್ ಬುಲ್ಲೀಯಿಂಗ್) ಎಂದು ಕರೆಯುತ್ತಾರೆ.

ಮೂರನೆಯ ಘಟನೆಯಲ್ಲಿ, ಸಂದೀಪ್ ಎಂಬ ಪಿಯುಸಿ ವಿದ್ಯಾರ್ಥಿ ಓದುವುದರಲ್ಲಿ ಸರಾಸರಿಗಿಂತ ಹೆಚ್ಚು ಬುದ್ಧಿವಂತ. ಅವನಿಗೆ ತಾನು ಹೇಗಾದರೂ ಮಾಡಿ ಈ ಬಾರಿ ನೀಟ್ ಪರೀಕ್ಷೆಯಲ್ಲಿ ವೈದ್ಯಕೀಯ ಸೀಟ್ ಗಿಟ್ಟಿಸಲೇ ಬೇಕು ಎಂದು ತನ್ನ ಉಪಾಧ್ಯಾಯರ ಹತ್ತಿರ ಹೋದ. ಅವರು ನೀಟ್ ಸ್ಪೆಷಲ್ ಕೋಚಿಂಗ್ ಜೊತೆಗೆ ಸ್ಮಾರ್ಟ್ ಫೋನ್ ಇದ್ದರೆ ಒಳ್ಳೆಯದು. ಆದರೆ ಅದನ್ನು ಸರಿಯಾಗಿ ಉಪಯೋಗಿಸಬೇಕೆಂದು ಹೇಳಿದರು. ಕೂಡಲೇ ಸ್ಮಾರ್ಟ್ ಫೋನ್ ಬೇಕೆಂದು ತಂದೆಗೆ ಹೇಳಿದ. ಅವರೂ ಅದನ್ನು ಕೊಡಿಸಿದರು. ಅಂತೂ ಇಂತೂ ಸ್ಪೆಷಲ್ ಕೋಚಿಂಗ್ ಪಡೆದು, ಸ್ಮಾರ್ಟ್ ಫೋನ್ ಸಹಾಯದಿಂದ ನೀಟ್‌ನಲ್ಲಿ ಚೆನ್ನಾಗಿ ಬರೆದು ವೈದ್ಯಕೀಯ ಸೀಟ್ ಗಿಟ್ಟಿಸಿಕೊಂಡ. ಅದು ಸಂದೀಪನಿಗೆ ವರವಾಗಿ ಪರಿಣಮಿಸಿತು. ಆದರೆ ಮೊದಲಿನ ಎರಡು ಉದಾಹರಣೆಗಳಲ್ಲಿ (ಅರುಣ್ ಮತ್ತು ಉಮಾ) ಸಾಮಾಜಿಕ ಜಾಲತಾಣವು ಶಾಪವಾಯಿತು.

ಸಾಮಾಜಿಕ ಜಾಲತಾಣಗಳಿಂದ ಶಿಕ್ಷಣದ ಮಾಹಿತಿ, ಸೃಜನಶೀಲತೆ, ವೈವಿಧ್ಯಮಯವಾದ ಕಲಿಕೆ ಮತ್ತು ಆಳವಾದ ಜ್ಞಾನವನ್ನು ಪಡೆಯಬಹುದು. ಹರೆಯದವರು ಸಹಪಾಠಿಗಳೊಂದಿಗೆ ಗೆಳೆತನ ಸಾಧಿಸಬಹುದು. ಅದೇ ರೀತಿ ಜಾಲತಾಣಗಳ ಮೂಲಕವೇ ತಮ್ಮ ಸಂದೇಹಗಳ ಕುರಿತು ಚರ್ಚಿಸಿ ವಿಷಯಗಳನ್ನು ಸ್ಪಷ್ಟ ಮಾಡಿಕೊಳ್ಳಬಹುದು. ಒಂಟಿ ಎನಿಸಿದರೆ ಗೆಳೆಯರೊಂದಿಗೆ ಸ್ವಲ್ಪ ಹೊತ್ತು ಮಾತನಾಡಿ ಮನಸ್ಸನ್ನು ಹಗುರ ಮಾಡಿಕೊಳ್ಳಬಹುದು. ಗೆಳೆಯರ ಗುಂಪಿನೊಂದಿಗೆ ಬೆರೆತಾಗ ಒಂಟಿತನ ಮಾಯವಾಗಿ ಮನಸ್ಸು ನಿರಾಳವೆನಿಸುತ್ತದೆ. ಮನಸ್ಸಿಗೆ ಆಹ್ಲಾದಕರವೆನಿಸುತ್ತದೆ. ಸೃಜನಶೀಲತೆಯನ್ನು ಬೆಳೆಸಿಕೊಳ್ಳಬಹುದು. ಹೀಗೆ ಹಲವಾರು ವಿಷಯಗಳ ಕುರಿತು ಜ್ಞಾನ ವೃದ್ಧಿಗೊಳಿಸಿಕೊಳ್ಳಬಹುದು. ಇದು ಜಾಲತಾಣಗಳಿಂದ ನಾವು ಪಡೆಯುವ ಉಪಯೋಗ.

ಜಾಲತಾಣಗಳನ್ನು ಸರಿಯಾಗಿ ಉಪಯೋಗಿಸದಿದ್ದರೆ ಅದು ಒಂದು ಶಾಪವಾಗಬಹುದು. ಇದಕ್ಕೆ ಉದಾಹರಣೆ ಮೇಲೆ ತಿಳಿಸಿದ ಅರುಣ್‌ನ ಉದಾಹರಣೆ. ಜಾಲತಾಣಗಳಲ್ಲಿ ನಮಗೆ ಉಪಯೋಗಕ್ಕೆ ಬರುವುದು ಮತ್ತು ಉಪಯೋಗಕ್ಕೆ ಬಾರದೇ ನಮ್ಮನ್ನು ಅಡ್ಡ ದಾರಿಗೆಳೆಸುವ ವಿಷಯಗಳು ಮತ್ತು ದೃಶ್ಯಗಳು ಇರುತ್ತವೆ. ಯಾರು ಅವಶ್ಯವಾದವುಗಳನ್ನು ಆರಿಸಿಕೊಳ್ಳುತ್ತಾರೋ, ಅವರಿಗೆ ಅದು ವರವಾಗುತ್ತದೆ. ಇಲ್ಲಿ ಅರುಣ್ ತನಗೆ ಉಪಯೋಗವಿಲ್ಲದ ವೀಡಿಯೋಗಳು, ರೀಲ್ಸ್‌ಗಳಿಂದ ಆಕರ್ಷಿತನಾಗಿ ಅವುಗಳನ್ನು ಮಧ್ಯ ರಾತ್ರಿವರೆಗೆ ನೋಡುತ್ತಾ ಕಾಲ ಕಳೆದ. ನಂತರ ನಿದ್ರೆ ಬರುತ್ತಿತ್ತು. ಓದುವುದರಲ್ಲಿ ಆಸಕ್ತಿ ಕಡಿಮೆಯಾಯಿತು. ಗೆಳೆಯರೂ ದೂರವಾದರು. ಒಂಟಿತನ ಕಾಡತೊಡಗಿತು. ಕೆಲವು ದಿನ ಕ್ಲಾಸಿಗೆ ಹೋಗಲಾಗದೇ ರೂಮಿನಲ್ಲೇ ಉಳಿಯುತ್ತಿದ್ದ. ಹಾಗಾಗಿ ಕಲಿಕೆಯಲ್ಲಿ ಹಿಂದುಳಿದ.

ಉಮಾ ಒಳ್ಳೆಯ ಹುಡುಗಿ. ಯಾವುದೋ ಕಾರಣಕ್ಕೆ ಅವಳ ಗೆಳತಿಯೊಂದಿಗೆ ಜಗಳವಾಯಿತು. ಉಮಾಳನ್ನು ಮುಖತಃ ಎದುರಿಸಲಾಗದೇ ಫೇಸ್‌ಬುಕ್ ಮೂಲಕ ವಾಚಾಮಗೋಚರವಾಗಿ ಸಂದೇಶ ಕಳುಹಿಸಿದಾಗ ಅದು ಅವಳ ಉಳಿದ ಗೆಳತಿಯರಿಗೆ ತಿಳಿದು ಅವರೆಲ್ಲರೂ ಪ್ರತಿಕ್ರಿಯಿಸಿದಾಗ ಉಮಾಗೆ ಅವಮಾನವಾದಂತಾಯಿತು. ಆದರಿಂದ ಖಿನ್ನತೆಗೊಳಗಾಗಿ ಕಾಲೇಜಿಗೆ ಹೋಗಲಾರೆನೆಂದು ಹಠ ಹಿಡಿದಳು. ಇವರೆಡೂ ಉದಾಹರಣೆಗಳು ಸಾಮಾಜಿಕ ಜಾಲತಾಣಗಳು ಹರೆಯದವರಿಗೆ ಹೇಗೆ ಶಾಪವಾಗಿ ಪರಿಣಮಿಸಬಹುದೆಂಬುಕ್ಕೆ ಸಾಕ್ಷಿ.

ಹಾಗಾದರೆ ಇದಕ್ಕೆ ಪರಿಹಾರ ಏನು? ಮೊದಲನೆಯದಾಗಿ ಪೋಷಕರು ಹರೆಯದ ಮಕ್ಕಳಿಗೆ ಸ್ಮಾರ್ಟ್‌ಫೋನ್ ಕೊಡಿಸುವಾಗ ಅದರ ಸಾಧಕ ಬಾಧಕಗಳನ್ನು ವಿವರಿಸಬೇಕು. ಸ್ಮಾರ್ಟ್ ಫೋನ್‌ಗಳಲ್ಲಿ ಇಂಟರ್‌ನೆಟ್‌ನಲ್ಲಿ ನೋಡುವ ಅವಧಿಗೆ ಸ್ಕ್ರೀನ್ ಟೈಮ್ (Screen time) ಎಂದು ಕರೆಯುತ್ತಾರೆ. ದಿನಕ್ಕೆ ಎರಡು ಗಂಟೆಗಿಂತ ಹೆಚ್ಚು ಸ್ಕ್ರೀನ್ ಟೈಮ್‌ನ್ನು ಉಪಯೋಗಿಸುವುದು ಒಳ್ಳೆಯದಲ್ಲ ಎಂದು ಹರೆಯದವರಿಗೆ ಮನವರಿಕೆ ಮಾಡಿಕೊಡಬೇಕು. ದಿನಕ್ಕೆ ಎರಡು ಗಂಟೆಗಿಂತ ಹೆಚ್ಚಿಗೆ ಅದನ್ನು ಉಪಯೋಗಿಸಬಾರದು. ಕೆಲವು ಆ್ಯಪ್‌ಗಳು ಒಳ್ಳೆಯದಲ್ಲ. ಅವುಗಳನ್ನು ಉಪಯೋಗಿಸುವುದರಿಂದ ದುಷ್ಪರಿಣಾಮಗಳೇ ಹೆಚ್ಚು ಎಂಬುದನ್ನು ತಿಳಿಸಬೇಕು. ಅವುಗಳನ್ನು ತೆಗೆಯುವುದೇ ಒಳ್ಳೆಯದು. ಎಲ್ಲಕ್ಕೂ ಮಿಗಿಲಾಗಿ ಸ್ಮಾರ್ಟ್ ಫೋನ್‌ಗಳನ್ನು ಮಾಹಿತಿ ಸಂಗ್ರಹಣೆಗಾಗಿ, ಜ್ಞಾನವೃದ್ಧಿ ಗಳಿಸಲು ಮತ್ತು ಸಾಮಾಜಿಕ ಪ್ರಜ್ಞೆ ಹೆಚ್ಚಿಸಿಕೊಳ್ಳಲು ಮಿತವಾಗಿ ಉಪಯೋಗಿಸಬೇಕೇ ವಿನಃ, ಭಾವನಾತ್ಮಕವಾಗಿ ಅದರೊಂದಿಗೆ ಅವಲಂಬಿತರಾಗಬಾರದು ಎಂಬ ಸಕಾರಾತ್ಮಕ ಮಾರ್ಗದರ್ಶನ ಮಾಡಿದಾಗ ಹರೆಯದವರಿಗೆ ಸಾಮಾಜಿಕ ಜಾಲತಾಣಗಳು ವರವಾಗಿ ಪರಿಣಮಿಸುವುದರಲ್ಲಿ ಸಂಶಯವಿಲ್ಲ.

'ಜಿರಳೆ' ಪಾಲಿಟಿಕ್ಸ್ !

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



ರಾಜಕೀಯ ಎಂದರೆ ಸಾಮಾನ್ಯವಾಗಿ ರಣರೋಚಕವಾಗಿಯೇ ಇರುತ್ತದೆ. ಟಿಕೆಟ್ ಸಿಕ್ಕಿಲ್ಲ ಎಂದು ಅಳು(ರೋ)ವುದರಿಂದ ಹಿಡಿದು, ತನಗೆ ಗೌರವ, ಮರ್ಯಾದೆ ಸಿಕ್ಕಿಲ್ಲ ಎಂದು ಪಕ್ಷವನ್ನು ಚಕ ಚಕನೇ ಬದಲಾಯಿಸುವ ಚಾಕಚಕ್ಯತೆಯವರೆಗೆ ಅದರ ರೋಚಕತೆಯ ಹತ್ತು ಹಲವು ತಿರುವುಗಳನ್ನು ಅದೆಷ್ಟು ಹೇಳಿದರೂ ಕಡಿಮೆಯೇ. ಆದರೆ ಇನ್ನು ಮೇಲೆ, ಅದು ಕೇವಲ ರೋಚಕತೆಯಷ್ಟೇ ಅಲ್ಲ 'ಕಾಕ್ರೋಚ್'ಕತೆಯೂ ಹೌದು ಎಂದು ಯಾರಾದರೂ ಹೇಳಿದರೆ ಒಪ್ಪಲೇ ಬೇಕು. ಪಾಲಿಟಿಕ್ಸ್‌ನ ಪಾಲಾಗಿ, ಬೇರೆ ಬೇರೆ ರೀತಿಯಲ್ಲಿ ಅದರ ಫಲಾನುಭವಿಗಳಾಗಿ, ಫಲವುಣ್ಣುವವರ ಪೈಕಿ ಮನುಷ್ಯರೇ ಸದಾ ಮುಂದೆ. ಹಾಗೂ ಆಗೀಗ ಯಾರನ್ನೋ ಬೈಯ್ಯಲೋ, ಹೊಗಳಲೋ, ಯಾವುದರ ವಿರುದ್ಧವೋ ಪ್ರತಿಭಟನೆ ಮಾಡಲೆಂದೋ ಕುರಿ, ನಾಯಿ, ಕತ್ತೆ, ಮೇಕೆ, ಆನೆ, ಹುಲಿ, ಕೋತಿ ಇನ್ನಿತ್ಯಾದಿ ಪ್ರಾಣಿಗಳ ಮೊರೆಹೋಗಿದ್ದರೂ ಹೋಗಿರಬಹುದು. ಅವುಗಳನ್ನು ಆಯಾ ಸಮಯ, ಸಂದರ್ಭ ಹಾಗೂ ಸನ್ನಿವೇಶಕ್ಕೆ ತಕ್ಕಂತೆ ಬಳಸಿರಲಿಕ್ಕೂ ಸಾಕು. ಪಾಲಿಟಿಕ್ಸ್‌ನಲ್ಲಿ ಅವುಗಳ ಪಾತ್ರ ಅಷ್ಟಕ್ಕೇ ಸೀಮಿತವಾಗಿತ್ತು. ಆದರೆ ಇದಕ್ಕೂ ಮೀರಿ ಜಿರಳೆಗಳೇನಾದರೂ ತಮ್ಮ ಮೀಸೆಯನ್ನು ರಾಜಕೀಯ ಕ್ಷೇತ್ರದ ಸಂಧಿ-ಗೊಂದಿಯಲ್ಲೂ ತೂರಿಸಿವೆಯೇ ಎಂಬ ಅನುಮಾನವೊಂದು ಹುಟ್ಟುವಂತೆ ಪಾಲಿಟಿಕ್ಸ್‌ನಲ್ಲಿ ಜಿರಳೆಗಳ ತರಲೆ ತರಹೇವಾರಿ ರೀತಿಯಲ್ಲಿ ಕಾಣಿಸಿಕೊಳ್ಳುತ್ತಿದೆ.

ಜಾತಿ ರಾಜಕಾರಣ, ಧರ್ಮ ರಾಜಕಾರಣ, ಓಲೈಕೆ ರಾಜಕಾರಣ ಇನ್ನೂ ಯಾವ್ಯಾವುದೋ ಬಗೆ ಬಗೆಯ ರಾಜಕಾರಣಗಳನ್ನು ನೋಡಿಕೊಂಡು ಬೆಳೆದ ಜನರು ಇದೀಗ 'ಜಿರಳೆ ರಾಜಕಾರಣ'ಕ್ಕೂ ಸಾಕ್ಷಿಯಾಗಬೇಕಿದೆ. ಬರೀ ಸಾಕ್ಷಿಯಲ್ಲ, ಮೂಕ ಸಾಕ್ಷಿ. ಮತ್ತೆ ರಾಜಕಾರಣಕ್ಕಿಳಿದ ಈ ಜಿರಳೆಗಳ ಜೊತೆಗೆ ಮಾತನಾಡುವುದಾದರೂ ಹೇಗೆ ಅಲ್ಲವೇ? ಅದಕ್ಕಾಗಿ ಮೂಕರಂತೆ ನಿಂತು ನೋಡ ಬೇಕಷ್ಟೇ. ಹೇಗೆ ಗೊತ್ತೇ? ಹೀಗೆ... 'ಇಡೀ ಮನೆಯಲ್ಲಿರುವ ಜಿರಳೆಗಳ ಸಂತತಿಯನ್ನೇ ಸಂಪೂರ್ಣವಾಗಿ ಸಂಹಾರ ಮಾಡಬೇಕೆಂದು ಏನೇನೋ ಸಿಂಪಡಿಸಿ, ಔಷಧಿಯಿಟ್ಟು, ಗೆರೆ ಎಳೆದು, ಇನ್ನೇನು ಅವುಗಳ ಮೂಲೋತ್ಪಾಟನೆ ಯಶಸ್ವಿಯಾಗಿ ನಡೆದೇ ಬಿಟ್ಟಿತೆಂದು ಖುಷಿ ಖುಷಿಯಿಂದ ಹಿರಿ ಹಿರಿ ಹಿಗ್ಗುತ್ತಾ ಪರಮ ತೃಪ್ತಿ, ಸಂತೃಪ್ತಿ ಹಾಗೂ ಸಮಾಧಾನದಿಂದ ಇದ್ದು ಮಧ್ಯೆ ರಾತ್ರಿ ನೀರು ಕುಡಿಯಲೆಂದು ಅಡುಗೆ ಮನೆಗೆ ಕಾಲಿಟ್ಟರೆ, ಅಲ್ಲೆಲ್ಲೋ ಮೂಲೆಯಲ್ಲಿ ಮೀಸೆ ಎತ್ತರಿಸಿ, ನಮ್ಮನ್ನೇ ನೋಡುತ್ತಾ ಮುಸಿ ಮುಸಿ ನಕ್ಕಂತೆ ಕಾಣಿಸಿಕೊಳ್ಳುತ್ತಲ್ಲ ಆ ಒಂದು ಜಿರಳೆ, ಆಗ ಪರಮ ಬೇಸರ ಹಾಗೂ ಅಸಹಾಯಕತೆಯ ಮಡುವಿಗೆ ಜಾರಿದಂತೆ ಆವರಿಸಿಕೊಳ್ಳುತ್ತದಲ್ಲ ಮೌನ, ಅಂಥದ್ದೇ ಮೌನ. ಇಷ್ಟು ದಿನ ಜಿರಳೆಯನ್ನು ನೋಡಿ ಹುಡುಗಿಯರು ಹೆದರುತ್ತಿದ್ದರಂತೆ, ಮೈ ಮೇಲೆ ಅವು ನೆಗೆದರೆ ಹೆಂಗಸರು ಕಿಟಾರನೇ ಕಿರುಚಿಕೊಳ್ಳುತ್ತಿದ್ದರಂತೆ, ಹಾಗೆಯೇ ಇನ್ನು ಮುಂದೆ ಜಿರಳೆಗಳ ವಿಷಯದಲ್ಲಿ ವಿರೋಧ ಪಕ್ಷಗಳು/ಆಡಳಿತ ಪಕ್ಷಗಳು ಬೇರೆ ಬೇರೆ ಕಾರಣಗಳಿಗೆ ಹೆದರುವಂತಾಗಿದೆ.

ಈಗ ಹೀಗೊಂದು ಜಿರಳೆ ಪಕ್ಷದ ವಿಚಾರ ಮುನ್ನೆಲೆ ಬಂದಿತ್ತೆಂದಲ್ಲ. ಸುಮ್ಮನೇ ಆಲೋಚಿಸಿದರೆ ಈ ಜಿರಳೆಗಳಿಗೂ ಪಾಲಿಟಿಕ್ಸ್ ಹಾಗೂ ಪಾಲಿಟೀಷಿಯನ್ಸ್‌ಗೂ ಸಾಕಷ್ಟು ಸಾಮ್ಯತೆಗಳಂತೂ ಖಂಡಿತಾ ಇವೆ. ನೋಡಿ ಜಿರಳೆಗಳು ಹಗಲಿಗಿಂತಲೂ ರಾತ್ರಿಯ ಸಮಯದಲ್ಲಿಯೇ ಹೆಚ್ಚು ಆ್ಯಕ್ಟಿವ್ ಆಗಿರುತ್ತವೆ. ಲೈಟ್ ಆಫ್ ಆದ ತಕ್ಷಣ ಅವುಗಳ ಕಾರುಬಾರು ಆನ್ ಆಗುವುದೇ ಹೆಚ್ಚು. ಹೇಯ್ ಇಲ್ಲ, ಸುತ್ತಮುತ್ತ ಜಿರಳೆ ಏನಿಲ್ಲ ಎಂದುಕೊಂಡ ಅದೆಷ್ಟೋ ಸಂದರ್ಭಗಳಲ್ಲಿ ಅವು ರಾತ್ರೋರಾತ್ರಿ "ನಾವಿಲ್ಲಿದ್ದೀವಿ ನೋಡ್ರಪಾ ಪಸಿ..." ಎಂದು ದರ್ಶನ ನೀಡುತ್ತವೆ. ಅಂದರೆ ಇವೆಲ್ಲವೂ ರಾಜಕಾರಣಿಗಳಿಗೂ ಹೋಲಿಕೆಯಾಗುವಂಥ ಲಕ್ಷಣಗಳೇ ಆಗಿವೆಯಲ್ಲ. ಅಲ್ಲವೇ ಮತ್ತೆ? ರಾತೋರಾತ್ರಿ ನಡೆಯುವ ಪಾರ್ಟಿ ಮೀಟಿಂಗ್‌ಗಳು, ನೈಟ್-ಔಟ್‌ಗಳು, ಹೆಣೆಯುವ ತಂತ್ರ-ಪ್ರತಿತಂತ್ರಗಳು, ಮೇಲಾಗಿ ಕುತಂತ್ರಗಳು ರೂಪುಗೊಳ್ಳುವುದೂ ರಾತ್ರಿಯಲ್ಲೇ! ಇನ್ನು ರಾತೋರಾತ್ರಿ ರಾಜೀನಾಮೆ, ರೆಸಾರ್ಟ್ ವಾಸ, ಪಕ್ಷಾಂತರ, ಮತ್ತೇನೋ ಹೊಂದಾಣಿಕೆ, ಮತ್ತಾವುದೋ ಡೀಲ್ ಇದೆಲ್ಲವೂ ರೂಪುಗೊಳ್ಳುವುದೂ ಇರುಳಿನಲ್ಲೇ. ನಮ್ಮ ಸುತ್ತಮುತ್ತ ಅಂತವರಾರೂ ಇಲ್ಲ ಎಂದು ಜನರು ಅದೆಷ್ಟೇ ಸಮಾಧಾನ ಮಾಡಿಕೊಂಡರೂ ಕೂಡಾ, ಕೊನೆಗೆ ಚುನಾವಣಾ ಮುನ್ನ ಹಣವನ್ನೋ ಹೆಂಡವನ್ನೋ ಹಂಚಲಾದರೂ ರಾತ್ರಿಯ ಹೊತ್ತಲ್ಲಿ ಮನೆ ಬಾಗಿಲಿಗೆ ಎಡತಾಕುವ ಸಾಧ್ಯತೆ ಇಲ್ಲದಿಲ್ಲ. ಬೆಳಕು ಬಿದ್ದಾಕ್ಷಣ, ಜಿರಳೆಗಳು ಒಮ್ಮಿಂದೊಮ್ಮೆಗೇ ನಾಪತ್ತೆಯಾಗುತ್ತಾವಲ್ಲ, ಹಾಗೆಯೇ ಇವರೂ ಕೂಡಾ ಪ್ರಶ್ನೆ ಕೇಳುವ ಮೀಡಿಯಾ ಕ್ಯಾಮೆರಾಗಳ ಬೆಳಕು, ಆರ್‌ಟಿಐ ಪ್ರಶ್ನೆ ಇನ್ನಿತ್ಯಾದಿ ಕಂಡ ಅಥವಾ ಕೇಳಿದಾಕ್ಷಣ ಕಣ್ಮರೆಯಾಗುತ್ತಾರೆ.

ಜಿರಳೆಗಳಿಗೆ ಇದೇ ಜಾಗ, ಅದೇ ಜಾಗ ಅಂತಲೇನೂ ಇಲ್ಲ. ಅವು ಎಲ್ಲಿಯೇ ಇದ್ದರೂ ಅಲ್ಲಿಯೇ ಬದುಕುಳಿಯುತ್ತವೆ. ಅವುಗಳು ಇರುವ ಜಾಗಕ್ಕಿಂತಲೂ, ಇಲ್ಲದಿರುವ ಜಾಗಗಳೇ ಕಡಿಮೆ. ಇಂದು ಅಡುಗೆ ಮನೆಯಲ್ಲಿ ದರ್ಶನ ನೀಡಿದರೆ, ನಾಳೆ ಗಾರ್ಡನ್‌ನ ಪಾಟ್‌ನ ಸಂಧಿಯಲ್ಲಿ ಇಣುಕುತ್ತವೆ. ಮತ್ತೊಂದು ದಿನ ವಾಶ್‌ಬೇಸಿನ್‌ನ ಇಕ್ಕೆಲದಲ್ಲಿ ಸರಿದಾಡಿದರೆ ಮಗದೊಂದು ದಿನ ಬುಕ್ ರ್‍ಯಾಕ್‌ನ ನಡುವಿನಿಂದ ಹೊರ ಜಿಗಿಯುತ್ತವೆ. ಇದೆಲ್ಲ ವಿವರ ನೋಡುತ್ತಿದ್ದಂತೆ ರಾಜಕಾರಣಿಗಳೂ ಎಲ್ಲಾ ಕಡೆಯಲ್ಲೂ ಸಲ್ಲುವವರೇ ಆಗಿದ್ದಾರಲ್ಲ ಎಂಬೊಂದು ಅಭಿಪ್ರಾಯ ಮೂಡದೇ ಇರುವುದಿಲ್ಲ. ಯಾವುದೇ ಪಾರ್ಟಿ, ಸಿದ್ಧಾಂತ ಹಾಗೂ ತತ್ವ ಆದರೂ ಅದಕ್ಕೆ ಹೊಂದಿಕೊಂಡು ಬಚಾವಾಗುಳಿಯುವ ಗುಣವೇ ಅಲ್ಲಿ ಮುಖ್ಯ. ಅಂದ ಮೇಲೆ ಜಿರಳೆಗಳು ತಮ್ಮ ಪಾಲಿಟಿಕ್ಸ್ ತಂತ್ರಗಳಲ್ಲಿ ಅದನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಿಕೊಂಡು ಹೋಗಬಲ್ಲವು ಎನ್ನುವುದು ನಿಸ್ಸಂಶಯವಾದ ಸಂಗತಿ.

ಜಿರಳೆಗಳ ಮೂತಿಯ ಮೇಲೆ ಆ್ಯಂಟೆನಾ ರೀತಿಯ ರಚನೆ ಇರುತ್ತದೆ. ಅದು ಮುಂದೊದಗುವ ಅಪಾಯದ ಪರಿಸ್ಥಿತಿಗಳನ್ನು ಗ್ರಹಿಸಲು ನೆರವಿಗೆ ಬರುತ್ತದಂತೆ. ಇವರಿಗೋ ಪಾರ್ಟಿ ವರ್ಕರ್ಸ್, ಮೀಡಿಯಾ ಮಹನೀಯರು, ಹಿಡನ್ ಕ್ಯಾಮೆರಾಗಳು, ನಿಗೂಢ ಗೂಢಾಚಾರರು, ವಾಟ್ಸಾಪ್ ಗ್ರೂಪ್‌ಗಳು, ಸೋಷಿಯಲ್ ಮೀಡಿಯಾಗಳು, ಪೋಸ್ಟ್‌ಗಳು, ಸ್ಟೇಟಸ್‌ಗಳು ಅರರ್ರೇ.. ಎಷ್ಟೊಂದು ಇಂಥ ಆ್ಯಂಟೆನಾಗಳಿವೆಯಲ್ಲ. ಅವುಗಳಿಂದಲೆಲ್ಲ ಸಾಕಷ್ಟು ಸಿಗ್ನಲ್‌ಗಳನ್ನು ನಿರಂತರವಾಗಿ ಸ್ವೀಕರಿಸುವ ವ್ಯವಸ್ಥೆಯೊಂದು ಸದಾ ಸಕ್ರಿಯವಾಗಿರುತ್ತದೆ ಎನ್ನುವುದು ಗಮನೀಯ. ಜಿರಳೆಗಳ ಹೊರಕವಚ ಗಡುಸಾಗಿರುತ್ತವೆಯಂತೆ. ಹ್ಞಾಂ.. ಮತ್ತೆ ಇಲ್ಲಿನ ಈ ಟೀಕೆ, ಟಿಪ್ಪಣಿ, ಟ್ರೋಲ್, ಕೇಸ್, ಆರೋಪ, ಪ್ರತ್ಯಾರೋಪ ಮತ್ತೊಂದು ಮಗದೊಂದನ್ನು ನಿರಂತರವಾಗಿ ಎದುರಿಸಿಕೊಂಡು ಬರುತ್ತಲೇ "ಅಯ್ಯೋ ಏನೇನೋ ಆಗೇ ಇಲ್ಲ.." ಎಂಬ ಪರಮ ನಿರಾಳತೆಯಿಂದ ಬದುಕುತ್ತಿರುವವರನ್ನು ಕಂಡರೆ ಈ ಗಡಸುತನ ರಾಜಕಾರಣಕ್ಕೆ ಅದೆಷ್ಟು ಅಗತ್ಯ, ಅವಶ್ಯ ಹಾಗೂ ಅನಿವಾರ್ಯ ಎನ್ನುವುದು ಸ್ಪಷ್ಟವಾಗುತ್ತದೆ.

ಸಣ್ಣ ಸಣ್ಣ ಬಿರಕುಗಳು, ಮೂಲೆ ಮೂಲೆಗಳನ್ನೆಲ್ಲ ಸದ್ದಿಲ್ಲದೇ ಆವಾಸ ಸ್ಥಾನವಾಗಿಸಿಕೊಂಡು ಅಲ್ಲಿಯೇ ತಮ್ಮ ಅಸ್ತಿತ್ವವನ್ನು ಬೆಳೆಸಿಕೊಳ್ಳುವಲ್ಲಿ ಜಿರಳೆಗಳನ್ನು ಮೀರಿಸಲು ಸಾಧ್ಯವೇ ಇಲ್ಲವೆನ್ನಿ. ರಾಜಕೀಯದಲ್ಲಾದರೂ ಹಾಗೆಯೇ ತಾನೇ? ಕಾಲೂರಿ ನಿಲ್ಲಲು, ನಿಂತು ಹೇಗೋ ಒಂದು ನೆಲೆ ಕಂಡುಕೊಳ್ಳಲು ಹೇಳ ಹೆಸರಿಲ್ಲದ ಸಮಿತಿ, ಆಯೋಗ, ನಿಗಮ-ಮಂಡಳಿಗಳೆಂದು ಸಿಕ್ಕ ಸಿಕ್ಕಲ್ಲಿ ಹೇಗೋ ತಮ್ಮ ಮಂಡೆಯನ್ನು ತೂರಿಸಿಕೊಂಡು ಮುಂದೆ ಸಾಗಿಯೇ ಸಾಗುತ್ತಾರೆ. ಅಲ್ಲಿ ಹಾಗೊಂದು ಸ್ಥಳಾವಕಾಶ ಇದೆಯೆನ್ನುವುದನ್ನು ಜಿರಳೆಗಳು ಅಲ್ಲಿ ಕಂಡುಕೊಂಡಂತೆ ಇವರು ಇಲ್ಲೆಲ್ಲ ಕಂಡುಕೊಳ್ಳುತ್ತಾರೆ. ಜಿರಳೆಗಳಿಗೆ ಸಂಬಂಧಿಸಿದಂತೆ ಇನ್ನೊಂದು ಬಹಳ ಇಂಟರೆಸ್ಟಿಂಗ್ ವಿಚಾರವಿದೆ.

ಅದೇನೆಂದರೆ, ಅವುಗಳು ತಮ್ಮ ಸಂಖ್ಯೆಯನ್ನು ಬಹಳ ವೇಗವಾಗಿ ವೃದ್ಧಿಸಿಕೊಳ್ಳುತ್ತವಂತೆ. ಹ್ಞಾಂ ಮತ್ತೆ ರಾಜಕೀಯಕ್ಕೆ ಕಾಲಿಡಬೇಕು ಎಂದರೆ ಅದಂತೂ ಅತ್ಯಗತ್ಯ. ಆದಷ್ಟು ಬೇಗ ತಮ್ಮ ಸಂಬಂಧಿಕರು, ಪರಿವಾರದವರ ಸಂಖ್ಯೆಯನ್ನು ವೃದ್ಧಿಸಿಕೊಂಡು, ಅವರಿಗೆಲ್ಲ ರಾಜಕೀಯ ಸ್ಥಾನ-ಮಾನ, ಹುದ್ದೆಗಳನ್ನು ನೀಡುತ್ತಾ ಸಾಗುವ ವ್ಯವಸ್ಥೆ ಆದಾಗಲಷ್ಟೇ ರಾಜಕೀಯವಾಗಿ ಬಹುಬೇಗ ಬೇರೂರಲು ಸಾಧ್ಯ ಹಾಗೂ ಬೇರೆ ಬೇರೆ ಊರುಗಳಲ್ಲಿ ಬೇನಾಮಿ ಹೆಸರಲ್ಲಿ ಆಸ್ತಿ-ಪಾಸ್ತಿ ಮಾಡಿಡಲೂ ಕೂಡಾ ಸಾಧ್ಯ.

ಏನನ್ನು ಬೇಕಾದರೂ ತಿಂದು ಜೀರ್ಣಿಸಿಕೊಳ್ಳುವ ಜಿರಳೆಗಳ ಈ ಗುಣ ರಾಜಕೀಯವಾಗಿ ಬಹಳ ಉಪಯೋಗಕ್ಕೆ ಬರುವಂಥದ್ದು. ಮೋರಿ, ಸಂಕ, ಕಟ್ಟಡ, ರಸ್ತೆ, ಸಭಾಂಗಣ, ಸಬ್ಸಿಡಿ ಹೀಗೆ ಎಲ್ಲವನ್ನೂ ತಿಂದು ಜೀರ್ಣಿಸಿಕೊಳ್ಳುವುದನ್ನು ರೂಢಿಸಿಕೊಳ್ಳುವುದು ಕಷ್ಟವಾಗಬಾರದಲ್ಲ. ಹೀಗೆ ಜಿರಳೆ ಪಕ್ಷ ನಿಧಾನಕ್ಕೆ ಕೈ ಕಾಲು ಆಡಿಸಿ ರೆಕ್ಕೆ ಬಡಿಯುತ್ತಿದ್ದರೆ, ಅತ್ತ 'ಹಿಟ್', 'ಲಕ್ಷ್ಮಣ್ ರೇಖಾ' ಇನ್ನಿತ್ಯಾದಿಗಳು, 'ಹಾಗಾದರೆ ಇನ್ನು ನಾವೂ ಧುಮುಕುತ್ತೇವೆ. ನಮ್ಮದೂ ಕೂಡಾ ಪಾಲಿಟಿಕ್ಸ್' ಎಂದು ಹೇಳುತ್ತಿವೆಯಂತೆ.'ಹಾಗಾದರೆ ನಿಮ್ಮದು ಯಾವ ಪಾರ್ಟಿ?' ಎಂದು ಪ್ರಶ್ನಿಸಿದ್ದಕ್ಕೆ, ಅವು ಪರಸ್ಪರ ಕೈ ಕೈ ಹಿಡಿದು ಮೇಲಕ್ಕೆತ್ತಿ ಒಗ್ಗಟ್ಟು ಪ್ರದರ್ಶಿಸುತ್ತಾ 'ನಮ್ಮದು ಅಪೋಸಿಶನ್ ಪಾರ್ಟಿ' ಎಂದುತ್ತರಿಸಿದವಂತೆ! ಅಂದರೆ ಜಿರಳೆಗಳಿಗೊಂದು ಕಾಲ, ಹಿಟ್ ಸ್ಪ್ರೇಗಳಿಗೊಂದು ಕಾಲ ಎಂದೆನ್ನಬಹುದಲ್ಲವೇ?!

ಓವರ್‌ಡೋಸ್: ಜಿರಳೆಗಳನ್ನು ಕಂಡರೆ ಕೆಲವರಿಗೆ ಹೇಸಿಗೆಯಾಗುತ್ತದೆ. ಆದರೆ ಈ ವಿಷಯದಲ್ಲಿ ಜಿರಳೆಗಳನ್ನೇ ಮೀರಿಸುವವರೂ ಪಾಲಿಟಿಕ್ಸ್‌ನಲ್ಲಿ ಇದ್ದಾರೆ ಎನ್ನುವುದನ್ನು ಮರೆಯುವಂತಿಲ್ಲ!

ಇರಾನ್ ಒಪ್ಪಂದಕ್ಕೆ ಅಮೆರಿಕ ಅಂತಿಮ ಸಿದ್ಧತೆ

ಹಾರ್ಮುಜ್ ಮಾರ್ಗ ಪುನರಾರಂಭ ಸನ್ನಿಹಿತ

ಕೈರೋ: ಯುದ್ಧ ಕೊನೆಗೊಳಿಸಲು, ಹಾರ್ಮುಜ್ ಜಲಸಂಧಿಯನ್ನು ಪುನಃ ತೆರೆಯಲು ಮತ್ತು ಇರಾನ್‌ನ ಸಮೃದ್ಧ ಯುರೇನಿಯಂ ದಾಸ್ತಾನನ್ನು ಮುಟ್ಟುಗೋಲು ಹಾಕಿಕೊಳ್ಳಲು ಅಮೆರಿಕ ಇರಾನ್‌ನೊಂದಿಗೆ ಒಪ್ಪಂದಕ್ಕೆ ಹತ್ತಿರದಲ್ಲಿದೆ ಎಂದು ಪ್ರಾದೇಶಿಕ ಅಧಿಕಾರಿಗಳು ತಿಳಿಸಿದ್ದಾರೆ. ಪ್ರಾದೇಶಿಕ ಅಧಿಕಾರಿಗಳ ಪ್ರಕಾರ, ಪ್ರಸ್ತಾಪಿತ ಒಪ್ಪಂದದಲ್ಲಿ ಇರಾನ್ ತನ್ನ ಶೇ.60 ರಷ್ಟು ಶುದ್ಧತೆಯ ಸಂಪೂರ್ಣ ಸಮೃದ್ಧಗೊಳಿಸಿದ 440.9 ಕೆಜಿ ಯುರೇನಿಯಂ ದಾಸ್ತಾನನ್ನು ತ್ಯಜಿಸಲು ಒಪ್ಪಿಕೊಳ್ಳಲಿದೆ. ಇದರ ನಿರ್ದಿಷ್ಟ ಅನುಷ್ಠಾನದ ವಿವರಗಳನ್ನು ಮುಂದಿನ 60 ದಿನಗಳ ಮಾತುಕತೆಯ ಅವಧಿಯಲ್ಲಿ ಅಂತಿಮಗೊಳಿಸಲಾಗುವುದು. ಈ ಯುರೇನಿಯಂ ಅನ್ನು ದುರ್ಬಲಗೊಳಿಸಬಹುದು ಅಥವಾ ರಷ್ಯಾದಂತಹ ಮೂರನೇ ದೇಶಕ್ಕೆ ವರ್ಗಾಯಿಸಬಹುದು ಎನ್ನಲಾಗಿದೆ.



ಪ್ರಾದೇಶಿಕ ಹಸ್ತಕ್ಷೇಪಕ್ಕೆ ತೆರೆ?: ಇದಕ್ಕೆ ಪೂರಕವಾಗಿ, ಇರಾನ್ ಬಂದರುಗಳ ಮೇಲಿನ ಯುಎಸ್ ದಿಗ್ಬಂಧನವನ್ನು ಕೊನೆಗೊಳಿಸುವುದರೊಂದಿಗೆ ಹಾರ್ಮುಜ್ ಜಲಸಂಧಿಯನ್ನು ಹಂತಹಂತವಾಗಿ ಪುನಃ ತೆರೆಯಲಾಗುವುದು. ಇರಾನ್ ತನ್ನ ತೈಲವನ್ನು ಮಾರಾಟ ಮಾಡಲು ಯುಎಸ್ ಅನುಮತಿ ನೀಡಲಿದ್ದು, ನಿರ್ಬಂಧಗಳ ಸಡಿಲಿಕೆ ಮತ್ತು ಸ್ಥಗಿತಗೊಂಡಿರುವ ಇರಾನ್ ನಿಧಿಗಳ ಬಿಡುಗಡೆ ಕುರಿತು 60 ದಿನಗಳಲ್ಲಿ ಮಾತುಕತೆ ನಡೆಯಲಿದೆ. ಈ ಕರಡು ಒಪ್ಪಂದ, ಇಸ್ರೇಲ್ ಮತ್ತು ಲೆಬನಾನ್‌ನ ಹೆಜ್ಬೊಲ್ಲಾ ನಡುವಿನ ಯುದ್ಧದ ಮುಕ್ತಾಯ ಹಾಗೂ ಪ್ರಾದೇಶಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡದಿರುವ ಒಪ್ಪಂದಗಳನ್ನೂ ಒಳಗೊಂಡಿದೆ ಎನ್ನಲಾಗಿದೆ.

ರಾಜತಾಂತ್ರಿಕ ಪ್ರಗತಿ: ಒಪ್ಪಂದದ ಬಹುತೇಕ ಮಾತುಕತೆಗಳು ಮುಗಿದಿವೆ ಎಂದು ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದು, ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಕೂಡ ಭಾರತ ಪ್ರವಾಸದ ಸಂದರ್ಭದಲ್ಲಿ ಮಹತ್ವದ ಪ್ರಗತಿಯನ್ನು ಉಲ್ಲೇಖಿಸಿದ್ದಾರೆ. ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮಾಯಿಲ್ ಬಘೇಯ್ ಭಿನ್ನಾಭಿಪ್ರಾಯಗಳು ಕಡಿಮೆಯಾಗುತ್ತಿರುವುದನ್ನು ದೃಢಪಡಿಸಿದ್ದಾರಾದರೂ, ಕಳೆದ ವರ್ಷ ನಡೆದ ದಾಳಿಗಳ ಹಿನ್ನೆಲೆಯಲ್ಲಿ ಎಚ್ಚರಿಕೆ ವ್ಯಕ್ತಪಡಿಸಿದ್ದಾರೆ. ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯನ್, ತಾವು ಪರಮಾಣು ಅಸ್ತ್ರದ ಹಿಂದೆ ಬಿದ್ದಿಲ್ಲ ಎಂದು ಹೇಳಿದ್ದಾರೆ.

ಪ್ರಾದೇಶಿಕ ಆತಂಕಗಳು: ಫೆ.28 ರಂದು ಇರಾನ್ ಮೇಲೆ ಯುಎಸ್ ಮತ್ತು ಇಸ್ರೇಲ್ ನಡೆಸಿದ ಬಾಂಬ್ ದಾಳಿಯ ನಂತರ ಜಾಗತಿಕ ಇಂಧನ ಬಿಕ್ಕಟ್ಟು ಸೃಷ್ಟಿಯಾಗಿದೆ. ಇರಾನ್‌ನೊಂದಿಗೆ ಏ.7ರಿಂದ ಕದನ ವಿರಾಮ ಜಾರಿಯಲ್ಲಿದ್ದರೂ, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಹೆಜ್ಬೊಲ್ಲಾ ಬೆದರಿಕೆಗಳ ವಿರುದ್ಧ ಇಸ್ರೇಲ್ ಯಾವುದೇ ಕ್ರಮ ಕೈಗೊಳ್ಳುವ ಸ್ವಾತಂತ್ರ್ಯವನ್ನು ಕಾಯ್ದುಕೊಂಡಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಲೆಬನಾನ್ ಯುದ್ಧದಲ್ಲೂ ಅಪಾರ ನಷ್ಟ: ಲೆಬನಾನ್ ಆರೋಗ್ಯ ಸಚಿವಾಲಯದ ಪ್ರಕಾರ, ಇತ್ತೀಚಿನ ಹೋರಾಟದಲ್ಲಿ 3,000ಕ್ಕೂ ಹೆಚ್ಚು ಜನರು ಅಸುನೀಗಿದ್ದಾರೆ. ಇದರೊಂದಿಗೆ, ದಕ್ಷಿಣ ಲೆಬನಾನ್‌ನಲ್ಲಿ ಅಥವಾ ಅದರ ಆಸುಪಾಸಿನಲ್ಲಿ ಇಸ್ರೇಲ್‌ನ 22 ಸೈನಿಕರು ಮತ್ತು ಒಬ್ಬ ರಕ್ಷಣಾ ಅಧಿಕಾರಿ ಮೃತಪಟ್ಟಿದ್ದಾರೆ. ಉತ್ತರ ಇಸ್ರೇಲ್‌ನಲ್ಲಿ ಇಬ್ಬರು ನಾಗರಿಕರು ಮೃತರಾದ್ದಾರೆ ಎಂದು ನೆತನ್ಯಾಹು ಕಚೇರಿ ತಿಳಿಸಿದೆ.

ಕೀವ್ ಮೇಲೆ ಭಾರೀ ದಾಳಿ

ಕೀವ್: ಉಕ್ರೇನ್‌ನ ಕೀವ್ ನಗರದ ಮೇಲೆ ರಷ್ಯಾ ಭಾನುವಾರ ನಡೆಸಿದ ಭಾರಿ ಡ್ರೋನ್ ಮತ್ತು ಕ್ಷಿಪಣಿ ದಾಳಿಯಲ್ಲಿ ಒರೇಶ್ನಿಕ್ ಬ್ಯಾಲಿಸ್ಟಿಕ್ ಕ್ಷಿಪಣಿಯನ್ನು ಬಳಸಿದ್ದು, ಕನಿಷ್ಠ ಇಬ್ಬರು ಮೃತಪಟ್ಟಿದ್ದಾರೆ. ಇತರೆ 83 ಜನರು ಗಾಯಗೊಂಡಿದ್ದಾರೆ.



ಕನಿಷ್ಠ 600 ಸ್ಟ್ರೈಕ್ ಡ್ರೋನ್‌ಗಳು ಮತ್ತು 90 ಕ್ಷಿಪಣಿಗಳನ್ನು ಬಳಸಿ ದಾಳಿ ನಡೆಸಲಾಗಿದೆ ಎನ್ನಲಾಗಿದೆ. ಉಕ್ರೇನ್ ವಾಯುಪಡೆ, 549 ಡ್ರೋನ್‌ಗಳು ಮತ್ತು 55 ಕ್ಷಿಪಣಿಗಳನ್ನು ಹೊಡೆದುರುಳಿಸಿದೆ ಅಥವಾ ತಡೆದಿದೆ ಹಾಗೂ 19 ಕ್ಷಿಪಣಿಗಳು ಗುರಿ ತಲುಪಲು ವಿಫಲವಾಗಿವೆ ಎಂದು ತಿಳಿಸಿದೆ. ಒರೇಶ್ನಿಕ್ ಕ್ಷಿಪಣಿ, ಬಿಲಾ ತ್ಸೆರ್ಕ್ವಾ ನಗರಕ್ಕೆ ಅಪ್ಪಳಿಸಿದೆ. ವಸತಿ ಕಟ್ಟಡಗಳು, ಶಾಲೆಗಳು, ಮಾರುಕಟ್ಟೆ ಮತ್ತು ಅಲ್ಬೇನಿಯನ್ ರಾಯಭಾರಿಯ ನಿವಾಸ ಸೇರಿದಂತೆ 50 ಸ್ಥಳಗಳಲ್ಲಿ ಹಾನಿ ದಾಖಲಾಗಿದೆ.

ಅಮೆರಿಕದ ಪೇಟ್ರಿಯಾಟ್ ವ್ಯವಸ್ಥೆಗಳಂತಹ ವಾಯು ರಕ್ಷಣಾ ಕ್ಷಿಪಣಿಗಳ ತೀವ್ರ ಕೊರತೆಯಿಂದಾಗಿ ಎಲ್ಲಾ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ತಡೆಯಲು ಸಾಧ್ಯವಾಗಿಲ್ಲ ಎಂದು ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಹೇಳಿದ್ದಾರೆ.

ಉಕ್ರೇನ್‌ನ ಮಿಲಿಟರಿ ನಿಯಂತ್ರಣ ಕೇಂದ್ರಗಳು ಮತ್ತು ವಾಯು ನೆಲೆಗಳ ಮೇಲೆ ದಾಳಿ ನಡೆಸಿರುವುದನ್ನು ರಷ್ಯಾ ರಕ್ಷಣಾ ಸಚಿವಾಲಯ ದೃಢಪಡಿಸಿದೆ. ಲುಹಾನ್ಸ್ಕ್‌ನ ಕಾಲೇಜು ನಿಲಯದ ಮೇಲೆ ಉಕ್ರೇನ್ ನಡೆಸಿದ ದಾಳಿಯಲ್ಲಿ 21 ಜನರು ಮೃತಪಟ್ಟಿದ್ದಕ್ಕೆ ಪ್ರತೀಕಾರವಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಮಾಸ್ಕೋ ತಿಳಿಸಿದೆ.

ಯೂರೋಪಿಯನ್ ಯೂನಿಯನ್ ನಾಯಕರು ಈ ದಾಳಿಯನ್ನು ಖಂಡಿಸಿದ್ದಾರೆ. ಇದೇ ವೇಳೆ, ಭಾನುವಾರ ಬೆಳಗ್ಗೆ ಉಕ್ರೇನ್‌ನ ಡ್ರೋನ್ ದಾಳಿಯಿಂದ ಗ್ರೇವರನ್‌ನಲ್ಲಿ ಒಬ್ಬ ನಾಗರಿಕ ಮೃತಪಟ್ಟಿದ್ದಾನೆ ಎಂದು ರಷ್ಯಾ ತಿಳಿಸಿದೆ. ಹಾಗೆಯೇ ಉಕ್ರೇನ್‌ನ 33 ಡ್ರೋನ್‌ಗಳನ್ನು ಹೊಡೆದುರುಳಿಸಿರುವುದಾಗಿ ರಷ್ಯಾ ರಕ್ಷಣಾ ಸಚಿವಾಲಯ ವರದಿ ಮಾಡಿದೆ.

ಪಂಚ ರಾಷ್ಟ್ರ ಪ್ರವಾಸದಿಂದ ಇಂಧನ ಮೂಲಸೌಕರ್ಯ, ಆರ್ಥಿಕ ಸಹಯೋಗ, ದೇಶೀಯ ರಕ್ಷಣಾ ಉತ್ಪಾದನೆ ಪ್ರಗತಿ

ಭಾರತದ ಭದ್ರತಾ ಗುರಾಣಿ ಹಿಡಿದ ಬಾಹುಬಲಿ ಮೋದಿ

ಪ್ರಧಾನಿ ನರೇಂದ್ರ ಮೋದಿ ಐದು ಯೂರೋಪಿಯನ್ ಮತ್ತು ಪಶ್ಚಿಮ ಏಷ್ಯಾ ರಾಷ್ಟ್ರಗಳ ಆರು ದಿನಗಳ ರಾಜತಾಂತ್ರಿಕ ಪ್ರವಾಸ ಯಶಸ್ವಿಯಾಗಿ ಮುಕ್ತಾಯಗೊಳಿಸಿದ್ದು, ಜಾಗತಿಕ ಅಸ್ಥಿರತೆಯ ವಿರುದ್ಧ ದೇಶವನ್ನು ರಕ್ಷಿಸಲು ಬಲವಾದ ವ್ಯವಸ್ಥೆಗಳನ್ನು ಸ್ಥಾಪಿಸಿದ್ದಾರೆ. ಈ ಮಿಷನ್ ಇಂಧನ ಮೂಲಸೌಕರ್ಯ, ಆರ್ಥಿಕ ಸಹಯೋಗಗಳು ಮತ್ತು ದೇಶೀಯ ರಕ್ಷಣಾ ಉತ್ಪಾದನೆಯಲ್ಲಿ ನಿರ್ಣಾಯಕ ಪ್ರಗತಿಯನ್ನು ಭದ್ರಪಡಿಸಿದೆ.



ಜಾಗತಿಕ ಅಸ್ಥಿರತೆ ಮತ್ತು ಮಧ್ಯಸ್ಥಿಕೆ

ಹೆಚ್ಚುತ್ತಿರುವ ಕಚ್ಚಾ ತೈಲ ಬೆಲೆಗಳು, ಹಾರ್ಮುಜ್ ಜಲಸಂಧಿಯ ಸುತ್ತಲಿನ ಹಡಗು ಮಾರ್ಗಗಳ ಬದಲಾವಣೆ ಮತ್ತು ಜಾಗತಿಕ ಸರಕುಗಳ ವೆಚ್ಚದ ಏರಿಕೆಯಿಂದ ಆದ ತೀವ್ರ ಅಂತಾರಾಷ್ಟ್ರೀಯ ಅಸ್ಥಿರತೆಯ ನಡುವೆ ಈ ರಾಜತಾಂತ್ರಿಕ ಪ್ರವಾಸ ನಡೆದಿದೆ. ಪಶ್ಚಿಮ ಏಷ್ಯಾ ಮತ್ತು ಯೂರೋಪ್‌ನಲ್ಲಿ ನಡೆಯುತ್ತಿರುವ ಸಂಘರ್ಷಗಳು ಇಂಧನ ಮಾರುಕಟ್ಟೆಗಳು, ಧಾನ್ಯದ ಪೂರೈಕೆ ಮತ್ತು ಬಂಡವಾಳದ ಹರಿವನ್ನು ತೀವ್ರವಾಗಿ ಅಡ್ಡಿಪಡಿಸಿವೆ. ಈ ಆರ್ಥಿಕ ಅಡೆತಡೆಗಳ ಸಮಯದಲ್ಲಿ ವಿವಿಧ ಜಾಗತಿಕ ಸರ್ಕಾರಗಳು ನಿಷ್ಕ್ರಿಯವಾಗಿದ್ದರೆ, ಭಾರತ ದೇಶೀಯ ದುರ್ಬಲತೆಗಳನ್ನು ವಿಶ್ಲೇಷಿಸಿ, ದೀರ್ಘಕಾಲೀನ ರಾಷ್ಟ್ರೀಯ ಹಿತಾಸಕ್ತಿಗಳನ್ನು ರಕ್ಷಿಸಲು ಐದು ಪ್ರಮುಖ ದೇಶಗಳೊಂದಿಗೆ ನೇರವಾಗಿ ತೊಡಗಿಸಿಕೊಂಡಿತು.

- **ಯುಎಇ ಹೂಡಿಕೆ:** ಸಂಸ್ಕರಣಾ ಗಾರಗಳಿಗಾಗಿ 5 ಶತಕೋಟಿ ಡಾಲರ್ ಒಪ್ಪಂದ.
- **ಚಿಪ್ ಉತ್ಪಾದನೆ:** ಧೋಲೇರಾ ಘಟಕಕ್ಕಾಗಿ ಎಎಸ್‌ಎಂಎಲ್ ತಂತ್ರಜ್ಞಾನ ಭದ್ರ.
- **ರಕ್ಷಣಾ ಸ್ವಾವಲಂಬನೆ:** ಜಜ್ಜರ್‌ನಲ್ಲಿ ಸಾಬ್‌ನಿಂದ ಶೇ.100 ವಿದೇಶಿ ಹೂಡಿಕೆಯ ಘಟಕ.
- **ವ್ಯಾಪಾರ ಗುರಿ:** ಇಟಲಿ ಜೊತೆ 20 ಶತಕೋಟಿ ಯೂರೋ ವ್ಯಾಪಾರ ಒಪ್ಪಂದ.
- **ಜಾಗತಿಕ ಗೌರವ:** ಆಹಾರ ಭದ್ರತೆಗಾಗಿ ಪ್ರಧಾನಿಗೆ ಒಲಿದ ಅಗ್ರಿಕೋಲಾ ಪದಕ.
- **ಹಸಿರು ಇಂಧನ:** ನಾರ್ವೆ ಜೊತೆ ಹಸಿರು ಕಾರ್ಯತಂತ್ರದ ಪಾಲುದಾರಿಕೆ ಸ್ಥಾಪನೆ.

ಆರ್ಥಿಕ ಸಹಭಾಗಿತ್ವದ ವೇಗವರ್ಧನೆ

ಉನ್ನತ ತಂತ್ರಜ್ಞಾನ ಮತ್ತು ಮೂಲಸೌಕರ್ಯ ಒಪ್ಪಂದಗಳ ಮೂಲಕ ಆರ್ಥಿಕ ಸದೃಢತೆಯ ಕಡೆಗೆ ಗಮನಹರಿಸಲಾಯಿತು. ದಿ ಹೇಗ್‌ನಲ್ಲಿ, ಟಾಟಾ ಎಲೆಕ್ಟ್ರಾನಿಕ್ಸ್, ಡಚ್ ಸಂಸ್ಥೆ ಎಎಸ್‌ಎಂಎಲ್‌ನೊಂದಿಗೆ ಅತ್ಯಾಧುನಿಕ ಅಲ್ಟ್ರಾವೈಲೆಟ್ ಲಿಥೋಗ್ರಫಿ ಉಪಕರಣಗಳನ್ನು ಸ್ವಾಧೀನಪಡಿಸಿಕೊಳ್ಳಲು ಔಪಚಾರಿಕ ಒಪ್ಪಂದ ಮಾಡಿಕೊಂಡಿತು. ಈ ಪಾಲುದಾರಿಕೆ, ಧೋಲೇರಾದಲ್ಲಿ 91,000 ಕೋಟಿ ರೂ.ಗಳ ಸೆಮಿಕಂಡಕ್ಟರ್ ಫ್ಯಾಬ್ರಿಕೇಶನ್ ಸೌಲಭ್ಯವನ್ನು ಸ್ಥಾಪಿಸಲು ಅನುಕೂಲ ಮಾಡಿಕೊಡುತ್ತದೆ ಹಾಗೂ ಜಾಗತಿಕ ಮುಂದುವರಿದ ಚಿಪ್ ಉತ್ಪಾದನಾ ವಲಯದಲ್ಲಿ ಭಾರತವೂ ಸೇರುತ್ತದೆ. ಇದೇ ವೇಳೆ, ಸ್ವೀಡನ್‌ನೊಂದಿಗಿನ ಸಹಯೋಗವು ಬ್ಯಾಟರಿ ಮತ್ತು ಸೆಮಿಕಂಡಕ್ಟರ್ ಉತ್ಪಾದನೆಗೆ ಅಗತ್ಯವಾದ ನಿರ್ಣಾಯಕ ಖನಿಜ ಪೂರೈಕೆಗಳನ್ನು ಭದ್ರಪಡಿಸುವುದರ ಮೇಲೆ ಕೇಂದ್ರೀಕರಿಸಿತ್ತು. ಜೊತೆಗೆ ದ್ವಿಪಕ್ಷೀಯ ಚೌಕಟ್ಟಿನಲ್ಲಿ 6ಜಿ, ಕೃತಕ ಬುದ್ಧಿಮತ್ತೆ ಮತ್ತು ಕ್ವಾಂಟಮ್ ಕಂಪ್ಯೂಟಿಂಗ್‌ನಂತಹ ಸುಧಾರಿತ ತಂತ್ರಜ್ಞಾನಗಳನ್ನು ಸಂಯೋಜಿಸಿತು. ರೋಮ್‌ನಲ್ಲಿ, ಇಟಲಿಯೊಂದಿಗಿನ ಸಂಬಂಧವನ್ನು ವಿಶೇಷ ಕಾರ್ಯತಂತ್ರದ ಪಾಲುದಾರಿಕೆಗೆ ಏರಿಸಲಾಯಿತು ಮತ್ತು 2029ರ ವೇಳೆಗೆ 20 ಶತಕೋಟಿ ಯೂರೋಗಳ ದ್ವಿಪಕ್ಷೀಯ ವ್ಯಾಪಾರ ಗುರಿಯನ್ನು ಸ್ಥಾಪಿಸಲಾಯಿತು. ಈ ಒಪ್ಪಂದವು ಭಾರತೀಯ ಸರಕುಗಳನ್ನು ಯೂರೋಪ್‌ಗೆ ಸಾಗಿಸುವ ಆರ್ಥಿಕ ಕಾರಿಡಾರ್ ಯೋಜನೆಯಲ್ಲಾದ ಪ್ರಗತಿಯಾಗಿದೆ.

ನಾರ್ವೆ ಭೇಟಿಯ ಮಹತ್ವ

ನಾಲ್ಕು ದಶಕಗಳಿಗೂ ಹೆಚ್ಚು ಅವಧಿಯಲ್ಲಿ ಭಾರತದ ಪ್ರಧಾನಮಂತ್ರಿಯೊಬ್ಬರು ಓಸ್ಲೋಗೆ ನೀಡಿದ ಮೊದಲ ಭೇಟಿಯಲ್ಲಿ, ದ್ವಿಪಕ್ಷೀಯ ಚರ್ಚೆಗಳು ಭವಿಷ್ಯದ ಇಂಧನ ತಂತ್ರಜ್ಞಾನಗಳ ಮೇಲೆ ಕೇಂದ್ರೀಕೃತವಾಗಿದ್ದವು. ಭಾರತ ಮತ್ತು ನಾರ್ವೆ ಹಸಿರು ಕಾರ್ಯತಂತ್ರದ ಪಾಲುದಾರಿಕೆ ಸ್ಥಾಪಿಸಿದವು. ಇದನ್ನು ಎಲ್ಲಾ ನಾರ್ಡಿಕ್ ರಾಷ್ಟ್ರಗಳಾದ್ಯಂತ ಹಸಿರು ತಂತ್ರಜ್ಞಾನವನ್ನು ಒಳಗೊಂಡಿರುವ ಭಾರತ–ನಾರ್ಡಿಕ್ ಶೃಂಗಸಭೆಯ ಮೂಲಕ ವಿಸ್ತರಿಸಲಾಯಿತು. ಈ ಚೌಕಟ್ಟು ಏಕರೂಪದ ಕಡಲ ಮಾರ್ಗಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುತ್ತದೆ ಮತ್ತು ಜಾಗತಿಕ ಹಸಿರು ಹೈಡ್ರೋಜನ್ ಮತ್ತು ಇಂಧನ ಪರಿವರ್ತನೆಯಲ್ಲಿ ಭಾರತಕ್ಕೆ ಜಾಗತಿಕ ಸಹಕಾರ ಒದಗಿಸುತ್ತದೆ.

ಇಂಧನ ಮೂಲ ಸೌಕರ್ಯಗಳ ರಕ್ಷಣೆ

ಪೂರೈಕೆಯಲ್ಲಾಗುವ ಕೊರತೆಯಿಂದ ದೇಶೀಯ ಆರ್ಥಿಕತೆಯನ್ನು ರಕ್ಷಿಸಲು, ಪ್ರಮುಖ ಜಾಗತಿಕ ಇಂಧನ ಉತ್ಪಾದಕರೊಂದಿಗೆ ಒಪ್ಪಂದಗಳಿಗೆ ಆದ್ಯತೆ ನೀಡಲಾಯಿತು. ಅಂತರರಾಷ್ಟ್ರೀಯ ಪೂರೈಕೆ ಮಾರ್ಗಗಳನ್ನು ಬಲಪಡಿಸುವವರೆಗೆ ದೇಶೀಯ ಕಾರ್ಯಾಚರಣೆಗೆ ಸಮಯಾವಕಾಶ ಒದಗಿಸಲು ಇಂಧನ ಬಳಕೆಯನ್ನು ಅತ್ಯುತ್ತಮವಾಗಿಸಲು ಸರ್ಕಾರ ಈ ಹಿಂದೆ ನಾಗರಿಕರಿಗೆ ಸಲಹೆ ನೀಡಿತ್ತು. ಅಬುಧಾಬಿಯಲ್ಲಿ, ಯುನೈಟೆಡ್ ಅರಬ್ ಎಮಿರೇಟ್ಸ್, ದೇಶೀಯ ಸಂಸ್ಕರಣಾಗಾರಗಳಿಗೆ ನಿರಂತರ ಕಚ್ಚಾ ತೈಲ ಪೂರೈಕೆಯನ್ನು ಖಾತರಿಪಡಿಸುವುದರ ಜೊತೆಗೆ ಭಾರತಕ್ಕೆ 5 ಶತಕೋಟಿ ಡಾಲರ್ ಹೊಸ ಹೂಡಿಕೆಯನ್ನು ನೀಡಲು ಬದ್ಧವಾಗಿದೆ.

ರಕ್ಷಣಾ ಸ್ವಾವಲಂಬನೆ

ರಾಷ್ಟ್ರೀಯ ಭದ್ರತಾ ಚೌಕಟ್ಟುಗಳನ್ನು ಆಮದು ಅವಲಂಬನೆಯಿಂದ ಸ್ಥಳೀಯ ಉತ್ಪಾದನಾ ಸರಪಳಿಗಳ ಕಡೆಗೆ ನವೀಕರಿಸಲಾಯಿತು. ಯುಎಇ ಜೊತೆ ಸಮಗ್ರ ರಕ್ಷಣಾ ಸಹಕಾರ ಚೌಕಟ್ಟನ್ನು ರೂಪಿಸಲಾಗಿದೆ. ಸ್ವೀಡನ್‌ನಲ್ಲಿ, ರಕ್ಷಣಾ ತಯಾರಕ ಸಾಬ್ ಸಂಸ್ಥೆ, ಜಜ್ಜರ್‌ನಲ್ಲಿ ತನ್ನ ಮೊದಲ ಸಾಗರೋತ್ತರ ಮಿಲಿಟರಿ ಉಪಕರಣಗಳ ಉತ್ಪಾದನಾ ಸೌಲಭ್ಯದ ನಿರ್ಮಾಣವನ್ನು ಪ್ರಾರಂಭಿಸಿತು. ಇದು ಭಾರತದಲ್ಲಿ ಮೊದಲ 100 ಪ್ರತಿಶತ ವಿದೇಶಿ ಅನುದಾನಿತ ರಕ್ಷಣಾ ಉತ್ಪಾದನಾ ಯೋಜನೆಯಾಗಿದೆ. ಇದಲ್ಲದೆ, ನೆದರ್ಲ್ಯಾಂಡ್ ತಯಾರಕರು ಮತ್ತು ಸಂಶೋಧನಾ ಕೇಂದ್ರಗಳನ್ನು ಸಂಪರ್ಕಿಸುವ ಸಮಗ್ರ ರಕ್ಷಣಾ ಕೈಗಾರಿಕಾ ಮಾರ್ಗಸೂಚಿಗೆ ಒಪ್ಪಿಕೊಂಡಿದ್ದು, ಸ್ಥಳೀಯ ಉತ್ಪಾದನೆಯ ಮೂಲಕ ದೇಶೀಯ ರಕ್ಷಣಾ ಪೂರೈಕೆ ಸರಪಳಿ ವಿಸ್ತರಿಸಿದ



ಅಂತಾರಾಷ್ಟ್ರೀಯ ಮನ್ನಣೆ ಮತ್ತು ರಾಜಕೀಯ

ರಾಜತಾಂತ್ರಿಕ ಪ್ರವಾಸದ ಸಂದರ್ಭದಲ್ಲಿ ಪ್ರಧಾನಮಂತ್ರಿಗೆ ಸ್ವೀಡನ್‌ನ ರಾಯಲ್ ಆರ್ಡರ್ ಆಫ್ ದಿ ಪೋಲಾರ್ ಸ್ಟಾರ್ ಮತ್ತು ನಾರ್ವೆಯ ಗ್ರಾಂಡ್ ಕ್ರಾಸ್ ಗೌರವಗಳನ್ನು ನೀಡಲಾಯಿತು. ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆಯು 800 ಮಿಲಿಯನ್ ನಾಗರಿಕರನ್ನು ಬೆಂಬಲಿಸುವ ಭಾರತದ ಆಹಾರ ಭದ್ರತಾ ಜಾಲವನ್ನು ಗುರುತಿಸಿ ಅಗ್ರಿಕೋಲಾ ಪದಕ ನೀಡಿತು. ವಿರೋಧ ಪಕ್ಷಗಳು ಈ ಪ್ರವಾಸವನ್ನು ಟೀಕಿಸಿವೆ, ಅವು ಸೆಮಿಕಂಡಕ್ಟರ್ ಪ್ರಗತಿ ಹಾಗೂ ರಕ್ಷಣಾ ಸೌಲಭ್ಯಗಳನ್ನು ಕಡೆಗಣಿಸಿವೆ. 1948 ರಲ್ಲಿ ನೆಹರು ಅವರು ಯೂರೋಪ್ ಪ್ರವಾಸದ ಬಳಿಕ ದೇಶದ ಜನರ ಬಗ್ಗೆಯೇ ಅಸಮಾಧಾನ ವ್ಯಕ್ತಪಡಿಸಿದ್ದರು. ಆದರೆ ಪ್ರಸ್ತುತ ಸರ್ಕಾರ, ದೇಶದ ಪ್ರಗತಿಗೆ ಅಗತ್ಯವಿರುವ ಸಂಪನ್ಮೂಲಗಳನ್ನು ಭದ್ರಪಡಿಸಲು ರಾಜತಾಂತ್ರಿಕತೆಯನ್ನು ಬಳಸಿಕೊಳ್ಳುತ್ತಿದೆ.

ಕಿರುಸುದ್ದಿ

ಮೋದಿ ಆತ್ಮೀಯ ಸ್ನೇಹಿತ, ನನ್ನ ನಂಬಿ ಎಂದ ಟ್ರಂಪ್

ಹೊಸದಿಲ್ಲಿ: ಭಾರತದಲ್ಲಿನ ಅಮೆರಿಕ ರಾಯಭಾರಿ ಸರ್ಜಿಯೋ ಗೋರ್ ವೇದಿಕೆಯಲ್ಲಿದ್ದಾಗ ಭಾನುವಾರ ಅಚ್ಚರಿಯ ದೂರವಾಣಿ ಕರೆ ಮಾಡಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಪ್ರಧಾನಿ ಮೋದಿ ನನಗೆ ಪ್ರೀತಿಪಾತ್ರರು, ಮೋದಿ ಅವರು ಒಬ್ಬ ಶ್ರೇಷ್ಠ ವ್ಯಕ್ತಿ ಮತ್ತು ನನ್ನ ಆತ್ಮೀಯ ಸ್ನೇಹಿತರೆಂದು ಪುನರುಚ್ಚರಿಸಿದ್ದಾರೆ. ಹೊಸದಿಲ್ಲಿಯ ಅಮೆರಿಕ ರಾಯಭಾರ ಕಚೇರಿಯಲ್ಲಿ ನಡೆಯುತ್ತಿದ್ದ ಅಮೆರಿಕದ 250ನೇ ಸ್ವಾತಂತ್ರ್ಯ ದಿನಾಚರಣೆ (ಜು.4ರಂದು) ಸಂಬಂಧಿತ ಕಾರ್ಯಕ್ರಮದಲ್ಲಿ ಗೋರ್ ವೇದಿಕೆಯಲ್ಲಿದ್ದಾಗ ಕರೆ ಮಾಡಿದ್ದ ಟ್ರಂಪ್ ಭಾರತವನ್ನೂ ಮೋದಿಯವರನ್ನು ಹೊಗಳಲು ಪ್ರಾರಂಭಿಸಿದರು. ನಾನು ಭಾರತವನ್ನು ಪ್ರೀತಿಸುತ್ತೇನೆ. ಎಲ್ಲರಿಗೂ ನನ್ನ ಹಲೋ (ನಮಸ್ಕಾರ) ಹೇಳಬಯಸುತ್ತೇನೆ. ನಾವು ಭಾರತದೊಂದಿಗೆ ಹಿಂದೆಂದೂ ಇಷ್ಟೊಂದು ಸ್ನೇಹದಿಂದ ಇರಲಿಲ್ಲ. ಆದರೆ ನನ್ನ ಮೇಲೆ ಭಾರತೀಯರು ಶೇ.100ರಷ್ಟು ನಂಬಿಕೆ ಇಡಬಹುದು. ನಿಮಗೆ ಯಾವುದೇ ಸಹಾಯ ಬೇಕಿದ್ದರೂ, ಯಾರಿಗೆ ದೂರವಾಣಿ ಕರೆ ಮಾಡಬೇಕೆಂದು ನಿಮಗೆ ಗೊತ್ತಿದೆ. ಇಲ್ಲಿಗೆ ನೇರ ಕರೆ ಮಾಡಿ. ನಾವು ಜತೆಗೂಡಿ ಹಲವು ದಾಖಲೆಗಳನ್ನು ಬರೆಯುತ್ತೇವೆ ಎಂದು ಟ್ರಂಪ್ ಹೇಳಿಕೊಂಡಿದ್ದಾರೆ.



ಕೆನಡಾಕ್ಕೆ ಪಿಯೂಷ್ ಗೋಯಲ್ ಇಂದು

ಹೊಸದಿಲ್ಲಿ: ಭಾರತ ಮತ್ತು ಕೆನಡಾ ದೇಶಗಳು ಪ್ರಸ್ತಾವಿತ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದಕ್ಕಾಗಿ (ಸಿಇಪಿಎ) ಮಾತುಕತೆ ಮುಂದುವರಿಸುತ್ತಿದ್ದು, ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಮೇ 25 ರಿಂದ 27ರವರೆಗೆ ಕೆನಡಾಕ್ಕೆ ಪ್ರಯಾಣಿಸಲಿದ್ದಾರೆ. ಎರಡೂ ದೇಶಗಳ ನಡುವಿನ ಆರ್ಥಿಕ ಸಂಬಂಧಗಳನ್ನು ಪುನರುಜ್ಜೀವನಗೊಳಿಸುವಲ್ಲಿ ಸಚಿವರ ಭೇಟಿ ಪ್ರಮುಖ ಹೆಜ್ಜೆಯಾಗಿದೆ.ಇಂಧನ, ಲೋಹಗಳು ಮತ್ತು ಗಣಿಗಾರಿಕೆ, ಏರೋಸ್ಪೇಸ್, ಟೆಲಿಕಾಂ, ಔಷಧೀಯ ವಸ್ತುಗಳು, ಕೃಷಿ, ಪ್ರವಾಸೋದ್ಯಮ, ಜವಳಿ, ಆಟೋಮೋಟಿವ್ ಮತ್ತು ಬಂಡವಾಳ ಸರಕುಗಳಂತಹ ಕ್ಷೇತ್ರಗಳನ್ನು ಪ್ರತಿನಿಧಿಸುವ 100ಕ್ಕೂ ಹೆಚ್ಚು ಭಾರತೀಯ ಕಂಪನಿಗಳ ಹಿರಿಯ ಕಾರ್ಯನಿರ್ವಾಹಕರು ಗೋಯಲ್ ಅವರೊಂದಿಗೆ ಇರುತ್ತಾರೆ. ಭೇಟಿಯ ಸಮಯದಲ್ಲಿ, ಗೋಯಲ್ ಕೆನಡಾದ ಅಂತಾರಾಷ್ಟ್ರೀಯ ವ್ಯಾಪಾರ ಸಚಿವ ಮಣೀಂದರ್ ಸಿಧು ಅವರನ್ನು ಭೇಟಿ ಮಾಡಿ ಸಿಇಪಿಎ ಮಾತುಕತೆಗಳ ಪ್ರಗತಿಯನ್ನು ನಿರ್ಣಯಿಸಲು ಮತ್ತು ಎರಡೂ ರಾಷ್ಟ್ರಗಳ ನಡುವಿನ ವ್ಯಾಪಾರ ಮತ್ತು ಹೂಡಿಕೆ ಅವಕಾಶಗಳನ್ನು ವಿಸ್ತರಿಸುವ ಮಾರ್ಗಗಳನ್ನು ಚರ್ಚಿಸಲಿದ್ದಾರೆ.

ಏನಾಸಂ: ಬುಡಕಟ್ಟು ಜನರಿಗಿಲ್ಲ ತೊಂದರೆ

ಹೊಸದಿಲ್ಲಿ: ಪ್ರಸ್ತಾವಿತ ಏಕರೂಪ ನಾಗರಿಕ ಸಂಹಿತೆ(ಏನಾಸಂ) ಬುಡಕಟ್ಟು ಸಮುದಾಯಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾನುವಾರ ಸ್ಪಷ್ಟಪಡಿಸಿದ್ದಾರೆ. ಈ ವಿಷಯದಲ್ಲಿ ಹರಡುತ್ತಿರುವ ಅಪಪ್ರಚಾರ ಮತ್ತು ಪಿತೂರಿಗಳಿಗೆ ಬಲಿಯಾಗದಂತೆ ಅವರು ಮನವಿ ಮಾಡಿದ್ದಾರೆ. ಬಿರ್ಸಾ ಮುಂಡಾ ಅವರ 150ನೇ ಜನ್ಮ ಜಯಂತ್ಯುತ್ಸವದ ಅಂಗವಾಗಿ ರೆಡ್‌ಫೋರ್ಟ್ ಮೈದಾನದಲ್ಲಿ ಆಯೋಜಿಸಿದ್ದ ಜನಜಾತಿ ಸಾಂಸ್ಕೃತಿಕ ಸಮಾಗಮ ಸಮಾವೇಶದಲ್ಲಿ ಮಾತನಾಡಿದ ಅವರು, ಏನಾಸಂ ಜಾರಿಗೊಳಿಸುತ್ತಿರುವ ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಬುಡಕಟ್ಟು ಜನಾಂಗದವರನ್ನು ಇದರ ವ್ಯಾಪ್ತಿಯಿಂದ ಹೊರಗಿಡಲು ವಿಶೇಷ ನಿಬಂಧನೆಗಳನ್ನು ಮಾಡಲಾಗಿದೆ ಎಂದರು. ಬುಡಕಟ್ಟು ಸಮುದಾಯಗಳ ಸಂಪ್ರದಾಯಗಳಿಗೆ ಯಾವುದೇ ಧಕ್ಕೆ ಬರುವುದಿಲ್ಲ ಎಂದು ಭರವಸೆ ನೀಡಿದರು. ಇದೇ ವೇಳೆ ನಕ್ಸಲಿಸಂ ಬಗ್ಗೆ ಮಾತನಾಡಿದ ಶಾ, ದೇಶವು ನಕ್ಸಲ್ ಮುಕ್ತವಾಗುವತ್ತ ಮುನ್ನಡೆಯುತ್ತಿದೆ ಮತ್ತು ಹಿಂಸಾಚಾರದಿಂದಾಗಿ ದಶಕಗಳಿಂದ ಬುಡಕಟ್ಟು ಪ್ರದೇಶಗಳ ಅಭಿವೃದ್ಧಿ ಕುಂಠಿತಗೊಂಡಿತ್ತು ಎಂದರು. ಮೋದಿ ಸರ್ಕಾರವು ಅವರ ಅಭಿವೃದ್ಧಿಗೆ ಬದ್ಧವಾಗಿದೆ ಎಂದು ತಿಳಿಸಿದರು. ಬಲವಂತದ ಧಾರ್ಮಿಕ ಮತಾಂತರದ ವಿರುದ್ಧ ಮಾತನಾಡಿದ ಅವರು, ಯಾವುದೇ ಆಮಿಷಗಳಿಗೆ ಒಳಗಾಗಿ ಧರ್ಮ ಬದಲಾಯಿಸಬಾರದು ಮತ್ತು ನಮ್ಮ ಸಂವಿಧಾನವು ಪ್ರತಿಯೊಬ್ಬರಿಗೂ ತಮ್ಮ ಮೂಲ ನಂಬಿಕೆಗಳೊಂದಿಗೆ ಬದುಕುವ ಹಕ್ಕನ್ನು ನೀಡಿದೆ ಎಂದರು. ಅಲ್ಲದೆ ಬುಡಕಟ್ಟು ಕಲ್ಯಾಣ ಬಜೆಟ್ ಅನ್ನು 28,000 ಕೋಟಿ ರೂ.ನಿಂದ 1.54 ಲಕ್ಷ ಕೋಟಿ ರೂ.ಗೆ ಹೆಚ್ಚಿಸಿದೆ ಎಂದು ಮಾಹಿತಿ ನೀಡಿದರು.

ಬಲೂಚಿಸ್ತಾನದಲ್ಲಿ ರೈಲು ಸ್ಫೋಟಕ್ಕೆ 24 ಜನ ಸಾವು

ಕರಾಚಿ: ಪಾಕಿಸ್ತಾನದ ಬಲೂಚಿಸ್ತಾನ ಪ್ರಾಂತ್ಯದಲ್ಲಿ ಭಾನುವಾರ ಪ್ರಯಾಣಿಕ ರೈಲೊಂದರಲ್ಲಿ ಸಂಭವಿಸಿದ ಭೀಕರ ಸ್ಫೋಟದಲ್ಲಿ ಕನಿಷ್ಠ 24 ಜನರು ಮೃತಪಟ್ಟಿದ್ದಾರೆ. ಕ್ವೆಟ್ಟಾ ಕಂಟೋನ್ಮೆಂಟ್‌ನಿಂದ ಚಮನ್ ಫಾಟಕ್ ಬಳಿಯ ಸಿಟಿ ರೈಲ್ವೆ ನಿಲ್ದಾಣಕ್ಕೆ ಪ್ರಯಾಣಿಸುತ್ತಿದ್ದ ರೈಲನ್ನು ಗುರಿಯಾಗಿಸಿ ಈ ದಾಳಿ ನಡೆಸಲಾಗಿದೆ ಎಂದು ಅಸೋಸಿಯೇಟೆಡ್ ಪ್ರೆಸ್ ಆಫ್ ಪಾಕಿಸ್ತಾನ್ ವರದಿ ಮಾಡಿದೆ. ನಿಷೇಧಿತ ಬಲೂಚ್ ಲಿಬರೇಷನ್ ಆರ್ಮಿ(ಬಿಎಲ್‌ಎ) ಈ ದಾಳಿಯ ಹೊಣೆ ಹೊತ್ತಿದ್ದು, ರೈಲಿನಲ್ಲಿ ಮಿಲಿಟರಿ ಸಿಬ್ಬಂದಿ ಪ್ರಯಾಣಿಸುತ್ತಿದ್ದರು ಎಂದು ಹೇಳಿಕೊಂಡಿದೆ. ಸ್ಫೋಟದ ತೀವ್ರತೆಗೆ ರೈಲಿನ ಇಂಜಿನ್ ಮತ್ತು ಮೂರುಬೋಗಿಗಳುಜಖಂಗೊಂಡಿದ್ದು, ಸಮೀಪದ ಕಟ್ಟಡಗಳ ಕಿಟಕಿ ಗಾಜುಗಳು ಪುಡಿಯಾಗಿವೆ. ರೈಲ್ವೆ ಸಚಿವ ಹನೀಫ್ ಅಬ್ಬಾಸಿ, ರೈಲಿನಲ್ಲಿ ಸಾಮಾನ್ಯ ನಾಗರಿಕರೂ ಇದ್ದರು ಎಂದು ತಿಳಿಸಿದ್ದಾರೆ. ಸ್ಫೋಟದಲ್ಲಿ ಮೂವರು ಫ್ರಾಂಟಿಯರ್ ಕಾರ್ಪ್ಸ್ ಸಿಬ್ಬಂದಿ ಸೇರಿದಂತೆ 14 ಸಾವುಗಳು ಅಧಿಕೃತವಾಗಿ ದೃಢಪಟ್ಟಿದ್ದರೂ, ಸಾವಿನ ಸಂಖ್ಯೆ ಮತ್ತಷ್ಟು ಏರಿಕೆಯಾಗುವ ಸಾಧ್ಯತೆಯಿದೆ.



ಘಟನೆಯನ್ನು ಪ್ರಧಾನಿ ಶೆಹಬಾಜ್ ಷರೀಫ್ ಖಂಡಿಸಿದ್ದು, ಪೇಶಾವರಕ್ಕೆ ಹೊರಟಿದ್ದ ಜಾಫರ್ ಎಕ್ಸ್‌ಪ್ರೆಸ್ ರೈಲನ್ನು ಸ್ಥಗಿತಗೊಳಿಸಿ, ಉನ್ನತ ಮಟ್ಟದ ತನಿಖೆಗೆ ಆದೇಶಿಸಲಾಗಿದೆ. ಈ ಹಿಂದೆ ನವೆಂಬರ್ 2024ರಲ್ಲಿ ಕ್ವೆಟ್ಟಾ ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದಲ್ಲಿ ನಡೆದಿದ್ದ ಆತ್ಮಹತ್ಯಾ ಬಾಂಬ್ ದಾಳಿಯಲ್ಲಿ 32 ಜನರು ಮೃತಪಟ್ಟಿದ್ದರು.

ಅಯ್ಯಪ್ಪನ ಚಿನ್ನ ಕದ್ದವರ ರಕ್ಷಿಸುವ ಪ್ರಶ್ನೆಯೇ ಇಲ್ಲ

ತಿರುವನಂತಪುರ: ಶಬರಿಮಲೆ ಕ್ಷೇತ್ರದ ಬಂಗಾರ ಕಳವು ಪ್ರಕರಣದಲ್ಲಿ ಶಾಮೀಲಾಗಿರುವ ಯಾರನ್ನೂ, ಆತ ಯಾವುದೇ ಪಕ್ಷದವರಾದರೂ ಸುಮ್ಮನೆ ಬಿಡುವುದಿಲ್ಲ ಎಂದು ಕೇರಳ ದೇವಸ್ವಂ ಸಚಿವ ಕೆ.ಮುರಳೀಧರನ್ ಹೇಳಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿ ವಿಶೇಷ ತನಿಖಾ ತಂಡದ ವರದಿಗಾಗಿ ಕಾಯುತ್ತಿದ್ದೇನೆ. ವರದಿ ಸಿಕ್ಕ ಕೂಡಲೆ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ. ದೇವರ ಬಂಗಾರ ಕದ್ದವರು ಯಾರೇ ಆಗಿರಲಿ, ಯಾವುದೇ ಪಕ್ಷಕ್ಕೆ ಸೇರಿದವರಿರಲಿ, ಅವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು. ರಕ್ಷಿಸುವ ಪ್ರಶ್ನೆಯೇ ಇಲ್ಲ ಎಂದವರು ಸುದ್ದಿಗಾರರಿಗೆ ತಿಳಿಸಿದರು. ಜಗತ್ತಿನ ಇತರ ಭಾಗಗಳಲ್ಲಿ ಕಾಣಿಸಿಕೊಂಡಿರುವ ಎಬೋಲಾ ಪ್ರಕರಣಗಳು ಭಾರತದಲ್ಲಿ ವರದಿಯಾಗಿಲ್ಲ. ಆದರೂ ವಿದೇಶದಿಂದ ಆಗಮಿಸುವವರಲ್ಲಿ ಪ್ರಕರಣ ಸಾಧ್ಯತೆ ಪತ್ತೆಗಾಗಿ ವಿಮಾನ ನಿಲ್ದಾಣಗಳು ಮತ್ತು ಬಂದರುಗಳಲ್ಲಿ ಕಡ್ಡಾಯವಾಗಿ ಸ್ಕ್ರೀನಿಂಗ್ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದು ಆರೋಗ್ಯ ಇಲಾಖಾ ಹೊಣೆಯನ್ನೂ ಹೊಂದಿರುವ ಸಚಿವ ಮುರಳೀಧರನ್ ತಿಳಿಸಿದರು. ವಿದೇಶದಿಂದ ಬಂದು ಬೇರೆ ರಾಜ್ಯಗಳ ವಿಮಾನ ನಿಲ್ದಾಣಗಳಲ್ಲಿ ಇಳಿದ ಪ್ರಯಾಣಿಕರು ರೈಲುಗಳ ಮುಖೇನ ಕೇರಳ ಪ್ರವೇಶಿಸುವ ಕಾರಣ, ಕೇರಳದ ಪ್ರಮುಖ ರೈಲು ನಿಲ್ದಾಣಗಳಲ್ಲೂ ಸ್ಕ್ರೀನ್ ಸಿಸ್ಟಮ್‌ಗಳನ್ನು ರೂಪಿಸಲು ನಿರ್ದೇಶನ ನೀಡಲಾಗಿದೆ. ತಿರುವನಂತಪುರ, ಕೊಚ್ಚಿ, ಕೋಯಿಕ್ಕೋಡ್ ಮತ್ತು ಕಣ್ಣೂರಿನ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಐಸೋಲೇಶನ್ ವಾರ್ಡ್‌ಗಳನ್ನು ತೆರೆಯಲಾಗಿದೆ.

ಐಎಸ್‌ಐ ಸಂಪರ್ಕಿತ ಯುವಕನ ಬಂಧನ

ಹೈದರಾಬಾದ್: ಪಾಕ್‌ನ ಬೇಹುಗಾರಿಕೆ ಸಂಸ್ಥೆ ಐಎಸ್‌ಐ ಬೆಂಬಲಿತ ಕ್ರೈಮ್ ಸಿಂಡಿಕೇಟ್‌ಗೆ ಸೇರಲು ಮತ್ತು ಐಎಸ್‌ಐ ನೆರವಿನಿಂದ ಶಸ್ತ್ರಾಸ್ತ್ರ ವಿಕ್ರಯಿಸಲು ಪ್ರಯತ್ನಿಸುತ್ತಿದ್ದ 22 ವರ್ಷದ ಯುವಕನನ್ನು ಪೊಲೀಸರು ಬಂಧಿಸಿದ್ದಾರೆ.

ಉತ್ತರಪ್ರದೇಶದ ಜಾಯೇದ್ ಖಾನ್ ಬಂಧಿತ ಆರೋಪಿ. 2 ತಿಂಗಳ ಹಿಂದೆ ಹೈದರಾಬಾದ್‌ಗೆ ಬಂದಿದ್ದ ಈತ ಹೊಟೇಲ್‌ನಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದ. ಆನ್‌ಲೈನ್‌ನಲ್ಲಿ, ಪಾಕ್ ಮೂಲದ ವ್ಯಕ್ತಿ ಹಾಗೂ ಆತನ ಗ್ಯಾಂಗ್ ಜತೆ ಸಂಪರ್ಕದಲ್ಲಿದ್ದ. ಪಾಕ್ ವ್ಯಕ್ತಿ ಹಾಗೂ ಆತನ ಸಹವರ್ತಿಗಳು ಸಂಘಟಿತ ಅಪರಾಧಿಗಳ ಗ್ಯಾಂಗ್ ನಿರ್ವಹಿಸುತ್ತಿದ್ದು, ಇದಕ್ಕೆ ಐಎಸ್‌ಐ ಬೆಂಬಲವಿತ್ತು. ಜಾಯೇದ್ ಈ ಗುಂಪಿಗೆ ಸೇರ್ಪಡೆಯಾಗಲು ಬಯಸಿದ್ದ.

ಜಾಯೇದ್ ಸಾಮಾಜಿಕ ಜಾಲತಾಣ ಮುಖೇನ ಪಾಕ್‌ನ ಪ್ರಸ್ತುತ ಗ್ಯಾಂಗ್ ಸದಸ್ಯರೊಂದಿಗೆ ವ್ಯವಹರಿಸುತ್ತಿದ್ದ, ಕ್ರೈಮ್ ಸಿಂಡಿಕೇಟ್‌ಗೆ ಸೇರಲು ಯತ್ನಿಸಿದ್ದ. ಬಂಧಿತನಿಂದ ಎರಡು ನಕಲಿ ಪಿಸ್ತೂಲ್‌ಗಳು ಮತ್ತು ಮೊಬೈಲ್ ಫೋನ್ ವಶಕ್ಕೆ ಪಡೆಯಲಾಗಿದೆ. ಭಾರತೀಯ ನ್ಯಾಯ ಸಂಹಿತೆಯ ವಿವಿಧ ಕಲಂಗಳಲ್ಲಿ ಜಾಯೇದ್ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಜನಸಂಖ್ಯೆ–ಆರ್ಥಿಕ ಬದಲಾವಣೆ | ಶೇ.13.8 ನಿವಾಸ ಖಾಲಿ

ಜಪಾನ್‌ನಲ್ಲಿವೆ 90 ಲಕ್ಷ ಖಾಲಿ ಮನೆ!

ಟೋಕಿಯೋ: ಜಪಾನ್‌ನಲ್ಲಿ ಸುಮಾರು 90 ಲಕ್ಷ ಖಾಲಿ ಮನೆಗಳು(ಗೋಸ್ಟ್ ಹೋಮ್ಸ್) ಇವೆಯೆಂದು ವರದಿಯಾಗಿದೆ. ಇವು ಅಪೂರ್ಣ ಕಟ್ಟಡಗಳು ಅಥವಾ ಬಿಟ್ಟುಹೋದ ನಿರ್ಮಾಣ ಯೋಜನೆಗಳಲ್ಲ. ಬದಲಾಗಿ ಯಾರೂ ವಾಸಿಸದ ಮನೆಗಳು ಮತ್ತು ಅಪಾರ್ಟ್‌ಮೆಂಟ್‌ಗಳು. ಕೆಲವು ಮನೆಗಳ ಕಿಟಕಿಗಳಲ್ಲಿ ಇನ್ನೂ ಪರದೆಗಳು ಕಾಣುತ್ತವೆ. ಆದರೆ ತೋಟಗಳು ಕಾಡಿನಂತಾಗಿವೆ. ಮೇಲ್ಛಾವಣಿಗಳು ನಿಧಾನವಾಗಿ ಕುಸಿಯುತ್ತಿವೆ ಮತ್ತು ಇಡೀ ನೆರೆಹೊರೆ ಪ್ರದೇಶಗಳು ವರ್ಷದಿಂದ ವರ್ಷಕ್ಕೆ ನಿಶ್ಶಬ್ದವಾಗುತ್ತಿವೆ. ಹೆಚ್ಚುತ್ತಿರುವ ಖಾಲಿ ಮನೆಗಳನ್ನು ಅಕಿಯಾ ಎಂದು ಕರೆಯಲಾಗುತ್ತದೆ. ಇದು ದೇಶದ ಅತಿದೊಡ್ಡ ಜನಸಂಖ್ಯಾ ಮತ್ತು ಆರ್ಥಿಕ ಬದಲಾವಣೆಗಳಲ್ಲಿ ಒಂದಾಗಿ ಪರಿಣಮಿಸಿದೆ. 2023ರ ಗೃಹ ಸಮೀಕ್ಷೆಯ ಪ್ರಕಾರ, ಜಪಾನ್‌ನ ಒಟ್ಟು ಮನೆಗಳ ಪೈಕಿ ಶೇ.13.8ರಷ್ಟು ಮನೆಗಳು ಖಾಲಿಯಾಗಿವೆ. ಇದು ಈವರೆಗೆ ದಾಖಲಾದ ಅತ್ಯಧಿಕ ಮಟ್ಟವಾಗಿದೆ.

ನಗರಗಳತ್ತ ಹೆಚ್ಚುತ್ತಿರುವ ವಲಸೆ: ಕೆಲವು ಮನೆಗಳು ಕುಟುಂಬದವರಿಂದ ವಾರಸುದಾರರಾಗಿ ದೊರಕಿದ ನಂತರ ಖಾಲಿಯಾಗುತ್ತವೆ. ಕೆಲಸ, ಜೀವನಶೈಲಿ ಅಥವಾ ಬೇರೆ ಕಾರಣಗಳಿಂದ ಜನರು ಬೇರೆ ನಗರಗಳಿಗೆ ಸ್ಥಳಾಂತರವಾದಾಗ, ಕಾಲಕ್ರಮೇಣ ಆ ಆಸ್ತಿಯೊಂದಿಗೆ ಅವರ ಸಂಪರ್ಕ ಕಡಿಮೆಯಾಗುತ್ತದೆ ಅಥವಾ ಅದನ್ನು ನಿರ್ವಹಿಸುವುದು ಕಷ್ಟಕರ ಹಾಗೂ ದುಬಾರಿಯಾಗುತ್ತದೆ. ಜಪಾನ್‌ನ ಆಸ್ತಿ ತೆರಿಗೆ ವ್ಯವಸ್ಥೆಯೂ ಖಾಲಿ ಮನೆಗಳ ಸಮಸ್ಯೆಗೆ ಒಂದು ಕಾರಣವಾಗಿದೆ.



ಪ್ರಮುಖ ಕಾರಣಗಳು

- ಜನಸಂಖ್ಯಾ ಕುಸಿತ
- ವಯೋವೃದ್ಧ ಸಮುದಾಯಗಳ ಹೆಚ್ಚಳ
- ವಾರಸುದಾರಿಕೆ ಸಂಬಂಧಿತ ಜಟಿಲತೆಗಳು
- ಗ್ರಾಮೀಣ ಪ್ರದೇಶಗಳಿಂದ ಜನರ ವಲಸೆ

ಬಕ್ರೀದ್‌ಗೂ ಮುನ್ನ ಮುಸ್ಲಿಮ್ ಸಂಘಟನೆಯ ಬೇಡಿಕೆ

ಗೋವಿಗೆ ರಾಷ್ಟ್ರೀಯ ಪ್ರಾಣಿ ಗೌರವ ನೀಡಿ

ಲಖನೌ: ಮುಸ್ಲಿಮರ ಈದ್ ಉಲ್ ಅಝ್ಹಾಗೆ(ಬಕ್ರೀದ್) ಕೆಲವು ದಿನಗಳ ಮೊದಲು ಉತ್ತರಪ್ರದೇಶದ ಜೇಮಿಯತ್ ಉಲೆಮಾ ಎ ಹಿಂದ್ ಮುಸ್ಲಿಂ ಸಂಘಟನೆ ಅಧ್ಯಕ್ಷ ಮೌಲಾನಾ ಅರ್ಷದ್ ಮದನಿ ಅವರು ಗೋಮಾತೆಗೆ ರಾಷ್ಟ್ರೀಯ ಪ್ರಾಣಿ ಸ್ಥಾನಮಾನ ನೀಡಬೇಕೆಂಬ ಬೇಡಿಕೆ ಮುಂದಿಟ್ಟಿದ್ದಾರೆ. ಹಲವು ಮುಸ್ಲಿಂ ಸಂಘಟನೆಗಳು ಮದನಿ ಬೇಡಿಕೆಗೆ ಬೆಂಬಲ ಸೂಚಿಸಿವೆ. ಗೋಹತ್ಯೆ ವಿಚಾರ ರಾಜಕೀಯ ದುರುಪಯೋಗ ಆಗುವುದನ್ನು ತಡೆಯಲು ಈ ಕ್ರಮ ಸಹಕಾರಿಯಾಗಬಹುದು ಎಂಬ ನಿರೀಕ್ಷೆಯನ್ನು ಕೆಲವು ಮುಸ್ಲಿಂ ಸಂಘಟನೆಗಳು ವ್ಯಕ್ತಪಡಿಸಿವೆ.



ಪ್ರಧಾನಿ, ಮುಖ್ಯಮಂತ್ರಿ ಭೇಟಿ ಸಾಧ್ಯತೆ: ಈ ವಿಷಯದಲ್ಲಿ ಸಮುದಾಯದೊಳಗೆ ಒಮ್ಮತ ರೂಪಿಸಲು ಹಲವು ಸಂಘಟನೆಗಳು ಪ್ರಯತ್ನಿಸುತ್ತಿದ್ದು, ಕೆಲವರು ಈ ಕುರಿತು ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಭೇಟಿ ಮಾಡುವ ಉದ್ದೇಶವನ್ನೂ ಹೊಂದಿದ್ದಾರೆ. ಮುಸ್ಲಿಮರೇ ಇಂತಹದ್ದೊಂದು ಬೇಡಿಕೆ ಇಟ್ಟಿರುವುದು ಗೋಮಾತೆಗೆ ರಾಷ್ಟ್ರೀಯ ಪ್ರಾಣಿ ಸ್ಥಾನಮಾನ ನೀಡಬೇಕೆಂಬ ಹಿಂದುಗಳ ರಾಷ್ಟ್ರೀಯ ಉಪಕ್ರಮಕ್ಕೆ ವಿಶೇಷ ಮಹತ್ವ ಸಿಕ್ಕಂತಾಗಿದೆ. ಏಕೆಂದರೆ ದೇಶದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಉತ್ತರಪ್ರದೇಶ ರಾಜ್ಯದಲ್ಲಿ, ಗಣನೀಯ ಮುಸ್ಲಿಂ ಜನಸಂಖ್ಯೆಯೂ ಇದೆ. ಇಂತಹ ಬೇಡಿಕೆಗಳು ಇಲ್ಲಿಯವರೆಗೆ ಸಾಮಾನ್ಯವಾಗಿ ಹಿಂದೂ ಸಂಘಟನೆಗಳಿಂದಲೇ ಕೇಳಿಬರುತ್ತಿದ್ದವು. ಆದರೆ ಇದೀಗ ಕೆಲವು ಮುಸ್ಲಿಂ ಸಂಘಟನೆಗಳೂ ತಮ್ಮದೂ ಧ್ವನಿಗೂಡಿಸಿದ್ದಾರೆ.

2027ರ ಚುನಾವಣೆಗೂ ಮುನ್ನ ಕೊನೆಯ ಬಕ್ರೀದ್: ಈ ಬೇಡಿಕೆ 2027ರ ಉತ್ತರಪ್ರದೇಶ ವಿಧಾನಸಭಾ ಚುನಾವಣೆಗೂ ಮುನ್ನ ಮೇ 28ರಂದು ಕೊನೆಯ ಬಕ್ರೀದ್ ಹಿನ್ನೆಲೆ ಮುಸ್ಲಿಮರಿಂದ ಬಂದ ಈ ಧ್ವನಿಗೆ ತನ್ನದೇ ವಿಶೇಷ ರಾಜಕೀಯ ಹಾಗೂ ಸಾಮಾಜಿಕ ಮಹತ್ವವಿದೆ.

ಮೌಲಾನಾ ರಿಝ್ವಿ ಬೆಂಬಲ: ಗೋವಿಗೆ ರಾಷ್ಟ್ರೀಯ ಪ್ರಾಣಿ ಸ್ಥಾನಮಾನ ನೀಡಬೇಕೆಂಬ ಮೌಲಾನಾ ಮದನಿ ಬೇಡಿಕೆಗೆ ಮೌಲಾನಾ ಶಹಬುದ್ದೀನ್ ರಿಝ್ವಿ ಸಂಪೂರ್ಣ ಬೆಂಬಲಿಸಿದ್ದಾರೆ.

ನಾರ್ವೆಯ ಒಬ್ಬ ಅಪ್ರಸಿದ್ಧ ಪತ್ರಕರ್ತೆಯನ್ನು ದಾಳವಾಗಿ ಬಳಸಿಕೊಂಡು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ಜಾಗತಿಕ ವರ್ಚಸ್ಸಿಗೆ ಮಸಿ ಬಳಿಯಲು ಗ್ಲಿಸ್ಕೋ ನೆಟ್‌ವರ್ಕ್ ಹೇಗೆ ಸಂಚು ರೂಪಿಸಿತು? ಹಣದ ಹರಿವು ಎಲ್ಲಿಂದ ಎಲ್ಲಿಗೆ ಹೋಯಿತು? ಬಿಬಿಸಿ, ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಮತ್ತು ಹ್ಯೂಮನ್ ರೈಟ್ಸ್ ವಾಚ್ ಸಂಸ್ಥೆಗಳ ಅಸಲಿ ಇತಿಹಾಸವೇನು? ಹೊಸದಿಲ್ಲಿಯ ಡಾ. ಶ್ಯಾಮಾ ಪ್ರಸಾದ್ ಮುಖರ್ಜಿ ರಿಸರ್ಚ್ ಫೌಂಡೇಶನ್ (ಎಸ್‌ಪಿಎಂಆರ್‌ಎಫ್) ಮೇ 2026ರಲ್ಲಿ ಬಿಡುಗಡೆ ಮಾಡಿದ ವಿಶೇಷ ವರದಿಯ ಅತ್ಯಂತ ಸುದೀರ್ಘ ಹಾಗೂ ಪೂರ್ಣ ವಿವರ ಇಲ್ಲಿದೆ.

ಓಸ್ಲೋ ಹಿಟ್ ಜಾಬ್ ಹಿಂದಿನ ಟ್ರೂ ಸ್ಟೋರಿ

ಮೂಲ: ಡಾ.ಶ್ಯಾಮಾ ಪ್ರಸಾದ್ ಮುಖರ್ಜಿ ರಿಸರ್ಚ್ ಫೌಂಡೇಶನ್ (ಎಸ್‌ಪಿಎಂಆರ್‌ಎಫ್), ಹೊಸದಿಲ್ಲಿ ಮೇ 2026ರಲ್ಲಿ ಪ್ರಕಟಿಸಿದ ವಿಶೇಷ ತನಿಖಾ ವರದಿ.



ಭಾರತದ ಸಾರ್ವಭೌಮತ್ವದ ವಿರುದ್ಧ ಮಾಹಿತಿ ಯುದ್ಧ

ಮೇ 2026ರಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ನಾರ್ವೆಯ ರಾಜಧಾನಿ ಓಸ್ಲೋಗೆ ಅಧಿಕೃತ ಪ್ರವಾಸ ಕೈಗೊಂಡಾಗ, ಅದು ಕೇವಲ ಒಂದು ಸಾಮಾನ್ಯ ದ್ವಿಪಕ್ಷೀಯ ಅಥವಾ ರಾಜತಾಂತ್ರಿಕ ಭೇಟಿಯಾಗಿರಲಿಲ್ಲ. ಅದು ಜಗತ್ತಿನ 5ನೇ ಅತಿ ದೊಡ್ಡ ಆರ್ಥಿಕತೆ, ಸುಮಾರು 145 ಕೋಟಿ ಜನಸಂಖ್ಯೆ ಹೊಂದಿರುವ ಬೃಹತ್ ಮಾನವ ಇತಿಹಾಸದ ಅಭೂತಪೂರ್ವ ಪ್ರಜಾಪ್ರಭುತ್ವ ಮತ್ತು ಪ್ರಬಲ ಪರಮಾಣು ರಾಷ್ಟ್ರವೊಂದರ ನಾಯಕರ ಭೇಟಿಯಾಗಿತ್ತು. ಆದರೆ, ಆ ಪ್ರವಾಸದ ಸಂದರ್ಭದಲ್ಲಿ ಜಾಗತಿಕ ಮಾಧ್ಯಮ ರಂಗದಲ್ಲಿ ಕಂಡುಬಂದದ್ದು ಸಾಮಾನ್ಯ ರಾಜತಾಂತ್ರಿಕ ವರದಿಗಾರಿಕೆಯಲ್ಲ, ಬದಲಿಗೆ ಅತ್ಯಂತ ವ್ಯವಸ್ಥಿತವಾಗಿ ಯೋಜಿಸಲಾಗಿದ್ದ ಒಂದು ಜಾಗತಿಕ ಮಾಹಿತಿ ಯುದ್ಧ ಮತ್ತು ಸಮನ್ವಯತೆಯ ಕಾರ್ಯಾಚರಣೆ. ಗ್ಲೋಬಲ್ ಲೆಫ್ಟ್-ಇಸ್ಲಾಮಿಸ್ಟ್-ಕಮ್ಯುನಿಸ್ಟ್-ಸೊರೊಸ್ (ಗ್ಲಿಸ್ಕೋ) ಜಾಲವು ನಾರ್ವೆಯ ಒಬ್ಬ ಪತ್ರಕರ್ತೆಯನ್ನು ದಾಳವಾಗಿ ಬಳಸಿಕೊಂಡು ಪ್ರಧಾನಿ ಮೋದಿ ಅವರ ಭೇಟಿಯನ್ನು ವಿಫಲಗೊಳಿಸಲು, ಭಾರತದ ಒಳಗಿನ ವಿರೋಧ ಪಕ್ಷದ ನಕಾರಾತ್ಮಕ ಆಖ್ಯಾನ(ನರೇಟಿವ್)ಗಳನ್ನು ಉತ್ತೇಜಿಸಲು ಮತ್ತು ಜಾಗತಿಕವಾಗಿ ಭಾರತದ ವರ್ಚಸ್ಸಿಗೆ ಧಕ್ಕೆ ತರಲು ಸಂಚು ಹೂಡಿತು. ಪತ್ರಿಕಾ ಕಾರ್ಡ್ ಹೊಂದಿದ್ದ ಆ ಪತ್ರಕರ್ತೆ ಕೇವಲ ಪ್ರಶ್ನೆ ಕೇಳಲು ಬಂದಿರಲಿಲ್ಲ, ಅದು ವ್ಯವಸ್ಥಿತ ಹಾಗೂ ಅತ್ಯಂತ ಅಪಾಯಕಾರಿ ಸೈಕಲಾಜಿಕಲ್ ಆಪರೇಷನ್ (ಸೈಓಪ್) ಆಗಿತ್ತು. ಈ ವಿಶೇಷ ವರದಿಯು ಈ ಇಡೀ ಜಾಲದ ಆಳ-ಅಗಲಗಳನ್ನು ಮತ್ತು ಹಣದ ಹರಿವನ್ನು ಸಂಪೂರ್ಣವಾಗಿ ಬಯಲು ಮಾಡುತ್ತದೆ.

ಸೊರೊಸ್ ಹಣದ ಹರಿವಿನ ಜಾಲ

ಯಾವುದೇ ಜಾಗತಿಕ ಮಾಹಿತಿ ಯುದ್ಧ ಅಥವಾ ಸಂಚಿನ ಆಳವನ್ನು ತಿಳಿಯಬೇಕಾದರೆ ಹಣ ಯಾರಿಂದ ಯಾರಿಗೆ ಹರಿಯುತ್ತಿದೆ ಮತ್ತು ಯಾರು ಯಾರಿಗೆ ಧನಸಹಾಯ ಮಾಡುತ್ತಿದ್ದಾರೆ? ಎಂಬುದನ್ನು ತನಿಖೆ ಮಾಡಬೇಕು.

ಸೊರೊಸ್ ಹಣಕಾಸು ಜಾಲದ 4 ಪ್ರಮುಖ ಹಂತಗಳು

ಹಂತ 1 (ಓಪನ್ ಸೊಸೈಟಿ ಫೌಂಡೇಶನ್): ಸೊರೊಸ್‌ನ ಪ್ರಮುಖ ಜಾಗತಿಕ ಕಾರ್ಯಾಚರಣಾ ಸಂಸ್ಥೆ ಓಪನ್ ಸೊಸೈಟಿ ಫೌಂಡೇಶನ್ ನೇರವಾಗಿ ಯುರೋಪಿನ ಎಡಪಂಥೀಯ ಮಾಧ್ಯಮ ಯೋಜನೆಗಳಿಗೆ ಹಣ ಒದಗಿಸುವ journalismfunds.eu ಎಂಬ ವೇದಿಕೆಗೆ ಧನಸಹಾಯ ನೀಡುತ್ತದೆ.

ಹಂತ 2 (ಫ್ರಿಟ್ ಆರ್ಡ್ ಫೌಂಡೇಶನ್, ನಾರ್ವೆ): ನಾರ್ವೆಯ ಫ್ರಿಟ್ ಆರ್ಡ್ ಫೌಂಡೇಶನ್ ತನ್ನನ್ನು ತಾನು ಪತ್ರಿಕಾ ಸ್ವಾತಂತ್ರ್ಯ ಸಂಸ್ಥೆ ಎಂದು ಕರೆದುಕೊಂಡರೂ, ಅದು ಈ ಮೇಲಿನ ಮೂಲಗಳಿಂದ ನೇರ ಅನುದಾನವನ್ನು ಪಡೆಯುತ್ತದೆ. ಇದು ನಾರ್ಡಿಕ್ ಪ್ರದೇಶದಲ್ಲಿ ಎಡಪಂಥೀಯ ಮಾಧ್ಯಮಗಳನ್ನು ಬೆಂಬಲಿಸುವ ಸೊರೊಸ್ ಜಾಲದ ಒಂದು ಪ್ರಮುಖ ನೋಡ್ ಆಗಿದೆ.

ಹಂತ 3 (ದಾಗ್ಸಾವಿಸೆನ್ ದಿನಪತ್ರಿಕೆ): ಹೆಲ್ಲೆ ಲಿಂಗ್ ಕೆಲಸ ಮಾಡುವ ದಾಗ್ಸಾವಿಸೆನ್ ಪತ್ರಿಕೆಯು ಈ ಫ್ರಿಟ್ ಆರ್ಡ್ ಫೌಂಡೇಶನ್‌ನಿಂದ ನೇರ ಧನಸಹಾಯ ಮತ್ತು ಅನುದಾನ ಪಡೆಯುತ್ತದೆ. ಇದು ಸ್ವತಂತ್ರ ಪತ್ರಿಕೋದ್ಯಮವಲ್ಲ, ಬದಲಿಗೆ ಹಣದ ಮೂಲಕ ನಿಯಂತ್ರಿಸಲ್ಪಡುವ ಸೈದ್ಧಾಂತಿಕ ವಕಾಲತ್ತು (ಫಂಡೆಂಡ್ ಅಡ್ವಕೆಸಿ).

ಹಂತ 4 (ಹೆಲ್ಲೆ - ಕಾರ್ಯಾಚರಣೆ): ಈ ಪತ್ರಿಕೆಯಲ್ಲಿ ಕೆಲಸ ಮಾಡುವ ಹೆಲ್ಲೆ ಲಿಂಗ್ ಸ್ವೆಂಡ್ಸೆನ್ ಓಸ್ಲೋದಲ್ಲಿ ಭಾರತದ ಪ್ರಧಾನಿಯವರ ಪತ್ರಿಕಾಗೋಷ್ಠಿಗೆ ಹಾಜರಾಗಿ ಅದನ್ನು ಕದಡಲು ಮತ್ತು ಅಪಪ್ರಚಾರ ಮಾಡಲು ಯತ್ನಿಸುತ್ತಾಳೆ. ಇದು ಕೇವಲ ಮಾಧ್ಯಮವಲ್ಲ, ಇದು ಒಂದು ವ್ಯವಸ್ಥಿತ ಸೈದ್ಧಾಂತಿಕ ಮೂಲಸೌಕರ್ಯ. ಹಣವು ಸೊರೊಸ್‌ನಿಂದ ಫೌಂಡೇಶನ್‌ಗೆ, ಫೌಂಡೇಶನ್‌ನಿಂದ ಪತ್ರಿಕೆಗೆ ಮತ್ತು ಪತ್ರಿಕೆಯಿಂದ ಓಸ್ಲೋ ಪತ್ರಿಕಾಗೋಷ್ಠಿಯ ಪತ್ರಕರ್ತೆಗೆ ಹರಿಯುತ್ತದೆ. ಈ 4 ಹಂತಗಳ ಸರಣಿಯು ಭಾರತ ವಿರೋಧಿ ಅಜೆಂಡಾವನ್ನು ಸಂಪೂರ್ಣವಾಗಿ ಸಾಬೀತುಪಡಿಸುತ್ತದೆ.



ಪ್ರಧಾನಿ ಮೋದಿ ವಿರುದ್ಧ ಜಾಗತಿಕ ಮಾಹಿತಿ ಯುದ್ಧ ಹಾಗೂ ಭಾರತದ ಮೇಲಿನ ವ್ಯವಸ್ಥಿತ ನರೇಟಿವ್ ದಾಳಿ ಬಯಲು!

ಹೆಲ್ಲೆ ಲಿಂಗ್ ಸ್ವೆಂಡ್ಸೆನ್ ಯಾರು? ಅಸಲಿ ಮುಖವಾಡ ಕಳಚಿದಾಗ!

ಈ ಇಡೀ ಸಂಚಿನ ಕೇಂದ್ರಬಿಂದು ನಾರ್ವೆಯ ದಾಗ್ಸಾವಿಸೆನ್ ಪತ್ರಿಕೆಯಲ್ಲಿ ಕೆಲಸ ಮಾಡುವ ಹೆಲ್ಲೆ ಲಿಂಗ್ ಸ್ವೆಂಡ್ಸೆನ್ ಎಂಬ ಪತ್ರಕರ್ತೆ. ಮೇಲ್ನೋಟಕ್ಕೆ ತಟಸ್ಥ ಜಾಗತಿಕ ವಿದ್ಯಮಾನಗಳ ವೀಕ್ಷಕಿಯಂತೆ ನಟಿಸುವ ಈಕೆಯ ಇಂಟರ್‌ನೆಟ್ ಇತಿಹಾಸ ಮತ್ತು ಸೈದ್ಧಾಂತಿಕ ಬದ್ಧತೆಯನ್ನು ಕೆದಕಿದಾಗ ಅತ್ಯಂತ ಆಘಾತಕಾರಿ ಸತ್ಯಗಳು ಹೊರಬಂದಿವೆ.

1 **ಸುಪ್ತ ಖಾತೆಯ ದಿಢೀರ್ ಜಾಗೃತಿ:** ಈಕೆಯ ಎಕ್ಸ್ (ಅಂದಿನ ಟ್ವಿಟರ್) ಖಾತೆಯನ್ನು ಏಪ್ರಿಲ್ 2012ರಲ್ಲೇ ತೆರೆಯಲಾಗಿದ್ದರೂ, ಕಳೆದ ಎರಡು ವರ್ಷಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಅದು ಸಂಪೂರ್ಣ ನಿಷ್ಕ್ರಿಯವಾಗಿತ್ತು. ಆದರೆ, ಭಾರತದ ಪ್ರಧಾನಿ ಮೋದಿ ಅವರ ಓಸ್ಲೋ ಪ್ರವಾಸ ಮತ್ತು ಮಾಧ್ಯಮಗೋಷ್ಠಿಯ ದಿನ ಹತ್ತಿರ ಬರುತ್ತಿದ್ದಂತೆ ಈ ಸುಪ್ತ ಖಾತೆಯು ಅತ್ಯಂತ ವ್ಯವಸ್ಥಿತವಾಗಿ ಸಕ್ರಿಯವಾಯಿತು. ಸಂಪನ್ಮೂಲ ಮತ್ತು ಖಾತೆಗಳನ್ನು ಸೂಕ್ತ ಸಮಯಕ್ಕೆ ಹೇಗೆ ನಿಯೋಜಿಸಲಾಗುತ್ತದೆ ಎಂಬುದಕ್ಕೆ ಇದು ಸ್ಪಷ್ಟ ಉದಾಹರಣೆ.

2 **ಬ್ಲೂ ಟಿಕ್ ಖರೀದಿ ಮತ್ತು ದಿಢೀರ್ ಭಾರತ ವಿರೋಧಿ ಪೋಸ್ಟ್:** ಪ್ರಧಾನಿಯವರ ಮಾಧ್ಯಮಗೋಷ್ಠಿಗೆ ಕೇವಲ ಕೆಲವೇ ದಿನಗಳಿರುವಾಗ ಈಕೆ ಮೇ 2026ರಲ್ಲಿ ಹಣ ನೀಡಿ ತನ್ನ ಎಕ್ಸ್ ಖಾತೆಗೆ ಬ್ಲೂ ಟಿಕ್(ವೆರಿಫಿಕೇಶನ್) ಪಡೆದುಕೊಂಡಳು. ಅಕೌಂಟ್ ವೆರಿಫೈ ಆದ ತಕ್ಷಣವೇ ಈಕೆ ತನ್ನ ಪೋಸ್ಟಿಂಗ್ ಶೈಲಿಯನ್ನು ಬದಲಾಯಿಸಿ, ಭಾರತದ ಆಂತರಿಕ ರಾಜಕೀಯದ ಕುರಿತು ಮತ್ತು ಪ್ರಧಾನಿ ವಿರುದ್ಧ ತೀವ್ರ ದ್ವೇಷಕಾರುವ, ಹಗೆತನದ ಕಮೆಂಟ್‌ಗಳನ್ನು ಹಾಕಲು ಆರಂಭಿಸಿದಳು.

3 **ಕಮ್ಯುನಿಸ್ಟ್ ಚೀನಾ ಮತ್ತು ಕ್ಸಿ ಜಿನ್‌ಪಿಂಗ್ ಆರಾಧನೆ:** ಹೆಲ್ಲೆ ಲಿಂಗ್ ಭಾರತದ ತಜ್ಞೆಯೇನಲ್ಲ ಮತ್ತು ಈ ಘಟನೆಗೆ ಮುನ್ನ ಆಕೆ ಭಾರತದ ಬಗ್ಗೆ ಯಾವುದೇ ಮಹತ್ವದ ಲೇಖನಗಳನ್ನೇ ಬರೆದಿರಲಿಲ್ಲ. ಆದರೆ, ಆಕೆಯ ಒಟ್ಟಾರೆ ಕೆಲಸದ ಇತಿಹಾಸವು ಬೇರೆಯದೇ ಕಥೆ ಹೇಳುತ್ತದೆ. ಚೀನಾದ ಕಮ್ಯುನಿಸ್ಟ್ ಸರ್ಕಾರದ ಕುರಿತು ನೂರಾರು ಲೇಖನಗಳನ್ನು ಬರೆದಿರುವ ಈಕೆ, ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್‌ನನ್ನು ಮುಕ್ತಕಂಠದಿಂದ ಸೂಪರ್‌ಹೀರೋ ಎಂದು ಕರೆದಿದ್ದಾಳೆ.

4 **ಉಯಿಗರ್ ಮುಸ್ಲಿಮರ ಹತ್ಯಾಕಾಂಡದ ಬಗ್ಗೆ ಜಾಣ ಮೌನ:** ಜಗತ್ತಿನ ಅತಿ ದೊಡ್ಡ ಮುಸ್ಲಿಂ ಜನಸಂಖ್ಯೆಯ ದೌರ್ಜನ್ಯ ಮತ್ತು ದಬ್ಬಾಳಿಕೆ ಎನಿಸಿರುವ ಚೀನಾದ ಉಯಿಗರ್ ಮುಸ್ಲಿಮರ ಮೇಲಿನ ದ್ವೇಷ ಹಾಗೂ ಜನಾಂಗೀಯ ಹತ್ಯಾಕಾಂಡದ ಕುರಿತು ಹೆಲ್ಲೆ ಲಿಂಗ್ ಬರೆದ ಒಟ್ಟು ಲೇಖನಗಳ ಸಂಖ್ಯೆ ಶೂನ್ಯ. ಮಾನವ ಹಕ್ಕುಗಳ ಬಗ್ಗೆ ಮಾತನಾಡುವ ಈಕೆಯ ಜಾಣ ಮೌನ ಈಕೆಯ ಮುಖವಾಡವನ್ನು ಕಳಚುತ್ತದೆ.

5 **ಮಾರ್ಕ್ಸ್‌ವಾದಿ ಸಿದ್ಧಾಂತದ ಪ್ರಭಾವ :** ಮೇ 1ರ ಅಂತಾರಾಷ್ಟ್ರೀಯ ಕಾರ್ಮಿಕರ ದಿನವನ್ನು ಸಾರ್ವಜನಿಕ ರಜಾದಿನವನ್ನಾಗಿ ಘೋಷಿಸದೇ ಇರುವುದರ ಬಗ್ಗೆ ಈಕೆ ಅತ್ಯಂತ ತೀವ್ರ ಆಕ್ರೋಶ ಮತ್ತು ಕೋಪದಿಂದ ಲೇಖನ ಬರೆದಿದ್ದಾಳೆ. ಇದು ಸಾಮಾನ್ಯ ಪತ್ರಿಕೋದ್ಯಮದ ಭಾಷೆಯಲ್ಲ, ಬದಲಿಗೆ ಕಮ್ಯುನಿಸ್ಟ್ ಕೇಡರ್ ಅಥವಾ ಮಾರ್ಕ್ಸ್‌ವಾದಿ ಕ್ರೋಢೀಕರಣದ ಸ್ಪಷ್ಟ ಭಾಷೆಯಾಗಿದೆ. ಇದರಿಂದ ಸ್ಪಷ್ಟವಾಗುವುದೇನೆಂದರೆ, ಚೀನಾದ ಮಾನವ ಹಕ್ಕುಗಳ ತೀವ್ರ ದೌರ್ಜನ್ಯದ ಬಗ್ಗೆ ಸಂಪೂರ್ಣ ಮೌನ ವಹಿಸುವ ಈಕೆ, ಭಾರತದ ಸುದ್ದಿಗೋಷ್ಠಿಯಲ್ಲಿ ಮಾತ್ರ 2002ರ ಗುಜರಾತ್ ಗಲಭೆ ಮತ್ತು ಸಿಎಎ-ಎನ್‌ಆರ್‌ಸಿ ಇತ್ಯಾದಿ ವಿಷಯಗಳನ್ನು ಮುಂದಿಟ್ಟುಕೊಂಡು ಪ್ರಧಾನಿಯವರನ್ನು ಸಾರ್ವಜನಿಕವಾಗಿ ಕೆರಳಿಸಲು ಮತ್ತು ಅಪಮಾನಿಸಲು ಯತ್ನಿಸಿದಳು.

ನೈಜ-ಸಮಯದಲ್ಲಿ ನಡೆದ ಪ್ರಚಾರದ ಜಾಲ

ಓಸ್ಲೋ ಪತ್ರಿಕಾಗೋಷ್ಠಿಯಲ್ಲಿ ಪ್ರಧಾನಿ ಮೋದಿ ತನ್ನ ಪ್ರಶ್ನೆಯನ್ನು ತೆಗೆದುಕೊಳ್ಳಲಿಲ್ಲ ಎಂದು ಹೆಲ್ಲೆ ಟ್ವೀಟ್ ಮಾಡಿದ ಕೆಲವೇ ನಿಮಿಷಗಳಲ್ಲಿ, ಭಾರತದ ಅತಿ ದೊಡ್ಡ ಇಂಗ್ಲಿಷ್ ದಿನಪತ್ರಿಕೆಗಳಲ್ಲೊಂದಾದ ದಿ ಹಿಂದೂ ಪತ್ರಿಕೆಯ ಹಿರಿಯ ಪತ್ರಕರ್ತೆ ಸುಹಾಸಿನಿ ಹೈದರ್ ಅದನ್ನು ಕೋಟ್-ಟ್ವೀಟ್ ಮಾಡಿದರು. ಜಗತ್ತಿಗೆ ಅಷ್ಟಾಗಿ ಪರಿಚಯವಿಲ್ಲದ, ಕೇವಲ ದಿನಗಳ ಹಿಂದಷ್ಟೇ ಸಕ್ರಿಯವಾಗಿದ್ದ ನಾರ್ವೇಯನ್ ಪತ್ರಕರ್ತೆಯ ಪೋಸ್ಟ್ ಅನ್ನು ಭಾರತೀಯ ಮಾಧ್ಯಮದ ಪ್ರಮುಖರು ನಿಮಿಷಗಳಲ್ಲೇ ಹಂಚಿಕೊಂಡಿದ್ದು ಆಕಸ್ಮಿಕವಲ್ಲ, ಬದಲಿಗೆ ಇದು ವ್ಯವಸ್ಥಿತ ಕಾರ್ಯಾಚರಣೆ. ಸೊರೊಸ್ ವಿದೇಶದಲ್ಲಿ ಪ್ರಚಾರ ಮಾಡುವುದನ್ನು ಭಾರತೀಯ ವಿರೋಧ ಪಕ್ಷಗಳು ದೇಶದೊಳಗೆ ಪ್ರತಿಧ್ವನಿಸುವ ಈ ಪೈಪ್‌ಲೈನ್ ಅತ್ಯಂತ ಸ್ಪಷ್ಟವಾಗಿದೆ.

ಭಾರತದ ನಾಗರಿಕತೆಯ ದಿಟ್ಟ ಉತ್ತರ: ಆಪರೇಷನ್ ಸಿಂದೂರ ಸಾಕ್ಷಿ

ಯಾರು ಭಾರತದ ಚಾರಿತ್ರ್ಯದ ಮೇಲೆ ಪ್ರಶ್ನಾರ್ಥಕ ಚಿಹ್ನೆಗಳನ್ನು ಮೂಡಿಸಲು ಮತ್ತು ಮಾಹಿತಿ ಯುದ್ಧ ನಡೆಸಲು ಯತ್ನಿಸುತ್ತಾರೋ ಅವರು ಭಾರತದ ಸಶಸ್ತ್ರ ಪಡೆಗಳ ಇತ್ತೀಚಿನ ಅತ್ಯಂತ ನಿರ್ಣಾಯಕ ಕಾರ್ಯಾಚರಣೆ ಆಪರೇಷನ್ ಸಿಂದೂರ ನೆನಪಿಸಿಕೊಳ್ಳುವುದು ಒಳಿತು.

ಭಾರತದ ಸಶಸ್ತ್ರ ಪಡೆಗಳು ಶತ್ರು ರಾಷ್ಟ್ರದ ಅತ್ಯಂತ ಆಳದ ಉಗ್ರಗಾಮಿ ಮೂಲಸೌಕರ್ಯಗಳ ಮೇಲೆ ವಾಯುದಾಳಿ ನಡೆಸುವಾಗ, ಉಗ್ರನೊಬ್ಬ ಸಾಮಾನ್ಯ ಮುಸ್ಲಿಂ ನಾಗರಿಕರೊಂದಿಗೆ ಮಸೀದಿಯೊಳಗೆ ನಮಾಜ್ ಪ್ರಾರ್ಥನೆ ಮಾಡುತ್ತಾ ಅಡಗಿಕೊಂಡಿದ್ದನ್ನು ಭಾರತದ ಸೇನೆ ಗುರುತಿಸಿತು. ಭಾರತಕ್ಕೆ ಶಕ್ತಿಯಿದ್ದರೂ ಸಹ ಆ ಮಸೀದಿಯ ಮೇಲೆ ಬಾಂಬ್ ದಾಳಿ ನಡೆಸಲಿಲ್ಲ. ಇದು ಮಿಲಿಟರಿ ದೌರ್ಬಲ್ಯವಲ್ಲ, ಬದಲಿಗೆ ಇದು ಭಾರತದ ಬೃಹತ್ ನಾಗರಿಕತೆಯ ಸಂಯಮ (ಸಿವಿಲೈಸೇಷನಲ್ ರಿಸ್ಟ್ರೈಂಟ್). ಅಫ್ಘಾನಿಸ್ತಾನ, ಇರಾಕ್, ಲಿಬಿಯಾ ಅಥವಾ ಸಿರಿಯಾಗಳಲ್ಲಿ ಇಡೀ ನಗರಗಳನ್ನೇ ಬಾಂಬ್ ಹಾಕಿ ಧ್ವಂಸಗೊಳಿಸಿದ ಅಮೆರಿಕ ಅಥವಾ ಯಾವುದೇ ಪಾಶ್ಚಿಮಾತ್ಯ ಸೇನೆಗಳು ಇಂತಹ ನಾಗರಿಕ ಸಂಯಮವನ್ನು ತನ್ನ ಇತಿಹಾಸದಲ್ಲಿ ಎಂದಾದರೂ ತೋರಿದ್ದಿವೆಯೇ? ಭಾರತವು ಯುದ್ಧ ಮತ್ತು ಪ್ರೀತಿಯಲ್ಲಿ ಎಲ್ಲವೂ ನ್ಯಾಯಸಮ್ಮತ ಎಂಬ ಪಾಶ್ಚಿಮಾತ್ಯ ಸಿದ್ಧಾಂತವನ್ನು ನಂಬುವುದಿಲ್ಲ. ಬದಲಿಗೆ ಯಾವುದು ನಿಜವಾಗಿಯೂ ಧರ್ಮ ಮತ್ತು ನ್ಯಾಯವೋ ಅದು ಯುದ್ಧ ಮತ್ತು ಪ್ರೀತಿ ಎರಡರಲ್ಲೂ ನ್ಯಾಯಸಮ್ಮತವಾಗಿಯೇ ಇರಬೇಕು ಎಂದು ಭಾರತ ನಂಬುತ್ತದೆ. ಸಕ್ರಿಯ ಯುದ್ಧದ ಪರಿಸ್ಥಿತಿಯಲ್ಲೂ ಶತ್ರು ದೇಶದ ಮಸೀದಿಯ ಮೇಲೆಯೇ ದಾಳಿ ಮಾಡದ ಭಾರತಕ್ಕೆ, ಸೊರೊಸ್ ಆಗಲಿ ಅಥವಾ ಓಸ್ಲೋದ ಸೊರೊಸ್ ಕಾಂಟ್ರ್ಯಾಕ್ಟರ್ ಪತ್ರಕರ್ತೆಯಾಗಲಿ ಮಾನವ ಹಕ್ಕುಗಳ ಪಾಠ ಮಾಡುವ ಯಾವುದೇ ಅಗತ್ಯವಿಲ್ಲ. ಭಾರತವು ತನ್ನ ಶತ್ರು ರಾಷ್ಟ್ರವಾದ ಪಾಕಿಸ್ತಾನವನ್ನು ಸಹ ವಸುಧೈವ ಕುಟುಂಬಕಂ(ಜಗತ್ತೇ ಒಂದು ಕುಟುಂಬ) ಎಂಬ ನಾಗರಿಕ ದೃಷ್ಟಿಕೋನದಿಂದಲೇ ನೋಡುತ್ತದೆ.

ಕೊಳಕು ಆಖ್ಯಾನ(ನರೇಟಿವ್)ಗಳ ಸೈಟೇಶನ್ ಲಾಂಡ್ರಿಂಗ್ ಜಾಲ

ಮಾಧ್ಯಮಗೋಷ್ಠಿಯ ವಿವಾದದ ನಂತರ ಹೆಲ್ಲೆ ಬಿಬಿಸಿ(ಹಿಂದಿ) ವಾಹಿನಿಯ ಪತ್ರಕರ್ತ ನಿತಿನ್ ಶ್ರೀವಾಸ್ತವರಿಗೆ ನೀಡಿದ ಸಂದರ್ಶನದಲ್ಲಿ ಭಾಗಿಯಾದಳು. ಅಲ್ಲಿ ತಾನು ಭಾರತದ ವಿರುದ್ಧ ಹೊರಿಸಿದ ಮಾನವ ಹಕ್ಕುಗಳ ಉಲ್ಲಂಘನೆಯ ಆರೋಪಕ್ಕೆ ಮತ್ತು ತನ್ನ ಕಾರ್ಯಾಚರಣೆಯನ್ನು ಸಮರ್ಥಿಸಿಕೊಳ್ಳಲು ಮೂರು ಪ್ರಮುಖ ಸಂಸ್ಥೆಗಳನ್ನು ಉಲ್ಲೇಖಿಸಿದಳು: ಅಮ್ನೆಸ್ಟಿ ಇಂಟರ್‌ನ್ಯಾಷನಲ್, ಹ್ಯೂಮನ್ ರೈಟ್ಸ್ ವಾಚ್ ಮತ್ತು ವರ್ಲ್ಡ್ ಫ್ರೀಡಂ ಇಂಡೆಕ್ಸ್.

1. ಬಿಬಿಸಿ - ಅಪರಾಧ ಹಿನ್ನೆಲೆ ಹೊಂದಿರುವ ಆಂಟಿ

ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್(ಬಿಬಿಸಿ) ತನ್ನನ್ನು ಜಗತ್ತಿನ ಅತ್ಯಂತ ವಿಶ್ವಾಸಾರ್ಹ ಮಾಧ್ಯಮವೆಂದು ಕರೆದುಕೊಂಡರೂ, ಅದರ ಇತಿಹಾಸ ಬೇರೆಯದೇ ಇದೆ. ಶೀತಲ ಸಮರದ ಕಾಲದ ಮಾಹಿತಿ ಯುದ್ಧದ ಕಾರ್ಯಾಚರಣೆಗಳಲ್ಲಿ ಬ್ರಿಟಿಷ್ ಗುಪ್ತಚರ ಇಲಾಖೆಯು ಬಿಬಿಸಿಗೆ ಆಂಟಿ ಎಂಬ ಆಪರೇಷನಲ್ ಕೋಡ್ ನೇಮ್ ನೀಡಿತ್ತು. ಅಂದರೆ ಗೌರವಾನ್ವಿತ ಮುಖವಾಡದ ಹಿಂದೆ ತೀವ್ರ ರಾಜಕೀಯ ಒಳಸಂಚುಗಳನ್ನು ಅಡಗಿಸಿಡುವ ಸಂಸ್ಥೆ.

ಸರ್ಕಾರಗಳನ್ನು ಉರುಳಿಸಿದ ಇತಿಹಾಸ: 1953ರಲ್ಲಿ ಇರಾನ್ ಪ್ರಧಾನಿ ಮೊಹಮ್ಮದ್ ಮೊಸದ್ದೆಕ್ ಅವರ ಪ್ರಜಾಪ್ರಭುತ್ವ ಸರ್ಕಾರವನ್ನು ಜಂಟಿಯಾಗಿ ಉರುಳಿಸಲು ಸಿಐಎ ಮತ್ತು ಎಂಐ6 ನಡೆಸಿದ ಆಪರೇಷನ್ ಅಜಾಕ್ಸ್‌ನಲ್ಲಿ ಬಿಬಿಸಿ ಪರ್ಷಿಯನ್ ಸೇವೆಯನ್ನು ಸಂಕೇತಗಳನ್ನು ರವಾನಿಸಲು ಮತ್ತು ಪ್ರದೂಷಕ ಪ್ರಚಾರಕ್ಕಾಗಿ ಬಳಸಿಕೊಳ್ಳಲಾಗಿತ್ತು. ಬಿಬಿಸಿ ಕೇವಲ ವೀಕ್ಷಕನಲ್ಲ, ಅದು ಆಡಳಿತ ಬದಲಾವಣೆಯ ರಾಜಕೀಯ ಉಪಕರಣವಾಗಿತ್ತು.

ಲೈಂಗಿಕ ಹಗರಣಗಳ ತಾಣ: ಭಾರತಕ್ಕೆ ಮಾನವೀಯ ಮೌಲ್ಯಗಳ ಪಾಠ ಮಾಡುವ ಬಿಬಿಸಿಯ ಸ್ವಂತ ಸಾಂಸ್ಥಿಕ ಇತಿಹಾಸ ಕಳಂಕಿತವಾಗಿದೆ. ನೂರಾರು ಮಕ್ಕಳ ಮೇಲೆ ದಶಕಗಳ ಕಾಲ ತೀವ್ರ ಲೈಂಗಿಕ ಶೋಷಣೆ ಮತ್ತು ದೌರ್ಜನ್ಯ ನಡೆಸಿದ ಜಿಮ್ಮಿ ಸ್ಯಾವಿಲ್ ಮತ್ತು ಸ್ಟುವರ್ಟ್ ಹಾಲ್‌ನಂತಹ ಪ್ರಮುಖ ಪ್ರೆಸೆಂಟರ್‌ಗಳನ್ನು ಬಿಬಿಸಿ ಮ್ಯಾನೇಜ್‌ಮೆಂಟ್ ದಶಕಗಳ ಕಾಲ ರಕ್ಷಿಸಿತ್ತು. ಇತ್ತೀಚೆಗೆ ಅದರ ಪ್ರಮುಖ ಸುದ್ದಿ ನಿರೂಪಕ ಹುವ್ ಎಡ್ವರ್ಡ್ಸ್ ಅಪ್ರಾಪ್ತರಿಗೆ ಲೈಂಗಿಕ ಚಿತ್ರಗಳಿಗಾಗಿ ಹಣ ನೀಡಿ ಸಿಕ್ಕಿಬಿದ್ದು ರಾಜೀನಾಮೆ ನೀಡಿದ್ದಾರೆ. ತೆರಿಗೆ ವಂಚನೆ ಮತ್ತು ಪಕ್ಷಪಾತ: ಭಾರತದಲ್ಲಿ ದಶಕಗಳ ಕಾಲ ತೆರಿಗೆ ನಿಯಮಗಳನ್ನು ಉಲ್ಲಂಘಿಸಿ, ಆದಾಯ ತೆರಿಗೆ ಇಲಾಖೆಯ ಸರ್ವೇ ನಡೆಸಿದ ನಂತರವಷ್ಟೇ ತೆರಿಗೆ ಪಾವತಿಗೆ ಒಪ್ಪಿಕೊಂಡ ಇತಿಹಾಸ ಬಿಬಿಸಿಗೆ ಇದೆ. ಬ್ರಿಟನ್‌ನ ಮುಸ್ಲಿಂ ಸಂಘಟನೆಗಳೇ ಬಿಬಿಸಿ ವಿರುದ್ಧ ಇಸ್ಲಾಮೋಫೋಬಿಯಾ ಮತ್ತು ಮುಸ್ಲಿಂ ವಿರೋಧಿ ಪಕ್ಷಪಾತದ ಆರೋಪ ಹೊರಿಸಿದ್ದರೂ, ಅದು ಭಾರತದಲ್ಲಿ ಮಾತ್ರ ಮುಸ್ಲಿಮರ ರಕ್ಷಕನಂತೆ ನಟಿಸುತ್ತದೆ.

2. ಅಮ್ನೆಸ್ಟಿ ಇಂಟರ್‌ನ್ಯಾಷನಲ್ - ಮಾನವ ಹಕ್ಕುಗಳ ಹೆಸರಿನಲ್ಲಿ ರಾಜತಾಂತ್ರಿಕ ದಾಳ

ಅಮ್ನೆಸ್ಟಿ ಇಂಟರ್‌ನ್ಯಾಷನಲ್ ತನ್ನನ್ನು ತಟಸ್ಥ ಎಂದು ಕರೆದುಕೊಂಡರೂ, ಅದರ ಧನಸಹಾಯದ ರಚನೆ ಅದರ ರಾಜಕೀಯ ನಿಲುವನ್ನು ಸ್ಪಷ್ಟಪಡಿಸುತ್ತದೆ. ಇದು ಸೊರೊಸ್‌ನ ಓಪನ್ ಸೊಸೈಟಿ ಫೌಂಡೇಶನ್ ಮತ್ತು ಅಮೆರಿಕದ ವಿದೇಶಾಂಗ ನೀತಿಯ ಉದ್ದೇಶಗಳೊಂದಿಗೆ ನಿಕಟ ಸಂಪರ್ಕ ಹೊಂದಿರುವ ನ್ಯಾಷನಲ್ ಎಂಡೋಮೆಂಟ್ ಫಾರ್ ಡೆಮಾಕ್ರಸಿ(ಎನ್‌ಇಡಿ) ಗಳಿಂದ ಭಾರಿ ಪ್ರಮಾಣದ ಹಣವನ್ನು ಪಡೆಯುತ್ತದೆ.

ಭಾರತದಲ್ಲಿ ವಿದೇಶಿ ಹಣದ ನಿಯಂತ್ರಣ ಕಾಯ್ದೆ (ಎಫ್‌ಸಿಆರ್‌ಎ) ಮತ್ತು ಕಾನೂನುಗಳನ್ನು ವ್ಯವಸ್ಥಿತವಾಗಿ ಉಲ್ಲಂಘಿಸಿ ರಾಜಕೀಯ ಪ್ರಚಾರಗಳನ್ನು ನಡೆಸಿದ್ದಕ್ಕಾಗಿ ಭಾರತ ಸರ್ಕಾರ ಇದರ ವಿರುದ್ಧ ಕಾನೂನು ಕ್ರಮ ಜರುಗಿಸಿದಾಗ, ಅದು 2020ರಲ್ಲಿ ಭಾರತದಲ್ಲಿ ಕಾರ್ಯಾಚರಣೆ ನಿಲ್ಲಿಸಿ ತಾನು ಸಂತ್ರಸ್ತೆ ಎಂದು ಜಾಗತಿಕ ಮಾಧ್ಯಮಗಳಲ್ಲಿ ಸುಳ್ಳು ಪ್ರಚಾರ ಹರಡಿತು. ಕಾಶ್ಮೀರಿ ಪಂಡಿತರ ಜನಾಂಗೀಯ ಹತ್ಯೆ ಅಥವಾ ಪಾಕಿಸ್ತಾನ ಮತ್ತು ಬಾಂಗ್ಲಾದೇಶದಲ್ಲಿ ಹಿಂದೂ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯಗಳ ಬಗ್ಗೆ ಅಮ್ನೆಸ್ಟಿ ಎಂದಿಗೂ ಯಾವುದೇ ವರದಿ ನೀಡುವುದಿಲ್ಲ.

3. ಹ್ಯೂಮನ್ ರೈಟ್ಸ್ ವಾಚ್ - ಭಾರತದ ಮೇಲಿನ ಆರ್ಥಿಕ ಭಯೋತ್ಪಾದನೆ

ಹ್ಯೂಮನ್ ರೈಟ್ಸ್ ವಾಚ್ ಸಂಸ್ಥೆಯು ಸೊರೊಸ್ ನೆಟ್‌ವರ್ಕ್‌ನೊಂದಿಗೆ ನೇರ ಹಣಕಾಸು ಸಂಪರ್ಕ ಹೊಂದಿದೆ. ಸೊರೊಸ್ 2010ರಲ್ಲಿ ಈ ಒಂದೇ ಸಂಸ್ಥೆಗೆ ಬರೋಬ್ಬರಿ 100 ಮಿಲಿಯನ್ ಡಾಲರ್ ದೇಣಿಗೆ ನೀಡಿದ್ದರು, ಇದು ಆ ಸಂಸ್ಥೆಯ ಇತಿಹಾಸದಲ್ಲೇ ಅತಿ ದೊಡ್ಡ ದೇಣಿಗೆಯಾಗಿತ್ತು. ಇದರ ಕಾರ್ಯಕಾರಿ ನಾಯಕತ್ವವು ಸೊರೊಸ್ ಸಂಸ್ಥೆಗಳ ಬೋರ್ಡ್‌ಗಳಲ್ಲಿ ಮುಂಚೂಣಿಯಲ್ಲಿದೆ. ಹ್ಯೂಮನ್ ರೈಟ್ಸ್ ವಾಚ್ ಭಾರತದ ವರದಿಗಳು ಸಂಪೂರ್ಣ ದ ವೈರ್, ಸ್ಕ್ರಾಲ್‌ನಂತಹ ಭಾರತ ವಿರೋಧಿ ಆ್ಯಕ್ಟಿವಿಸ್ಟ್ ಜಾಲಗಳ ಮಾಹಿತಿಯನ್ನೇ ಅವಲಂಬಿಸಿರುತ್ತವೆ.

4. ವರ್ಲ್ಡ್ ಪ್ರೆಸ್ ಫ್ರೀಡಂ ಇಂಡೆಕ್ಸ್ - ಯುರೋಪಿಯನ್ನರಿಂದ ಯುರೋಪಿಯನ್ನರಿಗಾಗಿ ತಯಾರಾದ ರಿಪೋರ್ಟ್ ಕಾರ್ಡ್

ಪ್ಯಾರಿಸ್ ಮೂಲದ ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್ ನೀಡುವ ಈ ರೇಟಿಂಗ್ ಅತ್ಯಂತ ಅಪಾರದರ್ಶಕ ಮತ್ತು ಪಕ್ಷಪಾತದಿಂದ ಕೂಡಿದೆ. ಇದರ ರೇಟಿಂಗ್‌ಗಳು ಯಾವುದೇ ವಸ್ತುನಿಷ್ಠ ಮಾಪನಗಳ ಮೇಲೆ ಆಧಾರಿತವಾಗಿಲ್ಲ, ಬದಲಿಗೆ ಪಾಶ್ಚಿಮಾತ್ಯ ಉದಾರವಾದಿ ಮಾಧ್ಯಮಗಳ ಪರಿಸರದಲ್ಲಿರುವ ಆಯ್ದ ಪ್ರತಿಕ್ರಿಯೆ ನೀಡುವವರ ಸರ್ವೇಗಳ ಆಧಾರಿತ. ಭಾರತವನ್ನು ಈ ಸೂಚ್ಯಂಕವು ಮಾಧ್ಯಮ ಸ್ವಾತಂತ್ರ್ಯವೇ ಇಲ್ಲದ ಸಣ್ಣ ಸರ್ವಾಧಿಕಾರಿ ದೇಶಗಳಿಗಿಂತಲೂ ಕೆಳಗಿನ ಸ್ಥಾನದಲ್ಲಿ ನಿಲ್ಲಿಸುತ್ತದೆ.

ಭಾರತೀಯ ಸಂಪರ್ಕ: ರಾಹುಲ್ ಗಾಂಧಿ, ದ ವೈರ್ ಮತ್ತು ರಾಣಾ ಅಯ್ಯೂಬ್

ಗ್ಲಿಸ್ಕೋ ಜಾಗತಿಕ ಜಾಲವು ವಿದೇಶಿ ನೆಲದಲ್ಲಿ ಮಾತ್ರ ಒಂಟಿಯಾಗಿ ಕೆಲಸ ಮಾಡುವುದಿಲ್ಲ, ಅದಕ್ಕೆ ಭಾರತದ ರಾಜಕೀಯದೊಳಗೂ ಸ್ಥಳೀಯ ಪಾಲುದಾರರಿದ್ದಾರೆ. ಹೆಲ್ಲೆ ಲಿಂಗ್‌ನ ಇಂಟರ್‌ನೆಟ್ ಸಂಪರ್ಕಗಳನ್ನು ಗಮನಿಸಿದರೆ ಭಾರತದ ಒಳಗಿನ ಪ್ರಚಾರ ವ್ಯವಸ್ಥೆಯ ಕೊಂಡಿಗಳು ಸ್ಪಷ್ಟವಾಗಿ ದಾಖಲಾಗಿವೆ:

ಟ್ವಿಟರ್ ಸಂಪರ್ಕಗಳು: ಈಕೆಯ ವೆರಿಫೈಡ್ ಫಾಲೋವರ್‌ಗಳಲ್ಲಿ ಭಾರತದ ತೀವ್ರ ಸರ್ಕಾರಿ ವಿರೋಧಿ ನಿಲುವಿನ ಕಮೆಂಟೇಟರ್ ರಾಣಾ ಅಯ್ಯೂಬ್ ಇದ್ದಾರೆ. ರಾಣಾ ಅಯ್ಯೂಬ್ ವಾಷಿಂಗ್ಟನ್ ಪೋಸ್ಟ್, ಟೈಮ್ ಮ್ಯಾಗಜೀನ್, ಮತ್ತು ದಿ ಗಾರ್ಡಿಯನ್‌ನಂತಹ ಬಿಜೆಪಿ ಸರ್ಕಾರದ ವಿರುದ್ಧ ನಿರಂತರ ಹಗೆತನದ ಧೋರಣೆ ಹೊಂದಿರುವ ಮಾಧ್ಯಮಗಳಲ್ಲಿ ಬರೆಯುತ್ತಾರೆ. ಇದರೊಂದಿಗೆ ಹೆಲ್ಲೆ ಭಾರತದ ವಿವಾದಿತ ಡಿಜಿಟಲ್ ಮಾಧ್ಯಮ ದ ವೈರ್ ಅನ್ನು ಫಾಲೋ ಮಾಡುತ್ತಾಳೆ. ಇವು ಯಾವುದೇ ಯಾದೃಚ್ಛಿಕ ಸಂಪರ್ಕಗಳಲ್ಲ, ಬದಲಿಗೆ ಅಂತಾರಾಷ್ಟ್ರೀಯ ಮಟ್ಟದ ಭಾರತ ವಿರೋಧಿ ನಕಾರಾತ್ಮಕ ಆಖ್ಯಾನದ (ನರೇಟಿವ್) ಪ್ರಮುಖ ನೋಡ್‌ಗಳಾಗಿವೆ.



ರಾಹುಲ್ ಗಾಂಧಿ ಸಂದರ್ಶನದ ಪ್ರಯತ್ನ

ಭಾರತದ ವಿದ್ಯಮಾನಗಳ ಬಗ್ಗೆ ಮೊದಲ ಬಾರಿಗೆ ವರದಿ ಮಾಡುವ ಈ ವಿದೇಶಿ ಪತ್ರಕರ್ತೆಯ ಮೊದಲ ಆಲೋಚನೆ ಮತ್ತು ಪ್ರವೃತ್ತಿ ಭಾರತದ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸಂದರ್ಶನ ಕೋರುವುದಾಗಿತ್ತು. ಇದು ಮುಂಚಿತವಾಗಿ ಸಿದ್ಧವಾಗಿದ್ದ ಚಿತ್ರಕಥೆ ಮತ್ತು ನಿಗದಿಪಡಿಸಿದ ಪಾತ್ರ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಅಲ್ಪಸಂಖ್ಯಾತರ ಕಿರುಕುಳ, ಪ್ರಜಾಪ್ರಭುತ್ವದ ಹಿನ್ನಡೆ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯ ಈ ಭಾಷೆಯು ಸೊರೊಸ್ ತನ್ನ ಹೇಳಿಕೆಗಳಲ್ಲಿ ಬಳಸುವ ಮತ್ತು ರಾಹುಲ್ ಗಾಂಧಿ ತಮ್ಮ ವಿದೇಶಿ ಪ್ರವಾಸಗಳಲ್ಲಿ ಪುನರಾವರ್ತಿಸುವ ಟಾಕಿಂಗ್ ಪಾಯಿಂಟ್‌ಗಳೊಂದಿಗೆ ಸಂಪೂರ್ಣ ಹೊಂದಿಕೆಯಾಗುತ್ತದೆ.

ಭಾರತ ತನ್ನ ಶಕ್ತಿ ಅರಿಯಬೇಕಾದ ಸಮಯ

ಓಸ್ಲೋದಲ್ಲಿ ನಡೆದ ಈ ಘಟನೆಯು ಜಾಗತಿಕವಾಗಿ ಭಾರತದ ವಿರುದ್ಧ ಹೂಡಲಾಗಿರುವ ಬೃಹತ್ ಸೈದ್ಧಾಂತಿಕ ಸಮರದ ಒಂದು ಸಣ್ಣ ಕದನವಷ್ಟೇ. ಸೊರೊಸ್ ಅನುದಾನಿತ ಮತ್ತು ಕಮ್ಯುನಿಸ್ಟ್ ಸಹಾನುಭೂತಿ ಹೊಂದಿರುವ ಪತ್ರಕರ್ತೆಯನ್ನು ಭಾರತದ ಪ್ರಧಾನಿಯನ್ನು ವಿದೇಶಿ ನೆಲದಲ್ಲಿ ಮುಜುಗರಕ್ಕೀಡುಮಾಡಲು ಅತ್ಯಂತ ಸೂಕ್ಷ್ಮವಾಗಿ ನಿಯೋಜಿಸಲಾಗಿತ್ತು. ಆಕೆಯ ಖಾತೆಯನ್ನು ಸಕ್ರಿಯಗೊಳಿಸಲಾಗಿತ್ತು, ಬ್ಲೂ ಟಿಕ್ ಖರೀದಿಸಲಾಗಿತ್ತು ಮತ್ತು ಭಾರತದ ಒಳಗಿನ ಹಾಗೂ ಜಾಗತಿಕ ಆಪರೇಟರ್‌ಗಳು ಸ್ಟ್ಯಾಂಡ್‌ಬೈನಲ್ಲಿ ಸಿದ್ಧರಾಗಿದ್ದರು. ಭಾರತವು ಇಂತಹ ನೂರಾರು ದಾಳಿಗಳನ್ನು ಯಶಸ್ವಿಯಾಗಿ ಮೆಟ್ಟಿ ನಿಂತಿದೆ ಮತ್ತು ಮುಂದೆಯೂ ನಿಲ್ಲಲಿದೆ. ಈ ಗ್ಲಿಸ್ಕೋ ಜಾಲವು 2020ರ ಕೋವಿಡ್ ಬಿಕ್ಕಟ್ಟು, ಸಿಎಎ ಪ್ರತಿಭಟನೆ ಮತ್ತು ದೆಹಲಿಯ ರೈತರ ಪ್ರತಿಭಟನೆಗಳ ಸಂದರ್ಭದಲ್ಲಿ ಏಕಕಾಲಕ್ಕೆ ಭಾರತದಾದ್ಯಂತ ಇಂತಹದ್ದೇ ಸಂಚುಗಳನ್ನು ನಡೆಸಿ ವಿಫಲವಾಗಿತ್ತು. ಆದರೆ, ಕೇವಲ ಬದುಕುಳಿಯುವುದೇ ವಿಜಯವಲ್ಲ. ಓಸ್ಲೋದಂತಹ ಪ್ರತಿಯೊಂದು ಘಟನೆಯೂ ಶತ್ರುಗಳಿಗೆ ಭಾರತದ ರಾಜತಾಂತ್ರಿಕ ವ್ಯವಸ್ಥೆಯ ಸಣ್ಣ ದೌರ್ಬಲ್ಯಗಳನ್ನು ಪರಿಚಯಿಸುತ್ತವೆ. ಭಾರತದ ರಾಜತಾಂತ್ರಿಕ ವ್ಯವಸ್ಥೆಯು ಕೇವಲ ಯೋಗ ಅಥವಾ ಸಾಫ್ಟ್ ಪವರ್ ವಿಷಯಗಳ ಬಗ್ಗೆ ಮಾತನಾಡುತ್ತಾ ಕುಳಿತುಕೊಳ್ಳಬಾರದು. 145 ಕೋಟಿ ಜನಸಂಖ್ಯೆ ಮತ್ತು ಜಗತ್ತಿನ ಅತಿ ಹಳೆಯ ಜೀವಂತ ನಾಗರಿಕತೆಯ ಸಾರ್ವಭೌಮ ಆತ್ಮವಿಶ್ವಾಸದೊಂದಿಗೆ ಭಾರತೀಯ ರಾಜತಾಂತ್ರಿಕರು ಇಂತಹ ಜಾಗತಿಕ ಒಳಸಂಚುಗಳನ್ನು ಅತ್ಯಂತ ಆಕ್ರಮಣಕಾರಿಯಾಗಿ ಗುರುತಿಸಿ, ಎದುರಿಸಲು ತರಬೇತಿ ಪಡೆಯಬೇಕಾಗಿದೆ. ಹೆಲ್ಲೆ ಎಂಬಾಕೆ ಈ ಜಾಗತಿಕ ನೆಟ್‌ವರ್ಕ್‌ನ ಕೇವಲ ಒಂದು ಅತ್ಯಂತ ಸಣ್ಣ ಉಪಕರಣ ಅಷ್ಟೇ. ಆದರೆ, ಆಕೆಯ ಮೂಲಕ ಈ ಇಡೀ ಜಾಗತಿಕ ಮಾಹಿತಿ ಯುದ್ಧದ ಅಪಾಯಕಾರಿ ವ್ಯವಸ್ಥೆ ಮತ್ತು ಅದರ ಕೊಂಡಿಗಳು ಈಗ ಜಗತ್ತಿನ ಮುಂದೆ ಸಂಪೂರ್ಣ ಬಹಿರಂಗಗೊಂಡಿವೆ ಮತ್ತು ದಾಖಲಾಗಿವೆ.

ಕಿರುಸುದ್ದಿ

ಮೇ 29ರಂದು ಕೇರಳ ಮುಖ್ಯಮಂತ್ರಿ ಹೊಸದಿಲ್ಲಿಗೆ ಪ್ರಯಾಣ

ಕಾಸರಗೋಡು: ಕೇರಳ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಮೇ 29ರಂದು ಹೊಸದಿಲ್ಲಿಗೆ ತೆರಳಲಿದ್ದು, ಪ್ರಧಾನಮಂತ್ರಿ ನರೇಂದ್ರ ಮೋದಿಯವರನ್ನು ಭೇಟಿಯಾಗಲಿದ್ದಾರೆ. ಅದೇ ದಿನ ಅವರು ಹೊಸದಿಲ್ಲಿಯಲ್ಲಿ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಮುಖಂಡರನ್ನು ಭೇಟಿಯಾಗುವರು.



ಮೇ 29ರಂದು ರಾಜ್ಯ ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣ ನಡೆಯಲಿದ್ದು, ಆ ಬಳಿಕ ಅದೇ ದಿನ ಸಂಜೆ ಮುಖ್ಯಮಂತ್ರಿಗಳು ಹೊಸದಿಲ್ಲಿಗೆ ಪ್ರಯಾಣ ಬೆಳೆಸುವರು. ಕೇರಳದ ಹಲವು ಬೇಡಿಕೆಗಳನ್ನು ಪ್ರಧಾನಮಂತ್ರಿಯವರ ಮುಂದಿರಿಸಿ ಅವುಗಳನ್ನು ಅಂಗೀಕರಿಸುವಂತೆ ಮಾಡುವುದೇ ಮುಖ್ಯಮಂತ್ರಿಯವರ ಹೊಸದಿಲ್ಲಿ ಸಂದರ್ಶನದ ಪ್ರಧಾನ ಉದ್ದೇಶವಾಗಿದೆ.

ಕುವೈಟ್‌ನ ಭಾರತೀಯ ಪ್ರವಾಸಿ ಪರಿಷದ್‌ಗೆ ಪದಾಧಿಕಾರಿಗಳ ನೇಮಕ

ಮಂಗಳೂರು: ಕುವೈಟ್‌ನಲ್ಲಿ ಭಾರತೀಯರ ಅತೀ ದೊಡ್ಡ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಘಟನೆಯಾದ ಭಾರತೀಯ ಪ್ರವಾಸಿ ಪರಿಷದ್ ಕುವೈಟ್ ಇದರ ನೂತನ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿ ಕೇರಳ ಮೂಲದ ಹರಿ ಬಲರಾಮಪುರಂ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ





ರಾಜ್ ಭಂಡಾರಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ರಾಜೀವ್ ಮತ್ತು ಕಾರ್ತಿಕ್, ಜೊತೆ ಕಾರ್ಯದರ್ಶಿಗಳಾಗಿ ರಾಜೇಶ್ ತಿರುವೊನಮ್ ಮತ್ತು ಬಿಸ್ವ ರಂಜನ್, ಕೋಶಾಧಿಕಾರಿಯಾಗಿ ಕೃಷ್ಣಕುಮಾರ್ ಮತ್ತು ಜೊತೆ ಕೋಶಾಧಿಕಾರಿಯಾಗಿ ಸುರೇಂದ್ರ ಅವರು ಆಯ್ಕೆಯಾಗಿದ್ದಾರೆ. ಸುಮಾರು 10 ಲಕ್ಷ ಭಾರತೀಯರು ವಾಸಿಸುವ ಕುವೈಟ್‌ನಲ್ಲಿ ಸಂಘಟನೆ ಕಳೆದ 11 ವರ್ಷಗಳಿಂದ ಭಾರತದ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಬೇಕು ಹಾಗೂ ಬೆಳೆಸಬೇಕು ಎಂಬ ಆಕಾಂಕ್ಷೆಯೊಂದಿಗೆ ಭಾರತೀಯರ ಧ್ವನಿಯಾಗಿ ಕಾರ್ಯ ನಿರ್ವಹಿಸುತ್ತಿದೆ.

ಮೇ 26ರಂದು ಆಟೋ ಚಾಲಕರ ದ.ಕ. ಜಿಲ್ಲಾ ಸಮ್ಮೇಳನ

ಮಂಗಳೂರು: ಕರ್ನಾಟಕ ರಾಜ್ಯ ಪ್ರಗತಿಪರ ಆಟೋ ರಿಕ್ಷಾ ಚಾಲಕರ ಸಂಘ (ಎಐಸಿಸಿಟಿಯು)ದ ವತಿಯಿಂದ ಆಟೋ ಚಾಲಕರ ದ.ಕ. ಜಿಲ್ಲಾ ಸಮ್ಮೇಳನ ಮೇ 26ರಂದು ಬೆಳಗ್ಗೆ 9.30ರಿಂದ ಮಂಗಳೂರಿನ ಕುದ್ಮುಲ್ ರಂಗರಾವ್ ಪುರಭವನದಲ್ಲಿ ಆಯೋಜಿಸಲಾಗಿದೆ. ಎಐಸಿಸಿಟಿಯು ರಾಷ್ಟ್ರೀಯ ಉಪಾಧ್ಯಕ್ಷ ಕ್ಲಿಫ್ಟನ್ ಡಿಸೋಜ ಸಮ್ಮೇಳನ ಉದ್ಘಾಟಿಸಲಿದ್ದಾರೆ. ಸಂಘದ ರಾಜ್ಯ ಅಧ್ಯಕ್ಷ ಪಿ.ಪಿ. ಅಪ್ಪಣ್ಣ, ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ, ಮನಪಾ ಮಾಜಿ ಸದಸ್ಯ ಪ್ರವೀಣ್ ಚಂದ್ರ ಆಳ್ವ, ಮಂಗಳೂರು ಸಾರಿಗೆ ಆಯುಕ್ತ ಮುರುಗೇಂದ್ರ ಬಸವರಾಜ್ ಶಿರೋಳ್ಕರ್, ಪೊಲೀಸ್ ಉಪ ಆಯುಕ್ತ ಕೆ. ರವಿಶಂಕರ್, ಕಾರ್ಮಿಕ ಅಧಿಕಾರಿಗಳಾದ ಬಿ.ಆರ್. ಕುಮಾರ್, ವಿಲ್ಮ ಎಲಿಜಬೆತ್ ತಾವ್ರೊ ಮೊದಲಾದವರು ಭಾಗವಹಿಸಲಿದ್ದಾರೆ ಎಂದು ಸಂಘದ ಜಿಲ್ಲಾಧ್ಯಕ್ಷ ರಾಮಣ್ಣ ವಿಟ್ಲ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ರಾಜ್ಯ ಸರಕಾರ ಆಟೋ ಚಾಲಕರಿಗೆ ಸ್ವಂತ ಮನೆ ಕಟ್ಟಲು ನಿವೇಶನ ನಿಗದಿ ಮಾಡಬೇಕು, ಆಟೋ ಇಂಧನಕ್ಕೆ ಶೇ.50ರಷ್ಟು ಸಬ್ಸಿಡಿ ಒದಗಿಸಬೇಕು. ಜಿಲ್ಲೆಯಲ್ಲಿ 35,000 ಆಟೋ ರಿಕ್ಷಾಗಳಿದ್ದು, ಸೂಕ್ತ ಪಾರ್ಕ್‌ಗಳನ್ನು ನಿರ್ಮಿಸಿ ಕೊಡಬೇಕು. ಆನ್‌ಲೈನ್ ಆ್ಯಪ್ ನಿಲ್ಲಿಸಿ, ಕೇರಳ ಮಾದರಿ ಸರಕಾರದಿಂದ ನಿಯಂತ್ರಿಸಬೇಕು ಎಂದು ಅವರು ಆಗ್ರಹಿಸಿದರು. ಜಿಲ್ಲಾ ಕಾರ್ಯದರ್ಶಿ ಮೋಹನ್ ಕೆ.ಇ., ಮುಖಂಡರಾದ ಮೊಹಮದ್ ಅನ್ಸಾರ್ ಬಜಾಲ್, ಅಶ್ಫಕ್ ಕುದ್ರೋಳಿ, ಮುಸ್ತಾಕ್ ಅಲಿ, ಸೌಕತ್ ಅಲಿ ಖಾನ್ ಉಪಸ್ಥಿತರಿದ್ದರು.

70 ಅಡಿ ಆಳದ ನದಿ ಒಡಲಿಗೆ ಬಿದ್ದ ಕಾರು

ಉಪ್ಪಿನಂಗಡಿ: ಇಲ್ಲಿನ ಪಂಜಳ ಎಂಬಲ್ಲಿ ರಾ ಹೆ 75 ರಲ್ಲಿ ಸಂಚರಿಸುತ್ತಿದ್ದ ಕಾರೊಂದು ಚಾಲಕನ ನಿಯಂತ್ರಣ ತಪ್ಪಿ 70 ಅಡಿ ಆಳದ ನದಿ ಒಡಲಿಗೆ ಬಿದ್ದ ಘಟನೆ ಶುಕ್ರವಾರ ಸಂಭವಿಸಿದೆ. ಪಟ್ರಮೆ ಗ್ರಾಮದ ದೇರಾಜೆ ನಿವಾಸಿಗರಾದ ಪ್ರಶಾಂತ್ ದೇರಾಜೆ ಹಾಗೂ ಪ್ರವೀಣ್ ದೇರಾಜೆ ಎಂಬಿಬ್ಬರು ಪ್ರಯಾಣಿಸುತ್ತಿದ್ದ ಕಾರು ನಿಯಂತ್ರಣ ತಪ್ಪಿ ನೇತ್ರಾವತಿ ನದಿ ಒಡಲಿನ ಹೆದ್ದಾರಿಯಿಂದ ಸುಮಾರು 70 ಅಡಿ ಆಳದ ಕುರುಚಲು ಗಿಡಗಳಿರುವ ಪೊದೆಗೆ ತಲೆಕೆಳಗಾಗಿ ಬಿದ್ದಿತ್ತು. ಘಟನೆಯಿಂದ ಕಾರಿನಲ್ಲಿದ್ದ ಇಬ್ಬರೂ ಪವಾಡ ಸದೃಶ್ಯರಾಗಿ ಸಣ್ಣಪುಟ್ಟ ಗಾಯಗಳೊಂದಿಗೆ ಅಪಾಯದಿಂದ ಪಾರಾಗಿದ್ದಾರೆ.

ಕೋಳಿ ಅಂಕ: ಇಬ್ಬರ ಸೆರೆ

ಹೆಬ್ರಿ: ನಾಲ್ಕೂರು ಗ್ರಾಮದ ಚಂದಾಲ್‌ಕಟ್ಟೆ ಗೇರು ಪ್ಲಾಂಟೇಷನ್ ಎಂಬಲ್ಲಿ ಮೇ 20ರಂದು ಕೋಳಿ ಅಂಕ ನಡೆಸುತ್ತಿದ್ದ ಇಬ್ಬರನ್ನು ಹೆಬ್ರಿ ಪೊಲೀಸರು ಬಂಧಿಸಿದ್ದಾರೆ. ಶೇಖರ ಪೂಜಾರಿ ಹಾಗೂ ಬಸವ ಕುಲಾಲ್ ಬಂಧಿತ ಆರೋಪಿಗಳು. ಪೊಲೀಸ್ ದಾಳಿ ವೇಳೆ ಕೆಲವರು ಓಡಿ ಹೋಗಿ ದ್ದಾರೆ. ಆರೋಪಿಗಳಿಂದ 2800ರೂ. ಮೌಲ್ಯದ ನಾಲ್ಕು ಕೋಳಿ ಹುಂಜ, 3 ಕೋಳಿ ಬಾಳು ಹಾಗೂ 1000ರೂ. ನಗದು ವಶಪಡಿಸಿಕೊಳ್ಳಲಾಗಿದೆ. ಈ ಬಗ್ಗೆ ಹೆಬ್ರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೋಡಿಂಬಾಳ: ರೈಲಿನಡಿ ಸಿಲುಕಿ ವ್ಯಕ್ತಿ ಸಾವು

ಕಡಬ: ಕೋಡಿಂಬಾಳದ ಕೋರಿಯರ್ ಬಳಿ ಮಂಗಳೂರಿನಿಂದ ಸುಬ್ರಹ್ಮಣ್ಯ ರಸ್ತೆ ರೈಲು ನಿಲ್ದಾಣ (ನೆಟ್ಟಣ) ದತ್ತ ಚಲಿಸುತ್ತಿದ್ದ ಪ್ಯಾಸೆಂಜರ್ ರೈಲಿನಡಿ ಸಿಲುಕಿ ಕೋಡಿಂಬಾಳ ಗ್ರಾಮದ ದಂಡುಗುರಿ ನಿವಾಸಿ ಚೋಮ (85) ಅವರು ಮೃತಪಟ್ಟ ಘಟನೆ ಭಾನುವಾರ ಮಧ್ಯಾಹ್ನ ಸಂಭವಿಸಿದೆ. ಚೋಮ ಅವರಿಗೆ ಸರಿಯಾಗಿ ಕಿವಿ ಕೇಳಿಸುತ್ತಿಲ್ಲವಾದುದರಿಂದ ರೈಲು ಮಾರ್ಗದಲ್ಲಿ ನಡೆದು ಹೋಗುತ್ತಿದ್ದ ಅವರು ಆಕಸ್ಮಿಕವಾಗಿ ರೈಲಿನಡಿ ಸಿಲುಕಿ ಮೃತಪಟ್ಟಿರಬಹುದು ಎಂದು ಅವರ ಪುತ್ರ ರಾಘವ ಅವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ರೈಲ್ವೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೃತರು ಪತ್ನಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ.



ಧರ್ಮಸ್ಥಳ ಗ್ರಾಮದ ನಿವಾಸಿ ಎಸ್.ವಿ. ಶೌರ್ಯ ರಚಿಸಿದ 'ಪ್ರೀತಿ ಏಕೆ ಭೂಮಿ ಮೇಲಿದೆ?' ಎಂಬ ಪುಸ್ತಕವನ್ನು ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಬೀಡಿನಲ್ಲಿ ಬಿಡುಗಡೆಗೊಳಿಸಿ ಶುಭ ಹಾರೈಸಿದರು. ಪುಸ್ತಕ ರಚಿಸಿದ ಶೌರ್ಯ ಎಸ್.ವಿ., ಕುಸುಮ, ಸುದರ್ಶನ ಕನ್ಯಾಡಿ, ಮಮತಾ, ಚಂದ್ರಾವತಿ ಮತ್ತು ಪೃಥ್ವೀಶ್ ಉಪಸ್ಥಿತರಿದ್ದರು.

ಕೊಡಗಿನ ಪತ್ರಕರ್ತ ಪ್ರಶಾಂತ್ ವಿರಚಿತ


'ಹೊನ್ನಮ್ಮನ ಕನಸು'ಗೆ ಮತ್ತೊಂದು ಗರಿ


ಮಡಿಕೇರಿ: ಕೊಡಗಿನ ಪತ್ರಕರ್ತ ಪ್ರಶಾಂತ್ ವಿರಚಿತ 'ಹೊನ್ನಮ್ಮನ ಕನಸು' ಕಾದಂಬರಿ ವಿಶ್ವ ಕನ್ನಡ ಸಮ್ಮೇಳನದ ಅತ್ಯುತ್ತಮ ಕಾದಂಬರಿ ಪ್ರಶಸ್ತಿಗೆ ಭಾಜನವಾಗಿದೆ.

ಚೇತನ ಪ್ರತಿಷ್ಠಾನ ಹಾಗೂ ಗೋವಾ ಕನ್ನಡಿಗರ ಒಕ್ಕೂಟ ಆಯೋಜಿಸುತ್ತಿರುವ ವಿಶ್ವ ಕನ್ನಡ ಸಮ್ಮೇಳನದಲ್ಲಿ ಈ ಪ್ರಶಸ್ತಿ ಪ್ರದಾನ ನಡೆಯಲಿದೆ.

ಗೋವಾದ ಪಣಜಿಯ ಕಡಲ ತೀರದಲ್ಲಿ ವಿಶ್ವ ಕನ್ನಡ ಸಮ್ಮೇಳನ ಅದ್ದೂರಿಯಾಗಿ ನಡೆಯಲಿದೆ. ಖ್ಯಾತ ಚಿತ್ರ ಸಾಹಿತಿ ಡಾ.ವಿ.ನಾಗೇಂದ್ರ ಪ್ರಸಾದ್ ಸಮ್ಮೇಳನದ ಅಧ್ಯಕ್ಷತೆ ವಹಿಸಲಿದ್ದು, ನಿಕಟ ಪೂರ್ವ ಸಮ್ಮೇಳನಾಧ್ಯಕ್ಷ ಡಾ.ರಾಜಶೇಖರ್ ಮಠಪತಿ, ಅಖಿಲ ಗೋವಾ ಕನ್ನಡ ಮಹಾಸಂಘದ ಅಧ್ಯಕ್ಷ ಹನುಮಂತಪ್ಪ ಶಿರೂರು, ಸೇರಿದಂತೆ ಹಲವು ಗಣ್ಯರು ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ.

ಈ ಸಮಾರಂಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.





ಪರ್ತಕರ್ತ ಪ್ರಶಾಂತ್ ಅವರ 'ಹೊನ್ನಮ್ಮನ ಕನಸು' ಕಾದಂಬರಿ ದೃಷ್ಟಿ ಕಳೆದುಕೊಂಡ ವೃದ್ಧೆಯೊಬ್ಬರ ಮೂಕ ರೋಧನೆಯನ್ನು ಒಳಗೊಂಡಿದೆ. ಅವರು ಬಾಳ ಹಾದಿಯಲಿ, ಬೆಳ್ಳಿಚುಕ್ಕಿ, ಸೌಪರ್ಣಿಕಾ, ಮೂಕ ಶಾಕುಂತಲೆ ಕಾದಂಬರಿಗಳನ್ನು ರಚಿಸಿದ್ದಾರೆ.

ನೀಲೇಶ್ವರ ಮಾರುಕಟ್ಟೆ ಜಂಕ್ಷನ್‌ನಲ್ಲಿನ ಸರ್ವೀಸ್ ರಸ್ತೆ, ಒಳಚರಂಡಿ

ಕಾಮಗಾರಿ ಶೀಘ್ರ ಪೂರ್ಣ

ಕಾಸರಗೋಡು: ರಾಷ್ಟ್ರೀಯ ಹೆದ್ದಾರಿ 66ರ ನಿರ್ಮಾಣದ ಭಾಗವಾಗಿ ಸಂಚಾರ ದಟ್ಟಣೆ ಎದುರಿಸುತ್ತಿರುವ ಕಾಸರಗೋಡು ಜಿಲ್ಲೆಯ ನೀಲೇಶ್ವರ ಮಾರುಕಟ್ಟೆ ಜಂಕ್ಷನ್‌ನಲ್ಲಿನ ಸರ್ವೀಸ್ ರಸ್ತೆ ಮತ್ತು ಒಳಚರಂಡಿ ಕಾಮಗಾರಿಯನ್ನು 30 ದಿನಗಳಲ್ಲಿ ಪೂರ್ಣಗೊಳಿಸಲಾಗುವುದು ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್ ಎಚ್‌ಎಐ)ದ ಅಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲಾಕಾರಿ ಅರ್ಜುನ್ ಪಾಂಡ್ಯನ್ ಅವರ ಅಧ್ಯಕ್ಷತೆಯಲ್ಲಿ ಕಲೆಕ್ಟರ್ ಚೇಂಬರ್‌ನಲ್ಲಿ ನಡೆದ ಎನ್‌ಎಚ್‌ಎಐ ಅಧಿಕಾರಿಗಳು, ಜನಪ್ರತಿನಿಧಿಗಳು ಮತ್ತು ಆಂದೋಲನ ಸಮಿತಿಯ ಪ್ರತಿನಿಧಿಗಳ ಸಭೆಯಲ್ಲಿ ಈ ಭರವಸೆ ನೀಡಲಾಯಿತು.

ಮುಂಬರುವ ಮಳೆಗಾಲ, ಸಂಚಾರ ದಟ್ಟಣೆ ಮತ್ತು ನೀರಿನ ಸಮಸ್ಯೆಯನ್ನು ಪರಿಗಣಿಸಿ ವಾಹನಗಳನ್ನು ತಾತ್ಕಾಲಿಕವಾಗಿ ಅಸ್ತಿತ್ವದಲ್ಲಿರುವ ಮಣ್ಣಿನ ರಸ್ತೆಯ ಮೂಲಕ ಹಾದುಹೋಗಲು ಅನುಮತಿ ನೀಡಲು ತೀರ್ಮಾನಿಸಲಾಯಿತು. ಮಳೆ ಇಲ್ಲದಿದ್ದರೆ 15 ದಿನಗಳಲ್ಲಿ ನೀಲೇಶ್ವರ ಸರ್ವೀಸ್ ರಸ್ತೆಯ ಒಳಚರಂಡಿ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕರು ಹೇಳಿದ್ದಾರೆ.

ಸರ್ವೀಸ್ ರಸ್ತೆ ನಿರ್ಮಾಣದ ಸಮಯದಲ್ಲಿ ಸಂಚಾರ ದಟ್ಟಣೆಗೆ ಪರಿಹಾರ ಕಂಡುಕೊಳ್ಳಲು ನೀಲೇಶ್ವರ ನಗರಸಭೆಯ ಸಂಚಾರ ನಿಯಂತ್ರಣ ಪ್ರಾಧಿಕಾರವು ತುರ್ತು ಸಭೆ ನಡೆಸಲಿದ್ದು, ನಗರಸಭಾ ಅಧ್ಯಕ್ಷ ಪಿ.ಪಿ.ಮುಹಮ್ಮದ್ ರಫಿ ನೇತೃತ್ವದಲ್ಲಿ ಅಗತ್ಯದ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಲಾಯಿತು.



ಕಾಸರಗೋಡು ಜಿಲ್ಲಾಧಿಕಾರಿಯಿಂದ ನಡೆದ ಸಭೆ

ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿ, ತೀವ್ರ ಸಂಚಾರ ದಟ್ಟಣೆಯನ್ನು ಪರಿಹರಿಸಲು ರಾಷ್ಟ್ರೀಯ ಹೆದ್ದಾರಿಯ ಸರ್ವೀಸ್ ರಸ್ತೆಯ ಕಾಮಗಾರಿಯನ್ನು ಪೂರ್ಣಗೊಳಿಸಲು ಎಲ್ಲರೂ ಸಹಕರಿಸಬೇಕು ಎಂದು ಕೇಳಿಕೊಂಡರು.

ನೀಲೇಶ್ವರದಲ್ಲಿ ಮೇಲ್ಸೇತುವೆ ನಿರ್ಮಾಣಕ್ಕೆ ಒತ್ತಾಯಿಸಿ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ರಾಜ್ಯ ಸರಕಾರಕ್ಕೆ ಸಲ್ಲಿಸಿದ ತುರ್ತು ವರದಿಯ ಕುರಿತು ಸಭೆಯಲ್ಲಿ ಭಾಗವಹಿಸಿದ್ದ ಜನಪ್ರತಿನಿಧಿಗಳು ಮತ್ತು ಪ್ರತಿಭಟನಾ ಸಮಿತಿ ಪ್ರತಿನಿಧಿಗಳು ಪ್ರಶಂಸಿಸಿದರು. ಸಮಗ್ರವಾದ ಶಿಫಾರಸುಗಳನ್ನು ಒಳಗೊಂಡ ವರದಿಯನ್ನು ಲೋಕೋಪಯೋಗಿ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಕಂದಾಯ ಮತ್ತು ವಿಪತ್ತು ನಿರ್ವಹಣಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮತ್ತು ಭೂ ಕಂದಾಯ ಆಯುಕ್ತರಿಗೆ ಸಲ್ಲಿಸಲಾಗಿದ್ದು, ಜಿಲ್ಲಾಡಳಿತವು ಈ ನಿಟ್ಟಿನಲ್ಲಿ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಂಡಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಉಮೇಶ್ ಗರ್, ನಗರಸಭೆಯ ಮಾಜಿ ಅಧ್ಯಕ್ಷ , ಪ್ರಾಧ್ಯಾಪಕ ಕೆ.ಪಿ.ಜಯರಾಜನ್, ಕನ್‌ಸ್ಟ್ರಕ್ಷನ್ ಕಂಪೆನಿ ಪ್ರತಿನಿಧಿ ವಿಜಯ್ ರಾಥೋಡ್, ಮಲ್ಲಿಕಾರ್ಜುನ್, ಡೆಪ್ಯೂಟಿ ಕಲೆಕ್ಟರ್ ಲಿಪು ಎಸ್.ಲಾರೆನ್ಸ್, ಲೋಕೋಪಯೋಗಿ ರಸ್ತೆಗಳ ಇಲಾಖೆ ಎಕ್ಸಿಕ್ಯೂಟಿವ್ ಇಂಜಿನಿಯರ್ ರಾಜನ್ ತಯ್ಯಿಲ್, ರಾಷ್ಟ್ರೀಯ ಹೆದ್ದಾರಿ ವಿಶೇಷ ಅಧಿಕಾರಿ ಕೆ.ಟಿ.ಅಬ್ದುಲ್ ಹಕೀಂ, ನೀಲೇಶ್ವರ ನಗರಸಭೆಯ ಕಾರ್ಯದರ್ಶಿ ಅನುಪಮಾ ಸದಾನಂದನ್, ನೀಲೇಶ್ವರ ಎಸ್‌ಐ ಅಜಿತಾ ಕೆ., ಆರ್‌ಟಿಒ ಜೆರಾಡ್, ಹೊಸದುರ್ಗ ತಾಲೂಕು ಉಪ ತಹಶೀಲ್ದಾರ್ ಪಿ.ವಿ.ತುಳಸಿ ರಾಜ್, ಹೋರಾಟ ಸಮಿತಿ ಪ್ರತಿನಿಧಿಗಳಾದ ಮಾಮುನಿ ವಿಜಯನ್, ವಕೀಲ ಕೆ.ಪಿ.ನಜೀರ್, ನೀಲೇಶ್ವರ ಜನಪರ ಹೋರಾಟ ಸಮಿತಿ ಅಧ್ಯಕ್ಷ ಶ್ರೀನಾಥ್, ಸಂಚಾಲಕ ಡಿ.ರಾಜನ್, ಪದ್ಮರಾಜನ್ ಐಂಗೋತ್, ರತೀಶ್ ಕೃಷ್ಣನ್ ಮತ್ತಿತರರು ಮಾತನಾಡಿದರು.

ತಾತ್ಕಾಲಿಕ ವ್ಯವಸ್ಥೆ

ನೀಲೇಶ್ವರ ಪೇಟೆಯ ಅಭಿವೃದ್ಧಿಯ ಮೇಲೆ ಪರಿಣಾಮ ಬೀರುತ್ತಿರುವ ಯೋಜನಾ ವಿಧಾನದ ವಿರುದ್ಧ ಪ್ರದೇಶದಲ್ಲಿ ಸಾರ್ವಜನಿಕರ ಪ್ರತಿಭಟನೆಯ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ತಾತ್ಕಾಲಿಕ ಸಂಚಾರ ವ್ಯವಸ್ಥೆ ಕೈಗೊಳ್ಳಲು ನಿರ್ಧರಿಸಲಾಯಿತು.

ಉಳಿಪಾಡಿಯಲ್ಲಿ ಸಾಮೂಹಿಕ ವಿವಾಹ ಮೂರು ಜೋಡಿಗಳಿಗೆ ಮದುವೆ



ಕಿನ್ನಿಗೋಳಿ : ಕಳೆದ 16 ವರ್ಷಗಳಿಂದ ಉಚಿತ ಸಾಮೂಹಿಕ ಮಾಡಿಕೊಂಡು ಬಂದಿರುವ ಕಾರ್ಯ ಅಭಿನಂದನೀಯ. ನಿರಂತರ ಸಾಮಾಜಮುಖಿ ಕೆಲಸಗಳಿಂದ ಶ್ರೀ ಕ್ಷೇತ್ರ ಉಳಿಪಾಡಿ ಪ್ರಸಿದ್ಧಿ ಪಡೆದಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಮಾಜಿ ರಾಜ್ಯಾಧ್ಯಕ್ಷ ಹರಿಕೃಷ್ಣ ಪುನರೂರು ಹೇಳಿದರು.

ಅವರು ಉಳಿಪಾಡಿ ಶ್ರೀ ದುರ್ಗಾಪರಮೇಶ್ವರೀ ಮಹಾಮ್ಮಾಯಿ ದೇವಸ್ಥಾನದಲ್ಲಿ 16ನೇ ಪ್ರತಿಷ್ಠಾ ವರ್ಧಂತಿ ಮತ್ತು ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡಿದರು. ಮೂರು ಜೋಡಿಗಳಿಗೆ ಸಾಮೂಹಿಕ ವಿವಾಹ ನಡೆಯಿತು. ನವಚಂಡಿಕಾಯಾಗ, ಕುಣಿತ ಭಜನೆ, ಪ್ರತಿಷ್ಠಾ ಧರ್ಮ ಸಂಸತ್ ನಡೆಯಿತು.

ಶ್ರೀ ಕ್ಷೇತ್ರ ಕಟೀಲಿನ ಅರ್ಚಕ ಸದಾನಂದ ಆಸ್ರಣ್ಣ, ಡಾ. ಕೃಷ್ಣಕುಮಾರ್ ಶೆಟ್ಟಿ ಬಳ್ಕುಂಜೆಗುತ್ತು, ರಾಜೇಶ್ ಶೆಟ್ಟಿ ಪುಲೋಡಿಬೀಡು, ಸುಧಾಕರ, ವೇದಮೂರ್ತಿ ರಮಾನಾಥ ಭಟ್ ಮೂಲ್ಕಿ, ಮಂಜುನಾಥ ಮಂಗಳೂರು, ಅಗರಿ ರಾಘವೇಂದ್ರ ರಾವ್, ಪ್ರವೀಣ್ ಚೇತನಾ ಮೋಹನದಾಸ್, ಧನ್ಯ ಸುರತ್ಕಲ್, ರಾಜೇಶ್ ಪುಲೋಡಿ ಬೀಡು, ಮತ್ತಿತರರು ಉಪಸ್ಥಿತರಿದ್ದರು. ಸತೀಶ್ ಕುಮಾರ್ ನಿರೂಪಿಸಿದರು.

ಉಳಿಪಾಡಿ ಕ್ಷೇತ್ರದಲ್ಲಿ ಸುಮಾರು 300ರಷ್ಟು ಸಾಮೂಹಿಕ ವಿವಾಹಗಳು ನಡೆದಿವೆ. ಕ್ಷೇತ್ರಕ್ಕೆ ಬರುವ ಕಾಣಿಕೆಯಿಂದ ಉಚಿತ ಸಾಮೂಹಿಕ ವಿವಾಹ ನಡೆಸುತ್ತಿದ್ದೇವೆ, ನೂರಾರು ಜನ ಭಕ್ತರು ಕ್ಷೇತ್ರಕ್ಕೆ ಭೇಟಿ ನೀಡಿ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಂಡು ಹೋಗಿದ್ದಾರೆ ಎಂದು ಧರ್ಮದರ್ಶಿ ಮೋಹನ್‌ದಾಸ್ ಸುರತ್ಕಲ್ ಹೇಳಿದರು.

ಪ್ರಾದೇಶಿಕ ವಿಶೇಷ ಮಕ್ಕಳ ಪೋಷಕರ ಸಮಾವೇಶ

ವಿಶೇಷ ಮಕ್ಕಳಿಗೆ ಸಮಾನ ಅವಕಾಶ ಕಲ್ಪಿಸಿ

ಉಡುಪಿ: ಸರಕಾರ, ವಿವಿಧ ಸಂಘ ಸಂಸ್ಥೆಗಳು ಹಾಗೂ ಉದಾರ ಮನಸ್ಸಿನ ದಾನಿಗಳ ಜಂಟಿ ಸಹಭಾಗಿತ್ವದಲ್ಲಿ ವಿಶೇಷ ಮಕ್ಕಳ ಬದುಕಿನಲ್ಲಿ ಸಕಾರಾತ್ಮಕ ಪರಿವರ್ತನೆ ತರಬೇಕಾಗಿದೆ. ಆ ಮೂಲಕ ಸಮಾಜಕ್ಕೆ ಒಂದು ಹೊಸ ದಿಕ್ಸೂಚಿ ತೋರುವ ಕೆಲಸವಾಗಬೇಕು. ಇಂತಹ ವಿಶೇಷ ಸಾಮರ್ಥ್ಯದ ಮಕ್ಕಳನ್ನು ಯಾವುದೇ ಕಾರಣಕ್ಕೂ ಕಡೆಗಣಿಸದೇ, ಅವರನ್ನು ಸಮಾಜದ ಮುಖ್ಯವಾಹಿನಿಗೆ ತಂದು ಎಲ್ಲರಂತೆ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡುವುದು ನಮ್ಮೆಲ್ಲರ ಕರ್ತವ್ಯ ಎಂದು ಉಡುಪಿ ಶಾಸಕ ಯಶಪಾಲ್ ಎ. ಸುವರ್ಣ ಹೇಳಿದರು.

ಪೋಷಕರ ಸಂಘಟನೆಗಳ ರಾಷ್ಟ್ರೀಯ ಒಕ್ಕೂಟ (ಎನ್‌ಸಿಪಿಒ) ಪರಿವಾರ್, ಮಾಹೆ ವಿವಿ ಅಧೀನದ ಆಸರೆ ಚಾರಿಟೇಬಲ್ ಟ್ರಸ್ಟ್ ಹಾಗೂ ಹೈದರಾಬಾದಿನ ಮೌಲಾನಾ ಆಝಾದ್ ನ್ಯಾಷನಲ್ ಉರ್ದು ವಿವಿ ವತಿಯಿಂದ ಕುಂಜಿಬೆಟ್ಟು ಶಾರದಾ ರೆಸಿಡೆನ್ಶಿಯಲ್ ಸ್ಕೂಲಿನ ಸೌಪರ್ಣಿಕಾ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿರುವ ಎರಡು ದಿನಗಳ ಕಾಲ ಆರು ರಾಜ್ಯಗಳ 97ನೇ ಪ್ರಾದೇಶಿಕ ವಿಶೇಷ ಮಕ್ಕಳ ಪೋಷಕರ ಸಮಾವೇಶವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.



ಉಡುಪಿಯಲ್ಲಿ ದಾನಿಗಳ ನೆರವಿನಿಂದ ಒಟ್ಟು 14 ವಿಶೇಷ ಶಾಲೆಗಳು ಅತ್ಯುತ್ತಮವಾಗಿ ನಡೆಯುತ್ತಿವೆ. ಬ್ರಹ್ಮಗಿರಿಯಲ್ಲಿ ವಿಶೇಷ ಮಕ್ಕಳಿಗಾಗಿ ರಾಜ್ಯ ಸರಕಾರ, ನಗರಸಭೆ ಹಾಗೂ ಸಿಎಸ್‌ಆರ್ ನೆರವಿನಿಂದ 4 ಕೋಟಿ ರೂ. ವೆಚ್ಚದಲ್ಲಿ 'ಸಮರ್ಥ ಪಾರ್ಕ್' ನಿರ್ಮಿಸಲಾಗುತ್ತಿದೆ ಎಂದು ಶಾಸಕರು ಇದೇ ವೇಳೆ ಮಾಹಿತಿ ನೀಡಿದರು.

ಮಣಿಪಾಲದ ಶಿವಳ್ಳಿ ಕೈಗಾರಿಕಾ ಪ್ರದೇಶದಲ್ಲಿ 25 ವರ್ಷಕ್ಕಿಂತ ಮೇಲಿನ ವಿಶೇಷ ಮಕ್ಕಳ ಕೌಶಲ ತರಬೇತಿ ಕೇಂದ್ರಕ್ಕೆ ಕೊಡುಗೆ ನೀಡಿದ ಉದ್ಯಮಿ ಪುರುಷೋತ್ತಮ ಶೆಟ್ಟಿ ಅವರನ್ನು ಸಮಾರಂಭದಲ್ಲಿ ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಪರಿವಾರ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಾ. ಸುದೀಪ್ ಗೋಯಲ್, ಜಿ.ಪಂ. ಮುಖ್ಯ ಯೋಜನಾಧಿಕಾರಿ ಡಾ. ಉದಯ್ ಶೆಟ್ಟಿ, ಮಾಹೆ ಎಂಸಿಎಚ್‌ಪಿ ಪ್ರೊಫೆಸರ್ ಮತ್ತು ಡೀನ್ ಡಾ. ಅರುಣ್ ಮಯ್ಯ, ಎಸ್‌ಆರ್ ಎಸ್ ನಿರ್ದೇಶಕ ವಿದ್ಯಾವಂತ ಆಚಾರ್ಯ, ಜಿಲ್ಲಾ ದಿವ್ಯಾಂಗರ ಸಬಲೀಕರಣ ಅಧಿಕಾರಿ ರತ್ನಾ, ರೋಟರಿ ಜಿಲ್ಲೆ 3182 ನಿಯೋಜಿತ ಗವರ್ನರ್ ಬಿ.ಎಂ. ಭಟ್ ಹಾಗೂ ಆಸರೆ ಚಾರಿಟೇಬಲ್ ಟ್ರಸ್ಟಿನ ಟ್ರಸ್ಟಿ ಶ್ರೀಧರ್ ಉಪಸ್ಥಿತರಿದ್ದರು.

ಸಮಾವೇಶಸಂಘಟನಾಸಮಿತಿ ಸದಸ್ಯ ಕೆ.ಎಸ್. ಜೈವಿಠಲ್ ಸ್ವಾಗತಿಸಿದರು. ರಮೇಶ್ ನಾಯ್ಕ ಕಾರ್ಯಕ್ರಮ ನಿರೂಪಿಸಿದರು. ಅರ್ಚನಾ ಟ್ರಸ್ಟಿನ ಟ್ರಸ್ಟಿ ಡಾ. ಪದ್ಮರಾಜ್ ಹೆಗ್ಡೆ ವಂದಿಸಿದರು.

ಬಂಟಕಲ್ಲು ಇಂಜಿನಿಯರಿಂಗ್ ವಿದ್ಯಾರ್ಥಿಗಳಿಂದ ಆವಿಷ್ಕಾರ

ಸೌರಶಕ್ತಿ ಚಾಲಿತ ನೀರು ಶುದ್ಧೀಕರಣ

ಉಡುಪಿ: ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಗ್ರಾಮೀಣ ಭಾಗದ ಜನರಿಗೆ ನೆರವಾಗುವ ನಿಟ್ಟಿನಲ್ಲಿ ಬಂಟಕಲ್ಲಿನ ಶ್ರೀಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿ ಗಳು ಮಹತ್ತರ ಸಾಧನೆ ಮಾಡಿದ್ದಾರೆ. ಕಾಲೇಜಿನ ವಿದ್ಯುನ್ಮಾನ ಮತ್ತು ಸಂವಹನ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶಗಳಿಗಾಗಿಯೇ ವಿಶೇಷವಾಗಿ ವಿನ್ಯಾಸಗೊಳಿಸಲಾದ ಅತ್ಯಾಧುನಿಕ 'ಸೌರಶಕ್ತಿ ಚಾಲಿತ ನೀರು ಶುದ್ಧೀಕರಣ ವ್ಯವಸ್ಥೆ'ಯನ್ನು ಯಶಸ್ವಿಯಾಗಿ ಅಭಿವೃದ್ಧಿಪಡಿಸಿದ್ದಾರೆ.

ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿಗಳಾದ ಸೃಜನ್, ಶರಣ್ ಧೋಂಡ್ಯ ಸುರೇಶ್ ನಾಯಕ್ ಮತ್ತು ಉಜ್ವಲ್ ಯು. ನಾಯಕ್ ಅವರನ್ನೊಳಗೊಂಡ ತಂಡವು, ವಿದ್ಯುನ್ಮಾನ ಮತ್ತು ಸಂವಹನ ವಿಭಾಗದ ಸಹಾಯಕ ಪ್ರಾಧ್ಯಾಪಕಿಯರಾದ ಜಯಶ್ರೀ ಎಂ. ಹಾಗೂ ಶಶಿಕಲಾ ಆರ್. ಅವರ ಪರಿಣಾಮಕಾರಿ ಮಾರ್ಗದರ್ಶನದಲ್ಲಿ ಈ ನೂತನ ತಂತ್ರಜ್ಞಾನವನ್ನು ಆವಿಷ್ಕರಿಸಿದೆ.

ಹೇಗೆ ಕೆಲಸ ಮಾಡುತ್ತದೆ ಈ ತಂತ್ರಜ್ಞಾನ

ಈ ನವೀನ ವ್ಯವಸ್ಥೆಯು ಸೂರ್ಯನ ಬೆಳಕನ್ನು ನೇರವಾಗಿ ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸಲು ಪ್ರಮುಖವಾಗಿ ದ್ಯುತಿವಿದ್ಯುಜ್ಜನಕ (Photovoltaic) ಫಲಕವನ್ನು ಬಳಸಿಕೊಳ್ಳುತ್ತದೆ. ಇದು ವ್ಯವಸ್ಥೆಗೆ ಜೋಡಿಸಲಾದ ಬ್ಯಾಟರಿಯನ್ನು ಏಕಕಾಲದಲ್ಲಿ ಚಾರ್ಜ್ ಮಾಡುವ ಜೊತೆಗೆ, ನೀರಿನ ಇನ್‌ಟೇಕ್ ಪ್ರಕ್ರಿಯೆಗೆ ಬೇಕಾದ ಡಿಸಿ ಪಂಪ್‌ಗೆ ಅಗತ್ಯವಿರುವ ಶಕ್ತಿಯನ್ನು ಒದಗಿಸುತ್ತದೆ. ಇದರ ವಿಶೇಷತೆಯೆಂದರೆ, ಮೋಡ ಕವಿದ ವಾತಾವರಣ ಅಥವಾ ಅತ್ಯಂತ ಕಡಿಮೆ ಸೂರ್ಯನ ಬೆಳಕಿರುವ ದಿನಗಳಲ್ಲೂ ಈ ವ್ಯವಸ್ಥೆಯು ಯಾವುದೇ ಅಡೆತಡೆಯಿಲ್ಲದೆ ಸುಲಲಿತವಾಗಿ ಕಾರ್ಯನಿರ್ವಹಿಸುತ್ತದೆ.



ಗ್ರಾಮೀಣ ಭಾಗಕ್ಕೆ ವರದಾನ

ಅತ್ಯಂತ ಕಡಿಮೆ ವಿದ್ಯುತ್ ಬಳಕೆ ಹಾಗೂ ಅತ್ಯಲ್ಪ ನಿರ್ವಹಣಾ ವೆಚ್ಚವನ್ನು ಹೊಂದಿರುವ ಈ ಹೈಟೆಕ್ ವ್ಯವಸ್ಥೆಯು, ಶುದ್ಧ ಕುಡಿಯುವ ನೀರಿನ ಸೀಮಿತ ಮೂಲಸೌಕರ್ಯ ಹೊಂದಿರುವ ಹಳ್ಳಿಗಳಿಗೆ ಅತ್ಯಂತ ಸೂಕ್ತವಾಗಿದೆ.

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಈ ಯೋಜನೆಗೆ ವಿಶೇಷ ಧನಸಹಾಯ ಹಾಗೂ ಅನುದಾನವನ್ನು ನೀಡಿದೆ. ವಿದ್ಯಾರ್ಥಿಗಳ ಈ ಅಪೂರ್ವ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ ಹಾಗೂ ಪ್ರಾಂಶುಪಾಲರು ತೀವ್ರ ಹರ್ಷ ವ್ಯಕ್ತಪಡಿಸಿ ಧನ್ಯವಾದ ತಿಳಿಸಿದ್ದಾರೆ.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ, ವಿವಿಧ ಸಂಘ ಸಂಸ್ಥೆಗಳಿಂದ 'ಸ್ವಚ್ಛ ಸಂಕಲ್ಪ' ಸ್ವಚ್ಛತಾ ಅಭಿಯಾನ

ಪರಿಸರ ಸ್ವಚ್ಛತೆ ಪ್ರತೀ ನಾಗರಿಕನ ಜವಾಬ್ದಾರಿ: ಅಡ್ಯಂತಾಯ

ಮೂಡುಬಿದಿರೆ: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ, ನಮ್ಮ ಮೂಡುಬಿದಿರೆ, ನೇತಾಜಿ ಬ್ರಿಗೇಡ್, ಜೆಸಿಐ, ಮೂಡುಬಿದಿರೆ ಬಂಟರ ಮಹಿಳಾ ಸಂಘದ ಸದಸ್ಯರು ಭಾನುವಾರ ವಿದ್ಯಾಗಿರಿ–ಹನ್ಡೇಲು ಹಾಗೂ ವಿದ್ಯಾಗಿರಿ–ಪುತ್ತಿಗೆ ಪರಿಸರದ 5.5 ಕಿಮೀ ವ್ಯಾಪ್ತಿಯಲ್ಲಿ ಸ್ವಚ್ಛತಾ ಅಭಿಯಾನ ಸ್ವಚ್ಛ ಸಂಕಲ್ಪ ಕಾರ್ಯಕ್ರಮವನ್ನು ಹಮ್ಮಿಕೊಂಡರು.

ಉಡುಪಿ ಜಿಲ್ಲಾ ಅಮೆಚೂರ್ ಅಥ್ಲೆಟಿಕ್ ಅಸೋಸಿಯೇಷನ್‌ನ ಅಧ್ಯಕ್ಷ ಅಶೋಕ ಅಡ್ಯಂತಾಯ ಕಾರ್ಯಕ್ರಮಕ್ಕೆ ಶುಭ ಹಾರೈಸಿ ಸ್ವಚ್ಛತೆ ಎನ್ನುವುದು ಆರೋಗ್ಯಕರ ಸಮಾಜದ ಅಡಿಪಾಯ. ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯೂ ಹೌದು. ಇದೇ ಉದ್ದೇಶವನ್ನು ಮನಗಂಡು ಮೂಡುಬಿದಿರೆಯಲ್ಲಿ ವಿವಿಧ ಸಂಘ–ಸಂಸ್ಥೆಗಳು ಕೈಜೋಡಿಸಿ 'ಸ್ವಚ್ಛ ಸಂಕಲ್ಪ' ಎಂಬ ಮಹತ್ವದ ಸ್ವಚ್ಛತಾ ಅಭಿಯಾನವನ್ನು ಹಮ್ಮಿಕೊಂಡಿವೆ ಎಂದರು.



ಕಾರ್ಯಕ್ರಮದಲ್ಲಿ ಮಾತನಾಡಿದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಟ್ರಸ್ಟಿ ವಿವೇಕ್ ಆಳ್ವ, ಆಳ್ವಾಸ್‌ನಿಂದ ಕಳೆದ 12 ವರ್ಷಗಳಿಂದ ಅಳಿವೆ ಪ್ರದೇಶದಲ್ಲಿ ನಿರಂತರವಾಗಿ ಸ್ವಚ್ಛತಾ ಅಭಿಯಾನ ನಡೆಸುತ್ತ ಬರಲಾಗಿದೆ. ನಂದಿನಿ ಹಾಗೂ ಫಾಲ್ಗುಣಿ ನದಿಗಳು ಈ ಭಾಗದಲ್ಲಿ ಹರಿಯುತ್ತಿದ್ದು, ಅವುಗಳಿಗೆ ಸಂಪರ್ಕ ಹೊಂದಿರುವ ಚರಂಡಿಗಳ ಮೂಲಕ ತ್ಯಾಜ್ಯಗಳು ನದಿಗೆ ಸೇರುವ ಅಪಾಯವಿದೆ. ಮಳೆಗಾಲ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ರಸ್ತೆ ಬದಿಗಳು ಹಾಗೂ ಚರಂಡಿಗಳಲ್ಲಿ ಬಿದ್ದಿರುವ ಪ್ಲಾಸ್ಟಿಕ್ ಮತ್ತು ಇತರೆ ಕಸಕಡ್ಡಿಗಳು ಸುಲಭವಾಗಿ ಸಮುದ್ರ ಸೇರುವ ಸಾಧ್ಯತೆ ಇರುವುದರಿಂದ ಪರಿಸರ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಪಶ್ಚಿಮಘಟ್ಟ ಹಾಗೂ ಸಮುದ್ರ ತೀರ ಪ್ರದೇಶಗಳ ಮಧ್ಯೆ ಇರುವ ಈ ಭಾಗ ಅತೀ ಸೂಕ್ಷ್ಮ ಪರಿಸರ ವಲಯವಾಗಿದ್ದು, ಪರಿಸರವನ್ನು ಕಾಪಾಡುವ ಹೊಣೆಗಾರಿಕೆಯನ್ನು ಪ್ರತಿಯೊಬ್ಬರೂ ಸಮಾನವಾಗಿ ಸ್ವೀಕರಿಸಬೇಕು. ನಮ್ಮ ಊರು–ನಮ್ಮ ಜವಾಬ್ದಾರಿ ಎಂಬ ಮನೋಭಾವದೊಂದಿಗೆ ಎಲ್ಲರೂ ಕೈಜೋಡಿಸಿದಾಗ ಮಾತ್ರ ಪರಿಸರ ಸಂರಕ್ಷಣೆ ಸಾಧ್ಯವೆಂದು ಹೇಳಿದರು.

ರಾಮಕೃಷ್ಣ ಮಿಷನ್‌ನ ರಂಜನ್ ಬೆಳ್ಳರ್ಪಾಡಿ, ನಮ್ಮ ಮೂಡುಬಿದಿರೆಯ ಅಕ್ಷಯ ಜೈನ್, ನೇತಾಜಿ ಬ್ರಿಗೇಡ್ ರಾಹುಲ್, ಬಂಟರ ಮಹಿಳಾ ಘಟಕದ ಶೋಭಾ ಹೆಗ್ಡೆ, ಪರ್ಯಾವರಣ ಗತಿವಿಧಿಯ ವೆಂಕಟೇಶ್, ಕೇಶವ, ಚಂದ್ರಹಾಸ, ಮಂಜುನಾಥ ಶೆಟ್ಟಿ ಹಾಗೂ ಪ್ರಮುಖರಾದ ಯಾಸಿರ್, ಸಂಪತ್ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಕಸಕಡ್ಡಿಗಳ ವಿಲೇವಾರಿ

ಅಭಿಯಾನದಲ್ಲಿ ಆಳ್ವಾಸ್‌ನ 600ಕ್ಕೂ ಅಧಿಕ ವಿದ್ಯಾರ್ಥಿಗಳು, ವಿವಿಧ ಸಂಘಸಂಸ್ಥೆಗಳ ಸದಸ್ಯರು ಹಾಗೂ ಸಾರ್ವಜನಿಕರು ಭಾಗವಹಿಸಿದರು. ಸ್ವಚ್ಛತಾ ಕಾರ್ಯದ ವೇಳೆ 700ಕ್ಕೂ ಅಧಿಕ ಚೀಲಗಳಷ್ಟು ಕಸಕಡ್ಡಿಗಳನ್ನು ಸಂಗ್ರಹಿಸಿ ವಿಲೇವಾರಿ ಮಾಡಲಾಯಿತು.

ಕಿರುಸುದ್ದಿ

ಲಿಂಗತ್ವ ಅಲ್ಪಸಂಖ್ಯಾತರ ತಿದ್ದುಪಡಿ ಮಸೂದೆಗೆ ವಿರೋಧ

ಮಂಗಳೂರು: ಲಿಂಗತ್ವ ಅಲ್ಪಸಂಖ್ಯಾತರ (ಹಕ್ಕುಗಳ ರಕ್ಷಣೆಯ) ತಿದ್ದುಪಡಿ ಮಸೂದೆ 2026ನ್ನು ನವ ಸಹಜ ಸಮುದಾಯ ಸಂಘಟನೆ ಮಂಗಳೂರು ಖಂಡಿಸುತ್ತದೆ ಎಂದು ಸಂಘಟನೆ ಪದಾಧಿಕಾರಿಗಳು ತಿಳಿಸಿದ್ದಾರೆ. ಮಸೂದೆಯು ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳಿಗೆ ಅಡ್ಡಿ ಪಡಿಸುವ ಸಾಧ್ಯತೆ ಇದೆ. ಈಗಾಗಲೇ ಅಸ್ತಿತ್ವದಲ್ಲಿರುವ ಸಮಾನತೆ, ಗೌರವ ಮತ್ತು ಸ್ವಯಂ ಗುರುತಿನ ಹಕ್ಕುಗಳನ್ನು ದುರ್ಬಲಗೊಳಿಸುವ ಪ್ರಯತ್ನವಾಗಿದೆ. ಲಿಂಗದ ಗುರುತನ್ನು ವೈದ್ಯಕೀಯ ಪರಿಶೀಲನೆ ಮತ್ತು ಪ್ರಮಾಣ ಪತ್ರಗಳ ಮೂಲಕ ಮಾತ್ರ ಮಾನ್ಯತೆಗೊಳಿಸುವ ವ್ಯವಸ್ಥೆಯನ್ನು ಮಸೂದೆಯಲ್ಲಿ ತಿಳಿಸಲಾಗಿದ್ದು, ಇದು ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪೊಂದಕ್ಕೆ ವಿರುದ್ಧವಾಗಿದೆ. ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಲಿಂಗದ ಗುರುತನ್ನು ಸ್ವತಃ ನಿರ್ಧರಿಸುವ ಹಕ್ಕು ಇದೆ. ಯಾವುದೇ ವೈದ್ಯಕೀಯ ಹಾಗೂ ಆಡಳಿತಾತ್ಮಕ ಅನುಮತಿ ಅಗತ್ಯವಿಲ್ಲ ಎಂದು ಎಂದು ಸುಪ್ರೀಂ ಕೋರ್ಟ್ ಆದೇಶಿಸಿತ್ತು ಎಂದು ಸಂಘದ ಪದಾಧಿಕಾರಿ ನಿಖಿಲಾ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಲಿಂಗ ಗುರುತಿನ ಸ್ವಯಂ ನಿರ್ಧಾರದ ಹಕ್ಕನ್ನು ಉಳಿಸಬೇಕು. ತಿದ್ದುಪಡಿ ಮಸೂದೆಯನ್ನು ಹಿಂಪಡೆಯಬೇಕು. ನೀತಿ ರೂಪಿಸುವ ಎಲ್ಲ ಹಂತಗಳಲ್ಲೂ ಸಮುದಾಯದೊಂದಿಗೆ ಸಮಾಲೋಚನೆ ನಡೆಸಬೇಕು. ಪ್ರತಿಯೊಬ್ಬರಿಗೂ ಗೌರವ ಸ್ವಾತಂತ್ರ್ಯ ಮತ್ತು ಸಮಾನತೆಯೊಂದಿಗೆ ಬದುಕುವ ಹಕ್ಕು ಖಚಿತ ಪಡಿಸಬೇಕು ಎಂದು ಅವರು ಆಗ್ರಹಿಸಿದರು. ಸಂಘಟನೆ ಪ್ರಮುಖರಾದ ಕ್ರಿಸ್ತಿರಾಜ್, ತ್ರಿಮೂರ್ತಿ, ಪುಂಡಲೀಕ, ಉಚ್ಚಂಗಿ ಪ್ರಸಾದ್, ದೀಕ್ಷಾ ಹಾಗೂ ಚಾಂದಿನಿ ಉಪಸ್ಥಿತರಿದ್ದರು.

ನಿಧನ ಸುದ್ದಿ

ಕೀರ್ತನ್ ಕುಮಾರ್



ಮುಲ್ಕಿ: ಇಲ್ಲಿನ ಬಿಎಸ್ಎನ್ಎಲ್ ಕಚೇರಿಯಲ್ಲಿ ಟೆಲಿಫೋನ್ ಟೆಕ್ನಿಶಿಯನ್ ಕಾರ್ಯನಿರ್ವಹಿಸುತ್ತಿದ್ದ ಬದಿಯಡ್ಕ ನಿವಾಸಿ ಕೀರ್ತನ್ ಕುಮಾರ್ (39) ಅನಾರೋಗ್ಯದಿಂದ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾದರು. ಅವರು ಅವಿವಾಹಿತರಾಗಿದ್ದರು. 12 ವರ್ಷಕ್ಕಿಂತಲೂ ಹೆಚ್ಚು ಮುಲ್ಕಿ ಬಿಎಸ್ಎನ್ಎಲ್ ಕಚೇರಿಯಲ್ಲಿ ಟೆಕ್ನಿಶಿಯನ್ ಆಗಿ ಸೇವೆ ಸಲ್ಲಿಸಿ ಗ್ರಾಹಕರ ದೂರುಗಳಿಗೆ ಸ್ಪಂದನೆ ನೀಡುತ್ತಾ ಜನಾನುರಾಗಿಯಾಗಿದ್ದರು. ಅವರ ನಿಧನಕ್ಕೆ ಮುಲ್ಕಿ ನಗರ ಪಂಚಾಯತ್ ಮಾಜೀ ಸದಸ್ಯರಾದ ಪುತ್ತುಬಾವ, ಉಮೇಶ್ ಮಾನಂಪಾಡಿ ಮತ್ತಿತರರು ಸಂತಾಪ ವ್ಯಕ್ತಪಡಿಸಿದ್ದಾರೆ.

ದಿನಕರ ಕರ್ಕೇರ



ಮುಲ್ಕಿ: ಕೊಳಚಿಕಂಬಳ ನಿವಾಸಿ, ನಿವೃತ್ತ ಶಿಕ್ಷಕ ದಿನಕರ್ ಕರ್ಕೇರ (85) ಅಲ್ಪ ಕಾಲದ ಅಸೌಖ್ಯದಿಂದ ಶನಿವಾರ ನಿಧನ ಹೊಂದಿದ್ದಾರೆ. ಅವರು ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿದ್ದು, ನಿವೃತ್ತಿಯ ಬಳಿಕ ಕೃಷಿ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಮೃತರು ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

ವಿಶ್ವನಾಥ ಎ.

ಕಾಸರಗೋಡು: ಕರಂದಕ್ಕಾಡು ಉಮಾ ನರ್ಸಿಂಗ್ ಹೋಮ್ ರಸ್ತೆ ಬಳಿಯ ವಿವೇಕ್ ವಿಹಾರದ ನಿವಾಸಿ, ನಿವೃತ್ತ ಸೇಲ್ಸ್ ಟ್ಯಾಕ್ಸ್ ಅಧಿಕಾರಿ ವಿಶ್ವನಾಥ ಎ. (73) ನಿಧನ ಹೊಂದಿದರು. ಅವರು ಈ ಹಿಂದೆ ಕನ್ನಿಹಿತ್ತಿಲು ಶ್ರೀ ಮಲರಾಯ ಧೂಮಾವತಿ ದೈವಸ್ಥಾನದ ಅಧ್ಯಕ್ಷರಾಗಿದ್ದರು. ಮೃತರು ಪತ್ನಿ ವೇದಾವತಿ, ಮಕ್ಕಳಾದ ವಿವೇಕ್, ವಿಜೇತ ಅವರನ್ನು ಅಗಲಿದ್ದಾರೆ.

ರಾಘವ

ಬದಿಯಡ್ಕ: ನೀರ್ಚಾಲು ಸಮೀಪದ ಬೇಳ ನಿವಾಸಿ ರಾಘವ (58) ನಿಧನ ಹೊಂದಿದರು. ಎದೆನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಅವರನ್ನು ಕುಂಬಳೆಯ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಜೀವ ರಕ್ಷಿಸಲು ಸಾಧ್ಯವಾಗಲಿಲ್ಲ. ಮೃತರು ಪತ್ನಿ ಸುಜಾತ, ಮಕ್ಕಳಾದ ಹರೀಶ್, ರೋಹಿತ್, ಚೈತ್ರಾ ಅವರನ್ನು ಅಗಲಿದ್ದಾರೆ.

ಪೊನ್ನಂಪೇಟೆಯಲ್ಲಿ ವಿಶ್ವ ಜೇನುನೊಣ ದಿನಾಚರಣೆ | ಜೇನು ಕೃಷಿಕರಿಗೆ ಸನ್ಮಾನ

ಜೇನು ಕೃಷಿಯಿಂದ ಹೆಚ್ಚುವರಿ ಆದಾಯ



ಮಡಿಕೇರಿ: ಜೇನು ಕೃಷಿ ರೈತರಿಗೆ ಹೆಚ್ಚುವರಿ ಆದಾಯದ ಮೂಲವಾಗಿದ್ದು, ಅದನ್ನು ಇನ್ನಷ್ಟು ಉತ್ತೇಜಿಸುವ ಅಗತ್ಯವಿದೆ ಎಂದು ಕರ್ನಾಟಕ ಸರ್ಕಾರದ ಕೃಷಿ ಸಚಿವರ ವಿಶೇಷ ಕರ್ತವ್ಯಾಧಿಕಾರಿ ಎ. ಬಿ. ಪಾಟೀಲ್ ಅಭಿಪ್ರಾಯಪಟ್ಟರು.

ಮಂಡ್ಯ ಕೃಷಿ ವಿಶ್ವವಿದ್ಯಾಲಯದ ಮಡಿಕೇರಿ ವಿಸ್ತರಣಾ ಶಿಕ್ಷಣ ಘಟಕ, ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯ, ರೇನ್ ಫಾರೆಸ್ಟ್ ಅಲೈನ್ಸ್ ಹಾಗೂ ಬೈಫ್ ಸಬಲ ಯೋಜನೆಗಳ ಸಂಯುಕ್ತ ಆಶ್ರಯದಲ್ಲಿ ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ವಿಶ್ವ ಜೇನುನೊಣ ದಿನಾಚರಣೆ ಕಾರ್ಯಕ್ರಮವನ್ನು ಜೇನು ತುಂಬಿದ ಎರಿಯನ್ನು ಕತ್ತರಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿ ಮತ್ತು ಪರಿಸರ ವ್ಯವಸ್ಥೆಯಲ್ಲಿ ಜೇನುನೊಣಗಳು ಅತ್ಯಂತ ಪ್ರಮುಖ ಪಾತ್ರವಹಿಸುತ್ತವೆ ಎಂದು ಹೇಳಿದ ಅವರು, ಕೆಲಸದ ಜೇನುನೊಣಗಳ ಜೀವಿತಾವಧಿ ಸಾಮಾನ್ಯವಾಗಿ 40–45 ದಿನಗಳಷ್ಟಿದ್ದು, ಅವು ತಮ್ಮ ಜೀವಿತಾವಧಿಯಲ್ಲಿ ಸುಮಾರು ಒಂದೂವರೆ ಲಕ್ಷ ಹೂಗಳ ಪರಾಗಸ್ಪರ್ಶ ಕಾರ್ಯ ನಿರ್ವಹಿಸುತ್ತವೆ ಎಂದು ಮಾಹಿತಿ ನೀಡಿದರು.

ರಾಜ್ಯದ ಕರಾವಳಿ, ಮಲೆನಾಡು ಹಾಗೂ ಪಶ್ಚಿಮ ಘಟ್ಟ ಪ್ರದೇಶಗಳು ಜೇನು ಉತ್ಪಾದನೆಯಲ್ಲಿ ಪ್ರಮುಖವಾಗಿದ್ದು, ವಲಸೆ ಆಧಾರಿತ ಜೇನು ಕೃಷಿಯ ಮೂಲಕ ವಿಜಯಪುರ, ಬಾಗಲಕೋಟೆ, ಬೀದರ್ ಹಾಗೂ ಕಲಬುರಗಿ ಜಿಲ್ಲೆಗಳಲ್ಲಿಯೂ ಉತ್ಪಾದನೆ ನಡೆಯುತ್ತಿದೆ ಎಂದು ಅವರು ತಿಳಿಸಿದರು.

ಜೇನುತುಪ್ಪದ ಗುಣಮಟ್ಟ ನಿರ್ಧಾರದಲ್ಲಿ ತೇವಾಂಶದ ಪ್ರಮಾಣ, ರೆಡ್ಯೂಸಿಂಗ್ ಶುಗರ್, ಫ್ರುಕ್ಟೋಸ್–ಗ್ಲುಕೋಸ್ ಅನುಪಾತ ಸೇರಿದಂತೆ ಹಲವು ಮಾನದಂಡಗಳು ಮುಖ್ಯವಾಗಿದೆ. ಗುಣಮಟ್ಟದ ಉತ್ಪನ್ನಗಳಿಗೆ ಮಾತ್ರ ಮಾರುಕಟ್ಟೆಯಲ್ಲಿ ಉತ್ತಮ ಸ್ಥಾನ ಸಿಗುತ್ತದೆ ಎಂದು ನುಡಿದರು.

ಸ್ಥಳೀಯ ಜೇನು ಉತ್ಪನ್ನಗಳನ್ನು ಜಾಗತಿಕ ಮಾರುಕಟ್ಟೆಗೆ ಪರಿಚಯಿಸಲು ಬ್ರ್ಯಾಂಡಿಂಗ್, ಗುಣಮಟ್ಟ ಪ್ರಮಾಣೀಕರಣ ಹಾಗೂ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಅಗತ್ಯ ಎಂದು ಅಭಿಪ್ರಾಯಪಟ್ಟ ಅವರು, ಜೇನು ಉತ್ಪಾದಕರ ನೋಂದಣಿ ವ್ಯವಸ್ಥೆಯನ್ನು ಮತ್ತಷ್ಟು ಸುಲಭಗೊಳಿಸಬೇಕಿದೆ ಎಂದರು.

ಸಣ್ಣ ರೈತರು ಹಾಗೂ ಬುಡಕಟ್ಟು ಸಮುದಾಯದವರಿಗೆ ನೋಂದಣಿ ಪ್ರಕ್ರಿಯೆ ಸವಾಲಾಗಿರುವುದರಿಂದ ಸರ್ಕಾರದಿಂದ ಹೆಚ್ಚಿನ ನೆರವು ಮತ್ತು ಪರೀಕ್ಷಾ ಶುಲ್ಕದಲ್ಲಿ ಸೌಲಭ್ಯ ಕಲ್ಪಿಸಬೇಕು ಎಂದು ಎ.ಬಿ.ಪಾಟೀಲ್ ಹೇಳಿದರು.

ಜೇನು ಕೃಷಿಯ ಮೂಲಕ ಕೇವಲ ಜೇನುತುಪ್ಪವಷ್ಟೇ ಅಲ್ಲದೆ ರಾಯಲ್ ಜೆಲ್ಲಿ, ವ್ಯಾಕ್ಸ್, ವೆನಮ್ ಎಕ್ಸ್ಟ್ರಾಕ್ಟ್ ಸೇರಿದಂತೆ ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆಯಿಂದ ರೈತರು ಹೆಚ್ಚಿನ ಆದಾಯ ಗಳಿಸಬಹುದು ಎಂದು ನುಡಿದರು.

ಡಿಜಿಟಲ್ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳ ಬಳಕೆಯಿಂದ ಉತ್ಪನ್ನಗಳ ಪ್ರಚಾರ ನಡೆಸಿ ವಿದೇಶಿ ಮಾರುಕಟ್ಟೆಗಳಿಗೂ ತಲುಪಬಹುದು ಎಂದು ತಿಳಿಸಿದರು. ಹೊಸಬರಿಗೆ ಅಲ್ಪಾವಧಿ ತರಬೇತಿ ಸಾಕಾಗುವುದಿಲ್ಲ; ಕನಿಷ್ಠ 8 ರಿಂದ 15 ದಿನಗಳ ಪ್ರಾಯೋಗಿಕ ತರಬೇತಿ ನೀಡುವುದು ಅಗತ್ಯ ಎಂದು ಹೇಳಿದರು.

> **ಕೊಡಗು ಜಿಲ್ಲೆಯಲ್ಲಿ ಹಲವು ಯೋಜನೆಗಳ ಮೂಲಕ ಜೇನು ಕೃಷಿಗೆ ಉತ್ತೇಜನ ನೀಡಲಾಗುತ್ತಿದೆ. ಆರಂಭದಲ್ಲಿ ಒಂದರಿಂದ ಮೂರು ಜೇನು ಪೆಟ್ಟಿಗೆಗಳನ್ನು ವಿತರಿಸಲಾಗಿದ್ದು, ಇಂದು ಹಲವಾರು ರೈತರು ತಮ್ಮ ಸಾಕಾಣಿಕೆಯನ್ನು 20 ರಿಂದ 40ಕ್ಕೂ ಹೆಚ್ಚು ಪೆಟ್ಟಿಗೆಗಳಿಗೆ ವಿಸ್ತರಿಸಿದ್ದಾರೆ ಎಂದು ಹೇಳಿದರು. ಜೇನುತುಪ್ಪಕ್ಕೆ ಮಾರುಕಟ್ಟೆಯಲ್ಲಿ ರೂ.800 ರೂ.1000ರವರೆಗೆ ಬೆಲೆ ದೊರೆಯುತ್ತಿದೆ.**
>
> ■ ಗಂಗಾ ಅಂಕದ್, ಬೈಫ್ ಕೊಡಗು ಜಿಲ್ಲಾ ಉಸ್ತುವಾರಿ

ಮಂಡ್ಯ ಕೃಷಿ ವಿಶ್ವವಿದ್ಯಾಲಯದ ಸಹ ಸಂಶೋಧನಾ ನಿರ್ದೇಶಕ ಡಾ. ಬಸವರಾಜು ಮಾತನಾಡಿ, ಜೇನುಹುಳುಗಳು ಆಹಾರ ಉತ್ಪಾದನೆ ಮತ್ತು ಜೀವ ವೈವಿಧ್ಯ ಸಂರಕ್ಷಣೆಯಲ್ಲಿಯೂ ಮಹತ್ವದ ಪಾತ್ರವಹಿಸುತ್ತವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯದ ಡೀನ್ ಡಾ. ಜಿ. ಎಂ. ದೇವಗಿರಿ ಮಾತನಾಡಿ, ಕಳೆದ ಹಲವು ವರ್ಷಗಳಿಂದ ಜೇನು ಕೃಷಿಗೆ ಸಂಬಂಧಿಸಿದ ತರಬೇತಿ ಮತ್ತು ಸಂಶೋಧನಾ ಕಾರ್ಯಗಳು ರೈತರಲ್ಲಿ ಉತ್ತಮ ಸ್ಪಂದನೆ ಮೂಡಿಸಿವೆ ಎಂದು ತಿಳಿಸಿದರು. ನೆಸ್ಲೆ, ರೇನ್ ಫಾರೆಸ್ಟ್ ಅಲೈನ್ಸ್ ಹಾಗೂ ಬೈಫ್ ಸಹಯೋಗದಲ್ಲಿ ಸುಮಾರು 3000 ಜೇನು ಪೆಟ್ಟಿಗೆಗಳನ್ನು ವಿತರಿಸಲಾಗಿದ್ದು, ಕೆಲ ರೈತರು ಒಂದು ಪೆಟ್ಟಿಗೆಯಿಂದ ಆರಂಭಿಸಿ 50 ರಿಂದ 75 ಪೆಟ್ಟಿಗೆಗಳವರೆಗೆ ವಿಸ್ತರಿಸಿರುವುದು ಗಮನಾರ್ಹ ಸಾಧನೆ ಎಂದು ಹೇಳಿದರು.

ಜೇನು ಕೃಷಿ ಅಭಿವೃದ್ಧಿಗೆ 10 ಲಕ್ಷ ರೂ. ಆವರ್ತಕ ನಿಧಿ ನೀಡಲಾಗಿದ್ದು, ರಾಷ್ಟ್ರೀಯ ಕೃಷಿ ಅಭಿವೃದ್ಧಿ ಯೋಜನೆಯಡಿ 1 ಕೋಟಿ ರೂ. ಮೌಲ್ಯದ ಯೋಜನೆಗೆ ಅನುಮೋದನೆ ದೊರೆತಿದೆ. ಭವಿಷ್ಯದಲ್ಲಿ ಜೇನು ಸಂಸ್ಕರಣಾ ಘಟಕ, ಗುಣಮಟ್ಟ ಪರೀಕ್ಷಾ ಪ್ರಯೋಗಾಲಯ ಹಾಗೂ ಮೌಲ್ಯವರ್ಧನೆ ಕೇಂದ್ರ ಸ್ಥಾಪಿಸುವ ಯೋಜನೆ ಇರುವುದಾಗಿ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಜೇನು ಕೃಷಿಯಲ್ಲಿ ಸಾಧನೆ ಮಾಡುತ್ತಿರುವ ಕೊಡಗಿನ ಪ್ರಗತಿಪರ ಕೃಷಿಕರಾದ ಮಾಯಮುಡಿ ಗ್ರಾಮದ ಮನೋಜ್ ಕುಮಾರ್, ಬೇಟೋಳಿ ಗ್ರಾಮದ ಶೈಲಜ್ ಕುಮಾರ್ ಹಾಗೂ ಕುಮಟೂರು ಗ್ರಾಮದ ಸೂರಜ್ ಪಿ.ಎಸ್. ಅವರನ್ನು ಸನ್ಮಾನಿಸಲಾಯಿತು. ಜೇನು ಪರಿಶುದ್ಧತೆ, ಜೇನು ಸಾಕಾಣಿಕೆ ಪ್ರಾತ್ಯಕ್ಷಿಕೆ, ಜೇನು ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ, ವಿವಿಧ ಜೇನು ಪ್ರಭೇದಗಳ ಮಾಹಿತಿ ಮತ್ತು ಸವಿಯುವ ವ್ಯವಸ್ಥೆ ಕಲ್ಪಿಸಲಾಗಿತ್ತು. ಮಡಿಕೇರಿ ವಿಸ್ತರಣಾ ಶಿಕ್ಷಣ ಘಟಕದ ಮುಖ್ಯಸ್ಥ ಡಾ. ಆರ್. ಎನ್. ಕೆಂಚರೆಡ್ಡಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪುತ್ತಿಗೆ ಶ್ರೀಸುಗುಣೇಂದ್ರ ತೀರ್ಥ ಸ್ವಾಮೀಜಿ

ಭಗವದ್ಗೀತೆ ಮಾರ್ಗದರ್ಶಕ



ಮಂಗಳೂರು: ಭಗವದ್ಗೀತೆಯಲ್ಲಿ ಸಾರ್ವಕಾಲಿಕ ಸತ್ಯವಾದ ಸಂದೇಶಗಳಿವೆ. ಅದನ್ನು ವಿಶ್ವಕ್ಕೆ ಪಸರಿಸಬೇಕು, ವಿಶ್ವಕ್ಕೆ ಸಂದೇಶ ತಿಳಿಸಬೇಕು ಎನ್ನುವ ಉದ್ದೇಶದಿಂದ ಪರ್ಯಾಯದ ಅವಧಿಯಲ್ಲಿ ಕೋಟಿ ಗೀತ ಲೇಖನ ಯಜ್ಞವನ್ನು ಆರಂಭಿಸಲಾಯಿತು. ಮುಂದಿನ ಪರ್ಯಾಯದವರೆಗೂ ಇದು ಮುಂದುವರಿಯಲಿದೆ ಎಂದು ಉಡುಪಿ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿ ತಿಳಿಸಿದರು.

ಕಲ್ಕೂರ ಪ್ರತಿಷ್ಠಾನ ಮಂಗಳೂರು ವತಿಯಿಂದ ಕದ್ರಿಕಂಬಳದ ಮಲ್ಲಿಕಾ ಬಡಾವಣೆಯ ಮಂಜು ಪ್ರಾಸಾದದಲ್ಲಿ ಭಾನುವಾರ ನಡೆದ 'ಗೀತಾ ದಿಗ್ವಿಜಯ' ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿದರು.

ಭಗವದ್ಗೀತೆ ನಮ್ಮ ಜೀವನಕ್ಕೆ ಮಾರ್ಗದರ್ಶಕ ಗ್ರಂಥ. ನಾವು ಯಾವುದಕ್ಕೆ ಪ್ರಾಶಸ್ತ್ಯ ನೀಡಬೇಕು ಎನ್ನುವುದನ್ನು ಅದರಲ್ಲಿ ವಿವರವಾಗಿ ತಿಳಿಸಲಾಗಿದೆ. ಭಗವದ್ಗೀತೆಯ ಸಾರ, ಸಂದೇಶದಂತೆ ನಡೆದರೆ ಜೀವನ ಸಾರ್ಥಕವಾಗಲಿದೆ. ಇಂದು ಎಲ್ಲರೂ ಅಪ್ರಸ್ತುತ ವಿಷಯಗಳ ಬಗ್ಗೆ ವಿಶೇಷ ಕಾಳಜಿ ಹೊಂದಿದ್ದಾರೆ. ಆದರೆ ದೇವರ ವಿಷಯಕ್ಕೆ ವಿಶೇಷ ಪ್ರಾಶಸ್ತ್ಯ ನೀಡಬೇಕು ಎಂದು ಗೀತೆಯ ಮೂಲಕ ಶ್ರೀಕೃಷ್ಣ ತಿಳಿಸಿದ್ದಾನೆ. ಅದೇ ಜೀವನದ ಸಾರ್ಥಕ್ಯಕ್ಕೆ ಕಾರಣವಾಗಲಿದೆ ಎಂದರು.

ಕಲ್ಕೂರ ಪ್ರತಿಷ್ಠಾನದ ಅಧ್ಯಕ್ಷ ಪ್ರದೀಪ ಕುಮಾರ ಕಲ್ಕೂರ ಮಾತನಾಡಿ, ಪುತ್ತಿಗೆ ಸ್ವಾಮೀಜಿಯವರು ವಿಶ್ವಕ್ಕೆ ಗೀತೆಯ ಸಂಭ್ರಮವನ್ನು ಪಸರಿಸುತ್ತಿದ್ದಾರೆ. ಪರ್ಯಾಯದ ಅವಧಿಯಲ್ಲಿ ಉಡುಪಿಯ ಕೃಷ್ಣ ಮಠದಲ್ಲಿ ಎಲ್ಲೆಲ್ಲೂ ಗೀತೆಯ ಸಂಭ್ರಮವಿತ್ತು. ಪ್ರಧಾನ ಮಂತ್ರಿ ಮೋದಿಯವರನ್ನು ಕೂಡಾ ಕೃಷ್ಣ ಉಡುಪಿಗೆ ಕರೆಸಿಕೊಂಡಿದ್ದಾನೆ. ಸನಾತನ ಸಂಸ್ಕೃತಿಯ ಪುನರುತ್ಥಾನದ ಪ್ರಜ್ವಲತೆ ಶ್ರೀಗಳ ಪರ್ಯಾಯದ ಅವಧಿಯಲ್ಲಿ ಆಗಿದೆ ಎಂದರು.

ಭಗವದ್ಗೀತೆಯನ್ನು ಕಲಿಸುತ್ತಿರುವ ಗುರುಗಳಿಗೆ 'ಕಲ್ಕೂರ ಭಗವದ್ಗೀತ ಸಿರಿ' ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ಭಗವದ್ಗೀತೆ ಕಂಠ ಪಾಠ ಮಾಡಿದವರನ್ನು ಗೌರವಿಸಲಾಯಿತು.

ಶಾರದಾ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ. ಎಂ.ಬಿ.ಪುರಾಣಿಕ್, ನಿವೃತ್ತ ಅಪರ ಜಿಲ್ಲಾಧಿಕಾರಿ ಎಸ್.ಎ. ಪ್ರಭಾಕರ ಶರ್ಮ, ವಿದ್ವಾಂಸ ಡಾ. ಎಂ. ಪ್ರಭಾಕರ ಜೋಶಿ, ವಕೀಲರ ಸಂಘದ ಅಧ್ಯಕ್ಷ ಎಚ್.ವಿ. ರಾಘವೇಂದ್ರ, ಪ್ರಮುಖರಾದ ಪ್ರಭಾಕರ ಅಡಿಗ, ಕರ್ನಲ್ ಪ್ರಭಾಕರ್, ಜಿ.ಕೆ. ಭಟ್ ಸೇರಾಜೆ, ಪೊಳಲಿ ನಿತ್ಯಾನಂದ ಕಾರಂತ, ಸುಧಾಕರ ರಾವ್ ಪೇಜಾವರ, ಜನಾರ್ದನ ಹಂದೆ, ಪ್ರಭಾಕರ ರಾವ್ ಪೇಜಾವರ, ಪೂರ್ಣಿಮಾ ರಾವ್ ಪೇಜಾವರ ಉಪಸ್ಥಿತರಿದ್ದರು.

ಖರ್ಜೂರ ವ್ಯಾಪಾರದ ಹೆಸರಲ್ಲಿ ವಂಚನೆ | ಮೂವರ ವಿರುದ್ಧ ಕೇಸ್ ದಾಖಲು

ಅಳಿಯನಿಂದಲೇ ಮಾವನಿಗೆ ರೂ. 15.81 ಲಕ್ಷ ನಾಮ

ಉಡುಪಿ: ವಿದೇಶದಿಂದ ಖರ್ಜೂರ ಹಾಗೂ ಗೃಹೋಪಯೋಗಿ ವಸ್ತುಗಳನ್ನು ಆಮದು ಮಾಡಿಕೊಂಡು ಭಾರತದಲ್ಲಿ ಮಾರಾಟ ಮಾಡಿದರೆ ಹೆಚ್ಚಿನ ಲಾಭ ಗಳಿಸಬಹುದು ಎಂದು ನಂಬಿಸಿ, ಸ್ವಂತ ಮಾವನಿಗೇ 15.81 ಲಕ್ಷ ರೂಪಾಯಿ ಹಣ ಪಡೆದು ವಂಚಿಸಿರುವ ಘಟನೆ ಉಡುಪಿಯಲ್ಲಿ ಬೆಳಕಿಗೆ ಬಂದಿದೆ. ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಅಳಿಯ ಸೇರಿದಂತೆ ಮೂವರ ವಿರುದ್ಧ ಪ್ರಕರಣ ದಾಖಲಾಗಿದೆ.

ಕತಾರ್‌ನಲ್ಲಿ ಕೆಲಸ ಮಾಡುತ್ತಿರುವ ಅಳಿಯ ಮೊಹಮ್ಮದ್ ಶರ್ಫುದ್ದೀನ್, ಕೇರಳದ ಮೊಹಮ್ಮದ್ ಶಾಹಿದ್ ಹಾಗೂ ತಮಿಳುನಾಡಿನ ಶಮೀಮ್ ಬಾನು ವಂಚನೆ ಎಸಗಿದ ಆರೋಪಿಗಳಾಗಿದ್ದಾರೆ. ಉಡುಪಿಯ ಇಫ್ರಾನ್ ಅಜೀಜ್ (50) ವಂಚನೆಗೊಳಗಾದಾತ.

> ▸▸ **ಹಣ ಸಂದಾಯವಾದ ಬಳಿಕ ಆರೋಪಿಗಳು ಯಾವುದೇ ವಸ್ತುಗಳನ್ನು ಕಳುಹಿಸದೆ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ವಂಚಿಸಿದ್ದಾರೆ.**

ಅಳಿಯ ಶರ್ಫುದ್ದೀನ್ ಕತಾರ್‌ನಿಂದಲೇ ಮಾವನಿಗೆ ಫೋನ್ ಮಾಡಿ, ತಾನು ಭಾರತಕ್ಕೆ ಖರ್ಜೂರ ಕಳುಹಿಸುವ ಬಿಸಿನೆಸ್ ಆರಂಭಿಸಿದ್ದು, ಭಾರಿ ಲಾಭ ಗಳಿಸುತ್ತಿರುವುದಾಗಿ ನಂಬಿಸಿದ್ದನು. ಅಲ್ಲದೆ, ತಾನು ಈಗಾಗಲೇ 15 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ಪಾರ್ಟ್‌ನರ್‌ಗಳಿಗೆ ಕಳುಹಿಸಿಕೊಟ್ಟಿದ್ದು, ಅವರಿಗೆ ಹಣ ಪಾವತಿಸಿದರೆ ಎರಡು ದಿನಗಳಲ್ಲಿ ಸಾಮಗ್ರಿ ಉಡುಪಿಗೆ ತಲುಪುತ್ತದೆ ಎಂದು ನಂಬಿಸಿದ್ದನು. ಇದನ್ನು ಸತ್ಯ ಎಂದು ನಂಬಿದ ಇಫ್ರಾನ್ ಅವರು, 2025ರ ಜನವರಿಯಲ್ಲಿ ಆರೋಪಿಗಳ ಬ್ಯಾಂಕ್ ಖಾತೆಗೆ ಒಟ್ಟು 15,81,000 ರೂಪಾಯಿಗಳನ್ನು ವರ್ಗಾವಣೆ ಮಾಡಿದ್ದರು.

ಹಣ ಸಂದಾಯವಾದ ಬಳಿಕ ಆರೋಪಿಗಳು ಯಾವುದೇ ವಸ್ತುಗಳನ್ನು ಕಳುಹಿಸದೆ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ವಂಚಿಸಿದ್ದಾರೆ. ತಮಗೆ ಮೋಸವಾಗಿರುವುದನ್ನು ಅರಿತ ಇಫ್ರಾನ್ ಅಜೀಜ್ ಅವರು ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದು, ಉಡುಪಿ ನಗರ ಠಾಣೆಯಲ್ಲಿ ಅಪರಾಧ ಕ್ರಮಾಂಕ 66/2026 ರಂತೆ ಬಿಎನ್ಎಸ್ ಕಾಯ್ದೆಯಡಿ ಮೊಕದ್ದಮೆ ದಾಖಲಾಗಿದೆ.

ಸವಣೂರು ಕೆ. ಸೀತಾರಾಮ ರೈ–ಕಸ್ತೂರಿಕಲಾ ಎಸ್. ರೈ ದಂಪತಿಗೆ ಗಣ್ಯರಿಂದ ಹಾರೈಕೆ

'ಸೀತಾ–ಕಸ್ತೂರಿ ಕಲ್ಯಾಣ' 50ರ ಸಂಭ್ರಮ



ಪುತ್ತೂರು: ಸವಣೂರಿನ ಶಿಕ್ಷಣ ಕ್ರಾಂತಿಯ ಹರಿಕಾರ, ಸಹಕಾರ ರತ್ನ, ರೊಟೇರಿಯನ್ ಸವಣೂರು ಕೆ. ಸೀತಾರಾಮ ರೈ ಮತ್ತು ಕಸ್ತೂರಿಕಲಾ ಎಸ್. ರೈ ದಂಪತಿಯ ವೈವಾಹಿಕ ಜೀವನದ 50ರ ಸಂಭ್ರಮಾಚರಣೆ 'ಸೀತಾ–ಕಸ್ತೂರಿ ಕಲ್ಯಾಣ' ಕಾರ್ಯಕ್ರಮವು ಸಾವಿರಾರು ಮಂದಿ ಹಿತೈಷಿಗಳು, ಗಣ್ಯರ ಸಮ್ಮುಖದಲ್ಲಿ ಅದ್ದೂರಿಯಾಗಿ ನಡೆಯಿತು.


ಸಂಭ್ರಮದ ಹಿನ್ನೆಲೆಯಲ್ಲಿ ತಮ್ಮ ಆಡಳಿತದ ವಿವಿಧ ಸಂಸ್ಥೆಗಳ ಸುಮಾರು 210 ಸಿಬಂದಿಗೆ ಸೀತಾರಾಮ ರೈ ಅವರು ನೀಡಿದ ಹೊಸ ವಸ್ತ್ರದಲ್ಲಿ ಪಾಲ್ಗೊಂಡು ಸಂಭ್ರಮಿಸಿದರು. ವಿವಿಧ ಸಂಘ ಸಂಸ್ಥೆಗಳು, ಸಿಬಂದಿ ವರ್ಗದವರು ಸೀತಾರಾಮ ರೈ ದಂಪತಿಯನ್ನು ಗೌರವಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ಆದರ್ಶ ವಿವಿಧೋದ್ದೇಶ ಸಹಕಾರ ಸಂಘ, ವಿದ್ಯಾರಶ್ಮಿ ವಿದ್ಯಾಲಯಗಳ ವತಿಯಿಂದ ದಂಪತಿಯನ್ನು ವಿಶೇಷವಾಗಿ ಸನ್ಮಾನಿಸಲಾಯಿತು.

> **ವಿಶೇಷ ಗಮನ ಸೆಳೆತ**
>
> **ವಿವಿಧ ಫಲವಸ್ತುಗಳನ್ನು ಹೊತ್ತ ಪಲ್ಲಕ್ಕಿಯನ್ನು ಚೆಂಡೆ, ಪಟಾಕಿ ಸದ್ದಿನೊಂದಿಗೆ ಮೆರವಣಿಗೆಯಲ್ಲಿ ತಂದು ಸೀತಾರಾಮ ರೈ–ಕಸ್ತೂರಿಕಲಾ ರೈ ದಂಪತಿಯನ್ನು ವೇದಿಕೆಯಲ್ಲಿ ಗೌರವಿಸಿದ್ದು, ವಿಶೇಷವಾಗಿ ಗಮನಸೆಳೆಯಿತು.**

ಶ್ರೀ ಸುಬ್ರಹ್ಮಣ್ಯ ಮಠದ ಮಠಾಧೀಶರಾದ ವಿದ್ಯಾ ಪ್ರಸನ್ನತೀರ್ಥ ಸ್ವಾಮೀಜಿ, ಒಡಿಯೂರು ಶ್ರೀ ಗುರುದೇವ ದತ್ತ ಸಂಸ್ಥಾನದ ಗುರುದೇವಾನಂದ ಸ್ವಾಮೀಜಿ, ಮಂಗಳೂರಿನ ಲಕ್ಷ್ಮೀ ಮೆಮೋರಿಯಲ್ ಎಜುಕೇಶನ್ ಟ್ರಸ್ಟ್‌ನ ಸಂಸ್ಥಾಪಕ ಡಾ. ಎ.ಜೆ. ಶೆಟ್ಟಿ, ಮೂಡಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ, ದ.ಕ. ಸಂಸದ ಕ್ಯಾ. ಬ್ರಿಜೇಶ್ ಚೌಟ, ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ, ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ, ಮಾಜಿ ಶಾಸಕ ಎಸ್.ಅಂಗಾರ, ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್‌ನ ಸಂಸ್ಥಾಪಕ ಪಟ್ಲ ಸತೀಶ್ ಶೆಟ್ಟಿ ಸೇರಿದಂತೆ ವಿವಿಧ ಕ್ಷೇತ್ರಗಳ ಗಣ್ಯ ಅತಿಥಿಗಳು ಭಾಗವಹಿಸಿ ಶುಭಹಾರೈಸಿದರು.

ಸೀತಾರಾಮ ರೈ ಅವರ ಪುತ್ರಿ ರಶ್ಮಿ ಎ. ಶೆಟ್ಟಿ ಮತ್ತು ಅಳಿಯ ಅಶ್ವಿನ್ ಎಲ್. ಶೆಟ್ಟಿ ಸವಣೂರು, ಸೊಸೆ ಪಲ್ಲವಿ ಎಂ. ರೈ ಮತ್ತು ಪುತ್ರ ಮಹೇಶ್ ರೈ ಸವಣೂರು, ಸೊಸೆ ಅಶ್ವಿತಾ ಆರ್. ರೈ ಮತ್ತು ಪುತ್ರ ಡಾ. ರಾಜೇಶ್ ರೈ ಸವಣೂರು ಮೊದಲಾದವರು ಅತಿಥಿಗಳನ್ನು ಸ್ವಾಗತಿಸಿದರು.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ (Q)	14	9	5	0	18	+0.783
ಗುಜರಾತ್ (Q)	14	9	5	0	18	+0.695
ಹೈದರಾಬಾದ್(Q)	14	9	5	0	18	+0.524
ರಾಜಸ್ಥಾನ (Q)	14	8	6	0	16	+0.189
ಪಂಜಾಬ್	14	6	6	1	15	+0.309
ಕೆಕೆಆರ್	13	6	6	1	13	+0.011
ಚೆನ್ನೈ	14	6	7	0	12	+0.016
ದಿಲ್ಲಿ	14	6	7	0	12	-0.871
ಮುಂಬೈ	14	4	10	0	8	-0.584
ಲಖನೌ	14	4	10	0	8	-0.740

ಮುಂಬೈ ವಿರುದ್ಧದ ಪಂದ್ಯದಲ್ಲಿ ರಾಜಸ್ಥಾನಕ್ಕೆ ಗೆಲುವು | 16 ಅಂಕಗಳೊಂದಿಗೆ ರಾಯಲ್ ಎಂಟ್ರಿ

ಪಂಜಾಬ್ ಮನೆಗೆ ಆರ್‌ಆರ್ ಪ್ಲೇಆಫ್‌ಗೆ

ಮುಂಬೈ: ಹತ್ತಾರು ಆಟಗಾರರ ಪರಿಶ್ರಮ, ಸಾವಿರಾರು ಅಭಿಮಾನಿಗಳ ಕುತೂಹಲ ಮತ್ತು ನೂರಾರು ತಿರುವುಗಳ ನಂತರ ಪ್ಲೇಆಫ್‌ಗೇರುವ 4 ತಂಡಗಳು ಖಚಿತವಾಗಿವೆ. ಮುಂಬೈ ತಂಡದ ವಿರುದ್ಧ 30 ರನ್‌ಗಳಿಂದ ಗೆಲುವು ಸಾಧಿಸಿದ ನಂತರ 16 ಅಂಕ ಗಳಿಸಿರುವ ರಾಯಲ್ಸ್, ನಾಲ್ಕನೇ ಸ್ಥಾನ ಪಡೆದುಕೊಂಡಿದ್ದು, ಪ್ಲೇಆಫ್‌ಗೇರಿತು. ಈ ಪಂದ್ಯದ ನಂತರ ಪಂಜಾಬ್ ಮತ್ತು ಕೆಕೆಆರ್ ತಂಡಗಳು ಅಧಿಕೃತವಾಗಿ ಹೊರಬಿದ್ದವು.

ಭಾನುವಾರದ ಮಹತ್ವದ ಪಂದ್ಯದಲ್ಲಿ ತಂಡದ ಸಾಂಘಿಕ ಬೌಲಿಂಗ್ ಮತ್ತು ಸಾಂಘಿಕ ಬ್ಯಾಟಿಂಗ್‌ನೊಂದಿಗೆ ಮಿಂಚಿದ ರಾಜಸ್ಥಾನ ಮುಂಬೈ ಮೇಲೆ ಪ್ರಾಬಲ್ಯ ಸಾಧಿಸಿದೆ. ಪಂದ್ಯದಲ್ಲಿ ಬ್ಯಾಟಿಂಗ್‌ಗಿಳಿದ ರಿಯಾನ್ ಪಡೆ ಧ್ರುವ್ ಜುರೇಲ್ 38, ದಾಸುನ್ ಶಣಕ 29 ಮತ್ತು ಜೋಫ್ರಾ ಆರ್ಚರ್ 32 ರನ್‌ಗಳ ಬ್ಯಾಟಿಂಗ್‌ನೊಂದಿಗೆ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 205 ರನ್ ಗಳಿಸಿತು. ಮುಂಬೈ ಪರ ದೀಪಕ್, ಶಾರ್ದೂಲ್ ತಲಾ 2 ವಿಕೆಟ್ ಪಡೆದುಕೊಂಡರೆ, ಜ್ಯಾಕ್ಸ್, ಘಜನ್‌ಫರ್ ಮತ್ತು ಬಾಷ್ ತಲಾ ಒಂದು ವಿಕೆಟ್ ಕಿತ್ತರು.

ಗುರಿ ಬೆನ್ನತ್ತಿದ ಮುಂಬೈ 9 ವಿಕೆಟ್ ನಷ್ಟಕ್ಕೆ 175 ರನ್ ಮಾತ್ರ ಗಳಿಸಲು ಶಕ್ತವಾಯಿತು. ಸೂರ್ಯಕುಮಾರ್ ಯಾದವ್ 60 ರನ್, ವಿಲ್ ಜ್ಯಾಕ್ಸ್ 33 ಮತ್ತು ಹಾರ್ದಿಕ್ ಪಾಂಡ್ಯ 34 ರನ್ ಗಳಿಸಿದರು. ರಾಜಸ್ಥಾನ ಪರ ಜೋಫ್ರಾ ಆರ್ಚರ್ 17/3, ನಾಂದ್ರೆ ಬರ್ಜರ್ 43/2, ಬ್ರಿಜೇಶ್ 26/2 ಮತ್ತು ಯಶ್ ರಾಜ್ 44/2 ವಿಕೆಟ್ ಪಡೆದುಕೊಂಡರು.

ಬ್ಯಾಟಿಂಗ್ ವೇಳೆ 32 ರನ್‌ಗಳಿಸಿ ಸ್ಕೋರ್ ಹಿಗ್ಗಿಸಿರುವ ಜೋಫ್ರಾ ಆರ್ಚರ್, ಬೌಲಿಂಗ್ ವೇಳೆ 3 ವಿಕೆಟ್ ಕಿತ್ತಿ ಗೆಲುವಿನ ರೂವಾರಿ ಅನಿಸಿಕೊಂಡರು. ಸೂರ್ಯಕುಮಾರ್ ಯಾದವ್ 60 ರನ್ ಗಳಿಸಿ ಪಂದ್ಯದಲ್ಲಿ ಅತಿ ಹೆಚ್ಚು ರನ್ ಗಳಿಸಿದ ಆಟಗಾರ ಅನಿಸಿಕೊಂಡರು.

ಪಂದ್ಯದಲ್ಲಿ ಏನಾಯ್ತು?: ಬ್ಯಾಟಿಂಗ್‌ಗಿಳಿದ ರಾಜಸ್ಥಾನಕ್ಕೆ ದೊಡ್ಡ ಆಘಾತದಲ್ಲಿ ವೈಭವ್ ಸೂರ್ಯವಂಶಿ 4 ರನ್‌ಗೆ ವಿಕೆಟ್ ಒಪ್ಪಿಸಿದರು. ಜೈಸ್ವಾಲ್, ಧ್ರುವ್ ಜುರೇಲ್ ಕೊಂಚ ಹೊತ್ತು ಉತ್ತಮ ಬ್ಯಾಟಿಂಗ್ ಮಾಡಿದರು. ಆದಾಗ್ಯೂ ಜೈಸ್ವಾಲ್ 27ಕ್ಕೆ ಔಟಾದರು. ಮಧ್ಯಮ ಕ್ರಮಾಂಕದಲ್ಲಿ ರಿಯಾನ್ 14 ರನ್ ಮಾತ್ರಕ್ಕೆ ವಿಕೆಟ್ ಒಪ್ಪಿಸಿದ ನಂತರ ಪವರ್ ಪ್ಲೇನಲ್ಲಿ ಆರ್‌ಆರ್ 53 ರನ್‌ಗೆ 3 ವಿಕೆಟ್ ಕಳೆದುಕೊಂಡಿತು. ಮಧ್ಯಮ ಓವರ್‌ಗಳಲ್ಲಿ ದಾಸುನ್ ಶಣಕ ಆಸರೆಯಾದರು. ಜುರೇಲ್ 38 ರನ್‌ಗೆ ವಿಕೆಟ್ ಒಪ್ಪಿಸಿದರು. ಫೆರೇರಾ 18 ರನ್‌ಗೆ ವಿಕೆಟ್ ಒಪ್ಪಿಸಿದ ನಂತರ ತಂಡ ಒತ್ತಡಕ್ಕೆ ಸಿಲುಕಿಕೊಂಡಿತು. ಶಣಕ ಆಟವೂ 29ರನ್‌ಗೆ ವಿಕೆಟ್ ಒಪ್ಪಿಸಿದರು. ಮಧ್ಯಮ ಓವರ್‌ಗಳಲ್ಲಿ ರಾಜಸ್ಥಾನ 93/3 ಗಳಿಸಿತು.

ಡೆತ್ ಓವರ್‌ನಲ್ಲಿ ಆರ್ಚರ್ ಬ್ಯಾಟಿಂಗ್‌ಗಿಳಿದವರೆ ಸ್ಫೋಟಕ ಹೊಡೆತಗಳೊಂದಿಗೆ ಅಬ್ಬರಿಸಿದರು. ಕೊನೆಯ ಓವರ್‌ಗಳಲ್ಲಿ ಜಡೇಜಾ ಕೂಡ ಮಿಂಚಿದರು. ಆರ್ಚರ್ 32 ರನ್ ಪಂದ್ಯದ ತಿರುವು ಬದಲಿಸಿದರೆ, ಜಡೇಜಾ 19, ನಾಂದ್ರೆ ಬರ್ಜರ್ 10 ರನ್‌ಗಳಿಸಿ ತಂಡದ ಸ್ಕೋರ್ ಅನ್ನು 200ರ ಗಡಿ ದಾಟಿಸಿದರು.

ಆರ್ಚರ್ ಅಬ್ಬರ: ಗುರಿ ಬೆನ್ನತ್ತುವಾಗ ಮುಂಬೈ ಭಾರೀ ಕುಸಿತ ಕಂಡಿತು. ಶರ್ಮ ಶೂನ್ಯಕ್ಕೆ, ನಮನ್ 6 ರನ್‌ಗೆ ಮತ್ತು ರಯಾನ್ 12 ರನ್‌ಗೆ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ಸೂರ್ಯಕುಮಾರ್ ಯಾದವ್ ಕೊಂಚ ಹೊತ್ತು ಆಸರೆಯಾದರು. ಅವರಿಗೆ ಹಾರ್ದಿಕ್ ಮತ್ತು ವಿಲ್ ಜ್ಯಾಕ್ಸ್ ಸಾಥ್ ಕೊಟ್ಟರು. ಆದರೆ ಮುಂಬೈ ಪಡೆಯ ಬೆವರಿಳಿಸಿದ ಜೋಫ್ರಾ ಆರ್ಚರ್ 3 ಪ್ರಮುಖ ವಿಕೆಟ್‌ಗಳನ್ನು ಪಡೆದರು. ಬ್ರಿಜೇಶ್ ಶರ್ಮ ಕೂಡ ಉತ್ತಮ ಬೌಲಿಂಗ್ ಮಾಡಿ 2 ವಿಕೆಟ್ ಪಡೆದರೆ, ಬರ್ಜರ್ ಹಾಗೂ ಯಶ್ 2 ವಿಕೆಟ್ ಪಡೆದರು. ಸೂರ್ಯ ಹೋರಾಟ 60 ರನ್‌ಗೆ ನಿಂತಿತು. ಪಾಂಡ್ಯ 34, ಜ್ಯಾಕ್ಸ್ 33 ರನ್ ಗಳಿಸಿದರು.



ಸಂಕ್ಷಿಪ್ತ ಸ್ಕೋರ್

- **ರಾಜಸ್ಥಾನ 20 ಓವರ್‌ಗಳಲ್ಲಿ 205/8: ಜುರೇಲ್ 38, ಆರ್ಚರ್ 32; ಶಾರ್ದೂಲ್ 41/2**
- **ಮುಂಬೈ 20 ಓವರ್‌ಗಳಲ್ಲಿ 175/9: ಸೂರ್ಯ 60, ಹಾರ್ದಿಕ್ 34; ಆರ್ಚರ್ 17/3**

ಆರ್‌ಆರ್ ಅರ್ಹ

ಕ್ವಾಲಿಫೈಯರ್ 1ರಲ್ಲಿ ಬೆಂಗಳೂರು ಮತ್ತು ಗುಜರಾತ್ ತಂಡಗಳು ಮುಖಾಮುಖಿಯಾಗಲಿವೆ. ಆದರೆ ಹೈದರಾಬಾದ್ ವಿರುದ್ಧ ಎಲಿಮಿನೇಟರ್‌ನಲ್ಲಿ ಆಡುವವರು ಯಾರು ಎಂಬ ಅಭಿಮಾನಿಗಳ ಪ್ರಶ್ನೆಗೆ ಉತ್ತರ ಸಿಕ್ಕಿದಂತಾಗಿದೆ. ಲೀಗ್ ಹಂತದ ಕೊನೆಯ ಪಂದ್ಯಗಳ ಸಮಯದಲ್ಲಿ ಆ ನಾಲ್ಕನೇ ಸ್ಥಾನಕ್ಕಾಗಿ ಪಂಜಾಬ್, ಆರ್‌ಆರ್, ದಿಲ್ಲಿ, ಕೆಕೆಆರ್ ಮತ್ತು ಚೆನ್ನೈ ತಂಡಗಳು ಪೈಪೋಟಿಯಲ್ಲಿದ್ದವು. ಮೊದಲಿನ ಮೂರು ಸ್ಥಾನಗಳೂ ಈ ಮೊದಲೇ ನಿರ್ಧಾರವಾಗಿದ್ದರೂ, ನಾಲ್ಕನೇ ತಂಡದ ಖಚಿತತೆಗೆ ಕೊನೆ ಲೀಗ್ ಪಂದ್ಯದವರೆಗೂ ಕಾಯಬೇಕಾಯಿತು. ಕೊನೆಯ ವಾರದಲ್ಲಿ ಆರ್‌ಆರ್‌ಗೆ ಮಾತ್ರವೇ 16 ಅಂಕ ಗಳಿಸುವ ಅವಕಾಶ ಸಿಕ್ಕಿತು. ಪಂಜಾಬ್ 15 ಅಂಕ ಗಳಿಸಿದರೆ, ಚೆನ್ನೈ-ದಿಲ್ಲಿ 12 ಅಂಕಗಳೊಂದಿಗೆ ಹೊರನಡೆದವು. ರನ್‌ರೇಟ್ ಆಟಕ್ಕೂ ಮುನ್ನವೇ ರಾಜಸ್ಥಾನ ಅಂಕಗಳಲ್ಲಿ ಮೇಲುಗೈ ಸಾಧಿಸಿದೆ.

ಪ್ಲೇಆಫ್ ಆಡಿಸುವುದು ಹೇಗೆ?

ಮಂಗಳವಾರ ಬೆಂಗಳೂರು-ಗುಜರಾತ್ ನಡುವೆ ಕ್ವಾಲಿಫೈಯರ್ ನಡೆದರೆ, ಬುಧವಾರದಂದು ಹೈದರಾಬಾದ್-ರಾಜಸ್ಥಾನ ನಡುವೆ ಎಲಿಮಿನೇಟರ್ ನಡೆಯುತ್ತದೆ. ಕ್ವಾಲಿಫೈಯರ್ ಗೆಲ್ಲುವ ತಂಡವು ನೇರವಾಗಿ ಫೈನಲ್‌ಗೇರುತ್ತದೆ. ಅಂದರೆ, ಮಂಗಳವಾರ ಫೈನಲ್ ಆಡುವ ಒಂದು ತಂಡ ಖಚಿತವಾಗಲಿದೆ. ಎಲಿಮಿನೇಟರ್‌ನಲ್ಲಿ ಹೈದರಾಬಾದ್ ಮತ್ತು ರಾಜಸ್ಥಾನ ತಂಡಗಳು ಎದುರಾಗುತ್ತವೆ. ಸೋತವರು ಮನೆಗೆ ಹೋದರೆ, ಗೆದ್ದವರು ಎರಡನೇ ಕ್ವಾಲಿಫೈಯರ್‌ನಲ್ಲಿ ಆಡುತ್ತಾರೆ. ಅಲ್ಲಿ ಗೆದ್ದವರು ಕ್ವಾಲಿಫೈಯರ್ ಒಂದರ ವಿಜೇತರೊಂದಿಗೆ ಫೈನಲ್ ಆಡುತ್ತಾರೆ.

ಕಿರುಸುದ್ದಿ

ಪಂಜಾಬ್‌ಗೆ ಭಾರೀ ಜಯ

ಲಖನೌ: ಶ್ರೇಯಸ್ ಅಯ್ಯರ್ ಅವರ ಸ್ಫೋಟಕ ಶತಕದ ನೆರವಿನಿಂದ ಭರ್ಜರಿ ಗೆಲುವು ಸಾಧಿಸಿರುವ ಪಂಜಾಬ್ ಕಿಂಗ್ಸ್ 6 ಸೋಲುಗಳ ಸರವಳಿ ಮುರಿದು ಹಾಕಿತಾದರೂ ಪ್ಲೇಆಫ್ ಗೇರಲಾಗಲಿಲ್ಲ. ಇದು ಐಪಿಎಲ್‌ನ ದ್ವಿತಿಯಾರ್ಧದ ಪಂದ್ಯಗಳಲ್ಲಿ ಪಂಜಾಬ್‌ಗೆ ಮೊದಲ ಗೆಲುವು ಮತ್ತು ಒಟ್ಟು ಏಳನೇ ಗೆಲುವು. ರಾಜಸ್ಥಾನ ಗೆದ್ದ ನಂತರ ಪಂಜಾಬ್ ಪಂದ್ಯಾವಳಿಯನ್ನು ಗೆಲುವಿನೊಂದಿಗೆ ಮುಗಿಸಿದಂತಾಗಿದೆ. ಶನಿವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಲಖನೌ ಸೂಪರ್ ಜೇಂಟ್ಸ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 196 ರನ್ ಗಳಿಸಿತು. ಜೋಶ್ ಇಂಗ್ಲಿಸ್ 72, ಆಯುಷ್ ಬದೋನಿ 43 ಮತ್ತು ಅಬ್ದುಲ್ ಸಮದ್ 37 ರನ್ ಗಳಿಸಿದರು. ಗುರಿ ಬೆನ್ನತ್ತಿದ ಪಂಜಾಬ್ ಕಿಂಗ್ಸ್ 18 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 200 ರನ್ ಗಳಿಸಿ ಪಂದ್ಯ ಗೆದ್ದಿತು. ನಾಯಕ ಶ್ರೇಯಸ್ ಅಯ್ಯರ್ ಅಜೇಯ 101 ರನ್ ಗಳಿಸಿದರು. ಪ್ರಭಸಿಮ್ರನ್ ಸಿಂಗ್ 69 ರನ್ ಗಳಿಸಿದರು. ಶ್ರೇಯಸ್ ಅಯ್ಯರ್ ಅವರಿಗಿದು ಐಪಿಎಲ್‌ನಲ್ಲಿ ಮೊದಲನೇ ಶತಕ. ಚೇಸಿಂಗ್ ವೇಳೆ ಮಿಂಚಿದ ಶ್ರೇಯದ ಜತೆಗೆ ನಾಯಕನಾಟವಾಡಿದ ಸಮಾಧಾನವೂ ಸಿಕ್ಕಿತು. ಪ್ರಭಸಿಮ್ರನ್ ಸಿಂಗ್ ಉತ್ತಮ ಬ್ಯಾಟಿಂಗ್ ಮಾಡಿದರು. ಮೊದಲು ಬ್ಯಾಟಿಂಗ್ ಮಾಡಿದ ಲಖನೌ ಪರ ಜೋಶ್ ಇಂಗ್ಲಿಸ್ ಹೋರಾಟ ಮಾಡಿದರು. ಬೌಲಿಂಗ್‌ನಲ್ಲಿ ಶಮಿ 2 ವಿಕೆಟ್ ಪಡೆದರು. ಲಖನೌ ಜೇಂಟ್ಸ್ ಪರ ಮೊದಲ ಪಂದ್ಯವಾಡಿದ ಅರ್ಜುನ್ ತೆಂಡೂಲ್ಕರ್ ವಿಶೇಷ ಬೌಲಿಂಗ್‌ನೊಂದಿಗೆ ಮಿಂಚಿದರು. ಏಕೈಕ ವಿಕೆಟ್ ಪಡೆದರೂ, ಲಖನೌ ಪರ ಕಡಿಮೆ ರನ್ ಕೊಟ್ಟ ಆಟಗಾರ ಅನಿಸಿಕೊಂಡರು.

ಶ್ರೇಯಸ್ ಶತಕ: ಗುರಿ ಬೆನ್ನತ್ತುವಾಗ ಪಂಜಾಬ್‌ಗೆ ಉತ್ತಮ ಆರಂಭ ಸಿಗಲಿಲ್ಲ. ತಂಡದ ಪ್ರಮುಖ ಬ್ಯಾಟರ್ ಪ್ರಿಯಾಂಶ್ ಆರ್ಯ ಮೊದಲ ಬಾಲ್‌ನಲ್ಲೇ ವಿಕೆಟ್ ಒಪ್ಪಿಸಿದರು. ಆದರೆ ಮತ್ತೊಂದೆಡೆ ಪ್ರಭಸಿಮ್ರನ್ ಉತ್ತಮ ಬ್ಯಾಟಿಂಗ್ ಮಾಡಿದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ಕೊನೊಲಿ ಕೂಡ ಬೇಗನೇ ವಿಕೆಟ್ ಒಪ್ಪಿಸಿದರು. ಬಳಿಕ ಬಂದ ಶ್ರೇಯಸ್ ಅಯ್ಯರ್ ಪಂದ್ಯದುದ್ದಕ್ಕೂ ಮಿಂಚಿನಾಟದೊಂದಿಗೆ ಪಂದ್ಯ ಗೆಲ್ಲಿಸಿದರು. ಪ್ರಭಸಿಮ್ರನ್ 39 ಬಾಲ್‌ಗಳಲ್ಲಿ 7 ಬೌಂಡರಿ, 2 ಸಿಕ್ಸರ್‌ಗಳೊಂದಿಗೆ 69 ರನ್ ಗಳಿಸಿದರೆ, ಶ್ರೇಯಸ್ ಅಯ್ಯರ್ ಕೊನೆಯ ಬಾಲ್‌ವರೆಗೂ ಬ್ಯಾಟಿಂಗ್ ಮಾಡಿದ್ದು, 11 ಬೌಂಡರಿ, 5 ಸಿಕ್ಸರ್‌ಗಳೊಂದಿಗೆ 101★ ರನ್ ಬಾರಿಸಿದರು.

ಪಂದ್ಯದ ವೇಳೆಯೇ ಕ್ರಿಕೆಟಿಗ ಅಕ್ಷಯ್ ಸಾವು

ಬೆಂಗಳೂರು: ಪಂದ್ಯ ಆಡುತ್ತಿದ್ದ ವೇಳೆ ಹೃದಯಾಘಾತದಿಂದ ಕರ್ನಾಟಕದ ಮಾಜಿ ರಣಜಿ ಆಟಗಾರ ಎಸ್.ಎಲ್. ಅಕ್ಷಯ್ ನಿಧನರಾದರು. ಶಿವಮೊಗ್ಗ ಅಕ್ಷಯ್ ಅವರಿಗೆ 39 ವಯಸಾಗಿತ್ತು. ಕರ್ನಾಟಕ ರಣಜಿ ತಂಡದ ಪರ ಆಡಿದ್ದ ಅಕ್ಷಯ್, ತಮ್ಮ ಕರಾರುವಕ್ಕಾದ ಬೌಲಿಂಗ್ ಮೂಲಕ ಗಮನ ಸೆಳೆದಿದ್ದರು. ರಣಜಿ ಮಾತ್ರವಲ್ಲದೇ ಕೆಪಿಎಲ್ ಟೂರ್ನಿಗಳಲ್ಲೂ ಉತ್ತಮ ಪ್ರದರ್ಶನ ನೀಡಿ ಹೆಸರು ಮಾಡಿದ್ದರು. ಕರ್ನಾಟಕ ಪರ ಅವರು 6 ಫಸ್ಟ್ ಕ್ಲಾಸ್, 3 ಲಿಸ್ಟ್ ಎ' ಹಾಗೂ 9 ಟಿ20 ಪಂದ್ಯಗಳನ್ನು ಆಡಿದ್ದರು. ಸಫೀಯರ್ ಕ್ರಿಕೆಟ್ ಕ್ಲಬ್ ಹಾಗೂ ಭಾರತ್ ಕ್ರಿಕೆಟ್ ಕ್ಲಬ್ ನಡುವಿನ ಥರ್ಡ್ ಡಿವಿಷನ್ ಪಂದ್ಯ ನಡೆಯುತ್ತಿತ್ತು. ಸಫೀಯರ್ ತಂಡದ ಪರ ಆಡುತ್ತಿದ್ದ ಅಕ್ಷಯ್, ನಾಲ್ಕು ಓವರ್ ಬೌಲಿಂಗ್ ಮಾಡಿದ್ದರು. ಬಳಿಕ ಸ್ಲಿಪ್‌ನಲ್ಲಿ ಫೀಲ್ಡಿಂಗ್ ಮಾಡುವಾಗ ಸುಸ್ತು ಕಾಣಿಸಿಕೊಂಡ ಹಿನ್ನೆಲೆ ಮೈದಾನದಿಂದ ಹೊರಬಂದು ವಿಶ್ರಾಂತಿ ಪಡೆದಿದ್ದರು. ಬಾಳೆಹಣ್ಣು ಸೇವಿಸಿ ವಿಶ್ರಾಂತಿ ಕೊಠಡಿಗೆ ತೆರಳಿದ್ದ ಅಕ್ಷಯ್, ಕೆಲವೇ ಕ್ಷಣಗಳಲ್ಲಿ ಕುಸಿದು ಬಿದ್ದಿದ್ದಾರೆ. ತಕ್ಷಣ ಸ್ಥಳೀಯ ಆಸ್ಪತ್ರೆಗೆ ಸಾಗಿಸಲಾಯಿತಾದರೂ, ಆಸ್ಪತ್ರೆಗೆ ಹೋಗುವಷ್ಟರಲ್ಲಿ ಅವರು ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ. ಅವರ ಸಾವಿಗೆ ಕೆಎಸ್‌ಸಿಎ ಆಡಳಿತ ಮಂಡಳಿ, ಹಾಲಿ ಮಾಜಿ ಕ್ರಿಕೆಟಿಗರು ಸಂತಾಪ ಸೂಚಿಸಿದ್ದಾರೆ.

ನಾಳೆಯಿಂದ ಆರಂಭ | ಮೂರು ದಿನಗಳವರೆಗೂ ಕೂಟ

ಪ್ಯಾರಾ ಅಥ್ಲೆಟಿಕ್ಸ್‌ಗೆ ಬೆಂಗಳೂರು ಸಿದ್ಧ

ಬೆಂಗಳೂರು: ಅಕ್ಟೋಬರ್‌ನಲ್ಲಿ ನಡೆಯಲಿರುವ ಏಷ್ಯನ್ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ಗಾಗಿ ಭಾರತೀಯ ಅಥ್ಲೀಟ್‌ಗಳ ಆಯ್ಕೆ ಪ್ರಕ್ರಿಯೆಯಾಗಿ, ಈಗಾಗಲೇ ಆಯ್ಕೆಯಾದವರಿಗೆ ಸಿದ್ಧತಾ ಭಾಗವಾಗಿ ಭಾರತೀಯ ಪ್ಯಾರಾಲಿಂಪಿಕ್ಸ್ ಸಮಿತಿ ಆಶ್ರಯದಲ್ಲಿ 8ನೇ ಆವೃತ್ತಿಯ ಭಾರತೀಯ ಓಪನ್ ಪ್ಯಾರಾ ಅಥ್ಲೆಟಿಕ್ಸ್ ಅಂತಾರಾಷ್ಟ್ರೀಯ ಚಾಂಪಿಯನ್‌ಶಿಪ್ ಮಂಗಳವಾರದಿಂದ ಗುರುವಾರದವರೆಗೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದೆ. 3 ದಿನಗಳ ಕಾಲ ನಡೆಯಲಿರುವ ಚಾಂಪಿಯನ್‌ಶಿಪ್‌ನಲ್ಲಿ ಭಾರತ ಸೇರಿ ಒಟ್ಟು 5 ರಾಷ್ಟ್ರಗಳ ಕ್ರೀಡಾಪಟುಗಳು ಪಾಲ್ಗೊಳ್ಳಲಿದ್ದಾರೆ. ಭಾನುವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಭಾರತೀಯ ಪ್ಯಾರಾಲಿಂಪಿಕ್ಸ್ ಸಮಿತಿ ಅಧ್ಯಕ್ಷ ದೇವೇಂದ್ರ ಝುಝಾರಿಯಾ ಅವರು ಚಾಂಪಿಯನ್‌ಶಿಪ್ ಬಗ್ಗೆ ಮಾಹಿತಿ ನೀಡುತ್ತಾ, ಚಾಂಪಿಯನ್‌ಶಿಪ್‌ನಲ್ಲಿ ಭಾರತದ 341 ಕ್ರೀಡಾಪಟುಗಳು ಪಾಲ್ಗೊಳ್ಳಲಿದ್ದಾರೆ. ಪ್ಯಾರಾಲಿಂಪಿಕ್ಸ್, ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್, ಏಷ್ಯನ್ ಪ್ಯಾರಾ ಗೇಮ್ಸ್ ಪದಕ ವಿಜೇತರು ಕೂಟದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಐದು ರಾಷ್ಟ್ರಗಳಿಂದ ಅಥ್ಲೀಟ್‌ಗಳು ಸ್ಪರ್ಧೆ: ಎರಡು ಬಾರಿ ಪ್ಯಾರಾಲಿಂಪಿಕ್ಸ್ ಹಾಗೂ ಮೂರು ಬಾರಿ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಚಿನ್ನ ವಿಜೇತ ಜಾವೆಲಿನ್ ಪಟು ಸುಮಿತ್ ಅಂಟಿಲ್ ಚಾಂಪಿಯನ್‌ಶಿಪ್‌ನ ಪ್ರಮುಖ ಆಕರ್ಷಣೆ ಅನಿಸಿಕೊಳ್ಳಲಿದ್ದಾರೆ. ಇದರ ಜೊತೆಗೆ ಕಿರ್ಗಿಸ್ತಾನ, ಫಿಲಿಪ್ಪೀನ್ಸ್, ಶ್ರೀಲಂಕಾ, ಥಾಯ್ಲೆಂಡ್‌ನ ಸ್ಪರ್ಧಿಗಳೂ ಭಾಗವಹಿಸಲಿದ್ದಾರೆ. ಅಫ್ಘಾನಿಸ್ತಾನದ ಕೆಲ ಸ್ಪರ್ಧಿಗಳೂ ಕೂಟದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ.



- ಭಾರತ ಸೇರಿ 5 ರಾಷ್ಟ್ರಗಳ ಒಟ್ಟು 350 ಪ್ಯಾರಾ ಅಥ್ಲೀಟ್‌ಗಳು ಭಾಗಿ
- ಪ್ಯಾರಾ ಏಷ್ಯನ್ ಗೇಮ್ಸ್‌ಗೆ ಆಯ್ಕೆ ಪ್ರಕ್ರಿಯೆ

ಪದಕದ ನಿರೀಕ್ಷೆ: ಸುಮಿತ್

ಸುಮಿತ್ ಅಂಟಿಲ್ ಅವರು ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಪಾಲ್ಗೊಳ್ಳುವ ಕ್ರೀಡಾಪಟುಗಳು ಹಿಂದೆಂದಿಗಿಂತ ಈ ವರ್ಷ ಹೆಚ್ಚಿನ ಪದಕ ಗೆಲ್ಲುವ ವಿಶ್ವಾಸ ವ್ಯಕ್ತಪಡಿಸಿದರು. ಕಳೆದ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಭಾರತ 108 ಪದಕಗಳನ್ನು ಗೆದ್ದಿತ್ತು. ಈ ಬಾರಿ ಭಾರತೀಯ ಕ್ರೀಡಾಪಟುಗಳು ಮತ್ತಷ್ಟು ಪದಕ ಸಾಧನೆ ಮಾಡಲಿದ್ದಾರೆ ಎಂದು ಭರವಸೆ ವ್ಯಕ್ತಪಡಿಸಿದರು.

ಯವ್ಯಾವ ಸ್ಪರ್ಧೆ ಇರಲಿವೆ?: ಚಾಂಪಿಯನ್‌ಶಿಪ್‌ನಲ್ಲಿ 100 ಮೀಟರ್, 200 ಮೀಟರ್, 400 ಮೀಟರ್, 800 ಮೀಟರ್, 1500 ಮೀಟರ್, ಹೈಜಂಪ್, ಲಾಂಗ್ ಜಂಪ್, ಡಿಸ್ಕಸ್ ಎಸೆತ, ಶಾಟ್‌ಪುಟ್, ಜಾವೆಲಿನ್ ಥ್ರೋ, ಕ್ಲಬ್ ಥ್ರೋ ಸೇರಿದಂತೆ ಪುರುಷ ಹಾಗೂ ಮಹಿಳೆಯರ ಒಟ್ಟು 155 ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ.

ಐಟಿಎಫ್ ವರ್ಲ್ಡ್ ಟೆನಿಸ್ ಟೂರ್ ಚಾಂಪಿಯನ್ ಪಟ್ಟ

ಬೆಂಗಳೂರಿನ ಸೃಷ್ಟಿಗೆ ಜೂನಿಯರ್ ಕಿರೀಟ

ಬೆಂಗಳೂರು: ಬೆಂಗಳೂರಿನ ಯುವ ಟೆನಿಸ್ ಪ್ರತಿಭೆ ಸೃಷ್ಟಿ ಕಿರಣ್ ಮತ್ತೊಮ್ಮೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಿಂಚಿದ್ದು, ಎಲ್ ಸಾಲ್ವಡೊರ್‌ನ ಸಾಂಟಾ ಟೆಕ್ಲಾದಲ್ಲಿ ನಡೆದ ಐಟಿಎಫ್ ವರ್ಲ್ಡ್ ಟೆನಿಸ್ ಟೂರ್ ಫಾರ್ ಜೂನಿಯರ್ಸ್ ಜೆ-60 ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದು ಸತತ ಐದನೇ ಐಟಿಎಫ್ ಜೂನಿಯರ್ ಸಿಂಗಲ್ಸ್ ಟೈಟಲ್ ತಮ್ಮದಾಗಿಸಿಕೊಂಡಿದ್ದಾರೆ.

ಕೇವಲ 13 ವರ್ಷದ ಸೃಷ್ಟಿ, ಟೂರ್ನಿಯಿಡೀ ಒಂದು ಸೆಟ್ ಕೂಡ ಕಳೆದುಕೊಳ್ಳದೆ ಭರ್ಜರಿ ಪ್ರದರ್ಶನ ನೀಡಿ ವಿಶ್ವ ಟೆನಿಸ್ ಪ್ರಿಯರ ಗಮನ ಸೆಳೆದರು. ಫೈನಲ್‌ನಲ್ಲಿ ಕೆನಡಾದ ಈವ್ ತಿಬಾಲ್ಟ್ ವಿರುದ್ಧ 7-5, 6-1 ನೇರ ಸೆಟ್‌ಗಳಲ್ಲಿ ಗೆದ್ದು ಚಾಂಪಿಯನ್ ಪಟ್ಟ ಅಲಂಕರಿಸಿದರು.

ಮೊದಲ ಸುತ್ತಿನಲ್ಲಿ ಬೈ ಪಡೆದಿದ್ದ ಸೃಷ್ಟಿ, ಎರಡನೇ ಸುತ್ತಿನಲ್ಲಿ ಪ್ಯೂರ್ಟೋ ರಿಕೋದ ವ್ಯಾಲೆಂಟಿನಾ ಫುವೆಂಟೆಸ್ ಬಿಜಿಯೋ ಅವರನ್ನು 6-0, 6-0 ಅಂತರದಲ್ಲಿ ಮಣಿಸಿದರು. ಕ್ವಾರ್ಟರ್ ಫೈನಲ್‌ನಲ್ಲಿ ಆತಿಥೇಯ ದೇಶದ ಕಾಮಿಲಾ ಮೊರಟಾಯಾ ವಿರುದ್ಧ 6-4, 6-1 ಜಯ ಸಾಧಿಸಿದ ಅವರು, ಸೆಮಿಫೈನಲ್‌ನಲ್ಲಿ ಅಮೆರಿಕದ ಮಿಲ್ಡಾಲಿನ್ ಡಾಗುಯ್ಲರ್ ವಿರುದ್ಧ 6-2, 6-3 ಅಂತರದಲ್ಲಿ ಗೆದ್ದರು. ಇದಕ್ಕೂ ಮೊದಲು ಮೆಕ್ಸಿಕೋದ ಹುಮಾಂಟ್ಲಾದಲ್ಲಿ ನಡೆದ ಐಟಿಎಫ್ ಜೆ-30 ಟೂರ್ನಿಯಲ್ಲೂ ಸೃಷ್ಟಿ ಪ್ರಶಸ್ತಿ ಗೆದ್ದಿದ್ದರು. ಅಲ್ಲಿ ಫೈನಲ್‌ನಲ್ಲಿ ಕೆನಡಾದ ನಟಾಲಿ ತ್ಸಾತ್ಸಲಾಶ್ವಿಲಿ ವಿರುದ್ಧ 6-4, 6-1 ಅಂತರದಲ್ಲಿ ಜಯಿಸಿದ್ದರು. ಕಳೆದ ವರ್ಷ ಡೊಮಿನಿಕನ್ ರಿಪಬ್ಲಿಕ್‌ನಲ್ಲಿ ನಡೆದ ಐಟಿಎಫ್ ಜೆ30 ಟೂರ್ನಿಯಲ್ಲಿ ಮೊದಲ ಅಂತರರಾಷ್ಟ್ರೀಯ ಪ್ರಶಸ್ತಿ ಗೆದ್ದ ಬಳಿಕ ಶ್ರೀಷ್ಟಿ ನಿರಂತರವಾಗಿ ಉತ್ತಮ ಪ್ರದರ್ಶನ ನೀಡುತ್ತಾ ಜೂನಿಯರ್ ಟೆನಿಸ್‌ನಲ್ಲಿ ವೇಗವಾಗಿ ಮುನ್ನಡೆಯುತ್ತಿದ್ದಾರೆ.



ಗ್ರ್ಯಾಂಡ್‌ಸ್ಲಾಮ್ ಗುರಿ: ಪ್ರಸ್ತುತ ಫ್ಲೋರಿಡಾದ ಆರ್‌ಪಿಎಸ್ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿರುವ ಸೃಷ್ಟಿ, ಐಟಿಎಫ್ ಸರ್ಕ್ಯೂಟ್‌ನಲ್ಲಿ ಉತ್ತಮ ಪ್ರದರ್ಶನ ನೀಡುತ್ತಿರುವುದು ಸಂತಸ ತಂದಿದೆ. ನನ್ನ ಶ್ರೇಯಾಂಕ ಹೆಚ್ಚಿಸಿ 2027ರಲ್ಲಿ ಜೂನಿಯರ್ ಗ್ರ್ಯಾಂಡ್ ಸ್ಲಾಮ್ ಪ್ರವೇಶಿಸುವ ಗುರಿಯಿದೆ. ಮುಂದಿನ ವರ್ಷಗಳಲ್ಲಿ ಜೂನಿಯರ್ ಗ್ರ್ಯಾಂಡ್ ಸ್ಲಾಮ್ ಹಾಗೂ ಗ್ರ್ಯಾಂಡ್ ಸ್ಲಾಂ ಪ್ರಶಸ್ತಿಗಳನ್ನು ಗೆದ್ದು ಭಾರತಕ್ಕೆ ಕೀರ್ತಿ ತರುವ ಕನಸಿದೆ, ಎಂದು ತಿಳಿಸಿದ್ದಾರೆ.

ಕೆಕೆಆರ್‌ಗೆ ಡಿಸಿಯ 204 ರನ್ ಗುರಿ

ಕೋಲ್ಕತ್ತಾ: ಔಪಚಾರಿಕ ಪಂದ್ಯದಲ್ಲಿ ಕನ್ನಡಿಗ ಕೆ.ಎಲ್. ರಾಹುಲ್ ಸ್ಫೋಟಕ ಬ್ಯಾಟಿಂಗ್ ಮಾಡಿ ಮಿಂಚಿದ್ದು, ದಿಲ್ಲಿ ಕ್ಯಾಪಿಟಲ್ಸ್, ಕೆಕೆಆರ್‌ಗೆ ಕಠಿಣ ಗುರಿ ನೀಡಿದೆ. ರಾಜಸ್ಥಾನ ಗೆದ್ದ ನಂತರ ಕೆಕೆಆರ್ ಮತ್ತು ದಿಲ್ಲಿ ನಡುವಿನ ಪಂದ್ಯ ಕೇವಲ ಔಪಚಾರಿಕವಾಯಿತು. ಟಾಸ್ ಗೆದ್ದ ಕೆಕೆಆರ್ ಬೌಲಿಂಗ್ ಆಯ್ಕೆ ಮಾಡಿಕೊಂಡಿತು.

ಬ್ಯಾಟಿಂಗ್‌ಗಿಳಿದ ದಿಲ್ಲಿ ರಾಹುಲ್(60), ಪೋರೆಲ್(22) ಅವರಿಂದ ಉತ್ತಮ ಆರಂಭ ಪಡೆಯಿತು. ಮಧ್ಯಮ ಕ್ರಮಾಂಕದಲ್ಲಿ ಸಾಹಿಲ್ ಪಾರಖ್(24), ಅಕ್ಷರ್ ಪಟೇಲ್ (39) ರನ್ ಗಳಿಸಿದರು. ಅಂತಿಮದಲ್ಲಿ ಡೇವಿಡ್ ಮಿಲ್ಲರ್ ಸ್ಫೋಟಕ ಬ್ಯಾಟಿಂಗ್ ಮಾಡಿದ್ದು, 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 203 ರನ್ ಗಳಿಸಿದೆ.



ರಾಹುಲ್ ಆಡಿದ 30 ಬಾಲ್‌ಗಳಲ್ಲಿ ಅಬ್ಬರದ ಅರ್ಧಶತಕ(60 ರನ್) ಬಾರಿಸಿದರು. ಇದೇ ಪಂದ್ಯದಲ್ಲಿ ಕಣಕ್ಕಿಳಿದ ಸಾಹಿಲ್ ಪಾರಖ್ 24 ರನ್ ಗಳಿಸಿದರು. ಮಧ್ಯಮ ಕ್ರಮಾಂಕದಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದ ಅಕ್ಷರ್ ಪಟೇಲ್ ಕೂಡ 25 ಬಾಲ್‌ಗಳಲ್ಲಿ 39 ರನ್ ಗಳಿಸಿ ಸ್ಕೋರ್ ಹಿಗ್ಗಿಸಿದರು. ಡೇವಿಡ್ 28 ರನ್ ಗಳಿಸಿ ಸ್ಕೋರ್ ಹಿಗ್ಗಿಸಿದರು. ಕೆಕೆಆರ್ ಪರ ಸೌರಭ್ 28/2, ವರುಣ್ 35/1, ಅನುಕುಲ್ 23/1 ಮತ್ತು ಸುನಿಲ್ ನರೈನ್ 38/1 ವಿಕೆಟ್ ಪಡೆದರು.

ಇಂದಿನಿಂದ ನಾರ್ವೆ ಚೆಸ್ ಪಂದ್ಯಾವಳಿ

- ಗುಕೇಶ್, ಪ್ರಜ್ಞಾನಂದ ಮೇಲೆ ನಿರೀಕ್ಷೆ
- ಮಹಿಳೆಯರಲ್ಲಿ ದಿವ್ಯಾ, ಕೊನೆರು ಸ್ಪರ್ಧೆ

ಹೊಸದಿಲ್ಲಿ: ವಿಶ್ವ ಚಾಂಪಿಯನ್ ಡಿ. ಗುಕೇಶ್ ಅವರು, ತಮ್ಮ ವಿಶ್ವ ಚಾಂಪಿಯನ್ ಪಟ್ಟದ ರಕ್ಷಣೆಗೆ ಮುನ್ನ ಮತ್ತೆ ಲಯ ಕಂಡುಕೊಳ್ಳುವ ಉದ್ದೇಶದೊಂದಿಗೆ ಸೋಮವಾರ ಆರಂಭವಾಗಲಿರುವ ಪ್ರತಿಷ್ಠಿತ ನಾರ್ವೆ ಚೆಸ್ ಟೂರ್ನಿಯಲ್ಲಿ ಅಭಿಯಾನ ಆರಂಭಿಸಲಿದ್ದಾರೆ.

ಈ ಬಾರಿಯ ಟೂರ್ನಿಯ ಪ್ರಮುಖ ಆಕರ್ಷಣೆಯಾಗಿರುವ ಮಾಜಿ ವಿಶ್ವ ನಂ.1 ಆಟಗಾರ ಮ್ಯಾಗ್ನಸ್ ಕಾರ್ಲ್ಸೆನ್ ಜೊತೆಗೆ ಭಾರತದ ಯುವ ತಾರೆ ಆರ್. ಪ್ರಜ್ಞಾನಂದ ಕೂಡ ಸ್ಪರ್ಧಿಸಲಿದ್ದಾರೆ. ಓಸ್ಲೋ ನಗರದ ಸುಂದರ ಪರಿಸರ ಹಾಗೂ ಫಿಯೋರ್ಡ್ ಪ್ರದೇಶದ ನಡುವೆ ನಡೆಯಲಿರುವ ಈ ಟೂರ್ನಿಯಲ್ಲಿ ಚೊಚ್ಚಲ ಪ್ರಶಸ್ತಿ ಗೆಲ್ಲುವ ಕನಸಿನೊಂದಿಗೆ ಭಾರತ ಬಲಿಷ್ಠ ಪಡೆ ಕಣಕ್ಕಿಳಿಯುತ್ತಿದೆ.


ಜಾಗತಿಕ ಚದುರಂಗ ಶಕ್ತಿಯಾಗಿ ಹೊರಹೊಮ್ಮಿರುವ ಭಾರತಕ್ಕೆ ಈ ಬಾರಿ ನಾಲ್ವರು ಪ್ರತಿನಿಧಿಗಳಿದ್ದಾರೆ. ಮುಕ್ತ ವಿಭಾಗದಲ್ಲಿ ಡಿ. ಗುಕೇಶ್ ಮತ್ತು ಆರ್. ಪ್ರಜ್ಞಾನಂದ ಸ್ಪರ್ಧಿಸಲಿದ್ದರೆ, ಮಹಿಳಾ ವಿಭಾಗದಲ್ಲಿ ಕೊನೆರು ಹಂಪಿ ಹಾಗೂ ವಿಶ್ವಕಪ್ ವಿಜೇತೆ ದಿವ್ಯಾ ದೇಶಮುಖ್ ದೇಶವನ್ನು ಪ್ರತಿನಿಧಿಸಲಿದ್ದಾರೆ.

ಕಠಿಣ ಸ್ಪರ್ಧೆ: ಆದರೆ ಭಾರತೀಯ ಆಟಗಾರರ ಸವಾಲು ಸುಲಭವಲ್ಲ. ವಿಶ್ವ ನಂ.1 ಹಾಗೂ ಆತಿಥೇಯ ದೇಶದ ಫೇವರಿಟ್ ಮ್ಯಾಗ್ನಸ್ ಅವರೊಂದಿಗೆ ಫ್ರಾನ್ಸ್‌ನ ಅಲಿರೇಝಾ, ಜರ್ಮನಿಯ ವಿನ್ಸೆಂಟ್ ಕೀಮರ್ ಹಾಗೂ ಅಮೆರಿಕದ ಅನುಭವಿ ಆಟಗಾರ ವೆಸ್ಲಿ ಕೂಡ ಕಣದಲ್ಲಿದ್ದಾರೆ. ಮಹಿಳಾ ವಿಭಾಗದಲ್ಲಿ ಐದು ಬಾರಿ ವಿಶ್ವ ಚಾಂಪಿಯನ್ ಆಗಿರುವ ಹಾಗೂ ಹಾಲಿ ಚಾಂಪಿಯ ಜು ವೆಂಜುನ್, ಹಾಲಿ ನಾರ್ವೆ ಚೆಸ್ ಚಾಂಪಿಯನ್ ಅನ್ನಾ, ವಿಶ್ವ ಬ್ಲಿಟ್ಜ್ ಚಾಂಪಿಯನ್ ಬಿಬಿಸಾರಾ ಹಾಗೂ ಚೀನಾದ ಉದಯೋನ್ಮುಖ ತಾರೆ ಝು ಜಿನ್ನರ್ ಪ್ರಮುಖ ಪೈಪೋಟಿದಾರರಾಗಿದ್ದಾರೆ.

ಆಲೆಕ್ಸಾಂಡರ್ ಜ್ವೇರೆವ್ ಶುಭಾರಂಭ

ಪ್ಯಾರಿಸ್: ಪ್ರತಿಷ್ಠಿತ ರೋಲ್ಯಾಂಡ್ ಗ್ಯಾರೋಸ್ ಪಂದ್ಯಾವಳಿಯ ಮೊದಲ ದಿನವೇ ಮಿಂಚಿರುವ ಅಗ್ರ ಶ್ರೇಯಾಂಕಿತ ಆಟಗಾರ ಆಲೆಕ್ಸಾಂಡರ್ ಜ್ವೇರೆವ್ ಶುಭಾರಂಭ ಮಾಡಿದರು. ಎರಡನೇ ಗ್ರ್ಯಾಂಡ್‌ಸ್ಲಾಮ್ ಪಂದ್ಯಾವಳಿಯು ಭಾನುವಾರದಂದು ಅದ್ದೂರಿಯಾಗಿ ಶುರುವಾಯಿತು. ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಮೊದಲ ಪಂದ್ಯವು ಆಲೆಕ್ಸಾಂಡ್ರೋ ಡೇವಿಡ್‌ವಿಚ್ ಹಾಗೂ ದಾಮಿರ್ ವಿರುದ್ಧ ನಡೆಯಿತು. ತೀವ್ರ ಪೈಪೋಟಿಯಿಂದ ಕೂಡಿದ್ದ ಈ ಪಂದ್ಯದಲ್ಲಿ ಆಲೆಕ್ಸಾಂಡ್ರೊ 6-7, 6-3, 2-6, 7-5, 6-3ರಿಂದ ಗೆದ್ದರು. ಅಗ್ರ ಶ್ರೇಯಾಂಕಿತ ಜ್ವೇರೆವ್, ಬೋಂಜಿ ಅವರನ್ನು 6-3, 6-4, 6-2ರಿಂದ ಸೋಲಿಸಿ ಖಾತೆ ತೆರೆದರು.


ಜ್ವೇರೆವ್ ಮಿಂಚಿನಾಟ: ಮೊದಲನೇ ಸೆಟ್‌ನಿಂದಲೂ ಜ್ವೇರೆವ್ ಮುನ್ನಡೆ ಸಾಧಿಸಿದರು. ಸರ್ವ್ ಲಾಭ ಪಡೆಯುತ್ತಿದ್ದಂತೆ ಬೋಂಜಿ ಮೇಲೆ ಒತ್ತಡ ಹೇರಿದರು. 5 ಏಸ್ ಪಾಯಿಂಟ್‌ಗಳನ್ನು ಪಡೆದ ಅವರು, 5/10 ಬ್ರೇಕ್ ಪಾಯಿಂಟ್‌ಗಳನ್ನು ಪಡೆದರು. ಸ್ವಾಭಾವಿಕ ಆಟದೊಂದಿಗೆ ಮೊದಲ ಸೆಟ್‌ನಲ್ಲಿ ದೊಡ್ಡ ಮುನ್ನಡೆ ಸಾಧಿಸಿದರು. ಎದುರಾಳಿ 3 ಅಂಕ ಗಳಿಸುವಷ್ಟರಲ್ಲಿ ಮುನ್ನಡೆ ಕಾಯ್ದುಕೊಂಡರು. ಎರಡನೇ ಸೆಟ್‌ನಲ್ಲಿ ಬೋಂಜಿ ಅಲ್ಪ ಪ್ರತಿರೋಧ ತೋರಿಸಿದರೂ, ಜ್ವೇರೆವ್ ಆಟದ ಮುಂದೆ ಗೆಲ್ಲಲಾಗಲಿಲ್ಲ. ಅಲ್ಲಿಯೂ ಸರ್ವ್ ಮೂಲಕ ಮಿಂಚಿದ ಜ್ವೇರೆವ್ 6-4ರಿಂದ ಗೆಲುವು ಸಾಧಿಸಿದರು. ಮೂರನೇ ಸೆಟ್ ಪೂರ್ತಿ ಜ್ವೇರೆವ್ ಮಿಂಚಿದರು. ಮೊದಲಿನಿಂದಲೂ ಆಕ್ರಮಣಕಾರಿ ಆಟದೊಂದಿಗೆ ಮುನ್ನಡೆ ಸಾಧಿಸಿದರು. ಎದುರಾಳಿಗೆ ಹೆಚ್ಚಿನ ಅವಕಾಶ ಸಿಗಲೇ ಇಲ್ಲ. ಬೋಂಜಿ 2 ಅಂಕ ಗಳಿಸುವಷ್ಟರಲ್ಲಿ ಪಂದ್ಯ ಮುಗಿಸಿಕೊಂಡು ಶುಭಾರಂಭ ಮಾಡಿದರು. ಮಹಿಳೆಯರ ವಿಭಾಗದಲ್ಲಿ ಬಾರ್ಬೋರಾ ಅವರೊಂದಿಗೆ ಹೀಲಿ ಗೆಲುವು ಸಾಧಿಸಿದರೆ, ಡಾಂಕಾ ವಿರುದ್ಧ ಚೀನಾದ ವಾಂಗ್ ಗೆಲುವು ಸಾಧಿಸಿದರು. ಸಾರಾ ವಿರುದ್ಧ ತಮಾರಾ ನೇರ ಸೆಟ್‌ಗಳ ಗೆಲುವು ಸಾಧಿಸಿದರು. ಅನ್ನಾ ವಿರುದ್ಧ ಯೂಲಿಯಾ, ಅಜ್ಲಾ ವಿರುದ್ಧ ಕ್ಯಾಟಿ ಗೆಲುವು ಸಾಧಿಸಿದರು.



ಇಂದು ಯಾರ್‍ಯಾರ ಪಂದ್ಯಾಟ?: ಪ್ರಮುಖ ಪಂದ್ಯದಲ್ಲಿಂದು ಟಾಮಿ ಪೌಲ್, ರಿಂಕಿ ಹಿಜಿಕಾಟಾ ವಿರುದ್ಧ ಪಂದ್ಯವನ್ನಾಡಲಿದ್ದಾರೆ. ಡಾನೀಲ್ ಮೆರಿಡಾ, ಬೆನ್ ಶೆಲ್ಟನ್ ವಿರುದ್ಧ ಪಂದ್ಯವಾಡಲಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಈಗಾ ಸ್ವಿಟೆಕ್, ಎಮರ್‌ಸನ್ ಜೋನಸ್ ವಿರುದ್ಧ ಆಡಲಿದ್ದಾರೆ. ವೆರೊನಿಕಾ ವಿರುದ್ಧ ಎಲೆನಾ ರಿಬಕಿನಾ ಸೆಣಸಾಡಲಿದ್ದಾರೆ.

ಪದಬಂಧ 5994

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
1.ಮುಗಿಸು-ಪೂರ್ಣಗೊಳಿಸುವಿಕೆ (3)
3.ಹೊತ್ತಿದ ಬೆಂಕಿಯನ್ನು ಉಜ್ವಲಗೊಳಿಸು (4)
4.ಕರಿಯ ಮೈಯುಳ್ಳವನು-ಕೃಷ್ಣ(4)
6.ಕೃಷ್ಣಪಕ್ಷ-ಅಮವಾಸ್ಯೆಯಿದು (4)
8.ಇದು ವಾನರರ ಗುಂಪು (4)
10.ಗಣಿತದಲ್ಲಿ ಒಟ್ಟು ಮೊತ್ತವಿದು (3)
11.ಯಾತನೆಯಿಂದ ಸ್ನಾಯುಗಳು ಮಿಡಿಯುವಿಕೆ (3)
13.ಕೆಸರಲ್ಲಿ ಅರಳುವ ಸುಂದರ ಹೂವು (3)
15.ಜಂಗುತಿನ್ನು-ದೋಷಯುಕ್ತವಾಗು (4)
16.ಕುಟುಂಬದ ಗೌರವ ಹಾಳುಮಾಡುವವನು (4)

ಮೇಲಿನಿಂದ ಕೆಳಕ್ಕೆ
1.ತಿದ್ದಿ ಸರಿಪಡಿಸುವಿಕೆ (2)
2.ಕಾಣಿಸುತ್ತಿರುವ ದುಡ್ಡು ತಲೆಕೆಳಗಾಗಿದೆ (2)
3.ಪುಳಕದಿಂದ ಓದುತ್ತಿರುವ ಹೊತ್ತಗೆ (3)
5.ಹಣೆ-ನೊಸಲು (3)
7.ಆವಶ್ಯಕತೆಯ ಮೊದಲು ದೆವ್ವವಿದೆ (3)
9.ನೆಲವನ್ನು ಅಗೆಯುವ ಸಾಧನ (3)
10.ಇವು ಹಾರಿಕೆಯ ನುಡಿಗಳು (4)
12.ಪ್ರಕಟಗೊಳಿಸದಿರು-ಜಾರಿಗೊಳಿಸದಿರು (4)
13.ಪ್ರತಿಬಿಂಬ ತೋರಿಸುವ ಸಾಧನ (3)
14.ವಂಚನೆಯಿಂದ ಕೂಡಿದ್ದು ತಲೆಕೆಳಗಾಗಿದೆ (3)

5993 ಉತ್ತರ

ಎಡದಿಂದ ಬಲಕ್ಕೆ:
2.ತದ್ಭವ 5.ಪೋಲಿದನ
6.ಸಂಗಡಿಗ 9.ನರಿ 9.ವರ
10.ತರಂಗ 12.ತನುಜ
14.ಜಲದಾಗಮ
15.ದಶಕಂಠ 16.ಕರಿಜಾಲಿ

ಮೇಲಿನಿಂದ ಕೆಳಕ್ಕೆ
: 1.ಆಪೋಶನ
2.ಕೊನೆತನಕ
3.ವಸಂತಕಾಲ 4.ನಾಗಸ್ವರ
8.ರಂಗಾರಿ 9.ವಜನು
10.ತತ್ವಪದ 11.ಗಜ
12.ತಮ 13.ಜಯಶಾಲಿ

ಕಿರುಸುದ್ದಿ

ಧರ್ಮಸ್ಥಳದಲ್ಲಿ ಇಂದು ಹತ್ತನಾವಧಿ ಉತ್ಸವ

ಉಜಿರೆ: ಮೇ 25 ರಂದು ಧರ್ಮಸ್ಥಳದಲ್ಲಿ ಹತ್ತನಾವಧಿ ಉತ್ಸವ (ತುಳು: ಪತ್ತನಾಜೆ) ನಡೆಯಲಿದೆ. ಮುಂದೆ ದೀಪಾವಳಿವರೆಗೆ ದೇವಸ್ಥಾನದಲ್ಲಿ ಉತ್ಸವ, ರಂಗಪೂಜೆ ಮೊದಲಾದ ವಿಶೇಷ ಸೇವೆಗಳು ನಡೆಯುವುದಿಲ್ಲ. ಧರ್ಮಸ್ಥಳ ಯಕ್ಷಗಾನ ಮಂಡಳಿಯ ಕಲಾವಿದರು ಮೂರು ದಿನ ಸೇವೆ ಬಯಲಾಟ ಪ್ರದರ್ಶನ ನೀಡಿ ಪ್ರಸಕ್ತ ವರ್ಷದ ಸೇವಾ ಬಯಲಾಟ ಪ್ರದರ್ಶನಕ್ಕೆ ಮಂಗಳ ಹಾಡುವರು.

ಕಾಡುಹಂದಿಯ ತಿವಿತದಿಂದ ಟ್ಯಾಪಿಂಗ್ ಕಾರ್ಮಿಕನಿಗೆ ಗಾಯ

ಕಾಸರಗೋಡು: ರಬ್ಬರ್ ಟ್ಯಾಪಿಂಗ್ ಕಾರ್ಮಿಕರೋರ್ವರು ಕಾಡುಹಂದಿಯ ತಿವಿತದಿಂದ ಗಾಯಗೊಂಡಿದ್ದಾರೆ. ಚಾಮುಂಡಿಕುನ್ನು ನಿವಾಸಿ ಸಜಿತ್ (37) ಗಾಯಗೊಂಡವರು. ಶನಿವಾರ ಪನತ್ತಡಿ ಎನ್‌ಸ್‌ಎಸ್ ಎಸ್ಟೇಟ್‌ನ ಟ್ಯಾಪಿಂಗ್ ಕೆಲಸ ನಿರ್ವಹಿಸುತ್ತಿದ್ದ ವೇಳೆ ಸಜಿತ್ ಕಾಡುಹಂದಿ ತಿವಿತದಿಂದ ಗಾಯಗೊಂಡರು.

ಕಾಲಿಗೆ, ತೊಡೆಗೆ ಹಾಗೂ ಕೈಗೆ ಗಂಭೀರ ಗಾಯಗೊಂಡ ಅವರನ್ನು ಕೋಳಿಚ್ಚಾಲ್ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಅರಣ್ಯ ಇಲಾಖೆ ಅಧಿಕಾರಿಗಳ ತಂಡ ಸ್ಥಳಕ್ಕೆ ಭೇಟಿ ನೀಡಿದರು. ಕಾಡುಹಂದಿಗಳನ್ನು ಗುಂಡಿಕ್ಕಿ ಕೊಲ್ಲಲು ಬೇಕಾದ ತುರ್ತು ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು. ಕಾಡುಹಂದಿಗಳನ್ನು ಗುಂಡಿಕ್ಕಿ ಕೊಲ್ಲಲು ಕಾನೂನು ಇದ್ದರೂ ಪಂಚಾಯತ್ ಅಧಿಕಾರಿಗಳು ಇದ್ಯಾವುದನ್ನೂ ಜಾರಿಗೊಳಿಸಲಿಲ್ಲ. ಕಾಡುಹಂದಿಗಳ ಹಾವಳಿಯನ್ನು ತಡೆಗಟ್ಟಲು ಪಂಚಾಯತ್ ಮಟ್ಟದಲ್ಲಿ ಕೂಡಲೇ ಕ್ರಮಕೈಗೊಳ್ಳಬೇಕೆಂದು ನಾಗರಿಕರು ಒತ್ತಾಯಿಸಿದರು.

ದ್ವಿಚಕ್ರ ವಾಹನಗಳ ಡಿಕ್ಕಿ : ಓರ್ವ ಸಾವು; ಇಬ್ಬರಿಗೆ ಗಾಯ

ಸುಳ್ಯ: ಮಾಣಿ–ಮೈಸೂರು ರಾಷ್ಟ್ರೀಯ ಹೆದ್ದಾರಿಯ ಪೆರಾಜೆ ಎಂಬಲ್ಲಿ ದ್ವಿಚಕ್ರ ವಾಹನಗಳ ಮಧ್ಯೆ ಉಂಟಾದ ಅಪಘಾತದಲ್ಲಿ ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ಗಾಯಾಳು ಮೃತಪಟ್ಟಿದ್ದಾರೆ. ಮೃತಪಟ್ಟ ವ್ಯಕ್ತಿಯನ್ನು ಕೇರಳಂ ರಾಜ್ಯದ ಪಯ್ಯನ್ನೂರು ನಿವಾಸಿ ಪ್ರದೀಪ್ ಎಂದು ಗುರುತಿಸಲಾಗಿದ್ದು ಇವರು ಖಾಸಗಿ ಕಟ್ಟಡ ನಿರ್ಮಾಣ ಸಂಘದ ರಾಜ್ಯ ಸದಸ್ಯತ್ವ ಹೊಂದಿದ ಗುರುತಿನ ಚೀಟಿ



ಲಭ್ಯವಾಗಿದ್ದು ಇನ್ನೊಂದು ದ್ವಿಚಕ್ರ ವಾಹನದಲ್ಲಿ ಸಂಚರಿಸುತ್ತಿದ್ದ ಗಾಯಗೊಂಡವರನ್ನು ಕಲ್ಲುಗುಂಡಿ ಮೂಲದ ಸುಮಂತ್ ಹಾಗೂ ರವಿ ಎಂದು ತಿಳಿದು ಬಂದಿದ್ದು ಆಸ್ಪತ್ರೆಯಲ್ಲಿ ಗಾಯಾಳುಗಳಿಗೆ ಚಿಕಿತ್ಸೆ ಮುಂದುವರೆಸಲಾಗಿದ್ದು ಈ ಕುರಿತು ಸುಳ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಡಿಕೆ ಮರ ಬಿದ್ದು ಕಾರ್ಮಿಕ ಸಾವು

ಬಂಟ್ವಾಳ: ಅಡಿಕೆ ತೋಟದಲ್ಲಿ ಮರ ಕಡಿಯುವ ವೇಳೆ ತಲೆಗೆ ಮರ ಬಿದ್ದು ಕಾರ್ಮಿಕನೊರ್ವ ಮೃತ ಘಟನೆ ಬಂಟ್ವಾಳ ಗ್ರಾಮಾಂತರ ಪೋಲೀಸ್ ಠಾಣಾ ವ್ಯಾಪ್ತಿಯ ಕೊಯ್ಲ ಗ್ರಾಮದಲ್ಲಿ ನಡೆದಿದೆ.




ಮೋನಪ್ಪ ಶೆಟ್ಟಿಗಾರ್ (66) ಮೃತಪಟ್ಟವರೆಂದು ಗುರುತಿಸಲಾಗಿದೆ. ಕೊಯ್ಲ ಗ್ರಾಮದ ಮುಳಿಯ ಎಂಬಲ್ಲಿನ ಸಿಪ್ರಿಯಾನ್ ಲೋಬೋರವರ ಮನೆಯಲ್ಲಿ ತೋಟದಲ್ಲಿ ಅಡಿಕೆ ಮರ ಕಡಿದು ಎಳೆಯುತ್ತಿದ್ದ ವೇಳೆ ಆಕಸ್ಮಿಕವಾಗಿ ಮರ ಅವರ ತಲೆಗೆ ಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಈ ಬಗ್ಗೆ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್‌ಗೆ ಲಾರಿ ಡಿಕ್ಕಿ: ಓರ್ವ ಸಾವು


ಮಂಗಳೂರು: ಬೈಕ್‌ಗೆ ಲಾರಿ ಡಿಕ್ಕಿ ಹೊಡೆದು ಓರ್ವ ಸ್ಥಳದಲ್ಲೇ ಮೃತಪಟ್ಟು ಇಬ್ಬರು ಗಾಯಗೊಂಡಿರುವ ಘಟನೆ ರಾ.ಹೆ. 66ರ ಮುಕ್ಕ ಚೆಕ್ ಪೋಸ್ಟ್ ಬಳಿಯ ಖಂಡಿಗೆ ಕ್ರಾಸ್ ಬಳಿ ಭಾನುವಾರ ಸಂಜೆ ನಡೆದಿದೆ. ಮೃತರನ್ನು ಬಾಗಲಕೋಟೆ ನಿವಾಸಿ ಭೀಮಾ ಎಂದು ಗುರುತಿಸಲಾಗಿದೆ. ಆತನ ಸಹೋದ್ಯೋಗಿಗಳಿಬ್ಬರು ಗಂಭೀರ ಗಾಯಗೊಂಡಿದ್ದು ಅವರನ್ನು ಸಮೀಪದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಭೀಮಾ ಮತ್ತು ಆತನ ಇಬ್ಬರು ಸಹೋದ್ಯೋಗಿಗಳು ಒಂದೇ ಬೈಕ್‌ನಲ್ಲಿ ಕೆಲಸ ಮುಗಿಸಿಕೊಂಡು ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಸುರತ್ಕಲ್ ಕಡೆ ತೆರಳುತ್ತಿದ್ದರು. ಈ ವೇಳೆ ಭಾರೀ ಲೋಡ್‌ಹೊಂದಿದ್ದ ಲಾರಿಯನ್ನು ಎಡಭಾಗದಿಂದ ಓವರ್ ಟೇಕ್ ಮಾಡಲು ಯತ್ನಿಸಿದಾಗ ಹಿಂಬದಿ ಸವಾರನಾಗಿದ್ದ ಭೀಮಾ ಅವರಿಗೆ ಲಾರಿ ತಾಗಿ ಅವರು ರಸ್ತೆಗೆ ಎಸೆಯಲ್ಪಟ್ಟರು. ಅವರ ತಲೆಯ ಮೇಲಿಂದ ಲಾರಿಯ ಹಿಂಬದಿ ಚಕ್ರಗಳು ಹರಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ.

ಮುಂಗಾರು ಪೂರ್ವ ವರುಣಾರ್ಭಟಕ್ಕೆ ಉಡುಪಿ ತತ್ತರ

ಕಷ್ಟನಷ್ಟಗಳ ಸುರಿಮಳೆ







ಉಡುಪಿ: ಜಿಲ್ಲೆಯಾದ್ಯಂತ ಮುಂಗಾರು ಪೂರ್ವ ಮಳೆಯು ಆರ್ಭಟದ ರೂಪ ಪಡೆದುಕೊಂಡಿದ್ದು, ಭಾರಿ ಗಾಳಿ–ಮಳೆ ಹಾಗೂ ಸಿಡಿಲಿನ ಹೊಡೆತಕ್ಕೆ ಹಲವು ಮನೆಗಳು ಮತ್ತು ದನದ ಕೊಟ್ಟಿಗೆಗಳು ಭಾಗಶಃ ಹಾನಿಗೊಳಗಾಗಿವೆ. ಸಾರ್ವಜನಿಕ ವಲಯದಿಂದ ಬಂದಿರುವ ಪ್ರಾಥಮಿಕ ಮಾಹಿತಿಯ ಅನ್ವಯ ಜಿಲ್ಲೆಯಲ್ಲಿ ಕೇವಲ ಒಂದೇ ದಿನದಲ್ಲಿ ಸುಮಾರು ಒಂದು ಲಕ್ಷ ರೂಪಾಯಿಗೂ ಅಧಿಕ ಮೊತ್ತದ ಆಸ್ತಿಪಾಸ್ತಿ ನಷ್ಟ ಸಂಭವಿಸಿದೆ.

ತಾಲೂಕುವಾರು ಮಳೆ ವಿವರಣೆ

ಜಿಲ್ಲೆಯಾದ್ಯಂತ ತಾಲೂಕುಗಳ ಸರಾಸರಿ ಮಳೆಯ ಪ್ರಮಾಣ 35.5 ಮಿ.ಮೀ. ನಷ್ಟು ದಾಖಲಾಗಿದೆ. ಈ ಪೈಕಿ ಬೈಂದೂರು ತಾಲೂಕಿನಲ್ಲಿ ಅತ್ಯಂತ ಗರಿಷ್ಠ ಅಂದರೆ 74.8 ಮಿ.ಮೀ. ನಷ್ಟು ಭಾರಿ ಮಳೆಯಾಗಿದ್ದರೆ, ಉಡುಪಿ ತಾಲೂಕಿನಲ್ಲಿ 62.00 ಮಿ.ಮೀ. ಹಾಗೂ ಕುಂದಾಪುರ ತಾಲೂಕಿನಲ್ಲಿ 53.8 ಮಿ.ಮೀ. ನಷ್ಟು ಉತ್ತಮ ಮಳೆ ಸುರಿದಿದೆ. ಇನ್ನುಳಿದಂತೆ ಬ್ರಹ್ಮಾವರ ತಾಲೂಕಿನಲ್ಲಿ 25.00 ಮಿ.ಮೀ., ಹೆಬ್ರಿ ತಾಲೂಕಿನಲ್ಲಿ 21.2 ಮಿ.ಮೀ. ಮಳೆಯಾಗಿದ್ದರೆ, ಕಾಪು ತಾಲೂಕಿನಲ್ಲಿ 9.6 ಮಿ.ಮೀ. ಮತ್ತು ಕಾರ್ಕಳ ತಾಲೂಕಿನಲ್ಲಿ ಅತ್ಯಂತ ಕನಿಷ್ಠ ಅಂದರೆ 2.2 ಮಿ.ಮೀ. ನಷ್ಟು ಮಳೆ ದಾಖಲಾಗಿದೆ.

ಪ್ರಕೃತಿ ವಿಕೋಪದಿಂದ ಉಂಟಾದ ಹಾನಿಯ ವಿಸ್ತೃತ ವಿವರ

ಭಾರಿ ಮಳೆ ಮತ್ತು ಗಾಳಿಯ ತೀವ್ರತೆಗೆ ಜಿಲ್ಲೆಯ ವಿವಿಧೆಡೆ ಸಂತ್ರಸ್ತರು ನಷ್ಟ ಅನುಭವಿಸಿದ್ದಾರೆ. ಬ್ರಹ್ಮಾವರ ತಾಲೂಕಿನ ಕೋಟತಟ್ಟು ಗ್ರಾಮದ ರತ್ನ ಎಂಬವರ ಮನೆಯ ಹಂಚು ಹಾಗೂ ಸಿಮೆಂಟ್ ಶೀಟ್‌ಗಳು ಮಳೆಗೆ ಪುಡಿಪುಡಿಯಾಗಿದ್ದು, ಸುಮಾರು 30,000 ರೂಪಾಯಿಗಳ ನಷ್ಟ ಅಂದಾಜಿಸಲಾಗಿದೆ. ಉಡುಪಿ ತಾಲೂಕಿನ ಶಿವಳ್ಳಿ ಗ್ರಾಮದ ಮೀನಾಕ್ಷಿ ಸದಾನಂದ ಅವರ ಮನೆಗೆ ತೆಂಗಿನ ಮರ ಬಿದ್ದು 25,000 ರೂಪಾಯಿಗಳ ಹಾನಿಯಾಗಿದ್ದರೆ, ಅಲೆವೂರು ಗ್ರಾಮದ ಚನಮ್ಮ ದೇವೇಂದ್ರ ಇಳಿಗೆರೆ ಅವರ ಮನೆ ಮೇಲೆ ಮಣ್ಣು ಜರಿದು ಬಿದ್ದು ಭಾಗಶಃ ಹಾನಿಯಾಗಿದ್ದು, 20,000 ರೂಪಾಯಿಗಳ ನಷ್ಟ ಉಂಟಾಗಿದೆ.

ಕುಂದಾಪುರ ತಾಲೂಕಿನ ಹಳನಾಡು ಗ್ರಾಮದಲ್ಲಿ ಜಲಜ ಕುಲಾಲ್ತಿ ಎಂಬವರ ಮನೆ ಹತ್ತಿರದ ಮರ ಮುರಿದು ಬಿದ್ದು ಚಾವಣಿ ಜಖಂಗೊಂಡಿದ್ದು, 10,000 ರೂಪಾಯಿಗಳ ನಷ್ಟವಾಗಿದೆ. ಇದೇ ತಾಲೂಕಿನ ಕಾವ್ರಾಡಿ ಗ್ರಾಮದ ಗಿರಿಜ ಕುಲಾಲ್ತಿ ಬಿನ್ ಬಸವ ಎಂಬವರ ಮನೆಗೆ ನೇರವಾಗಿ ಸಿಡಿಲು ಬಡಿದ ಪರಿಣಾಮ ಚಾವಣಿ ಹಾಗೂ ಗೋಡೆಗಳು ಸೀಳಿ ಹೋಗಿದ್ದು, 10,000 ರೂಪಾಯಿಗಳ ನಷ್ಟ ಸಂಭವಿಸಿದೆ. ಇನ್ನು ಬೈಂದೂರು ತಾಲೂಕಿನ ಜಡ್ಕಲ್ ಗ್ರಾಮದ ಸದಾಶಿವ ಶೆಟ್ಟಿ ಎಂಬವರ ತೋಟದ ಅಡಿಕೆ ಮರ ಮುರಿದು ಬಿದ್ದು ದನದ ಕೊಟ್ಟಿಗೆ ಸಂಪೂರ್ಣ ಹಾನಿಯಾಗಿದ್ದು, 10,000 ರೂಪಾಯಿಗಳ ಆಸ್ತಿಪಾಸ್ತಿ ನಷ್ಟ ದಾಖಲಾಗಿದೆ.

ಚಂಡಮಾರುತದ ಭೀತಿ; ಮಲ್ಪೆ ಬಂದರಿನಲ್ಲಿ 3ನೇ ನಂಬರ್ ಮುನ್ನೆಚ್ಚರಿಕೆ ಸಿಗ್ನಲ್!

ತಿರುವನಂತಪುರದ ಚಂಡಮಾರುತ ಮುನ್ಸೂಚನೆ ಕೇಂದ್ರ ಬಿಡುಗಡೆಗೊಳಿಸಿರುವ ತುರ್ತು ಪ್ರಕಟಣೆಯ ಪ್ರಕಾರ, ನೈಋತ್ಯ ಅರಬ್ಬಿ ಸಮುದ್ರದಲ್ಲಿ ಸೃಷ್ಟಿಯಾಗಿರುವ ಸುಳಿಗಾಳಿಯ ಪರಿಣಾಮವಾಗಿ ಕರಾವಳಿಯುದ್ದಕ್ಕೂ ಗಂಟೆಗೆ 40 ರಿಂದ 50 ಕಿ.ಮೀ ವೇಗದ ಬಲವಾದ ಬಿರುಗಾಳಿ ಬೀಸುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಉಡುಪಿ ಜಿಲ್ಲೆಯ ಪ್ರಮುಖ ಮೀನುಗಾರಿಕಾ ಬಂದರಾದ ಮಲ್ಪೆ ಸೇರಿದಂತೆ ಕರಾವಳಿಯ ಪ್ರಮುಖ ಬಂದರುಗಳಲ್ಲಿ 'ಸ್ಥಳೀಯ ಜಾಗರೂಕತೆಯ 3ನೇ ನಂಬರ್ ಮುನ್ನೆಚ್ಚರಿಕೆ ಸಂಕೇತ'ವನ್ನು ಮುಂದುವರಿಸಲು ಸೂಚಿಸಲಾಗಿದೆ. ಸಮುದ್ರ ತೀವ್ರ ಪ್ರಕ್ಷುಬ್ಧವಾಗಿರುವುದರಿಂದ ಮೀನುಗಾರರು ಕಡಲಿಗೆ ಇಳಿಯಬಾರ ದೆಂದು ಕಟ್ಟುನಿಟ್ಟಿನ ಎಚ್ಚರಿಕೆ ನೀಡಲಾಗಿದೆ.

ಯು.ಕೆ.ಯಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ಲಕ್ಷಾಂತರ ರೂ. ವಂಚನೆ!



ಉಡುಪಿ: ವಿದೇಶದಲ್ಲಿ ಹೌಸ್ ಕೀಪಿಂಗ್ ಸೂಪರ್‌ವೈಸರ್ ಉದ್ಯೋಗ ಕೊಡಿಸುವುದಾಗಿ ನಂಬಿಸಿ ನಿಟ್ಟೂರು ಮೂಲದ ಯುವಕನೊಬ್ಬನಿಗೆ ಬರೋಬ್ಬರಿ 6.23 ಲಕ್ಷ ರೂಪಾಯಿ ಹಾಗೂ ಪಾಸ್ ಪೋರ್ಟ್ ಪಡೆದು ವಂಚಿಸಿರುವ ಜಾಲವೊಂದನ್ನು ಉಡುಪಿ ನಗರ ಪೊಲೀಸರು ಪತ್ತೆಹಚ್ಚಿದ್ದಾರೆ.

ಆಶ್ಲೆ ಕರ್ನೇಲಿಯೋ , ಸವಿತಾ, ಪ್ರಕೃತಿ ಹಾಗೂ ಪ್ರಶಾಂತ್ ಆರೋಪಿಗಳು. ನಿಟ್ಟೂರಿನ ನಿವಾಸಿ ಎನ್. ಆರ್. ಪದ್ಮನಾಭ ಉಪಾಧ್ಯ ಅವರು ಸಂತ್ರಸ್ತರಾಗಿದ್ದಾರೆ.

ಹಂತ ಹಂತವಾಗಿ ದೋಚಿದರು ಲಕ್ಷಾಂತರ ರೂಪಾಯಿ!

ಪದ್ಮನಾಭ ಉಪಾಧ್ಯ ಅವರು ಉದ್ಯೋಗ ಹುಡುಕುತ್ತಿದ್ದ ಸಂದರ್ಭದಲ್ಲಿ, 2025ರ ಫೆಬ್ರವರಿ 12 ರಂದು ಇವರನ್ನು ಸಂಪರ್ಕಿಸಿದ್ದ ಮುಖ್ಯ ಆರೋಪಿ ಆಶ್ಲೆ ಕರ್ನೇಲಿಯೋ, ಯುನೈಟೆಡ್ ಕಿಂಗ್‌ಡಮ್ ದೇಶದಲ್ಲಿ ಹೌಸ್ ಕೀಪಿಂಗ್ ಸೂಪರ್‌ವೈಸರ್ ಕೆಲಸ ಖಾಲಿ ಇರುವುದಾಗಿ ನಂಬಿಸಿದ್ದಾನೆ. ವೀಸಾ ಹಾಗೂ ಉದ್ಯೋಗದ ಸಂಪೂರ್ಣ ವ್ಯವಸ್ಥೆ ಮಾಡಿಕೊಡುವುದಾಗಿ ನಂಬಿಸಿದ ಈತ, ಆ ಬಳಿಕ ತನ್ನ ಸಹಾಯಕಿಯಾದ ಸವಿತಾ ಎಂಬಾಕೆಯ ಮೊಬೈಲ್ ಸಂಖ್ಯೆಯನ್ನು ನೀಡಿದ್ದಾನೆ.

ಇದನ್ನು ನಂಬಿ ಪದ್ಮನಾಭ ಅವರು ಸವಿತಾಳನ್ನು ಸಂಪರ್ಕಿಸಿದಾಗ, ಯು.ಕೆ. ವೀಸಾ ಪ್ರಕ್ರಿಯೆಗಾಗಿ ತಕ್ಷಣ 2,00,000 ರೂಪಾಯಿ ಪ್ರೊಸೆಸಿಂಗ್ ಶುಲ್ಕ ಪಾವತಿಸುವಂತೆ ಬೇಡಿಕೆ ಇಟ್ಟಿದ್ದಾಳೆ. ಅದರಂತೆ ಸಂತ್ರಸ್ತ ಯುವಕ 2025ರ ಮಾರ್ಚ್ 19ರಂದು ಸವಿತಾಳ ಬ್ಯಾಂಕ್ ಆಫ್ ಬರೋಡ ಖಾತೆಗೆ 2 ಲಕ್ಷ ರೂಪಾಯಿ ಜಮಾ ಮಾಡಿದ್ದಾರೆ. ಇದಾದ ಬಳಿಕ ಈ ವಂಚಕರ ಗ್ಯಾಂಗ್‌ನಲ್ಲಿದ್ದ ಪ್ರಕೃತಿ ಮತ್ತು ಪ್ರಶಾಂತ್ ಎಂಬವರು ಕೂಡ ಇವರೊಂದಿಗೆ ಕೈಜೋಡಿಸಿ ಮೆಡಿಕಲ್ ಪರೀಕ್ಷೆ, ವೀಸಾ ಸ್ಟಾಂಪಿಂಗ್ ಹಾಗೂ ಎಂಬಸಿ ಪ್ರೊಸೆಸಿಂಗ್ ಹೆಸರಿನಲ್ಲಿ ಹಂತ ಹಂತವಾಗಿ ಸಂತ್ರಸ್ತರಿಂದ ಒಟ್ಟು 6,23,000 ರೂಪಾಯಿ ನಗದು ಹಾಗೂ ಅಸಲಿ ಪಾಸ್‌ಪೋರ್ಟ್ ಅನ್ನು ಪಡೆದುಕೊಂಡು ವಂಚಿಸಿದ್ದಾರೆ.

ವೀಸಾ ರಿಜೆಕ್ಟ್ ನಾಟಕ; ಫೋನ್ ಸ್ವಿಚ್ ಆಫ್!

ಹಣ ಹಾಗೂ ಪಾಸ್‌ಪೋರ್ಟ್ ಪಡೆದ ದೀರ್ಘ ಕಾಲದ ಬಳಿಕವೂ ಉದ್ಯೋಗ ಕೊಡಿಸದ ಆರೋಪಿಗಳು, ಕೊನೆಗೆ 'ನಿಮ್ಮ ವೀಸಾ ತಿರಸ್ಕೃತವಾಗಿದೆ' ಎಂದು ಕಟ್ಟುಕಥೆ ಹೇಳಿದ್ದಾರೆ. ಪಡೆದಿದ್ದ ಹಣ ಹಾಗೂ ಪಾಸ್‌ಪೋರ್ಟ್ ಅನ್ನು ಶೀಘ್ರದಲ್ಲೇ ವಾಪಸ್ ನೀಡುವುದಾಗಿ ಭರವಸೆ ನೀಡಿದ್ದ ಆರೋಪಿಗಳು, ಆ ಬಳಿಕ ತಮ್ಮ ಎಲ್ಲಾ ಮೊಬೈಲ್ ಫೋನ್‌ಗಳನ್ನು ಸಂಪರ್ಕ ಕಡಿತಗೊಳಿಸಿ ಸ್ವಿಚ್ ಆಫ್ ಮಾಡಿಕೊಂಡು ತಲೆಮರೆಸಿಕೊಂಡಿದ್ದಾರೆ. ತಮಗೆ ವ್ಯವಸ್ಥಿತವಾಗಿ ನಂಬಿಸಿ ವಂಚನೆ ಎಸಗಿರುವುದನ್ನು ಅರಿತ ಪದ್ಮನಾಭ ಉಪಾಧ್ಯ ಅವರು ಮಾನ್ಯ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು. ನ್ಯಾಯಾಲಯದ ನಿರ್ದೇಶನದ ಮೇರೆಗೆ ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಆರೋಪಿಗಳ ಪತ್ತೆಗಾಗಿ ತನಿಖೆ ಚುರುಕುಗೊಳಿಸಿದ್ದಾರೆ.

ಕೊಂಬಾರು: ನಿರ್ಮಾಣ ಹಂತದ ಸೇತುವೆ ಕುಸಿತ

ಕಾರ್ಮಿಕರು ಅಪಾಯದಿಂದ ಪಾರು



ಕಡಬ: ಕಡಬ ತಾಲೂಕಿನ ಕೊಂಬಾರು ಗ್ರಾಮದ ಮುಗೇರಡ್ಕ ಶಾಲೆಗೆ ಸಂಪರ್ಕ ಕಲ್ಪಿಸುವ ಕೆಂಜಾಲ ಹೊಳೆಗೆ ಕಾಪಾರು ದೊಡ್ಡಡ್ಕ ಎಂಬಲ್ಲಿ ನಿರ್ಮಾಣವಾಗುತ್ತಿರುವ ಸೇತುವೆಯೊಂದು ಶನಿವಾರ ಸಂಜೆ ಕುಸಿದು ಬಿದ್ದಿದೆ. ಸೇತುವೆಯ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರು ಅಪಾಯದಿಂದ ಪಾರಾಗಿದ್ದಾರೆ.

ರಾಜ್ಯ ಸರಕಾರದ ಶಾಲಾ ಸಂಪರ್ಕ ಸೇತುವೆ ಯೋಜನೆಯಡಿ ಶಾಸಕಿ ಭಾಗೀರಥಿ ಮುರುಳ್ಯ ಅವರ ಶಿಫಾರಸ್ಸಿನ ಮೇರೆಗೆ ಬಿಡುಗಡೆಗೊಂಡಿರುವ 50 ಲಕ್ಷ ರೂ. ಅನುದಾನದಲ್ಲಿ ನಿರ್ಮಾಣವಾಗುತ್ತಿದ್ದ ಮುಗೇರಡ್ಕ ಶಾಲಾ ಸಂಪರ್ಕ ಸೇತುವೆಗೆ ಈಗಾಗಲೇ ಒಂದು ಸ್ಲ್ಯಾಬ್ ಜೋಡಣೆಯಾಗಿದ್ದು, ಎರಡನೇ ಸ್ಲ್ಯಾಬ್ ಜೋಡಣೆಯ ವೇಳೆ ಈ ದುರಂತ ನಡೆದಿದೆ. ಈಗಾಗಲೇ ಮೆಟ್ಟುತ್ತಾರು ಎಂಬಲ್ಲಿ ಸೇತುವೆ ನಿರ್ಮಾಣ ಕಾರ್ಯ ನಡೆಸಿರುವ ಗುತ್ತಿಗೆಗದಾರರೇ ಈ ಕಾಮಗಾರಿಯನ್ನೂ ಕೈಗೆತ್ತಿಕೊಂಡಿದ್ದು. ಕಾಮಗಾರಿ ಅಂತಿಮ ಹಂತದಲ್ಲಿರುವಾಗ ಸೇತುವೆಯ ಸ್ಲ್ಯಾಬ್ ಕುಸಿದು ಬಿದ್ದಿದೆ. ಸೇತುವೆ ಕೆಳಗಡೆ ಆಧಾರಕ್ಕಾಗಿ ಅಳವಡಿಸಿದ್ದ ಕಬ್ಬಿಣದ ಬೀಮ್ ತುಂಡಾಗಿದೆ. ಸೇತುವೆ ಕುಸಿಯುವ ಶಬ್ದ ಕೇಳುತ್ತಿದ್ದಂತೆಯೇ ಕಾರ್ಮಿಕರು ಅಲ್ಲಿಂದ ಓಡಿಹೋಗಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಇದೀಗ ಗುತ್ತಿಗೆದಾರರು ಮತ್ತೆ ನಿರ್ಮಾಣ ಕಾರ್ಯ ಮಾಡಬೇಕಿದೆ. ಕಳೆದ ಮೂರು ತಿಂಗಳಿಂದ ಕಾಮಗಾರಿ ನಡೆಯುತ್ತಿದ್ದು, ಮಳೆಗಾಲ ಹಾಗೂ ಶಾಲೆ ಪ್ರಾರಂಭವಾಗುವ ಮುನ್ನ ಕಾಮಗಾರಿಯನ್ನು ತರಾತುರಿಯಲ್ಲಿ ಮುಗಿಸುವ ಪ್ರಯತ್ನ ಸಾಗುತ್ತಿತ್ತು ಎನ್ನಲಾಗಿದೆ. ಕೆಂಜಾಲ ನದಿಗೆ ಇದು ಎರಡನೇ ಸೇತುವೆ . ಮೊದಲ ಸೇತುವೆಗೆ ಆರು ಪಿಲ್ಲರ್‌ಗಳನ್ನು ಮಾಡಿ ಸದೃಢವಾಗಿ ನಿರ್ಮಿಸಲಾಗಿದೆ. . ಆದರೆ ಮುಗೇರಡ್ಕ ಶಾಲಾ ಸಂಪರ್ಕ ಸೇತುವೆಯನ್ನು ಮೂರೇ ಪಿಲ್ಲರ್‌ಗಳನ್ನು ಹಾಕಿ ನಿರ್ಮಾಣ ಮಾಡಲಾಗುತ್ತಿದೆ. ಕನಿಷ್ಠ ನಾಲ್ಕು ಪಿಲ್ಲರ್ ಆದರೂ ಹಾಕಬೇಕಿತ್ತು. ಅದೂ ಅಲ್ಲದೆ ಸಮರ್ಪಕ ಜಲ್ಲಿ ಸಿಮೆಂಟ್, ಕಬ್ಬಿಣ ಹಾಕದೆ ಕಾಮಗಾರಿ ಕಳಪೆಯಾಗಿದೆ. ಸೇತುವೆ ಕುಸಿದ ಭಾಗವನ್ನು ಕೂಡಲೇ ಸಮರ್ಪಕ ರೀತಿಯಲ್ಲಿ ನಿರ್ಮಾಣ ಮಾಡಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

> **ಆತಂಕದ ವಿಷಯ**
> ನಿರ್ಮಾಣ ಹಂತದಲ್ಲಿ ಸೇತುವೆ ಕುಸಿದಿರುವುದು ಆತಂತಕಾರಿಯಾಗಿದೆ. ಆದರೆ ಯಾವುದೇ ಅನಾಹುತ ಸಂಭವಿಸಿಲ್ಲ. ಕುಸಿದು ಹೋಗಿರುವ ಸೇತುವೆಯ ಭಾಗವನನ್ನು ಮರು ನಿರ್ಮಾಣ ಮಾಡಲು ಹಾಗೂ ಕಾಮಗಾರಿಯನ್ನು ಸಮರ್ಪಕವಾಗಿ ಮಾಡುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ.
> ■ ಪ್ರಮೊದ್ ಕುಮಾರ್ ಕೆ.ಕೆ., ಸಹಾಯಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ

ಕೇರಳದಲ್ಲಿ ಶಾಲಾ ಬಸ್ ನೌಕರರಿಗೆ ಪೊಲೀಸ್ ಕ್ಲಿಯರೆನ್ಸ್ ಕಡ್ಡಾಯ



ಕಾಸರಗೋಡು: ರಾಜ್ಯದಲ್ಲಿಶಾಲಾಬಸ್ ನೌಕರರ ನೇಮಕಾತಿಗೆ ರಾಜ್ಯ ಶಿಕ್ಷಣ ಇಲಾಖೆ ನಿರ್ದೇಶನಗಳನ್ನು ಹೊರಡಿಸಿದೆ. ಇನ್ನು ಮುಂದೆ ನೌಕರರಿಗೆ ಪೊಲೀಸ್ ಕ್ಲಿಯರೆನ್ಸ್ ಪ್ರಮಾಣಪತ್ರಗಳನ್ನು ಕಡ್ಡಾಯಗೊಳಿಸಿ ಹೊಸ ನಿರ್ದೇಶನ ಹೊರಡಿಸಲಾಗಿದೆ. ನಿರ್ದೇಶನವನ್ನು ಉಲ್ಲಂಘಿಸುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ನಿರ್ದೇಶನದಲ್ಲಿ ತಿಳಿಸಲಾಗಿದೆ.

ಅಪರಾಧ ಹಿನ್ನೆಲೆಯುಳ್ಳವರನ್ನು ಹೊರಗಿಡಬೇಕು. ಮಾದಕ ದ್ರವ್ಯ ಸೇವನೆ, ಅಮಲು ಪದಾರ್ಥ ಸೇವಿಸಿ ವಾಹನ ಚಲಾಯಿಸುವುದು ಮತ್ತು ಗಂಭೀರ ಸಂಚಾರ ಉಲ್ಲಂಘನೆಗಳಲ್ಲಿ ತೊಡಗಿರುವ ಜನರನ್ನು ನೇಮಿಸಬಾರದು. ನಿರ್ದೇಶನವನ್ನು ಉಲ್ಲಂಘಿಸಿದರೆ ಅವರ ವಿರುದ್ಧ ಕ್ರಮಕೈಗೊಳ್ಳಲಾಗುವುದು ನಿರ್ದೇಶನದಲ್ಲಿ ಹೇಳಲಾಗಿದೆ.

ಶಾಲಾ ಅಧಿಕಾರಿಗಳು ಚಾಲಕರು ಕನಿಷ್ಠ 10 ವರ್ಷಗಳ ಕೆಲಸದ ಅನುಭವದ ಅವಶ್ಯಕತೆಯನ್ನು ಪಾಲಿಸುತ್ತಾರೆ ಎಂದು ಖಚಿತಪಡಿಸಿಕೊಳ್ಳಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ. ಮೋಟಾರು ವಾಹನ ಇಲಾಖೆಯು ಶಾಲಾ ಮಕ್ಕಳನ್ನು ಕರೆದೊಯ್ಯುವ ವಾಹನಗಳ ಫಿಟ್‌ನೆಸ್ ಅನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಪರಿಶೀಲಿಸಬೇಕು ಎಂದು ಹೇಳಲಾಗಿದೆ.

ಎಲ್‌ಕೆಜಿ, ಯುಕೆಜಿ ಮತ್ತು ಪ್ರಾಥಮಿಕ ಹಂತದ ಮಕ್ಕಳನ್ನು ಕರೆದೊಯ್ಯುವ ಬಸ್‌ಗಳಲ್ಲಿ ತರಬೇತಿ ಪಡೆದ ಮಹಿಳಾ ಸಹಾಯಕರ ಉಪಸ್ಥಿತಿಯನ್ನು ಖಚಿತಪಡಿಸಿಕೊಳ್ಳಬೇಕು. ಮಕ್ಕಳ ಮಾನಸಿಕ ಆರೋಗ್ಯವನ್ನು ನಿರ್ವಹಿಸುವುದು ಮತ್ತು ಅಪಘಾತಗಳ ಸಂದರ್ಭದಲ್ಲಿ ಪ್ರಥಮ ಚಿಕಿತ್ಸೆ ನೀಡುವಂತಹ ವಿಷಯಗಳ ಬಗ್ಗೆ ನೌಕರರಿಗೆ ತರಬೇತಿ ನೀಡಬೇಕೆಂದು ಇಲಾಖೆ ಶಿಫಾರಸು ಮಾಡಿದೆ.

ನೌಕರರನ್ನು ನೇಮಿಸುವ ವ್ಯವಸ್ಥೆ

ಶೈಕ್ಷಣಿಕ ವರ್ಷದಲ್ಲಿ ನೌಕರರು ಕೆಲಸ ಬಿಡುವ ಪರಿಸ್ಥಿತಿಯನ್ನು ಕಡಿಮೆ ಮಾಡಲು ಒಂದು ಶೈಕ್ಷಣಿಕ ವರ್ಷಕ್ಕೆ ಗುತ್ತಿಗೆ ಆಧಾರದ ಮೇಲೆ ನೌಕರರನ್ನು ನೇಮಿಸಿಕೊಳ್ಳುವ ವ್ಯವಸ್ಥೆಯನ್ನು ಕೈಗೊಳ್ಳಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಬಂಟ್ವಾಳ: ಅಪಘಾತದಲ್ಲಿ ವಾನರ ಸಾವು



ಬಂಟ್ವಾಳ: ರಾಷ್ಟ್ರೀಯ ಹೆದ್ದಾರಿಯ ಮರಹರಿ ಪರ್ವತದ ಬಳಿ ಸಂಭವಿಸಿದ ಅಪಘಾತವೊಂದರಲ್ಲಿ ವಾನರವೊಂದು ಮೃತಪಟ್ಟ ಹೃದಯವಿದ್ರಾವಕ ಘಟನೆ ನಡೆದಿದೆ. ರಸ್ತೆಯಲ್ಲಿದ್ದ ವಾನರನಿಗೆ ಯಾವುದೋ ವಾಹನ ಡಿಕ್ಕಿಯಾಗಿ ಪರಾರಿಯಾಗಿದೆ. ವಾನರವೊಂದು ಗಾಯಗೊಂಡು ರಸ್ತೆಯಲ್ಲಿ ಬಿದ್ದಿರುವ ವಿಚಾರ ತಿಳಿದು ಆಗಮಿಸಿದ ಸ್ಥಳೀಯರು ಹಾಗೂ ಕಲ್ಲಡ್ಕ ಪ್ರಖಂಡ ಬಜರಂಗದಳದ ಕಾರ್ಯಕರ್ತರು ಅಪಘಾತದಿಂದ ಗಂಭೀರ ಗಾಯಗೊಂಡ ವಾನರನ ಜೀವ ಉಳಿಸುವ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನಪಟ್ಟರೂ ಫಲಕಾರಿಯಾಗಲಿಲ್ಲ.

ಬಳಿಕ ಲೋಹಿತ್ ಪಣೋಲಿಬೈಲು ಅವರ ನೇತೃತ್ವದಲ್ಲಿ ನರಹರಿ ಬೆಟ್ಟದಲ್ಲಿ ಮೃತ ವಾನರನ ಅಂತ್ಯಸಂಸ್ಕಾರ ನೆರವೇರಿಸಲಾಯಿತು.

ಹೊರಗಿನಿಂದ ಅಡಿಕೆ ಅವಕದ ಹೊಡೆತ 'ಅಡಿಕೆ ಧಾರಣೆ ಇಳಿಕೆ'ಗೆ ಕಾರಣ

ದಿಗಂತ ವಿಶೇಷ

▸ ರಾಜೇಶ್ ಪಟ್ಟೆ

ಪುತ್ತೂರು: ಅಡಿಕೆ ಧಾರಣೆ ಏರಿಳಿತದ ಪ್ರವೃತ್ತಿಯ ಅವಧಿಯು 2020 ರ ಮೊದಲು ಸುಮಾರು ಒಂದರಿಂದ ಒಂದೂವರೆ ತಿಂಗಳ ಅವಧಿಯದ್ದಾದರೆ ಇತ್ತೀಚೆಗೆ ಈ ಅವಧಿ ಹತ್ತರಿಂದ ಹದಿನೈದು ದಿನಗಳದ್ದಾಗಿದೆ. ಇಳುವರಿ ಕಡಿಮೆಯಿದ್ದು, ಬೆಲೆಯಲ್ಲಿ ಏರಿಕೆ ಕಾಣಬೇಕಾದ ಈ ಸಮಯದಲ್ಲಿ ವಿದೇಶದಿಂದ ರಹದಾರಿಯ ಮೂಲಕ ದೇಶ ಪ್ರವೇಶಿಸುತ್ತಿರುವ ಅಡಿಕೆಯಿಂದ ಬೆಲೆ ಏರಿಕೆಗೆ ತಡೆಯಾಗುತ್ತಿದೆ. ಇದರಿಂದ ಅಡಿಕೆ ಬೆಳೆಗಾರರು ಕಳ್ಳ ಆಮದಿನ ವಿರುದ್ಧ ಸರಕಾರದ ಕಠಿನ ಕ್ರಮದತ್ತ ಮುಖಮಾಡುವಂತಾಗಿದೆ.

ಅಡಿಕೆ ಧಾರಣೆ ಹೆಚ್ಚಿದಂತೆ ಹಣಕಾಸಿನ ಚಲಾವಣೆಯ ವೇಗ ಕುಂಠಿತಗೊಳ್ಳುತ್ತದೆ. ಇದರೊಂದಿಗೆ ಆಮದು ಹಾಗೂ ಆಂತರಿಕ ಮತ್ತು ಬಾಹ್ಯ ನೀತಿಗಳು ಕೂಡ ಅಲ್ಪ ಪ್ರಮಾಣದ ಪ್ರಭಾವ ಬೀರುತ್ತವೆ. ಅಡಿಕೆಗೆ ಇರುವ ಗ್ರಾಹಕರು ಹೆಚ್ಚಾಗಿ ಕಾರ್ಮಿಕರು ಆಗಿದ್ದು, ಸರಕಾರಗಳು ವಿವಿಧ ಕಾಮಗಾರಿಗಳಿಗೆ ಹಾಗೂ ಸೇವಾ ಕ್ಷೇತ್ರಗಳ ಅಭಿವೃದ್ಧಿಗಳಿಗೆ ಹೆಚ್ಚು ಹೂಡಿಕೆ ಮಾಡಿದಂತೆ ಅಡಿಕೆಗೂ ಬೇಡಿಕೆ ಹೆಚ್ಚಾಗುತ್ತದೆ.

ಬೆಲೆ ನಿರ್ಧರಿಸುವ ಪ್ರಮುಖ ಅಂಶಗಳು

ಪ್ರಕೃತಿ, ಪೂರೈಕೆ, ಬೇಡಿಕೆ, ವ್ಯಾಪಾರಕ್ಕೆ ಲಭ್ಯವಾಗುವ ಹಣಕಾಸು, ಅಡಿಕೆಗೆ ಸಂಬಂಧಪಟ್ಟ ಆಂತರಿಕ ಮತ್ತು ಬಾಹ್ಯ ನೀತಿಗಳು, ಅಡಿಕೆಯ ಮೌಲ್ಯ ವರ್ಧಿತ ಉತ್ಪನ್ನಗಳಿಗೆ ಇರಬಹುದಾದ ಬೇಡಿಕೆ, ಆಮದಿನ ಪ್ರಮಾಣ, ವಿಶ್ವ ಆರೋಗ್ಯ ಸಂಸ್ಥೆಯ ಒತ್ತಡಗಳು, ಅಡಿಕೆಯ ಇತರೇ ಉತ್ಪನ್ನಗಳ ತಯಾರಿ ಬಗ್ಗೆ ಆಸಕ್ತಿ

ಪರಿಹಾರ ಮುಖಗಳು

ಮೌಲ್ಯವರ್ಧಿತ ಉತ್ಪನ್ನಗಳಿಗೆ ಇರಬಹುದಾದ ಬೇಡಿಕೆ, ವಿಶ್ವ ಆರೋಗ್ಯ ಸಂಸ್ಥೆ ಹಾಕಬಹುದಾದ ಒತ್ತಡಗಳು, ತಂಬಾಕಿನ ಲಭ್ಯತೆ, ಸಿಪಿಸಿಆರ್‌ಐ ನೇತೃತ್ವದ ಸಮಿತಿಯ ಅಧ್ಯಯನ ವರದಿ, ಅಡಿಕೆಯ ಬಗ್ಗೆ ಸರಕಾರದ ನೀತಿಗಳ ಮೇಲೆ ಪರಿಹಾರಗಳು ನಿಂತಿವೆ.

ಅಡಿಕೆಯು ಜಾಗತಿಕವಾಗಿ ಸುಮಾರು 23 ಲಕ್ಷ ಟನ್ ಉತ್ಪಾದನೆ ಆಗುತ್ತಿದ್ದು, ಇದರಲ್ಲಿ ಭಾರತದ ಪಾಲು ಶೇ.63. ಭಾರತದಲ್ಲಿ ಅಡಿಕೆ ಉತ್ಪಾದನೆಯಲ್ಲಿ ಶೇ. 75 ಹೊಂದಿರುವ ಕರ್ನಾಟಕ ಅಗ್ರ ಸ್ಥಾನದಲ್ಲಿದೆ. ದೇಶದಲ್ಲಿ ಅಡಿಕೆ ಮತ್ತು ಅದರ ಮೌಲ್ಯ ವರ್ಧಿತ ಉತ್ಪನ್ನಗಳ ಒಟ್ಟು ವ್ಯವಹಾರ ಸುಮಾರು ರೂ. 75 ಸಾವಿರ ಕೋಟಿಗಿಂತಲೂ ಹೆಚ್ಚಾಗಿದೆ. ಆದರೆ ರಫ್ತಿನ ಪ್ರಮಾಣ ಅತ್ಯಲ್ಪವಾಗಿದ್ದು, ಆಂತರಿಕ ಬಳಕೆ ಹೆಚ್ಚುತ್ತಿರುವುದು ಇದಕ್ಕೆ ಮುಖ್ಯ ಕಾರಣ.

ಔಷಧಿ ತಯಾರಿಗೆ ಒತ್ತು ನೀಡಬೇಕು

ಭವಿಷ್ಯದಲ್ಲಿ ಅಡಿಕೆ ಕ್ಷೇತ್ರ ಸುಧಾರಣೆ ಆಗಬೇಕಿದ್ದರೆ ಇದರ ಮೇಲೆ ಈಗ ಬಂದಿರುವ ಕಳಂಕವನ್ನು ನಿವಾರಿಸಬೇಕು ಹಾಗೂ ಬದಲೀ ಉತ್ಪನ್ನಗಳ ತಯಾರಿಗೆ ಆದ್ಯತೆ ನೀಡಬೇಕಾಗಿದೆ. ಇದರೊಂದಿಗೆ ಅಡಿಕೆ ಆಧಾರಿತ ಔಷಧಿಗಳ ತಯಾರಿಗೆ ಒತ್ತು ನೀಡಲೇಬೇಕು ಎಂಬುದನ್ನು ಬಲವಾಗಿ ಪ್ರತಿಪಾದಿಸುತ್ತಿರುವವರು ಅಡಿಕೆ ಮಾರುಕಟ್ಟೆ ತಜ್ಞ ಡಾ. ವಿಘ್ನೇಶ್ ವರ್ಮುಡಿ.



ವಿವಿಧ ಅಡಿಕೆಯ ರಫ್ತು

ಭಾರತದಿಂದ ಇಂಗ್ಲೆಂಡ್, ನೇಪಾಳ, ಸೌದಿ ಅರೇಬಿಯಾ, ಸಿಂಗಾಪುರ, ದಕ್ಷಿಣ ಆಫ್ರಿಕಾ, ರಷ್ಯಾ, ಆಸ್ಟ್ರೇಲಿಯಾ ಮುಂತಾದ ರಾಷ್ಟ್ರಗಳಿಗೆ ವಿವಿಧ ರೂಪಗಳ ಅಡಿಕೆಯ ರಫ್ತು ಆಗುತ್ತಿದೆ. ಶ್ರೀಲಂಕಾ, ಇಂಡೋನೇಷಿಯಾ, ಮಾಯನ್ಮಾರ್, ಭೂತಾನ್, ಥೈಲ್ಯಾಂಡ್, ಸಿಂಗಾಪುರ ಮತ್ತು ಮಲೇಷ್ಯಾ ದೇಶಗಳಿಂದ ಆಮದಾಗುತ್ತದೆ.

> **ಮತ್ತೆ ಅಡಿಕೆ ಬೆಲೆ ಏರಿಕೆಯಾಗಬಹುದು**
> ಸಾಮಾನ್ಯವಾಗಿ ಅಕ್ಟೋಬರ್‌ನಿಂದ ಜನವರಿ ತಿಂಗಳಲ್ಲಿ ಅಡಿಕೆ ಭಾರತಕ್ಕೆ ಆಮದಾಗುತ್ತದೆ. ಆದರೆ ಈಗ ಮೇ ತಿಂಗಳಲ್ಲೂ ಪರೋ ೇಕ್ಷ ಆಮದು ಇಲ್ಲಿನ ಅಡಿಕೆ ಬೆಲೆ ಏರಿಕೆಗೆ ಋಣಾತ್ಮಕ ಪರಿಣಾಮ ಬೀರುತ್ತಿದೆ ಎನ್ನುವ ಆರೋಪವಿದೆ. ಕೆಲವು ದಿನಗಳಲ್ಲಿ ಮತ್ತೆ ಅಡಿಕೆ ಬೆಲೆ ಏರಿಕೆಯಾಗಬಹುದು.
> ■ ಡಾ. ವಿಘ್ನೇಶ್ವರ ವರ್ಮುಡಿ, ಅಡಿಕೆ ಮಾರುಕಟ್ಟೆ ತಜ್ಞರು

ಉತ್ಪಾದನಾ ವೆಚ್ಚ ಏರಿಕೆ

ಅಡಿಕೆ ಬೆಳೆಗೆ ವಿವಿಧ ರೀತಿಯ ರೋಗಗಳು, ಕಾರ್ಮಿಕರ ಕೊರತೆಯ ನಡುವೆ ಉತ್ಪಾದನಾ ವೆಚ್ಚ ವಿಪರೀತ ಏರಿಕೆಯಾಗಿದೆ. ಈ ಮಧ್ಯೆ, ಕೆಲವು ವರ್ಷಗಳಿಂದ ಇಳುವರಿ ಪ್ರಮಾಣವೂ ಭಾರೀ ಇಳಿಕೆಯಾಗಿದೆ. ಕೊರೋನಾ ಅವಧಿಯ ನಂತರದಲ್ಲಿ ಕೆ.ಜಿ.ಗೆ ರೂ. 400ಕ್ಕಿಂತ ಹೆಚ್ಚಿನ ದರ ಲಭಿಸುತ್ತಿದ್ದರೂ ಲಾಭದ ಪ್ರಮಾಣ ಕಡಿಮೆ ಎನ್ನುವುದು ಬೆಳೆಗಾರರ ನೋವು.

ಪರೋಕ್ಷ ಆಮದು ಸಮಸ್ಯೆ

ವಾರ್ಷಿಕ ಸರಾಸರಿ ಸುಮಾರು 35 ಸಾವಿರ ಟನ್ ಅಡಿಕೆ ಭಾರತಕ್ಕೆ ಆಮದಾಗುತ್ತದೆ. ಆದರೆ ಪರೋಕ್ಷ ಆಮದು ಎಂಬುದು ದೇಶದ ಅಡಿಕೆ ಬೆಳೆಗಾರರಿಗೆ ಪ್ರತಿ ಬಾರಿಯೂ ಸಮಸ್ಯೆ ತಂದೊಡ್ಡುತ್ತಿದೆ. ಮಿಜೋರಾಂ ಮತ್ತು ಮಣಿಪುರದ ಮೂಲಕ ಬರುವ ಅಡಿಕೆ ಅಲ್ಲಿಂದ ನಾಗಪುರಕ್ಕೆ ರವಾನೆ ಆಗಿ ಇತರ ಪ್ರದೇಶಗಳಿಗೆ ವಿತರಣೆ ಆಗುತ್ತಿದೆ. ಕಡಿಮೆ ಗುಣಮಟ್ಟದ ಈ ಅಡಿಕೆಗಳು ಇಲ್ಲಿನ ಅಡಿಕೆಗಳೊಂದಿಗೆ ಮಿಶ್ರಣಗೊಂಡು ಬಳಕೆಯಾಗುತ್ತಿದೆ. ಇದು ಇಲ್ಲಿನ ಅಡಿಕೆ ಬೇಡಿಕೆಯನ್ನು ಸರಿದೂಗಿಸುತ್ತಿದೆ ಎನ್ನುವ ಆರೋಪವಿದೆ. ಇದರ ವಿರುದ್ಧ ಸರಕಾರ ಪೂರಕ ಕ್ರಮ ಕೈಗೊಂಡು ದೇಶದ ಅಡಿಕೆ ಬೆಳೆಗಾರರ ಪರ ನಿಲ್ಲಬೇಕಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.